ಶುಕ್ರವಾರ, ಜೂನ್ 9, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 159 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ವಿ.ಮನೋಹರ್ ನಿರ್ದೇಶನಕ್ಕೆ ಮತ್ತೆ ಇಳಿದಿದ್ದಾರೆ. 'ಜಾಹ್ನವಿ' ನಾಯಕಿಯಾಗಿರುವ 'ದರ್ಬಾರ್' ಸಿನಿಮಾ ತೆರೆಕಂಡಿದೆ.

ವಿದೇಶ ವಿದ್ಯಮಾನ
ಭಾರತದ ವಿದ್ಯಾರ್ಥಿಗಳ ಅತಂತ್ರ ಪ್ರಸಂಗ

ಹೊಸ ಪಿಂಚಣಿ ರದ್ದತಿಗೆ ಡಿಸಿಎಂ ಭರವಸೆ 8
ಖಾಲಿಸ್ತಾನಿಗಳ ವಿಕೃತಿಗೆ ಆಕ್ರೋಶ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,848 ▼	18,634 ▼	₹61,450 (ಬೆಂಗಳೂರು) ▼	₹73,700 (ಬೆಂಗಳೂರು)	82.51 ▲

3000 ಗ್ರಾಮಗಳಿಗೆ ಸರ್ಕಾರಿ ಬಸ್ಸೇ ಹೋಗಲ್ಲ • ಅಲ್ಲಿ ಸ್ತ್ರೀಯರಿಗೆ ಉಚಿತ ಬಸ್ ಸೇವೆ ಮರೀಚಿಕೆ

ಖಾಸಗಿಯೇ ಆಸರೆ; ಸಿಗುವುದೇ 'ಶಕ್ತಿ'

ಸರ್ಕಾರ ಇದೇ 11ರಿಂದ ರಾಜ್ಯದ ಮಹಿಳೆಯರಿಗೆ 'ಶಕ್ತಿ' ಯೋಜನೆಯಡಿ ಆಯ್ದ ಸರ್ಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಸೌಲಭ್ಯ ಕಲ್ಪಿಸಿದೆ. ಆದರೆ ಖಾಸಗಿ ಬಸ್ಸುಗಳೇ ಹೆಚ್ಚಿರುವ ಜಿಲ್ಲೆಗಳಲ್ಲಿ, ಗ್ರಾಮೀಣ ಭಾಗಗಳಲ್ಲಿ ಹಾಗೂ ಸರ್ಕಾರಿ ಬಸ್ಸುಗಳೇ ಸಂಚರಿಸದ ಪ್ರದೇಶಗಳಲ್ಲಿ ಸ್ತ್ರೀಯರಿಗೆ ಈ ಯೋಜನೆ ಕೈಗೆಟಕುತ್ತದೆಯೇ?

ಪ್ರಜಾವಾಣಿ ವಿಶೇಷ

ಬೆಂಗಳೂರು: 'ನಮ್ಮೂರಿಗೆ ಸರ್ಕಾರಿ ಬಸ್ಸೇ ಬರಲ್ಲ ಸ್ವಾಮಿ. ಖಾಸಗಿ ಬಸ್ ಮಾತ್ರ ಇರೋದು. ಎಲ್ಲಿಗೇ ಹೋಗೋದಿದ್ರೂ ಆ ಗಾಡಿಗಳಲ್ಲೇ ಹೋಗಬೇಕು. ನಮ್ಮಂಥ ಊರಿನೋರಿಗೆ ಫ್ರೀ ಬಸ್ ಹೆಂಗೆ ಸಿಗುತ್ತೆ'

–ಹೀಗೆಂದು ಪ್ರಶ್ನಿಸುತ್ತಾರೆ ಚಿತ್ರದುರ್ಗ ತಾಲ್ಲೂಕಿನ ಕೊಣನೂರು ಗ್ರಾಮದ ಗೃಹಿಣಿ ರಶ್ಮಿ.

'ನಮ್ಮ ಊರಿಗೆ ಸರ್ಕಾರಿ ಬಸ್ಸು, ಖಾಸಗಿ ಬಸ್ಸು ಯಾವುದೂ ಬರುವುದಿಲ್ಲ. ಎಲ್ಲದಕ್ಕೂ ಆಪೆ ಆಟೊ, ಮೋಟಾರು ಸೈಕಲ್‌ಗಳನ್ನೇ ಅವಲಂಬಿಸಿದ್ದೇವೆ. ಮಹಿಳೆಯರಿಗೆ ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವುದು ಒಳ್ಳೆಯದು. ಆದರೆ ಬಸ್ಸೇ ಬಾರದ ನಮ್ಮಂತಹ ಊರಿನ ಮಹಿಳೆಯರ ಗತಿಯೇನು? ಈ ಯೋಜನೆಯ ಸೌಲಭ್ಯ ನಮಗೆ ಸಿಗದೇ' ಎಂಬುದು ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಎಚ್. ಪ್ರೀತಿ ಅವರ ಪ್ರಶ್ನೆ.

ಸರ್ಕಾರಿ ಬಸ್ ಸೇವೆ ಕಾಣದ ಗ್ರಾಮಗಳ ಬಹುತೇಕ ಮಹಿಳೆಯರ ಅಭಿಪ್ರಾಯ ಇದೇ ರೀತಿಯದ್ದಾಗಿದೆ. ಅಂಕಿ ಅಂಶಗಳ ಪ್ರಕಾರ ರಾಜ್ಯದ 3,000ಕ್ಕೂ ಹೆಚ್ಚು ಗ್ರಾಮಗಳಿಗೆ ಸರ್ಕಾರಿ ಬಸ್ಸುಗಳ ಸೇವೆ ದೊರೆತಿಲ್ಲ. ಈ ಗ್ರಾಮಗಳೂ ಸೇರಿದಂತೆ ಹತ್ತಾರು ಸಾವಿರ ಗ್ರಾಮಗಳಲ್ಲಿ ಜನರು ಹೆಚ್ಚಾಗಿ ಅವಲಂಬಿಸಿರುವುದು ಖಾಸಗಿ ವಾಹನ ಗಳನ್ನು. ರಾಜ್ಯದಲ್ಲಿ ಸುಮಾರು 16 ಸಾವಿರ ಖಾಸಗಿ ಬಸ್‌ಗಳು ಜನರಿಗೆ ಸೇವೆ ಒದಗಿಸುತ್ತಿವೆ.

ಗ್ರಾಮಕ್ಕೆ ಬಸ್ಸುಗಳೇ ಬಾರದೇ ಮಹಿಳೆ, 'ಶಕ್ತಿ' ಯೋಜನೆಯ ಫಲಾನುಭವಿ ಆಗುವುದಾದರೂ ಹೇಗೆ? ಮಾಗಡಿ, ಹೊಸಕೋಟೆ ತಾಲ್ಲೂಕಿನ ವಿವಿಧೆಡೆಯಿಂದ ರೈತ ಮಹಿಳೆಯರು ತರಕಾರಿ, ಸೊಪ್ಪು, ಹೂವನ್ನು ಬೆಂಗಳೂರಿನ ಕೆ.ಆರ್. ಮಾರುಕಟ್ಟೆಗೆ ಸಾಗಿಸಲು ಖಾಸಗಿ ಸಾರಿಗೆಯನ್ನೇ ಅವಲಂಬಿಸಿದ್ದಾರೆ.

7ನೇ ಪುಟ ನೋಡಿ

ಉತ್ತರಕ್ಕಿಂತ ದಕ್ಷಿಣ ಜಿಲ್ಲೆಗಳಲ್ಲೇ ಖಾಸಗಿ ಬಸ್ ಸಂಚಾರ ಹೆಚ್ಚು

- ಶಿವಮೊಗ್ಗ ಜಿಲ್ಲೆಯ 400, ದಾವಣಗೆರೆ 309, ತುಮಕೂರಿನ 141 ಕೋಲಾರದ 151 ಗ್ರಾಮಗಳಿಗೆ ಸರ್ಕಾರಿ ಬಸ್ಸುಗಳು ಸಂಚರಿಸುತ್ತಿಲ್ಲ
- ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ 8 ಜಿಲ್ಲೆಗಳ 80 ಗ್ರಾಮಗಳಿಗೆ ಇನ್ನೂ ಬಸ್ ಸೌಕರ್ಯ ಇಲ್ಲ
- ಮೈಸೂರು ಜಿಲ್ಲೆಯ 16, ಕೊಡಗಿನ 45, ಮಂಡ್ಯದ 22, ಬಳ್ಳಾರಿಯ 33 ಬೆಳಗಾವಿಯ 20 ಗ್ರಾಮಗಳಿಗೆ ಸರ್ಕಾರಿ ಬಸ್ ಸಂಪರ್ಕ ಇಲ್ಲ
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಸಾರಿಗೆಯೇ ವಿರಳ. ಮೂಲ್ಕಿ, ಉಳ್ಳಾಲ, ಮೂಡುಬಿದಿರೆ ಹಾಗೂ ಮಂಗಳೂರು ತಾಲ್ಲೂಕುಗಳಲ್ಲಿ ಸರ್ಕಾರಿ ಸಾರಿಗೆ ಅತೀ ಕಡಿಮೆ. ಮಂಗಳೂರು–ಮೂಡುಬಿದಿರೆ ಸೇರಿದಂತೆ ಹಲವು ಮಾರ್ಗದಲ್ಲಿ ಒಂದೇ ಒಂದು ಸರ್ಕಾರಿ ಬಸ್ ಸಂಚರಿಸುವುದಿಲ್ಲ

16,000 ರಾಜ್ಯದಲ್ಲಿ ಸಂಚರಿಸುತ್ತಿರುವ ಖಾಸಗಿ ಬಸ್‌ಗಳು

35–40% ಖಾಸಗಿ ಬಸ್‌ಗಳನ್ನೇ ಅವಲಂಬಿಸಿರುವ ಮಹಿಳೆಯರು



> ಮಲೆನಾಡು ಭಾಗದಲ್ಲಿ ಕೆಎಸ್‌ಆರ್‌ಟಿಸಿ ಬಸ್ಸುಗಳ ಸಂಚಾರವೇ ಇಲ್ಲ. 'ಶಕ್ತಿ' ಯೋಜನೆಯ ಫಲ ನಮಗೆ ಸಿಗಬೇಕು ಎಂದರೆ ಸರ್ಕಾರ ಮೊದಲು ಈ ಭಾಗಕ್ಕೆ ಸರ್ಕಾರಿ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು
> **ಗಾಯತ್ರಿ ಶೇಷಗಿರಿ,** ತೀರ್ಥಹಳ್ಳಿ

> ಕರಾವಳಿಯಲ್ಲಿ 2,500ಕ್ಕೂ ಹೆಚ್ಚು ಬಸ್ಸುಗಳು ಸಂಚರಿ ಸುತ್ತಿವೆ. ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಸುವ ಮಹಿಳೆಯರ ಸರಾಸರಿ ಪ್ರಮಾಣ ಶೇ 35ರಷ್ಟಿದೆ. ಸರ್ಕಾರಿ ಬಸ್ ಸೌಲಭ್ಯ ಇಲ್ಲದ ಕಡೆಯಲ್ಲೂ ಖಾಸಗಿ ಬಸ್‌ಗಳು ಸೇವೆ ನೀಡುತ್ತಿವೆ. ಆದಾಯ ಖೋತಾ ಆದರೆ ಗ್ರಾಮೀಣ ಪ್ರದೇಶದ ಜನರಿಗೆ ಸೇವೆ ನೀಡುವುದು ಕಷ್ಟವಾಗಬಹುದು
> **ಕುಯಿಲಾಡಿ ಸುರೇಶ್ ನಾಯಕ್,** ಅಧ್ಯಕ್ಷ, ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘಗಳ ಒಕ್ಕೂಟ

ನೇಮಕಾತಿಗೆ ಗ್ರಹಣ

ಮೀಸಲಾತಿ ಗೊಂದಲ; ಪ್ರಕಟವಾಗದ ಹೊಸ 'ರೋಸ್ಟರ್'

• ರಾಜೇಶ್ ರೈ ಚಟ್ಲ

ಬೆಂಗಳೂರು: ಬಿಜೆಪಿ ಸರ್ಕಾರ ಅಧಿಕಾರಾವಧಿಯ ಕೊನೆಯಲ್ಲಿ ಪರಿಷ್ಕರಿಸಿದ 'ಮೀಸಲಾತಿ ನೀತಿ', ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಗ್ರಹಣವಾಗಿ ಕಾಡಿದೆ.

ಹಿಂದಿನ ಸರ್ಕಾರ ಪರಿಷ್ಕರಿಸಿ ಹಂಚಿಕೆ ಮಾಡಿದ ಮೀಸಲಾತಿ ಪ್ರಮಾಣಕ್ಕೆ ಪೂರಕವಾಗಿ 'ರೋಸ್ಟರ್' ಸಿದ್ಧವಾಗಿಲ್ಲ. ಇದು ನೇಮಕಾತಿ ಪ್ರಕ್ರಿಯೆಗೆ ಅಡ್ಡಿಯಾಗಿದೆ.

ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಮೀಸಲಾತಿ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಬಿಜೆಪಿ ಸರ್ಕಾರ ಮೀಸಲಾತಿಯಲ್ಲಿ ಸೃಷ್ಟಿಸಿದ ಗೊಂದಲ ನಿವಾರಣೆ ಮಾಡಲಾಗುವುದು. ಇಲ್ಲವಾದರೆ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯ ವಾಗದು' ಎಂದಿದ್ದಾರೆ. ಹೀಗಾಗಿ, ಬಿಜೆಪಿ ಸರ್ಕಾರ ಮರುಹಂಚಿಕೆ ಮಾಡಿರುವ ಮೀಸಲಾತಿ ಪಾಲನೆ ಅನುಮಾನವಾಗಿದೆ.

ವಿಧಾನಸಭೆ ಚುನಾವಣೆ ಘೋಷಣೆಯಾಗಬೇಕು ಎನ್ನುವಷ್ಟರಲ್ಲಿ (ಮಾರ್ಚ್ 27) ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶೇ 10 ಮೀಸಲಾತಿ ಕಲ್ಪಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಅದೇ ದಿನ, 'ಪ್ರವರ್ಗ 2 ಬಿ'ಗೆ (ಮುಸ್ಲಿಂ ಮತ್ತು ಅದರಲ್ಲಿರುವ ಉಪ ಜಾತಿಗಳು) ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಕಿತ್ತುಕೊಂಡಿತ್ತು. ಮೀಸಲಾತಿಯ ಹೊಸ ವರ್ಗೀಕರಣ ಮಾಡಿದ ಹಿಂದಿನ ಸರ್ಕಾರ, 'ಪ್ರವರ್ಗ 2ಸಿ' (ಒಕ್ಕಲಿಗರು, ರೆಡ್ಡಿ, ಬಲಿಜ, ನಾಯ್ಡು, ಕೊಡವರು) ಮತ್ತು 'ಪ್ರವರ್ಗ 2ಡಿ' (ವೀರಶೈವ, ಪಂಚಮಸಾಲಿ ಸೇರಿದಂತೆ ಲಿಂಗಾಯತರ ಉಪ ಪಂಗಡಗಳು, ಕ್ರಿಶ್ಚಿಯನ್, ಬಂಟ್, ಜೈನ(ದಿಗಂಬರ), ವೈಷ್ಣವ ಉಪ ಪಂಗಡಗಳು) ಸೃಜಿಸಿ ಆದೇಶ ಹೊರಡಿಸಿತ್ತು. 'ಪ್ರವರ್ಗ 2ಸಿ'ಗೆ ಶೇ 6, 'ಪ್ರವರ್ಗ 2ಡಿ'ಗೆ ಶೇ 7ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದ್ದು, ಇದರಿಂದ ಒಟ್ಟು ಮೀಸಲಾತಿ ಪ್ರಮಾಣ ಶೇ 66ಕ್ಕೆ ಏರಿಕೆಯಾಗಿದೆ.

7ನೇ ಪುಟ ನೋಡಿ

> ನೇಮಕಾತಿ ಪ್ರಸ್ತಾವನೆಗಳಿಗೆ ಚುನಾವಣೆಗೆ ಮೊದಲೇ ಅಧಿಸೂಚನೆ ಹೊರಡಿಸಿದ್ದೇವೆ. ಸಿಇಟಿ ವಿದ್ಯಾರ್ಥಿಗಳಿಗೆ ಸೀಟ್ ಮ್ಯಾಟ್ರಿಕ್ಸ್‌ನ್ನು ಸರ್ಕಾರವೇ ಮಾಡಿಕೊಡಲಿದೆ
> **ಎಸ್. ರಮ್ಯಾ**
> ಕಾರ್ಯನಿರ್ವಾಹಕ ನಿರ್ದೇಶಕಿ ಕೆಇಎ

> ಅಧಿಸೂಚನೆ ಹೊರಡಿಸದ ನೇಮಕಾತಿಗಳಿಗೆ ಪರಿಷ್ಕೃತ ಮೀಸಲಾತಿ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೆಂದು ಹೊಸ ಸರ್ಕಾರದಿಂದ ಸ್ಪಷ್ಟೀಕರಣ ಬೇಕಿದೆ
> **ಸುರಳ್ಕರ್ ವಿಕಾಸ್ ಕಿಶೋರ್,**
> ಕಾರ್ಯದರ್ಶಿ, ಕೆಪಿಎಸ್‌ಸಿ

ನೇರನೇಮಕಾತಿಗೆ ಸಿದ್ಧವಾಗಿರುವ ಪ್ರಸ್ತಾವನೆಗಳು

ಇಲಾಖೆ	ವೃಂದ	ಹುದ್ದೆ
ಪಶು ಸಂಗೋಪನೆ	ಪಶು ವೈದ್ಯಾಧಿಕಾರಿ	400
ಕೃಷಿ	ಸಹಾಯಕ ಕೃಷಿ ಅಧಿಕಾರಿ	300+68 (ಹೈಕ)
ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ	ಸಹಾಯಕ ನಿರ್ದೇಶಕರು	20+3 (ಹೈಕ)
ಹಿಂದುಳಿದ ವರ್ಗಗಳ ಕಲ್ಯಾಣ	ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ	21+19 (ಹೈಕ)
ವಾಣಿಜ್ಯ ತೆರಿಗೆ	ವಾಣಿಜ್ಯ ಪರಿವೀಕ್ಷಕರು	230+13 (ಹೈಕ)
ಜಲಸಂಪನ್ಮೂಲ	ಜೆಇ,ಎಇ	400
ವಿವಿಧ ಇಲಾಖೆಗಳು	ಶೀಘ್ರಲಿಪಿಕಾರರು	222
ಸಾರಿಗೆ	ಮೋಟರ್ ವಾಹನ ನಿರೀಕ್ಷಕರು	70+6 (ಹೈಕ)
ಪಿಡಬ್ಲ್ಯುಡಿ	ಕಾರ್ಯಪಾಲಕ ಅಭಿಯಂತರ	12 ಹೈಕ

ಕೋರ್ಟ್‌ನಲ್ಲಿರುವ ನೇಮಕಾತಿಗಳು

ಹುದ್ದೆ	ಸಂಖ್ಯೆ
ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ)	545
ಪದವೀಧರ ಶಿಕ್ಷಕರು (ಜಿಪಿಎಸ್‌ಟಿಆರ್)	15,000
ಕೆಪಿಟಿಸಿಎಲ್ (ವಿವಿಧ ವೃಂದ)	1,492
ಸಹಾಯಕ ಪ್ರಾಧ್ಯಾಪಕ	1,242

'58 ಸಾವಿರ ಶಿಕ್ಷಕರ ಭರ್ತಿಗೆ ಕ್ರಮ'

ಪ್ರಜಾವಾಣಿ ವಾರ್ತೆ

ಮಧು ಬಂಗಾರಪ್ಪ

ಬೆಂಗಳೂರು: ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 58 ಸಾವಿರ ಶಿಕ್ಷಕರ ಹುದ್ದೆಗಳ ಭರ್ತಿಗೆ ಕಾಲಮಿತಿಯ ಒಳಗೆ ಕ್ರಮಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು. ಪ್ರತಿಭಾವಂತ ಶಿಕ್ಷಕರು ಇಲಾಖೆಯ ಶಕ್ತಿ. ಖಾಲಿ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡರೂ, ಅದು ತಾತ್ಕಾಲಿಕ ಪರಿಹಾರವಷ್ಟೆ. ಅದಕ್ಕಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲೇಬೇಕಿದೆ. ಹಂತಹಂತವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ಅಧಿಸೂಚನೆ ಹೊರಡಿಸಿದ್ದ 15 ಸಾವಿರ ಶಿಕ್ಷಕರ ನೇಮಕಾತಿಯಲ್ಲಿ ಆಯ್ಕೆಯಾದ 13,351 ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಿಸಲಾಗಿತ್ತು. ಕೆಲವರು ಮತ್ತೆ ಕೋರ್ಟ್ ಮೊರೆ ಹೋಗಿದ್ದು, ಸ್ಥಳ ನಿಯೋಜನೆ ಆದೇಶ ನೀಡಲು ವಿಳಂಬವಾಗಿದೆ. ಕಾನೂನು ನೆರವು ಪಡೆದು ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದರು.

'ಪಠ್ಯ: ಮಕ್ಕಳ ಹಿತಾಸಕ್ತಿಗೆ ತಕ್ಕ ತೀರ್ಮಾನ'

ಪಠ್ಯಪುಸ್ತಕ ವಿಷಯದಲ್ಲಿ ಮಕ್ಕಳ ಹಿತಾಸಕ್ತಿಗೆ ಪೂರಕವಾಗಿ ಸರ್ಕಾರ ಒಳ್ಳೆಯ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಮಧು ಬಂಗಾರಪ್ಪ ಹೇಳಿದರು.

'ಕಾಲಕ್ಕೆ ತಕ್ಕಂತೆ ಪಠ್ಯಪುಸ್ತಕಗಳ ಪರಿಷ್ಕರಣೆ ಮಾಡುವ ಚಿಂತನೆ ನಡೆದಿದೆ. ಇದೇ ಶೈಕ್ಷಣಿಕ ವರ್ಷದಲ್ಲಿ ಕೆಲ ಪಾಠಗಳನ್ನು ಪಠ್ಯಪುಸ್ತಕಗಳಿಂದ ಕೈಬಿಡುತ್ತಿರುವುದು ಪಠ್ಯ ಕೇಸರೀಕರಣಕ್ಕೆ ತಡೆ ಎಂದು ಭಾವಿಸಬಾರದು. ಈ ಕುರಿತು ತಜ್ಞರು, ಅಧಿಕಾರಿಗಳ ಸಲಹೆ ಪಡೆಯಲಾಗಿದೆ' ಎಂದರು.

> ಸರ್ಕಾರ ಮಕ್ಕಳ ಭವಿಷ್ಯದ ಜತೆ ಚೆಲ್ಲಾಟವಾಡುತ್ತಿದೆ. ಬಿಜೆಪಿ ಸರ್ಕಾರ ಪಠ್ಯ ಬದಲಾವಣೆ ಮಾಡಿ ವಿವಾದ ಸೃಷ್ಟಿಸಿತ್ತು. ಕಾಂಗ್ರೆಸ್ ಸಹ ಅದೇ ದಾರಿಯಲ್ಲಿ ಸಾಗುತ್ತಿದೆ.
> **ಎಚ್.ಡಿ.ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸಹಜೀವನ ಸಂಗಾತಿ ಹತ್ಯೆ


ಮನೋಜ್ ಸಾನೆ

ಠಾಣೆ, ಮಹಾರಾಷ್ಟ್ರ (ಪಿಟಿಐ): ತನ್ನ ಸಹಜೀವನ ಸಂಗಾತಿ, 32 ವರ್ಷದ ಮಹಿಳೆಯನ್ನು ತುಂಡುಗಳಾಗಿ ಕತ್ತರಿಸಿ ಹತ್ಯೆಗೈದಿರುವ ವ್ಯಕ್ತಿ, ಕೆಲ ಅಂಗಗಳನ್ನು ಕುಕ್ಕರ್‌ನಲ್ಲಿ ಬೇಯಿಸಿ, ಮಿಕ್ಸರ್‌ನಲ್ಲಿ ಅರೆದು ಕ್ರೂರತೆಯನ್ನು ಮೆರೆದಿರುವ ಕೃತ್ಯ ಇಲ್ಲಿ ನಡೆದಿದೆ.

ದೆಹಲಿಯಲ್ಲಿ ಕಳೆದ ವರ್ಷ ಮೇ ತಿಂಗಳು ನಡೆದಿದ್ದ ಯುವತಿ ಶ್ರದ್ಧಾ ವಾಕರ್ ಅವರ ದೇಹವನ್ನು ಕತ್ತರಿಸಿ, ಅಂಗಾಂಗಗಳನ್ನು ಫ್ರಿಜ್‌ನಲ್ಲಿ ಇಟ್ಟಿದ್ದ ಹತ್ಯೆಯ ಮುಂದುವರಿದ ಪ್ರಕರಣದಂತಿರುವ ಈ ಕೃತ್ಯವು ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸಿದೆ.

ಠಾಣೆ ನಗರದ ಮೀರಾ ರಸ್ತೆಯ ಗೀತಾ ಅಕ್ಷದ್ವೀಪ್ ಸಮುಚ್ಚಯದ 7ನೇ ಮಹಡಿಯ ಫ್ಲ್ಯಾಟ್‌ನಲ್ಲಿ ಕೃತ್ಯ ನಡೆದಿದೆ. ಈ ಜೋಡಿ ಇಲ್ಲಿ ಮೂರು ವರ್ಷಗಳಿಂದ ಬಾಡಿಗೆಗೆ ಇದ್ದರು. ಪ್ರಾಥಮಿಕ ಮಾಹಿತಿ ಪ್ರಕಾರ, ಕೃತ್ಯ ಜೂನ್ 4ರಂದು ನಡೆದಿರುವ ಶಂಕೆ ಇದೆ. ದಿನಸಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ 32 ವರ್ಷದ ಸರಸ್ವತಿ ವೈದ್ಯ ಕೊಲೆಗೀಡಾಗಿರುವ ಮಹಿಳೆ. 56 ವರ್ಷದ ಮನೋಜ್ ಸಾನೆ ಎಂಬಾತನನ್ನು ಪೊಲೀಸರು ಬಂಧಿಸಿ ದ್ದಾರೆ. ಸದ್ಯಕ್ಕೆ ಕೃತ್ಯಕ್ಕೆ ಕಾರಣ ತಿಳಿದುಬಂದಿಲ್ಲ.

9ನೇ ಪುಟ ನೋಡಿ

ಕೇರಳಕ್ಕೆ ಮುಂಗಾರು ಪ್ರವೇಶ

ನವದೆಹಲಿ (ಪಿಟಿಐ): ನೈರುತ್ಯ ಮುಂಗಾರು ಮಾರುತಗಳು ಗುರುವಾರ ಕೇರಳ ಪ್ರವೇಶಿಸಿವೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಖಚಿತಪಡಿಸಿದೆ.

ನೈರುತ್ಯ ಮುಂಗಾರು ಸಾಮಾನ್ಯವಾಗಿ ಜೂನ್ 1ರಂದು ಕೇರಳ ಪ್ರವೇಶಿಸುವುದು ವಾಡಿಕೆ. ಈ ಬಾರಿ ಒಂದು ವಾರ ತಡವಾಗಿ ಪ್ರವೇಶಿಸಿದೆ. ಈ ಬಾರಿ ಮುಂಗಾರು ಜೂನ್ 4ರಂದು ಕೇರಳ ಪ್ರವೇಶಿಸಬಹುದು ಎಂದು ಐಎಂಡಿಯು ಮೇ ತಿಂಗಳ ಮಧ್ಯದಲ್ಲಿ ಮುನ್ಸೂಚನೆ ನೀಡಿತ್ತು. ಹಿಂದಿನ ವರ್ಷ ಮುಂಗಾರು ಮೇ 29ಕ್ಕೆ ಕೇರಳ ಪ್ರವೇಶಿಸಿತ್ತು.

ದಕ್ಷಿಣ ಅರಬ್ಬಿ ಸಮುದ್ರದ ಉಳಿದ ಭಾಗಗಳಲ್ಲಿ ಮತ್ತು ಅರಬ್ಬಿ ಸಮುದ್ರದ ಮಧ್ಯ ಭಾಗದ ಕೆಲವೆಡೆ, ಲಕ್ಷದ್ವೀಪ ದಾದ್ಯಂತ, ಕೇರಳ ಮತ್ತು ದಕ್ಷಿಣ ತಮಿಳುನಾಡಿನ ಬಹುತೇಕ ಭಾಗಗಳು, ಕೊಮೊರಿನ್ ಪ್ರದೇಶ, ಮನ್ನಾರ್ ಕೊಲ್ಲಿ ಮತ್ತು ಪಶ್ಚಿಮ ಬಂಗಾಳ ಕೊಲ್ಲಿಯ ಇನ್ನೂ ಕೆಲವು ಭಾಗಗಳಲ್ಲಿ ಮುಂಗಾರು ಮಾರುತಗಳು ಚುರುಕುಗೊಂಡಿವೆ ಎಂದು ಐಎಂಡಿ ಹೇಳಿಕೆ ಬಿಡುಗಡೆ ಮಾಡಿದೆ. ಬಿಪೊರ್‌ಜಾಯ್ ಚಂಡ ಮಾರುತವು ಮುಂಗಾರು ತೀವ್ರತೆಯ ಮೇಲೆ ಪರಿಣಾಮ ಬೀರಲಿದೆ.

ನೈರುತ್ಯ ಮುಂಗಾರು ಮಾರುತಗಳ ಪ್ರವೇಶ ಹಿನ್ನೆಲೆಯಲ್ಲಿ ಗುರುವಾರ ಕೇರಳದ ಕೊಚ್ಚಿ ಸಮುದ್ರ ತೀರದಲ್ಲಿ ಮೋಡ ಮುಸುಕಿದ ವಾತಾವರಣ ಏರ್ಪಟ್ಟಿತ್ತು. ಪ್ರವಾಸಿಗರು ಈ ದೃಶ್ಯವನ್ನು ಕಣ್ತುಂಬಿಕೊಂಡರು —ಪಿಟಿಐ ಚಿತ್ರ

ವಾಂತಿ–ಭೇದಿಗೆ ಬಾಲಕಿ ಸಾವು: ಎಫ್‌ಐಆರ್

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕುಷ್ಟಗಿ ತಾಲ್ಲೂಕಿನ ಬಿಜಕಲ್‌ನಲ್ಲಿ ವಾಂತಿ–ಭೇದಿಯಿಂದ ಬಾಲಕಿ ನಿರ್ಮಲಾ ಈರಪ್ಪ ಬೆಳಗಲ್ (9) ಗುರುವಾರ ಮೃತಪಟ್ಟಿದ್ದಾಳೆ. ಮೂರು ದಿನಗಳ ಅವಧಿಯಲ್ಲೇ ಜಿಲ್ಲೆಯಲ್ಲಿ ವಾಂತಿ–ಭೇದಿಯಿಂದ ಇಬ್ಬರು ಮಕ್ಕಳು ಮೃತಪಟ್ಟಂತಾಗಿದೆ. 8

ರೆಪೊ ದರ: ಯಥಾಸ್ಥಿತಿ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರುವ ತೀರ್ಮಾನವನ್ನು ಗುರುವಾರ ನಡೆದ ಸಭೆಯಲ್ಲಿ ಕೈಗೊಂಡಿದೆ. 12

'ನಗರದ ರಸ್ತೆಗಳ ವಿಸ್ತರಿಸಿ:ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಚ್ಚಿನ ಸಂಖ್ಯೆಯ ಜನರು ತಮ್ಮ ಸ್ವಂತ ವಾಹನಗಳಲ್ಲೇ ಬೆಂಗಳೂರು ಮಹಾನಗರವನ್ನು ಪ್ರವೇಶಿಸುತ್ತಿದ್ದು, ಇದನ್ನು ತಡೆಗಟ್ಟಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ದಕ್ಷ ರೀತಿಯಲ್ಲಿ ಲಾಭದಾಯಕ ವನ್ನಾಗಿ ರೂಪಿಸಬೇಕಿದೆ. ಅಂತೆಯೇ, ಬೆಂಗಳೂರು ಮಹಾನಗರದ ರಸ್ತೆಗಳ ವಿಸ್ತರಣೆಯೂ ಇಂದಿನ ಅತ್ಯಂತ ಜರೂರಾಗಿದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಬಳ್ಳಾರಿ ರಸ್ತೆ ವಿಸ್ತರಣೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಆದೇಶ ಜಾರಿಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿ 'ಸಮರ್ಪಣಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠವು, 'ರಾಜಧಾನಿ ಬೆಂಗಳೂರಿಗೆ ದಕ್ಷ ಮತ್ತು ಆರ್ಥಿಕ ಲಾಭ ತರುವಂತಹ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಅಗತ್ಯವಿದೆ' ಎಂದು ಹೇಳಿದೆ.

3Bನೇ ಪುಟ ನೋಡಿ

ಕಲುಷಿತ ನೀರು: 132 ಮಕ್ಕಳು ಅಸ್ವಸ್ಥ

ಬೆಂಗಳೂರು: ಪರಪ್ಪನ ಅಗ್ರಹಾರದ ಸಾಯಿಶ್ರೀ ಬಡಾವಣೆಯಲ್ಲಿರುವ ಮಹಾವೀರ್ ರಾಂಚೆಸ್ ಅಪಾರ್ಟ್‌ಮೆಂಟ್‌ನಲ್ಲಿ ಕಲುಷಿತ ನೀರು ಕುಡಿದು 132 ಮಕ್ಕಳು ಅಸ್ವಸ್ಥಗೊಂಡಿದ್ದು, ಆರು ಮಕ್ಕಳ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ. ಅಪಾರ್ಟ್‌ಮೆಂಟ್ ನಿರ್ಮಿಸಿದ್ದ ಕಂಪನಿ, ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. 3B

ಆಗಸ್ಟ್‌ನಲ್ಲಿ 'ಜ್ಯೋತಿ', 'ಲಕ್ಷ್ಮಿ'

ಬೆಂಗಳೂರು: ಗೃಹಜ್ಯೋತಿಗೆ ಆ.1ರಂದು ಕಲಬುರಗಿಯಲ್ಲಿ, ಗೃಹಲಕ್ಷ್ಮಿಗೆ ಆ.17 ಅಥವಾ 18ರಂದು ಬೆಳಗಾವಿಯಲ್ಲಿ ಚಾಲನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. 8

ಚಿನಕುರಳಿ
ಪ್ರಕಾಶ್ ಶೆಟ್ಟಿ

ಆತ್ಮಾವಲೋಕನ ಸಭೆಯಲ್ಲಿ ದೂಷಿಸಿಕೊಂಡ ಬಿಎಸ್‌ವೈ- ಬಿಎಲ್‌ಎಸ್ ಬಣ

ಬಿಜೆಪಿ ಸೋಲಿಗೆ ಕಾರಣ: ಪರಸ್ಪರ ದೂಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲಿನ ಹೊಣೆ ಹೊರುವ ವಿಚಾರದಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಬಣ ಮತ್ತು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಣದ ಶಾಸಕರು, ಮುಖಂಡರು ಆತ್ಮಾವಲೋಕನ ಸಭೆಯಲ್ಲೇ ಪರಸ್ಪರ ದೂಷಿಸಿಕೊಂಡಿದ್ದಾರೆ.

ಸೋಲಿನ ಕುರಿತು ಪರಾಮರ್ಶೆ ನಡೆಸುವುದಕ್ಕಾಗಿ ಪಕ್ಷದ ರಾಜ್ಯ ಘಟಕದ ಕಚೇರಿಯಲ್ಲಿ ಗುರುವಾರ ಶಾಸಕರು ಮತ್ತು ಪರಾಜಿತ ಅಭ್ಯರ್ಥಿಗಳ ಜತೆ ಎರಡು ಪ್ರತ್ಯೇಕ ಸಭೆಗಳನ್ನು ನಡೆಯಿತು. 'ಎರಡೂ ಸಭೆಗಳಲ್ಲಿ ಯಡಿಯೂರಪ್ಪ ಮತ್ತು ಸಂತೋಷ್ ಬಣದವರು ಸೋಲಿನ ಹೊಣೆಯನ್ನು ಪರಸ್ಪರ ವಿರೋಧಿಗಳ ಮೇಲೆ ಹೊರಿಸಲು ಪ್ರಯತ್ನಿಸಿದರು' ಎಂದು ಮೂಲಗಳು ತಿಳಿಸಿವೆ. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಯಡಿಯೂರಪ್ಪ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ನಿಕಟಪೂರ್ವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಡಿ.ವಿ. ಸದಾನಂದ ಗೌಡ, ಕೆ.ಎಸ್. ಈಶ್ವರಪ್ಪ ಸೇರಿದಂತೆ ಹಲವು ಪ್ರಮುಖರು ಸಭೆಯಲ್ಲಿದ್ದರು.

ಕೆ.ಎಸ್. ಈಶ್ವರಪ್ಪ, ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಸೇರಿದಂತೆ ಹಿರಿಯ ಶಾಸಕರನ್ನು ಕಡೆಗಣಿಸಿದ್ದು ಸೋಲಿಗೆ ಪ್ರಮುಖ ಕಾರಣ ಎಂಬರ್ಥದಲ್ಲಿ ಯಡಿಯೂರಪ್ಪ ಬಣದ ಕೆಲವರು ಮಾತನಾಡಿದ್ದಾರೆ. ಈ ವಾದವನ್ನು ಒಪ್ಪಿಕೊಳ್ಳದ ಸಂತೋಷ್ ಬಣದವರು, ಹೊಸಬರನ್ನು ಕಣಕ್ಕಿಳಿಸದೇ ಇದ್ದರೆ ಬಿಜೆಪಿ ಶಾಸಕರ ಸಂಖ್ಯೆ ಇನ್ನೂ ಕುಸಿಯುತ್ತಿತ್ತು ಎಂಬುದಾಗಿ ಪ್ರತಿವಾದ ಮಾಡಿದ್ದಾರೆ ಎಂದು ಗೊತ್ತಾಗಿದೆ.

ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಕಲ್ಪಿಸುವ ನಿರ್ಧಾರದಿಂದ ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ ಎಂಬ ಅಭಿಪ್ರಾಯ ಸಭೆಗಳಲ್ಲಿ ವ್ಯಕ್ತವಾಗಿದೆ.

3Bನೇ ಪುಟ ನೋಡಿ

> ಲೋಕಸಭಾ ಚುನಾವಣೆಗೆ ಶಾಸಕರಿಗೆ ಜವಾಬ್ದಾರಿ ನೀಡುವ ಕುರಿತು ಮತ್ತು ವಿಧಾನಸಭಾ ಚುನಾವಣೆಯಲ್ಲಿ ಗೆಲುವಿಗಾಗಿ ಏನೆಲ್ಲಾ ಮಾಡಬಹುದಿತ್ತು ಎಂಬ ಚರ್ಚೆ ಆಗಿದೆ.
> **ಬಸವರಾಜ ಬೊಮ್ಮಾಯಿ**
> ನಿಕಟಪೂರ್ವ ಮುಖ್ಯಮಂತ್ರಿ

ಸುಧಾಕರ್ ವಿರುದ್ಧ ಎಂಟಿಬಿ ಗರಂ

'ಯಡಿಯೂರಪ್ಪ ಅವರ ಮಾತಿಗೆ ಗೌರವ ಕೊಟ್ಟು ಬಿಜೆಪಿಗೆ ಬಂದೆ. ಇಲ್ಲಿ ಎರಡು ಚುನಾವಣೆಯಲ್ಲಿ ಸೋಲಬೇಕಾಯಿತು. ಈ ಬಾರಿ ನನ್ನ ಸೋಲಿಗೆ ಹಿಂದಿನ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ನೇರ ಕಾರಣ' ಎಂಬುದಾಗಿ ವಿಧಾನ ಪರಿಷತ್ ಸದಸ್ಯ ಎಂ.ಟಿ.ಬಿ. ನಾಗರಾಜ್ ಆರೋಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಸುಧಾಕರ್ ಇದ್ದರು. ಅವರು ಮಾಡಿದ ತಪ್ಪುಗಳಿಂದ ನಾವು ಸೋತೆವು. ನನ್ನ ಮತ್ತು ಚಿಂತಾಮಣಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯ ಸೋಲಿಗೆ ಆತನೇ ಕಾರಣ ಎಂದು ಹರಿಹಾಯ್ದಿದ್ದಾರೆ ಎಂದು ಗೊತ್ತಾಗಿದೆ.

'ಒಳಮೀಸಲಾತಿ, ಗ್ಯಾರಂಟಿಗಳೇ ಪೆಟ್ಟು'

'ಒಳ ಮೀಸಲಾತಿಯ ಪೆಟ್ಟು, ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್‌ಗಳನ್ನು ನಂಬಿ ಜನರು ಮತ ಚಲಾಯಿಸಿರುವುದು ಮತ್ತು ಸರ್ಕಾರದ ವಿರುದ್ಧ ನಡೆದ ನಕಾರಾತ್ಮಕ ಪ್ರಚಾರ ನಮ್ಮ ಪಕ್ಷದ ಸೋಲಿಗೆ ಪ್ರಮುಖ ಕಾರಣ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು. 'ಸರ್ಕಾರದ ಒಳ್ಳೆಯ ಕಾರ್ಯಕ್ಕೆ ಸಹಕಾರ, ಜನವಿರೋಧಿ ಕಾರ್ಯ ಮುಂದುವರಿಸಿದಾಗ ಹಾಗೂ ರಹಸ್ಯ ಕಾರ್ಯಸೂಚಿಯ ಭಾಗವಾಗಿ ರಾಜ್ಯಕ್ಕೆ ಘಾತುಕವಾಗುವ ನಿರ್ಣಯ ಕೈಗೊಂಡರೆ ಹೋರಾಡಲು ನಿರ್ಧರಿಸಲಾಗಿದೆ' ಎಂದರು.

ಐಐಟಿ: 'ಎಲೆಕ್ಟ್ರಾನಿಕ್ ಸಿಸ್ಟಮ್ಸ್' ಪದವಿ ಕೋರ್ಸ್ ಆರಂಭ

ಬೆಂಗಳೂರು: 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಮದ್ರಾಸ್‌ನಲ್ಲಿ ನೂತನವಾಗಿ ನಾಲ್ಕು ವರ್ಷದ ಬ್ಯಾಚುರಲ್ ಆಫ್ ಸೈನ್ಸ್ (ಬಿ.ಎಸ್) ಎಲೆಕ್ಟ್ರಾನಿಕ್ ಸಿಸ್ಟಮ್ಸ್ ಎಂಬ ಆನ್‌ಲೈನ್ ಕೋರ್ಸ್ ಪ್ರಾರಂಭಿಸಲಾಗಿದೆ' ಎಂದು ಐಐಟಿ ಮದ್ರಾಸ್‌ನ ಡಿಜಿಟಲ್ ಶಿಕ್ಷಣದ ಮುಖ್ಯಸ್ಥ ದೇವೇಂದ್ರ ಜಾಲಿಹಾಳ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವೇಗವಾಗಿ ಬೆಳೆಯುತ್ತಿರುವ ಎಲೆಕ್ಟ್ರಾನಿಕ್ ಉದ್ಯಮದ ಬೇಡಿಕೆಗಳನ್ನು ಈ ಕೋರ್ಸ್ ಪೂರೈಸಲು ಸಹಕಾರಿಯಾಗಲಿದೆ. ಉದ್ಯಮದ ನಿರ್ದಿಷ್ಟ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು, ತಜ್ಞರೊಂದಿಗೆ ಸಮಾಲೋಚಿಸಿ ಪಠ್ಯಕ್ರಮ ವಿನ್ಯಾಸಗೊಳಿಸಲಾಗಿದೆ. ಪಿಯುಸಿಯಲ್ಲಿ ಭೌತಶಾಸ್ತ್ರ ಮತ್ತು ಗಣಿತದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಜೂನ್ 25ರೊಳಗೆ ಅರ್ಜಿ ಸಲ್ಲಿಸಬಹುದು' ಎಂದು ಮಾಹಿತಿ ನೀಡಿದರು.

ಬಿ.ಎಸ್ ಎಲೆಕ್ಟ್ರಾನಿಕ್ ಸಿಸ್ಟಮ್‌ನಲ್ಲಿ ಒಂದು ವರ್ಷದ ಫೌಂಡೇಷನ್, ಎರಡು ವರ್ಷದ ಡಿಪ್ಲೊಮಾ ಮತ್ತು ನಾಲ್ಕು ವರ್ಷದ ಪದವಿ ಎಂಬ ಮೂರು ಹಂತಗಳನ್ನು ಒಳಗೊಂಡಿದೆ ಎಂದು ಐಐಟಿ ಮದ್ರಾಸ್‌ನ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ವೀರ ರಾಘವನ್ ಜಾನಕಿರಾಮನ್ ತಿಳಿಸಿದರು.

ಒಳಚರಂಡಿ, ರಾಜಕಾಲುವೆ ಪರಿಶೀಲನೆ ನಡೆಸಿದ ಡಿಸಿಎಂ ಡಿ.ಕೆ. ಶಿವಕುಮಾರ್

'ನೋಟಿಸ್ ನೀಡದೆ ಒತ್ತುವರಿ ತೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಬಿಲ್ಡರ್ಸ್, ಡೆವಲಪರ್ಸ್‌ನವರು ಹಲವು ಕಡೆಗಳಲ್ಲಿ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇನ್ನು ಮುಂದೆ ನೋಟಿಸ್ ನೀಡುವುದಿಲ್ಲ. ಕಾನೂನು ಪ್ರಕಾರ ಒತ್ತುವರಿ ತೆರವು ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದ ನಾನಾ ಭಾಗಗಳಲ್ಲಿ ರಾಜಕಾಲುವೆ, ಒಳಚರಂಡಿ, ಪ್ರವಾಹ ಪೀಡಿತ ಪ್ರದೇಶಗಳ ಪರಿಶೀಲನೆ ಮಾಡಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಕೆಲವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಅವರಿಂದಾಗಿ ಮೇಲ್ಸೇತುವೆ, ರಾಜಕಾಲುವೆ ನಿರ್ಮಾಣ ಕಾಲುವೆಗಳು ನಿಂತು ಹೋಗಿವೆ. ಅಂಥವರು ತಾವೇ ಅರಿತು ರಾಜಕಾಲುವೆ ತೆರವು ಮಾಡಿದರೆ ಒಳ್ಳೆಯದು. ಇಲ್ಲದೇ ಇದ್ದರೆ ನಮಗಿರುವ ಬೇರೆ ಬೇರೆ ಕಾನೂನು ಅವಕಾಶಗಳನ್ನು ಬಳಸಬೇಕಾಗುತ್ತದೆ. ಯಾವುದೇ ಒತ್ತಡ ಬಂದರೂ ಮಣಿಯುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ದಿವ್ಯಶ್ರೀ ಅಪಾರ್ಟ್‌ಮೆಂಟ್, ಡಿ.ಕೆ. ಶಿವಕುಮಾರ್ ಅಪಾರ್ಟ್‌ಮೆಂಟ್... ಹೀಗೆ ಯಾರದ್ದೇ ಅಪಾರ್ಟ್‌ಮೆಂಟ್ ಆದರೂ ರಾಜಕಾಲುವೆ, ರಸ್ತೆಗಳು ಎಷ್ಟು ಅಗಲ ಇರಬೇಕೋ ಅಷ್ಟು ಇರಲೇಬೇಕು. ಅದಕ್ಕಾಗಿ ದಿವ್ಯಶ್ರೀ ಅಪಾರ್ಟ್‌ಮೆಂಟ್ ಬಳಿ ಕಾಲುವೆ ಅಳತೆಗೆ ಆದೇಶ ನೀಡಿದ್ದೇನೆ' ಎಂದರು.

ಬೆಂಗಳೂರಿನಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರಾಜಕಾಲುವೆಯ ಒತ್ತುವರಿಗಳನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರಿಶೀಲಿಸಿದರು

ಒಂದೇ ದಿನದಲ್ಲಿ ಈ ಕೆಲಸಗಳು ಆಗುತ್ತವೆ ಎಂದಲ್ಲ. ಆದರೆ, ತಕ್ಷಣ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು. ಈ ವರ್ಷದ ಮಳೆಗೆ ಸಜ್ಜಾಗಬೇಕು. ಜಾಗೃತರಾಗಬೇಕು. ಅದಕ್ಕಾಗಿ ಬಾಟಲ್ ನೆಕ್ ಇರುವ ಕಡೆಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು. ಮಳೆ ಬಂದಾಗ ಬೆಂಗಳೂರಿಗೆ ಕೆಟ್ಟ ಹೆಸರು ಬಾರದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ 859 ಕಿ.ಮೀ ಪ್ರಾಥಮಿಕ ಹಾಗೂ ದ್ವಿತೀಯ ಕಾಲುವೆಗಳಿವೆ. ಆ ಪೈಕಿ 491ಕಿ.ಮೀ ಕಾಲುವೆ ಕಾಮಗಾರಿ ಆರಂಭವಾಗಿದೆ. 195 ಕಿ.ಮೀ ಕಾಲುವೆ ಕಾಮಗಾರಿ 2022-23 ನೇ ಸಾಲಿನಲ್ಲಿ ಗುರುತಿಸಿದ್ದಾರೆ. 173 ಕಿ.ಮೀ ಕಾಲುವೆ ಕಾಮಗಾರಿ ಬಾಕಿ ಉಳಿದಿದೆ ಎಂದು ಮಾಹಿತಿ ನೀಡಿದರು.

ಮಳೆಗಾಲುವೆ ನಿರ್ಮಾಣಕ್ಕೆ ಸಹಕರಿಸಲು ಮನವಿ

ಸರ್ಜಾಪುರ ರಸ್ತೆ ರೈನ್‌ಬೋ ಡ್ರೈವ್ ಬಳಿಯ ರಸ್ತೆಯಲ್ಲಿ ಸಮಾನಾಂತರ ಚರಂಡಿಯನ್ನು ನಿರ್ಮಿಸಲಾಗುತ್ತಿದೆ. ಕೆಲವರು ನ್ಯಾಯಾಲಯಕ್ಕೆ ಹೋಗಿರುವುದರಿಂದ ರೈನ್‌ಬೋ ಡ್ರೈವ್ ಒಳಗೆ ಚರಂಡಿ ನಿರ್ಮಿಸಲು ಆಗಿಲ್ಲ. ನಿವಾಸಿಗಳು ಪಾಲಿಕೆ ಅಧಿಕಾರಿಗಳಿಗೆ ಸ್ಪಂದಿಸಿದರೆ ಅವರು ಮಳೆಗಾಲುವೆ ನಿರ್ಮಿಸಿಕೊಡುತ್ತಾರೆ. ಇಲ್ಲದೇ ಇದ್ದರೆ ಪಾಲಿಕೆ ರಾಜಕಾಲುವೆ ವಿಭಾಗದ ಅಧಿಕಾರಿಗಳು ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಡಿ.ಕೆ. ಶಿವಕುಮಾರ್ ಎಚ್ಚರಿಸಿದರು.

ಯಮಲೂರು ಮುಖ್ಯ ರಸ್ತೆ ಬಳಿ ದೊಡ್ಡಾನೆಕುಂಡಿ ಕೆರೆಯಿಂದ ಬೆಳ್ಳಂದೂರು ಕೋಡಿ ಕಾಲುವೆಗೆ ಸೇರುವ ಸುಮಾರು 700 ಮೀಟರ್ ಉದ್ದದ ಕಾಲುವೆಯ ವಿಸ್ತರಣೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ವಿವರಿಸಿದರು.

ಗುಂಜೂರು ಬಳಿಯ ಮೈನಾ ಅಪಾರ್ಟ್‌ಮೆಂಟ್ ಹತ್ತಿರ ರಾಜಕಾಲುವೆ ಕಾಮಗಾರಿ ಪರಿಶೀಲನೆ ಮಾಡಿದರು. ವರ್ತೂರು ಕೆರೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹೂಳೆತ್ತುವ ಕಾಮಗಾರಿ ಪ್ರಗತಿಯಲ್ಲಿದೆ. ವರ್ತೂರು ಕೋಡಿ ಬಳಿಯ ಸ್ಲೂಯಿಸ್ ಗೇಟ್ ಬಳಿ ತುಂಬಿರುವ ಹೂಳನ್ನು ತೆರವುಗೊಳಿಸಬೇಕು ಎಂದು ಸೂಚನೆ ನೀಡಿದರು.

ಬಿಡಿಎಗೆ ಪ್ರಯೋಜನ ಆಗಬೇಕು: 'ಶಿವರಾಮ ಕಾರಂತ ಲೇಔಟ್ ಕಾಮಗಾರಿ ಮುಂದುವರಿಸಲು ನ್ಯಾಯಮೂರ್ತಿ ನಜೀರ್ ಅವರು ಆದೇಶಿಸಿದ್ದಾರೆ. ಈ ಯೋಜನೆ ಕುರಿತು ನ್ಯಾಯಮೂರ್ತಿಗಳಾದ ಚಂದ್ರಶೇಖರ್, ರಮೇಶ್ ಹಾಗೂ ಬೆಂಗಳೂರು ನಗರಾಭಿವೃದ್ಧಿ ಕಾರ್ಯದರ್ಶಿ, ಬಿಡಿಎ ಮುಖ್ಯಸ್ಥರ ಜೊತೆ ಚರ್ಚೆ ಮಾಡಿದ್ದೇನೆ. ಜಮೀನು ಕಳೆದುಕೊಂಡವರಿಗೆ ಪರಿಹಾರ ಸಿಗಬೇಕು. ಬಿಡಿಎಗೂ ಪ್ರಯೋಜನ ಆಗಬೇಕು. ಈ ನಿಟ್ಟಿನಲ್ಲಿ ಕೆಲಸ ಆಗಬೇಕು' ಎಂದು ಪ್ರಶ್ನೆಯೊಂದಕ್ಕೆ ಶಿವಕುಮಾರ್ ಉತ್ತರಿಸಿದರು.

ಸುದ್ದಿ 2 ನಿಮಿಷ

'ಐದು ನಗರ ಪ್ಲಾಸ್ಟಿಕ್ ಮುಕ್ತಗೊಳಿಸಲು ತೀರ್ಮಾನ'

ಬೆಂಗಳೂರು: 'ರಾಜ್ಯದ ಐದು ಪ್ರಮುಖ ನಗರಗಳನ್ನು ಪ್ಲಾಸ್ಟಿಕ್ ಮುಕ್ತಗೊಳಿಸಲು ತೀರ್ಮಾನಿಸಲಾಗಿದೆ' ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಕಾಸಸೌಧದಲ್ಲಿ ಗುರುವಾರ ತಮ್ಮ ಕಚೇರಿಯ ಪೂಜೆ ನೆರವೇರಿಸಿ ಮಾತನಾಡಿದ ಅವರು, 'ಪ್ರಸಕ್ತ ವರ್ಷ ಅರಣ್ಯ ಇಲಾಖೆ ವತಿಯಿಂದ ಮತ್ತು ಸಾರ್ವಜನಿಕರ ನೆರವಿನಿಂದ 5 ಕೋಟಿ ಸಸಿಗಳನ್ನು ನೆಟ್ಟು, ಪೋಷಿಸುವ ಸಂಕಲ್ಪ ಮಾಡಲಾಗಿದೆ' ಎಂದರು.

'ಭೂಗ್ರಹದ ಮುಂದೆ ಇಂದು ದೊಡ್ಡ ಸವಾಲಿದೆ. ಪ್ಲಾಸ್ಟಿಕ್ ಸಮಸ್ಯೆ ತೀವ್ರವಾಗಿದೆ. ಕುಡಿಯುವ ನೀರು, ಗಾಳಿ ಕಲುಷಿತವಾಗುತ್ತಿದೆ' ಎಂದ ಅವರು, 'ಅರಣ್ಯ, ಪರಿಸರ ಇಲಾಖೆಯಲ್ಲಿ ಹಲವು ಸವಾಲುಗಳಿವೆ. ಆ ಸವಾಲುಗಳನ್ನು ಮೆಟ್ಟಿನಿಂತು ಕಣ್ಣಿಗೆ ಕಾಣುವಂಥ ಮಹತ್ವದ ಬದಲಾವಣೆ ಮಾಡಲು ಶ್ರಮಿಸುತ್ತೇನೆ. ದಕ್ಷ, ಪ್ರಾಮಾಣಿಕ, ಹಗರಣರಹಿತ, ಪಾರದರ್ಶಕ ಆಡಳಿತ ನೀಡಲು ಶ್ರಮಿಸುತ್ತೇನೆ' ಎಂದೂ ಹೇಳಿದರು.

ಮಹೇಶ್ವರಮ್ಮ ಕರಗ ಮಹೋತ್ಸವ

ಯಲಹಂಕ: ಇತಿಹಾಸ ಪ್ರಸಿದ್ಧ ವಹ್ನಿಕುಲ ಕ್ಷತ್ರಿಯ ಆರಾಧ್ಯದೇವಿ ಮಹೇಶ್ವರಮ್ಮನವರ ಕರಗ ಮಹೋತ್ಸವ ಹಾಗೂ ಹೂವಿನ ಪಲ್ಲಕ್ಕಿ ಉತ್ಸವ ಬುಧವಾರ ನಡೆಯಿತು.

ಬಜಾರ್ ರಸ್ತೆಯಲ್ಲಿರುವ ಮಹೇಶ್ವರಮ್ಮನವರ ದೇವಾಲಯದಿಂದ ರಾತ್ರಿ 1.30ಕ್ಕೆ ಹೊರಟ ಹೂವಿನ ಕರಗ, ಕೋಟೆಬೀದಿ, ಬೆಸ್ತರಬೀದಿ, ಕಾಮಾಕ್ಷಮ್ಮ ಬಡಾವಣೆ, ಗಾಂಧಿನಗರ ಹೊಸಬೀದಿ, ಮನ್ವಂತರ ತೋಟ, ಡೌನ್ ಬಜಾರ್ ರಸ್ತೆ, ಮಾರುತಿನಗರ ಹಾಗೂ ವೆಂಕಟಾಲ ಬಡಾವಣೆಗಳಲ್ಲಿ ಸಂಚರಿಸಿ, ಗುರುವಾರ ಬೆಳಿಗ್ಗೆ 8.30ಕ್ಕೆ ಮತ್ತೆ ದೇವಾಲಯಕ್ಕೆ ಆಗಮಿಸಿತು.

ಸುತ್ತಮುತ್ತಲಿನ ಗ್ರಾಮಗಳ 23 ದೇವರ ಮೂರ್ತಿಗಳಿದ್ದ ಅಲಂಕೃತಗೊಂಡಿದ್ದ ಮುತ್ತಿನ ಪಲ್ಲಕ್ಕಿ ಉತ್ಸವಗಳು ಕರಗ ಮಹೋತ್ಸವಕ್ಕೆ ವಿಶೇಷ ಮೆರುಗು ನೀಡಿದವು. ಸಾವಿರಾರು ಜನರು ಕರಗ ವೀಕ್ಷಿಸಿದರು. ಅಯ್ಯಪ್ಪ ಈ ಬಾರಿಯ ಕರಗ ಹೊತ್ತಿದ್ದರು.

ಶಾಸಕರಾದ ಎಸ್.ಆರ್. ವಿಶ್ವನಾಥ್, ಪ್ರದೀಪ್ ಈಶ್ವರ್, ಕಾಂಗ್ರೆಸ್ ಮುಖಂಡ ಬಿ. ಕೇಶವ ರಾಜಣ್ಣ, ವಹ್ನಿಕುಲ ಕ್ಷತ್ರಿಯ ಮಂಡಳಿಯ ಸಂಚಾಲಕ ಮು. ಕೃಷ್ಣಮೂರ್ತಿ, ಪಾಲಿಕೆ ಮಾಜಿ ಸದಸ್ಯರಾದ ಚಂದ್ರಮ್ಮ ಕೆಂಪೇಗೌಡ, ಪದ್ಮಾವತಿ ಅಮರನಾಥ್ ಇದ್ದರು.

ಹಂಪನಾಗೆ 'ಚಿದಾನಂದ ಪ್ರಶಸ್ತಿ'

ಬೆಂಗಳೂರು: ನಗರದ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ನೀಡುವ 2023ನೇ ಸಾಲಿನ 'ಚಿದಾನಂದ ಪ್ರಶಸ್ತಿ'ಗೆ ಸಂಶೋಧಕ ಹಂ.ಪ. ನಾಗರಾಜಯ್ಯ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ.

'ರೈತರಿಗೆ ತಲುಪದ ತಂತ್ರಜ್ಞಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ವಿಶ್ವವಿದ್ಯಾಲಯಗಳು ಹೊರತಂದಿರುವ ನೂತನ ತಳಿಗಳು ಮತ್ತು ತಂತ್ರಜ್ಞಾನಗಳಲ್ಲಿ ಶೇ 45ರಷ್ಟು ಮಾತ್ರ ರೈತರಿಗೆ ತಲುಪುತ್ತಿವೆ' ಎಂದು ಕೃಷಿ ಸಚಿವ ಎನ್. ಚೆಲುವರಾಯ ಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ 'ಅಂತರರಾಷ್ಟ್ರೀಯ ಬೀಜ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನೂತನ ತಂತ್ರಜ್ಞಾನ ಮತ್ತು ತಳಿಗಳನ್ನು ಎಲ್ಲ ರೈತರಿಗೂ ತಲುಪುವಂತೆ ಕೃಷಿ ವಿಶ್ವವಿದ್ಯಾಲಯಗಳು ಮತ್ತು ಕೃಷಿ ಇಲಾಖೆ ಕಾರ್ಯಪ್ರವೃತ್ತರಾಗಬೇಕು. ರೈತರೊಂದಿಗೆ ನಿಕಟ ಸಂಪರ್ಕ ಹೊಂದುವ ಮೂಲಕ ಹಸಿರು ಕ್ರಾಂತಿ ಮಾಡಬೇಕು. ಕೃಷಿ ಕ್ಷೇತ್ರದಿಂದ ವಿಮುಕ್ತವಾಗುತ್ತಿರುವ ಯುವಜನತೆಯನ್ನು ಕೃಷಿಯತ್ತ ಆಕರ್ಷಿಸಲು ಸಕಾಲದಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು' ಎಂದು ಕರೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ ಅಂತರರಾಷ್ಟ್ರೀಯ ಬೀಜ ದಿನಾಚರಣೆ ಕಾರ್ಯಕ್ರಮವನ್ನು ಕೃಷಿ ಸಚಿವ ಎನ್. ಚೆಲುವರಾಯ ಸ್ವಾಮಿ ಉದ್ಘಾಟಿಸಿದರು

ಕೇಂದ್ರ ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶೋಕ್ ದಳವಾಯಿ ಮಾತನಾಡಿ, 'ಉತ್ತಮ ಗುಣಮಟ್ಟದ ಬೀಜ ಉತ್ಪಾದನೆಯಾದರೆ ದೇಶದ ಅಭಿವೃದ್ಧಿಗೆ ಪೂರಕ. ಗುಣಮಟ್ಟದ ಬಿತ್ತನೆ ಬೀಜಗಳನ್ನು ಬಿತ್ತಿದಾಗ ಶೇ 25ರಷ್ಟು ಹೆಚ್ಚು ಫಸಲನ್ನು ಪಡೆಯಬಹುದು. ದೇಶ ಬೀಜೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಆದರೆ, ಸವಾಲುಗಳು ಇನ್ನೂ ಮುಗಿದಿಲ್ಲ. ಇನ್ನೂ ಶೇ 55ರಷ್ಟು ರೈತರಿಗೆ ನೂತನ ತಳಿಗಳನ್ನು ತಲುಪಿಸಲು ಸಾಧ್ಯವಾಗಿಲ್ಲ' ಎಂದು ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಇದ್ದರು.

ರವಿ ಡಿ. ಚನ್ನಣ್ಣವರ್ ಆಂತರಿಕ ಭದ್ರತಾ ಡಿಜಿಪಿ

ಬೆಂಗಳೂರು: ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೋನಿಕ್ಸ್) ವ್ಯವಸ್ಥಾಪಕ ನಿರ್ದೇಶಕರಾಗಿದ್ದ ರವಿ ಡಿ. ಚನ್ನಣ್ಣವರ್ ಅವರನ್ನು ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/22/2023

ದಿನಾಂಕ : 05–06–2023

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ – ಅಂಕೋಲಾ ಹೊಸ ಬಿಜಿ ಡಬಲ್ ಮಾರ್ಗ (ಎರಡು ಮಾರ್ಗಗಳು) : ಹುಬ್ಬಳ್ಳಿ – ಅಂಕೋಲಾ (ಕಿ.ಮೀ:167.00) ನಡುವೆ ಅಂತಿಮ ಸ್ಥಳ ಸರ್ವೆ, ಮಣ್ಣಿನ ಪರಿಶೋಧನೆ, ಜಿಎಡಿ ಗಳು, ಯಾರ್ಡ್ ನಕ್ಷೆಗಳ ತಯಾರಿಕೆ, ಸೇತುವೆಗಳಿಗೆ ನೀರಿನ ಮಾರ್ಗ ಲೆಕ್ಕಾಚಾರಗಳು, ಇತ್ಯಾದಿಗಳನ್ನು ನಡೆಸುವುದು. (ಟೆಂಡರ್ ಉಲ್ಲೇಖ ಸಂ. ಹುಬ್ಬಳ್ಳಿ – ಅಂಕೋಲಾ – ಎಫ್‌ಎಲ್‌ಎಸ್)	ರೂ. 13,48,19,527/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03–07–2023 ರಂದು 15:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/154/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24

S.W.Railways SWRRLY SWRRLY

ಗಾಯತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,

ನಂ.40, "ವೇದಮಾತೆ ಭವನ", 2ನೇ ಮಹಡಿ, 5ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು–560003

ವಾರ್ಷಿಕ ಸರ್ವ ಸದಸ್ಯರ ಸಭೆಯ ನೋಟೀಸು

ನಮ್ಮ ಸಂಘದ 2022–2023ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯು ಭಾನುವಾರ ದಿನಾಂಕ 25-06-2023 ರಂದು ಬೆಳಿಗ್ಗೆ 10:30ಕ್ಕೆ, ಶ್ರೀ ಸತ್ಯ ಪ್ರಮೋದ ಕಲ್ಯಾಣ ಮಂಟಪ (ಅನೆಕ್ಸ್), ನಂ. 6, ಪಂಪ ಮಹಾಕವಿ ರಸ್ತೆ (ನ್ಯಾಷನಲ್ ಕಾಲೇಜ್ ಗ್ರೌಂಡ್ ಹತ್ತಿರ), ಬಸವನಗುಡಿ, ಬೆಂಗಳೂರು-04, ಇಲ್ಲಿ ನಡೆಯಲಿದೆ. ಸದಸ್ಯರು ತಪ್ಪದೇ ಭಾಗವಹಿಸಲು ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಕಾರ್ಯದರ್ಶಿ

ದಿನಾಂಕ:09.06.2023

*Conditions apply. • To locate your nearest store and know more on 6366920017. Buy online at tanishq.co.in or Download our App

Showrooms at **Bangalore:** Dickenson Road, Koramangala, Kamanahalli, E-City, Marathahalli, HSR Layout, Phoenix Mall, Nexus Shantiniketan Mall, Bannerghata, Jaynagar, Banashankari, Vijayanagar, Kanakapura Road, Basaveshwaranagar, New BEL Road, **New Stores at Whitefield** Tel: 080 22633335, KR Puram; Subhash Nagar Batarahalli. Tel: 9611730802, RR Nagar-BEML Layout, Jawaharlal Nehru Road. Tel: 080 47574666, Relocated to New Premises at Malleswaram-Sampige Road. Tel: 9164326100; Yelahanka, Opp. to The Galleria Mall. Tel: 080 43364336 **Mysore:** No. 2927, Bangalore -Nilgiri Road, Near Suburban Bus Stand. Tel: 821 428 0074; **Tumkur:** ADR Complex, Ground Floor, General Kariyappa Road, K R Extension. Tel: 816 4041666

Hurry! 3 DAYS ONLY
ವರ್ಷದ ಅತೀ ದೊಡ್ಡ ಆಭರಣ ಮೇಳ
ಬರೋಬ್ಬರಿ 50% ಕಡಿತ
ಎಲ್ಲಾ ಆಭರಣಗಳ ಮಜೂರಿ ಮೇಲೆ
ಚಿನ್ನ, ವಜ್ರ, ಅನರ್ಘ್ಯ ಹರಳು ಮತ್ತು ಬೆಳ್ಳಿ ಆಭರಣ
ಹೆಚ್ಚು ನಿರೀಕ್ಷಿಸಿದ್ದ ವರ್ಷದ ಆಫರ್‌ನಿಂದ ಸಂತಸಗೊಳ್ಳಿ. ಎಲ್ಲಾ ಆಭರಣಗಳ ಮಜೂರಿ ಮೇಲೆ ಶೇ. 50% ಕಡಿತ ನಿಮ್ಮ ಅಚ್ಚುಮೆಚ್ಚಿನದನ್ನು ಈಗ ಖರೀದಿಸಿ!
Offer valid till 11th June 2023
ಜೋಯಾಲುಕ್ಕಾಸ್ ಆಭರಣ ಮಳಿಗೆಗಳಲ್ಲಿ ಆಫರ್ ಅನ್ವಯ
*T&C Apply. Not applicable for Gold coins & bars.
SHOP ONLINE @ joyalukkas.com
Joyalukkas
World's favourite jeweller
BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI • PHOENIX MARKETCITY
KAMMANAHALLI | MANGALURU • MYSURU • HUBBALLI • SHIVAMOGGA • BELAGAVI • UDUPI • HASSAN • DAVANGERE • KALABURAGI
INDIA • USA • UK • UAE • KSA • QATAR • BAHRAIN • KUWAIT • OMAN • SINGAPORE • MALAYSIA

Reliance
Growth is Life
TILL 25TH JUNE
UNBRANDED TO BRANDED
EXCHANGE
Festival
EXCHANGE VALUE FOR OLD PRODUCT
+
DISCOUNT ON NEW PRODUCT
DENIM
EXCHANGE VALUE FOR OLD ₹400 + UPTO 50% OFF ON NEW
KURTIS
EXCHANGE VALUE FOR OLD ₹200 + UPTO 50% OFF ON NEW
SHIRTS
EXCHANGE VALUE FOR OLD ₹250 + UPTO 50% OFF ON NEW
SHOES
EXCHANGE VALUE FOR OLD ₹300 + UPTO 50% OFF ON NEW
*T&C Apply
Levi's
Lee Cooper
PUMA
GIORDANO
MARKS & SPENCER
adidas
Raymond
Pepe Jeans
JOHN PLAYERS
avaasa
Lee
Scan for store location
STORES IN BENGALURU: BANNERGHATTA ROAD | BANSHANKARI
ELECTRONIC CITY | HOSUR ROAD | HSR LAYOUT | KANAKPURA ROAD
MALLESHWARAM | ROCKLINE MALL | RR NAGAR | SARJAPURA ROAD
WHITE FIELD
STORE MANAGER : 8104917753 / 8310192405
@rel_fashionfactory
@FashionF_IND
@rel.fashionfactory
FASHION FACTORY
BRANDS FOR LESS

ಗಿರಿನಗರ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ • ಪ್ರಿಯಕರ ಸೇರಿ ಇಬ್ಬರ ಬಂಧನ

ಮೊಬೈಲ್ ನೆಪ: ಯುವತಿ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಕೊಡುವುದಾಗಿ ಹೇಳಿ ತುಮಕೂರಿನ ಯುವತಿಯನ್ನು ನಗರಕ್ಕೆ ಕರೆಸಿ ಅತ್ಯಾಚಾರ ಎಸಗಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪ್ರಿಯಕರ ಹಾಗೂ ಆತನ ಸ್ನೇಹಿತನನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಜೂನ್ 7ರಂದು ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ಯುವತಿ ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಿಸಿಕೊಂಡು ಪ್ರಿಯಕರ ಪುರುಷೋತ್ತಮ್ ಹಾಗೂ ಆತನ ಸ್ನೇಹಿತ ಚೇತನ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಪುರುಷೋತ್ತಮ್ ತುಮಕೂರಿನವ. ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ ಈತ, ಡೆಲಿವರಿ ಬಾಯ್ ಆಗಿ ಕೆಲಸಕ್ಕೆ ಸೇರಿದ್ದ. ಇನ್ನೊಬ್ಬ ಆರೋಪಿ ಚೇತನ್, ಬ್ಯಾಂಕೊಂದರಲ್ಲಿ ಕೆಲಸ ಮಾಡುತ್ತಿದ್ದ’ ಎಂದು ತಿಳಿಸಿವೆ.

ಮೊಬೈಲ್ ವಾಪಸು ಕೊಡುವುದಾಗಿ ಕರೆದಿದ್ದ: ‘ತುಮಕೂರಿಗೆ ಹೋದಾಗ ಯುವತಿಯನ್ನು ನೋಡಿದ್ದ ಪುರುಷೋತ್ತಮ್, ಅವರ ಹಿಂದೆ ಬಿದ್ದಿದ್ದ. ಪ್ರೀತಿಸುವಂತೆ ಒತ್ತಾಯಿಸಿದ್ದ. ಆರಂಭದಲ್ಲಿ ಯುವತಿ ಪ್ರೀತಿಗೆ ಒಪ್ಪಿರಲಿಲ್ಲ. ಅಷ್ಟಾದರೂ ಆರೋಪಿ ಹಿಂಬಾಲಿಸುತ್ತಿದ್ದ. ಇತ್ತೀಚೆಗೆ ಯುವತಿ ಪ್ರೀತಿಸಲು ಒಪ್ಪಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ.

‘ಕೆಲ ದಿನದ ಹಿಂದೆ ತುಮಕೂರಿಗೆ ಹೋಗಿದ್ದ ಪುರುಷೋತ್ತಮ್, ಯುವತಿಯನ್ನು ಭೇಟಿಯಾಗಿದ್ದ. ವಾಪಸು ಬೆಂಗಳೂರಿಗೆ ಬರುವಾಗ, ಯುವತಿಯ ಮೊಬೈಲ್ ತೆಗೆದುಕೊಂಡು ಬಂದಿದ್ದ. ಜೂನ್ 6ರಂದು ಯುವತಿಗೆ ಕರೆ ಮಾಡಿದ್ದ ಪುರುಷೋತ್ತಮ್, ‘ನಿನ್ನ ಮೊಬೈಲ್ ಕೊಡುತ್ತೇನೆ. ಬೆಂಗಳೂರಿಗೆ ಬಾ’ ಎಂದಿದ್ದ. ಅದನ್ನು ನಂಬಿದ್ದ ಯುವತಿ, ಜೂನ್ 7ರಂದು ಬೆಳಿಗ್ಗೆ ಬೆಂಗಳೂರಿಗೆ ಬಂದು ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಇಳಿದಿದ್ದರು’ ಎಂದು ಮೂಲಗಳು ತಿಳಿಸಿವೆ.

ಸ್ನೇಹಿತನ ಕೊಠಡಿಗೆ ಕರೆದೊಯ್ದು ಕೃತ್ಯ: ‘ಆರೋಪಿ ಪುರುಷೋತ್ತಮ್, ಗಿರಿನಗರದಲ್ಲಿರುವ ಸ್ನೇಹಿತ ಚೇತನ್ ಕೊಠಡಿಗೆ ಯುವತಿಯನ್ನು ಕರೆದೊಯ್ದಿದ್ದ. ಸ್ನೇಹಿತನನ್ನು ಕೊಠಡಿಯಿಂದ ಹೊರಗೆ ಕಳುಹಿಸಿದ್ದ. ನಂತರ, ಯುವತಿ ಜೊತೆ ಅನುಚಿತವಾಗಿ ವರ್ತಿಸಿದ್ದ. ಅದಕ್ಕೆ ಯುವತಿ ಸಿಟ್ಟಾಗಿದ್ದರು’ ಎಂದು ಮೂಲಗಳು ಹೇಳಿವೆ.

‘ಹೊರಗಡೆಯಿಂದ ಜ್ಯೂಸ್ ತಂದಿದ್ದ ಆರೋಪಿ ಮತ್ತು ಬರುವ ಔಷಧಿ ಬೆರೆಸಿ ಯುವತಿಗೆ ಕುಡಿಸಿದ್ದ. ಯುವತಿ ನಿದ್ರಾಹೀನ ಸ್ಥಿತಿಗೆ ತಲುಪುತ್ತಿದ್ದಂತೆ ಅತ್ಯಾಚಾರ ಎಸಗಿದ್ದ. ಬಳಿಕ, ಕೊಠಡಿಯಿಂದ ಹೊರಗೆ ಹೋಗಿದ್ದ. ಅದೇ ಸಮಯಕ್ಕೆ ಕೊಠಡಿಗೆ ವಾಪಸು ಬಂದಿದ್ದ ಆರೋಪಿ ಚೇತನ್ ಸಹ ಯುವತಿ ಮೇಲೆ ಅತ್ಯಾಚಾರ ಎಸಗಿದ್ದಾನೆ ಎನ್ನಲಾಗಿದೆ.’

‘ಎಚ್ಚರಗೊಂಡಿದ್ದ ಯುವತಿ, ಸಹಾಯಕ್ಕಾಗಿ ಕೂಗಾಡಿ ಕೊಠಡಿಯಿಂದ ಹೊರಗೆ ಓಡಿಬಂದಿದ್ದರು. ಯುವತಿ ರಕ್ಷಣೆಗೆ ಹೋಗಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದ ಸಿಬ್ಬಂದಿ, ಆರೋಪಿಗಳನ್ನು ಬಂಧಿಸಿದರು. ಯುವತಿಯನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ರಸ್ತೆಯಲ್ಲಿ ಸಿಕ್ಕ ಗುರುತಿನ ಚೀಟಿ ಬಳಸಿ ಐಐಎಸ್ಸಿಯಲ್ಲಿ ಕಳ್ಳತನ

ಅಪರಾಧ ಸುದ್ದಿ

ಬೆಂಗಳೂರು: ರಸ್ತೆಯಲ್ಲಿ ಸಿಕ್ಕ ವಿದ್ಯಾರ್ಥಿಯೊಬ್ಬರ ಗುರುತಿನ ಚೀಟಿ ಬಳಸಿಕೊಂಡು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಕಳ್ಳತನ ಮಾಡುತ್ತಿದ್ದ ಆರೋಪಿ ಜಿಯಾವುಲ್ಲಾ ಮಲ್ಲಿಕ್‌ನನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಶ್ಚಿಮ ಬಂಗಾಳದ ಜಿಯಾವುಲ್ಲಾ, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಐಐಎಸ್ಸಿ ಆವರಣದಲ್ಲಿರುವ ವಿದ್ಯಾರ್ಥಿಗಳ ವಸತಿನಿಲಯದ ಕೊಠಡಿಗಳಿಗೆ ನುಗ್ಗಿ ಕಳ್ಳತನ ಮಾಡಿದ್ದ. ಈತನಿಂದ ಎರಡು ಕ್ಯಾಮೆರಾ, ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಜಿಯಾವುಲ್ಲಾ, ನ್ಯಾಯಾಂಗ ಬಂಧನದಲ್ಲಿದ್ದ. ಕೆಲ ದಿನದ ಹಿಂದೆಯಷ್ಟೇ ಈತನಿಗೆ ಜಾಮೀನು ಮಂಜೂರಾಗಿದ್ದು, ಜೈಲಿನಿಂದ ಹೊರಬಂದು ತನ್ನೂರಿಗೆ ಹೋಗಿದ್ದಾನೆ’ ಎಂದು ತಿಳಿಸಿದರು.

ಮುಂಬೈನಿಂದ ನಗರಕ್ಕೆ ಬಂದಿದ್ದ: ‘ಅರ್ಧಕ್ಕೆ ಶಿಕ್ಷಣ ಮೊಟಕುಗೊಳಿಸಿದ್ದ ಜಿಯಾವುಲ್ಲಾ, ಮುಂಬೈಗೆ ಹೋಗಿ ಅಲ್ಲಿಯೇ ಕೆಲ ತಿಂಗಳು ನೆಲೆಸಿದ್ದ. ಅಲ್ಲಿಯೂ ಹೆಚ್ಚು ಸಂಪಾದನೆ ಮಾಡಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ಹೆಚ್ಚು ದುಡಿಮೆ ಅರಸಿ ಬೆಂಗಳೂರಿಗೆ ಬಂದಿದ್ದ’ ಎಂದು ಪೊಲೀಸರು ಹೇಳಿದರು.

ಗುರುತಿನ ಚೀಟಿ ಬಳಸಿ ಸುತ್ತಾಟ: ‘ಆರೋಪಿ ಜಿಯಾವುಲ್ಲಾ, ಐಐಎಸ್ಸಿ ಎದುರಿನ ರಸ್ತೆಯಲ್ಲಿ ಸುತ್ತಾಡುವಾಗ ವಿದ್ಯಾರ್ಥಿ ಯೊಬ್ಬರ ಗುರುತಿನ ಚೀಟಿ ಸಿಕ್ಕಿತ್ತು. ಅದನ್ನು ಬಳಸಿಕೊಂಡು ಐಐಎಸ್ಸಿ ಆವರಣದೊಳಗೆ ಸುತ್ತಾಡಲಾರಂಭಿಸಿದ್ದ’ ಎಂದು ಪೊಲೀಸರು ತಿಳಿಸಿದರು.

‘ಐಐಎಸ್ಸಿ ಕಚೇರಿಗಳು ಹಾಗೂ ವಿದ್ಯಾರ್ಥಿ ವಸತಿ ನಿಲಯದ ಕೊಠಡಿಗಳಿಗೆ ರಾಜಾ ರೋಷವಾಗಿ ಆರೋಪಿ ಹೋಗುತ್ತಿದ್ದ. ಅಲ್ಲಿಯ ಲ್ಯಾಪ್ ಟಾಪ್, ಕ್ಯಾಮೆರಾ, ನಗದು ಹಾಗೂ ಇತರೆ ವಸ್ತುಗಳನ್ನು ಕದ್ದುಕೊಂಡು ಪರಾರಿಯಾಗುತ್ತಿದ್ದ. ವಸ್ತುಗಳ ಮಾರಾಟದಿಂದ ಬರುತ್ತಿದ್ದ ಹಣವನ್ನು ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದ’ ಎಂದು ಹೇಳಿದರು.

‘ಈಚೆಗೆ ಆರೋಪಿ, ಕಳ್ಳತನಕ್ಕೆಂದು ಐಐಎಸ್ಸಿಗೆ ಹೋಗಿದ್ದ. ಆತನ ನಡೆಯಿಂದ ಅನುಮಾನಗೊಂಡಿದ್ದ ಭದ್ರತಾ ಸಿಬ್ಬಂದಿಯೊಬ್ಬರು ಗುರುತಿನ ಚೀಟಿ ಪರಿಶೀಲಿಸಿದ್ದರು. ವ್ಯತ್ಯಾಸ ಕಂಡುಬಂದಿದ್ದರಿಂದ ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಕಳ್ಳತನ ವಿಷಯ ಗೊತ್ತಾಗಿತ್ತು. ಭದ್ರತಾ ಸಿಬ್ಬಂದಿಯೇ ಠಾಣೆಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಬಳಿಕವೇ ಆರೋಪಿಯನ್ನು ಬಂಧಿಸಲಾಯಿತು’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಸುಳ್ಳು ಸುದ್ದಿ ಹರಡಿದವರ ವಿರುದ್ಧ ಕಾನೂನು ಕ್ರಮ; ಸಚಿವ ಜಮೀರ್

ಬೆಂಗಳೂರು: ‘ನನ್ನ ಹೆಸರನ್ನು ಬಳಸಿಕೊಂಡು ಸುಳ್ಳು ಸುದ್ದಿ ಸೃಷ್ಟಿಸಿ, ಸಮಾಜದಲ್ಲಿ ಅಶಾಂತಿ ಉಂಟುಮಾಡಲು ಯತ್ನಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುತ್ತೇನೆ’ ಎಂದು ವಸತಿ ಸಚಿವ ಬಿ.ಜಡ್.ಜಮೀರ್ ಅಹಮದ್ ಖಾನ್ ಎಚ್ಚರಿಕೆ ನೀಡಿದ್ದಾರೆ.

‘ಹಜ್ ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ₹ 5,000 ಕೋಟಿ ಅನುದಾನ ನೀಡಿದ್ದಾರೆ’ ಎಂಬುದಾಗಿ ಸಚಿವರು ಹೇಳಿಕೆ ನೀಡಿರುವ ರೀತಿಯಲ್ಲಿ ಸುದ್ದಿಯ ತುಣುಕು ಸೃಷ್ಟಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟಿರುವ ಕುರಿತು ಗುರುವಾರ ಪ್ರತಿಕ್ರಿಯೆ ನೀಡಿರುವ ಅವರು, ‘ನಾನು ಅಂತಹ ಹೇಳಿಕೆಯನ್ನೇ ನೀಡಿಲ್ಲ. ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಕೆಲವರು ಸುಳ್ಳು ಸುದ್ದಿ ಸೃಷ್ಟಿಸಿ, ಹರಿಯಬಿಟ್ಟಿದ್ದಾರೆ’ ಎಂದು ಹೇಳಿದ್ದಾರೆ.

ಪ್ರಕರಣದ ಕುರಿತು ಶುಕ್ರವಾರ ಪೊಲೀಸರಿಗೆ ದೂರು ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಜೈಲಿನಿಂದ ಹೊರಬಂದು 10 ದ್ವಿಚಕ್ರ ವಾಹನ ಕಳ್ಳತನ

ಬೆಂಗಳೂರು: ಅಪರಾಧ ಪ್ರಕರಣದಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕೆಂಪೇಗೌಡ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಾದರಾಯನಪುರದ ಇರ್ಫಾನ್ ಪಾಷಾ ಹಾಗೂ ಜುಹೇಬ್ ಖಾನ್ ಬಂಧಿತರು. ಇವರಿಂದ ₹ 7 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಂಜಾಂಬ ಅಗ್ರಹಾರ ಬಳಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಈಚೆಗೆ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದರು.

‘ರಾಜಾಜಿನಗರ, ಚಂದ್ರಾಲೇಔಟ್, ಅಶೋಕನಗರ, ಕಬ್ಬನ್‌ಪಾರ್ಕ್, ಚಾಮರಾಜಪೇಟೆ, ಸುದ್ದಗುಂಟೆಪಾಳ್ಯ, ಹೆಬ್ಬಗೋಡಿ, ಎಸ್.ಜೆ. ಪಾರ್ಕ್, ಕೆಂಗೇರಿ, ವಿಜಯನಗರ, ಬ್ಯಾಟರಾಯನಪುರ, ಚನ್ನಮ್ಮನಕೆರೆ ಅಚ್ಚುಕಟ್ಟು ಹಾಗೂ ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ದ್ವಿಚಕ್ರ ವಾಹನಗಳನ್ನು ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿದರು.

‘ಆರೋಪಿಗಳು 2021ರಿಂದಲೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಈ ಹಿಂದೆ ಪೊಲೀಸರ ಕೈಗೆ ಸಿಕ್ಕಿಬಿದ್ದು, ಕೆಲ ತಿಂಗಳು ಜೈಲಿನಲ್ಲಿದ್ದರು. ಜಾಮೀನು ಮೇಲೆ ಹೊರಬರುತ್ತಿದ್ದಂತೆ, ಹಣ ಸಂಪಾದನೆಗಾಗಿ ಪುನಃ ಕಳ್ಳತನಕ್ಕೆ ಇಳಿದಿದ್ದರು. ಕದ್ದ ವಾಹನಗಳನ್ನು ಕಡಿಮೆ ಬೆಲೆಗೆ ಮಾರುತ್ತಿದ್ದರು. ಕೆಲ ವಾಹನಗಳ ಬಿಡಿಭಾಗಗಳನ್ನು ಗುಜರಿಗೆ ಹಾಕುತ್ತಿದ್ದರು’ ಎಂದು ಪೊಲೀಸರು ಹೇಳಿದರು.

1,344 ರೌಡಿಗಳ ಮನೆಗಳಲ್ಲಿ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಪರಾಧ ಕೃತ್ಯ ನಿಯಂತ್ರಿಸಲು ಕ್ರಮ ಕೈಗೊಂಡಿರುವ ಪೊಲೀಸರು, 1344 ರೌಡಿಗಳ ಮನೆ ಮೇಲೆ ಗುರುವಾರ ಬೆಳಿಗ್ಗೆ ದಾಳಿ ಮಾಡಿ ತಪಾಸಣೆ ನಡೆಸಿದರು.

ನಗರದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಕೇಂದ್ರ, ಆಗ್ನೇಯ, ಈಶಾನ್ಯ ಹಾಗೂ ವೈಟ್‌ಫೀಲ್ಡ್ ವಿಭಾಗದ ಠಾಣೆಗಳ ವ್ಯಾಪ್ತಿಯಲ್ಲಿ ಪೊಲೀಸರ ಕಾರ್ಯಾಚರಣೆ ನಡೆಯಿತು.

‘ಠಾಣೆಯ ರೌಡಿಪಟ್ಟಿಯಲ್ಲಿ ಹೆಸರಿರುವ ವ್ಯಕ್ತಿಗಳು ಹಾಗೂ ಅಪರಾಧ ಹಿನ್ನೆಲೆಯುಳ್ಳವರ ಮೇಲೆ ನಿಗಾ ಇರಿಸಲಾಗಿದೆ. ಕೆಲವರು, ಅಪರಾಧ ಕೃತ್ಯಗಳಲ್ಲಿ ತೊಡಗುತ್ತಿರುವ ಬಗ್ಗೆ ಮಾಹಿತಿ ಬಂದಿತ್ತು. ಹೀಗಾಗಿ, ನಗರದೆಲ್ಲೆಡೆ ರೌಡಿಗಳ ಮನೆ ಮೇಲೆ ದಾಳಿ ಮಾಡಲಾಯಿತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘900 ಗ್ರಾಂ ಗಾಂಜಾ, 16 ದ್ವಿಚಕ್ರ ವಾಹನಗಳು ಹಾಗೂ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಯಿತು’ ಎಂದರು.

‘ಜಾಮೀನು ರಹಿತ ವಾರಂಟ್ ಜಾರಿಯಲ್ಲಿದ್ದ 46 ರೌಡಿಗಳು, ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದರು. ದಾಳಿ ವೇಳೆ 46 ರೌಡಿಗಳನ್ನೂ ಪತ್ತೆ ಮಾಡಲಾಯಿತು. ಅವರೆಲ್ಲರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಅಧಿಕಾರಿ ತಿಳಿಸಿದರು.

ಕಾಟನ್‌ಪೇಟೆ ರೌಡಿ ಬಳಿ ಗಾಂಜಾ ಪತ್ತೆ: ‘ರೌಡಿ ಕುಮರೇಶ್ ಅಲಿಯಾಸ್ ಮಾವತ್ತಿ ಮನೆಯಲ್ಲಿ ಪರಿಶೀಲನೆ ನಡೆಸಿದಾಗ, 500 ಗ್ರಾಂ ಗಾಂಜಾ ಪತ್ತೆಯಾಗಿದೆ. ಈತ ಇತ್ತೀಚೆಗಷ್ಟೇ ಕಳ್ಳತನ ಮಾಡಿದ್ದ ದ್ವಿಚಕ್ರ ವಾಹನವನ್ನೂ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಬೈಕ್‌ಗೆ ಟಿಪ್ಪರ್ ಡಿಕ್ಕಿ: ಸವಾರ ಸಾವು

ಅಪಘಾತದ ನಂತರ ನಾಪತ್ತೆಯಾಗಿದ್ದ ಚಾಲಕನನ್ನು ವಶಕ್ಕೆ ಪಡೆದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಳಿಮಾವು ಸಂಚಾರ ಠಾಣೆಯ ವ್ಯಾಪ್ತಿಯಲ್ಲಿ ಟಿಪ್ಪರ್ ಲಾರಿಯೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಬೈಕ್ ಸವಾರ ರಾಜೇಶ್ (32) ಮೃತಪಟ್ಟಿದ್ದಾರೆ.

‘ಪೀಣ್ಯ ನಿವಾಸಿ ರಾಜೇಶ್, ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಬಿಬಿಎಂಪಿ ಕಚೇರಿಯಲ್ಲಿ ತಾತ್ಕಾಲಿಕ ಕೆಲಸ ಮಾಡುತ್ತಿದ್ದರು. ಬುಧವಾರ ಸಂಜೆ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿ, ಕಚೇರಿಯತ್ತ ದ್ವಿಚಕ್ರ ವಾಹನದಲ್ಲಿ ವಾಪಸ್ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಬೇಗೂರು– ಕೊಪ್ಪ ರಸ್ತೆಯ ಮಲ್ಲಸಂದ್ರ ಬಳಿ ರಾಜೇಶ್ ಹೊರಟಿದ್ದರು. ಅದೇ ಮಾರ್ಗದಲ್ಲಿ ತೆರಳುತ್ತಿದ್ದ ಟಿಪ್ಪರ್ ಲಾರಿ ಚಾಲಕ, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದ. ಇದರಿಂದಾಗಿ ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ರಾಜೇಶ್ ಮೃತಪಟ್ಟಿದ್ದಾರೆ.’

‘ಅಪಘಾತದ ಬಳಿಕ ಟಿಪ್ಪರ್ ಲಾರಿ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದ. ಗುರುವಾರ ಚಾಲಕನನ್ನು ಪತ್ತೆ ಹಚ್ಚಿ ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ’ ಎಂದು ಠಾಣೆಯ ಸಿಬ್ಬಂದಿ ಮಾಹಿತಿ ನೀಡಿದರು.

‘ಟಿಪ್ಪರ್‌ನಲ್ಲಿ ಮರಳು ಸಾಗಿಸಲಾಗುತ್ತಿತ್ತು. ಇದು ಅಪಘಾತವೋ ಅಥವಾ ಬೇರೆ ಏನಾದರೂ ಕಾರಣವಿದೆಯಾ? ಎಂಬುದು ತನಿಖೆಯಿಂದ ಮಾತ್ರ ತಿಳಿಯಬೇಕಿದೆ’ ಎಂದು ಪೊಲೀಸರು ಹೇಳಿದರು.

ಹುತಾತ್ಮ ಮೈಲಾರ ಮಹಾದೇವ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಬರಮತಿಯಿಂದ ದಂಡಿವರೆಗೆ 327 ಕಿ.ಮೀ ದೂರ ನಡೆದ ದಂಡಿ ಪಾದಯಾತ್ರೆಯಲ್ಲಿ ಪೂರ್ಣವಾಗಿ ಭಾಗವಹಿಸಿದ ಏಕೈಕ ಕನ್ನಡಿಗ ಮೈಲಾರ ಮಹಾದೇವ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಸ್ಮರಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಹುತಾತ್ಮ ಮೈಲಾರ ಮಹದೇವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನಿಂದ ಗುರುವಾರ ನಡೆದ ಮೈಲಾರ ಮಹಾದೇವ ಅವರ 112ನೇ ಜನ್ಮದಿನವನ್ನು ಉದ್ಘಾಟಿಸಿ ಮಾತನಾಡಿದರು.

‘ರೈತರಿಂದ ಬ್ರಿಟಿಷರು ಕರ ವಸೂಲಿ ಮಾಡಿದ್ದನ್ನು ರೈತರಿಗೆ ವಾಪಸ್ ಕೊಡಿಸುವ ಸಂದರ್ಭದಲ್ಲಿ ಪೊಲೀಸರು ಮೈಲಾರ ಮಹಾದೇವರ ಎದೆಗೆ ಗುಂಡು ಹಾರಿಸಿದ್ದರು. ಆಗ ಸ್ವಾತಂತ್ರ್ಯ ಹೋರಾಟಗಾರರು ಪೊಲೀಸರ ಬಂದೂಕು ಕಿತ್ತುಕೊಂಡು ಅವರಿಗೆ ಹಲ್ಲೆ ಮಾಡಲು ಮುಂದಾಗಿದ್ದರು. ಸಾಯುವ ಕಾಲದಲ್ಲಿಯೂ ಮೈಲಾರ ಅದನ್ನು ವಿರೋಧಿಸಿದರು. ಪೊಲೀಸರಿಗೆ ಹಿಂಸೆ ಮಾಡಬೇಡಿ. ನಮ್ಮ ಹೋರಾಟ ಅಹಿಂಸಾತ್ಮಕವಾಗಿಯೇ ನಡೆಯಬೇಕು ಎಂದು ತಾನು ನಂಬಿದ್ದ, ಅಳವಡಿಸಿಕೊಂಡಿದ್ದ ತತ್ವವನ್ನೇ ಪ್ರತಿಪಾದಿಸಿದ್ದ ಮಹಾನ್ ದೇಶಭಕ್ತ. ಅವರ ನೆನಪಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉತ್ತಮ ಕಾರ್ಯಕ್ರಮ ಹಮ್ಮಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ‘ಅಹಿಂಸೆ ಪ್ರತಿಪಾದಕ ಹುತಾತ್ಮ ಮೈಲಾರ ಮಹಾದೇವ’ ಕೃತಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಬಿಡುಗಡೆ ಮಾಡಿದರು. ಮನು ಬಳಿಗಾರ, ಯು.ಬಿ.ಬಣಕಾರ್, ಜಗದೀಶ ಶೆಟ್ಟರ್, ಎಚ್.ಕೆ.ಪಾಟೀಲ, ವೂಡೇ ಪಿ.ಕೃಷ್ಣ, ಎ.ಮುರಿಗೆಪ್ಪ, ಎಚ್.ಎಸ್.ನರೇಂದ್ರ ಇದ್ದರು —ಪ್ರಜಾವಾಣಿ ಚಿತ್ರ

‘ಅಹಿಂಸೆ ಪ್ರತಿಪಾದಕ ಹುತಾತ್ಮ ಮೈಲಾರ ಮಹಾದೇವ’ ಕೃತಿ ಬಗ್ಗೆ ಮಾತನಾಡಿದ ಮನು ಬಳಿಗಾರ, ‘14ನೇ ವರ್ಷಕ್ಕೆ ಶಾಲೆ ತೊರೆದು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಮಹಾದೇವ ಅವರು 17ನೇ ವರ್ಷಕ್ಕೆ ಸಬರಮತಿ ಆಶ್ರಮಕ್ಕೆ ಹೋಗಿ ಗಾಂಧೀಜಿ ಅನುಯಾಯಿ ಆಗಿ ಕೆಲಸ ಮಾಡಿದರು. ಅವರ ಪತ್ನಿ ಸಿದ್ದಮ್ಮ ಕೂಡಾ ಮಹಾದೇವ ಜೊತೆಗೆ ಹೋರಾಟದ ಸಂಗಾತಿಯಾಗಿದ್ದರು. ಅಲ್ಲಿಂದ 1943ರಲ್ಲಿ ಹುತಾತ್ಮರಾಗುವವರೆಗೆ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದರು. ಭಗತ್‌ಸಿಂಗ್, ರಾಜಗುರು, ಸುಖದೇವ್‌ರಂತೆ ಸಣ್ಣ ಪ್ರಾಯದಲ್ಲಿಯೇ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದರು’ ಎಂದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ, ಕಾಂಗ್ರೆಸ್ ಮುಖಂಡ ಜಗದೀಶ್ ಶೆಟ್ಟರ್, ‘ಅಹಿಂಸೆ ಪ್ರತಿಪಾದಕ ಹುತಾತ್ಮ ಮೈಲಾರ ಮಹಾದೇವ’ ಕೃತಿಕಾರ ಎ.ಮುರಿಗೆಪ್ಪ, ಶಾಸಕ ಯು.ಬಿ.ಬಣಕಾರ್, ಕೆಪಿಎಸ್‌ಸಿ ಸದಸ್ಯ ಎಚ್.ಎಸ್. ನರೇಂದ್ರ ಮತ್ತಿತರರಿದ್ದರು.

ಮೊದಲ ವಾರ್ಷಿಕೋತ್ಸವ; 12 ಕೃತಿ ಬಿಡುಗಡೆ

ವೀರಲೋಕದಿಂದ ‘ಬುಕ್ ಬಾಯ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಸ್ತಕೋದ್ಯಮದಲ್ಲಿ ಹೊಸ ಪ್ರಯೋಗ ಮಾಡುತ್ತಿರುವ ವೀರಲೋಕ ಪ್ರಕಾಶನವು ತನ್ನ ಮೊದಲನೇ ವಾರ್ಷಿಕೋತ್ಸವದ ಪ್ರಯುಕ್ತ ‘ಬುಕ್ ಬಾಯ್’ ಎಂಬ ಹೊಸ ಪರಿಕಲ್ಪನೆಗೆ ಚಾಲನೆ ನೀಡಿತು.

ಆನ್‌ಲೈನ್ ಆ್ಯಪ್ ಆಧಾರಿತ ಆಹಾರ ಪೂರೈಕೆ ಮಾದರಿಯಲ್ಲಿಯೇ ಸಂಸ್ಥೆಯು ತನ್ನ ವೆಬ್‌ತಾಣದ ಮೂಲಕ ಸೇವೆ ನೀಡಲಿದೆ. ಈಗಾಗಲೇ ನಗರದಲ್ಲಿ ಪ್ರಾಯೋಗಿಕವಾಗಿ ಓದುಗರಿಗೆ ಪುಸ್ತಕ ಒದಗಿಸಲಾಗಿದೆ. ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಅಧಿಕೃತವಾಗಿ ಚಾಲನೆ ನೀಡಲಾಯಿತು.

‘ನಮ್ಮ ಪೋರ್ಟಲ್‌ನಲ್ಲಿ ಈಗಾಗಲೇ 10 ಸಾವಿರ ಪುಸ್ತಕಗಳನ್ನು ಅಪ್ಲೋಡ್ ಮಾಡಲಾಗಿದೆ. ಅಲ್ಲಿ ಪುಸ್ತಕವನ್ನು ಆಯ್ಕೆ ಮಾಡಿಕೊಳ್ಳಬಹುದು. ಪುಸ್ತಕದ ಹಣವನ್ನು ಪಾವತಿಸಿದ ಬಳಿಕ ತಲುಪಿಸುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಬೆಂಗಳೂರಿನಲ್ಲಿ ಮಾತ್ರ ಈ ಸೇವೆ ಇರಲಿದೆ. ಪುಸ್ತಕ ಬುಕ್ ಮಾಡಿದ ಒಂದೇ ದಿನದಲ್ಲಿ ತಲುಪಿಸಲಾಗುತ್ತದೆ. ಪುಸ್ತಕ ಬುಕ್ ಮಾಡಿದ ಬಳಿಕ ಅದನ್ನು ಟ್ರ್ಯಾಕ್ ಮಾಡುವ ಆಯ್ಕೆಯೂ ಇರಲಿದೆ’ ಎಂದು ವೀರಲೋಕ ಬುಕ್ಸ್‌ನ ಸಂಸ್ಥಾಪಕ ವೀರಕಪುತ್ರ ಶ್ರೀನಿವಾಸ ತಿಳಿಸಿದರು.

ವೀರಲೋಕ ಪ್ರಕಾಶನದ ವಾರ್ಷಿಕೋತ್ಸವದಲ್ಲಿ ‘ಬುಕ್ ಬಾಯ್’ ಪರಿಕಲ್ಪನೆಗೆ ಚಾಲನೆ ನೀಡಲಾಯಿತು. ಪತ್ರಕರ್ತ ಜಿ.ಎನ್. ಮೋಹನ್, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ವೀರಲೋಕ ಪ್ರಕಾಶನದ ಸಂಸ್ಥಾಪಕ ವೀರಕಪುತ್ರ ಶ್ರೀನಿವಾಸ್, ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಹಾಗೂ ಉದ್ಯಮಿ ಎಸ್.ಷಡಕ್ಷರಿ ಇದ್ದರು ಪ್ರಜಾವಾಣಿ ಚಿತ್ರ

12 ಕೃತಿ ಬಿಡುಗಡೆ: ಸಮಾರಂಭದಲ್ಲಿ ವಿವಿಧ ಲೇಖಕರ 12 ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಸಾಹಿತ್ಯ, ವೈದ್ಯಕೀಯ ಹಾಗೂ ರಾಜಕೀಯ ಕ್ಷೇತ್ರದ ಪ್ರಮುಖರು ಭಾಗವಹಿಸಿದ್ದರು.

ಅಬ್ದುಲ್ ರಶೀದ್ ಅವರ ‘ಅಂತಾರಾಷ್ಟ್ರೀಯ ಕುಂಬಳಕಾಯಿ ಮತ್ತು ಕತೆಗಳು’, ಪ್ರಜಾವಾಣಿ-ವೀರಲೋಕ ಕಾವ್ಯಸ್ಪರ್ಧೆಯ ಕವನ ಸಂಕಲನ ‘ಹಕ್ಕಿ ಮತ್ತು ಹುಡುಗಿ’, ಕುಮಾರ ಬೇಂದ್ರೆ ಅವರ ‘ವ್ಯಗ್ರ ಮತ್ತು ಇತರ ಕಾದಂಬರಿಗಳು’, ಸತೀಶ್ ಬಳೆಗಾರ ಅವರ ‘ಹಿಟ್ಲರ್ ಲವ್ ಪಾಲಿಟಿಕ್ಸ್’, ಫೌಝಿಯ ಸಲೀಂ ಅವರ ‘ನೀ ದೂರ ಹೋದಾಗ’, ಪ್ರೇಮಲತಾ ಬಿ. ಅವರ ‘ನಂಬಿಕೆಯೆಂಬ ಗಾಳಿಕೊಡೆ’, ಕುಮಾರಸ್ವಾಮಿ ತೆಕ್ಕುಂಜ ಅವರ ‘ಭಾನುಮತಿಯ ಪರಿವಾರ’, ಅನು ಬೆಳ್ಳೆ ಅವರ ‘ಹಾವಿನ ಮನೆ’, ಬಿ.ಮಂಜುನಾಥ್ ಕಾಮತ್ ಅವರ ‘ಅನಾಥ ಪ್ರೀತಿಯ ಅನುಬಂಧ’, ಕೆ.ಎಸ್.ರಮಾಸುಂದರಿ ಅವರ ‘ಸತ್ಯದ ಅನಾವರಣ’, ಪುತ್ತೂರು ಅನಂತರಾಜಗೌಡ ಅವರ ‘ಗೌಡ ಪರಂಪರೆ’ ಹಾಗೂ ರಾಜೇಶ್ ಕುಮಾರ್ ಕಲ್ಯಾ ಅವರ ‘ಈಗಲ್ ಲೈನ್’ ಕೃತಿ ಲೋಕಾರ್ಪಣೆಯಾಯಿತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

REAL ESTATE SELLING

Flat

Anjanapura

2 BHK Flat- Anjanapur 1240 SFT, Geyser/ Fan installed, unfurnished B Khata, 40 lakhs new. 7829026334

Basavanagudi

FOR SALE 2BHK Ground Floor Flat overlooking garden in Sovereign Park Society. Call Prime 8668223220.

SALE PRIME LOCATIONS 2 BHK FLATS, CARPARK, 24hrs CAUVERY WATER, ELECTRICITY, SECURITY, LIFTS, GARDEN FACILITIES: 9886019240/ 26623994

Rajajinagar

PRESTIGE WEST WOODS, Ready to move-in Ultra Luxury 5 BHK Penthouse (3981 sft) available near Rajajinagar. Starting at Rs. 6.35 Cr. For details call: 6366561003

Farm House/ Land/ Resorts

Multiple Locations

1/2 ACRE converted eKhata furnished 15 AC rooms resto cafe 6-9L income nandi hills rd connecting STRR 9.1Cr Ph 7019346409

House

Koramangala

PRIME INDEPENDENT posh Bungalow at 6th block koramangala for sale call 7338118678

Vishweshwariah Layout

NEW BDA 20X27 4 BHK DUPLEX HOUSE FOR SALE IN VISHWESHWARAIAH LAYOUT 7TH BLOCK NEAR LAKSHMI VENKATESHWARA TEMPLE: 9980642912

Vidyaranyapura

HOUSE FOR Sale 40x60 Duplex House 3CR @ BEL layout 1st stage vidyaranyapura Contact:9902800702

Sites

Intl Airport Road

BIAAPA APPROVED SITE SALE ATTACHED TELECOM LAYOUT PHASE1 500 METRES FROM STONE HILL INTERNATIONAL SCHOOL 7337616557.

RENTAL PROPERTIES

Accommodation Available

House

INDIVIDUAL DUPLEX House FOR LEASE 30×40 at PADMANABHA NAGAR 17.00.000/= CONTACT:9902800702

JOB OPPORTUNITIES

Multiple Vacancy

WANTED FEMALE Telecaller & Billing Executive Retail 2 Wheeler Showroom Koramangala Good Communication Skills. 9945083900, 9731028676.

Teachers/ Professors

BANGALORE INSTITUTE OF TECHNOLOGY
REQUIRED
Corrigendum
Advertisement date: 04.06.2023 applications are also invited for the post of Assistant Professor in Electrical & Electronics Engineering (EEE) and Assistant Director of Physical Education. All other details remain same.
Principal/Management

General

JOB OPPORTUNITY for Retired Men, House wife & Graduates in Reputed Company. Age 40 to 75, Bangalorians only, Earn upto 40,000/- Contact-9741401834

WANTED MALE OFFICE ATTENDER, Balija Sangha, near Central Library, RPC Layout, Hampinagara, Bangalore. Contact:- 9448476465

RETIRED, HOUSEWIVES, Teachers, Agents, Distributors. Age upto 75 years. Earn upto Rs. 40000/- . Contact: 9845012673

Walk-in

AMBITIOUS? 15+ yrs experience? rewarding career in successful team Extensive Training Provided Call 9663405106

BUSINESS

Business to Business

Live Stock

SHEEP/ GOATS/ Cows/ Poultry. Bulk Supplies. Vamshadhara Livestock Company, Bangalore. Dr. Swamynaidu: Chief Veterinarian:- 9342247637.

BBMP Khata Sites
@ Singasandra, Hosur Road
Few Mins Drive from Silk Board, HSR Layout Near by Singasandra Metro Station
Prime Location in BBMP Limits
Bank Loans available
₹6000/- Per Sqft
Ready for Registration & Ready to Construct
Plot Sizes: 20x35, 40x35, 35x36
9886136936 / 9743401756

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

GET OWN BUSINESS 10 LAKHS INVESTMENT MONTHLY INCOME 1L FOR GREEN HERBAL AYURVEDIC: 8892501007/ 9606701007

PERSONAL

Change of Name

CHANGE OF NAME
We, **RAGHAVENDRA RAJU Y.R. NANDINI. S** residing at # 4, Opp AGS Layout Opp Ashiwarya Estate, Ullal main Road, Bengaluru-56 have changed Son name from **MOHIT RAJU Y R** to **ARWIN RAJU Y R** vide affidavit dated 03.06.2023 before notary L. Shankaranarayana, Bengaluru. Henceforth he sahll be known as **ARWIN RAJU Y R**

CHANGE OF NAME
I, **P.J. LAXMI DEVI** W/o. Late. P. Janardhan Rao. M.S. Ayyanna, R/a No. 110, Church Road, Madhura Nagar, Varthur, Bangalore- 560087 Declare that **P. J. LAXMI DEVI** and **P. JAYALAKSHMI** above both names are called for the same person, i.e. me only. Henceforth, I will known as **P. J. LAXMI DEVI** only. Sworn before VIIth Addl. Chief Metropolitan Magistrate, Bangalore on 07.06.2023.

VASANTHA SURESH, Wife/o, 14830125K, NK/MT, SURESH B, Vill - Orikkai, Kancheepuram, Tamil Nadu changed name VASANTHA SURESH to S VASANTHA, 07/06/2023, Notary K.V. Mani Bangalore

I, RAKHA DAS, R/a#5, 1st Cross, Chowdaiah Block, Siddhartha Public School R.T.Nagar, Bengaluru-560032, have changed name to REKHA REDDY vide affidavit 08.06.2023 before Notary Hemalatha, Bangalore.

I INDUMATHI Naresh Kumar Bhandari D/O, B.satyanarayana Reddy R/o Plot No-597, Flat No-201, 14th Cross, 5th Main, Dollars Colony, Rmv 2nd Stage, Bengaluru-560094 have changed my name to Indumathi Belaganti for all purposes.

Lost

I, VIKAS Gowda. V, working on behalf of ICICI Bank, for Credit Boosters, #15, Basement 80 Feet Road Koramangala, 1st Block, Bangalore, have lost my ID card of ICICI Bank Card no. 2342450, while in transit. Finders please contac: 9894230444.

DH DECCAN HERALD ಪ್ರಜಾವಾಣಿ
REAL ESTATE
BOOK YOUR REAL ESTATE AD IN DECCAN HERALD ALL KARNATAKA & PRAJAVANI ALL KARNATAKA
@800/-* Per Sqcm Single Column
@900/-* Per Sqcm Multi Column
For More Details Contact:
9731810277 | 9901641752
9845114560 | 9886213331
080- 45557163 | 45557164
conditions apply*

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೌಟುಂಬಿಕ ಕಲಹದ ಪ್ರಕರಣದಲ್ಲಿ ಹೇಬಿಯಸ್ ಕಾರ್ಪಸ್

ಕಡೆಗೂ ತಂದೆ ಬಳಿ ಬಂದ ಮಗಳು...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹದ ಪ್ರಕರಣವೊಂದರಲ್ಲಿ ವೃತ್ತಿನಿರತ ವೈದ್ಯೆಯೊಬ್ಬರು ತಮ್ಮ ಮಗಳನ್ನು ಪತಿಯ (ಮಗುವಿನ ತಂದೆ) ವಶಕ್ಕೆ ನೀಡದೆ ಈ ಸಂಬಂಧದ ಕೋರ್ಟ್ ಆದೇಶಗಳನ್ನೆಲ್ಲಾ ಉಲ್ಲಂಘಿಸಿ ಬೆಂಗಳೂರು ಹಾಗೂ ದೆಹಲಿ ಪೊಲೀಸರ ಕೈಗೂ ಸಿಗದೆ ನಾಪತ್ತೆಯಾಗಿದ್ದರು. ಅಂತಿಮವಾಗಿ ರಾಜ್ಯ ಹೈಕೋರ್ಟ್, ವೈದ್ಯೆಯ ವಿರುದ್ಧ ಸಿವಿಲ್ ಮತ್ತು ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವಂತೆ ಕಠಿಣ ಆದೇಶ ಹೊರಡಿಸಿದ ನಂತರ ಮಗಳನ್ನು ಪತಿಯ ಸುಪರ್ದಿಗೆ ಒಪ್ಪಿಸಿದ ಅಪರೂಪದ ಪ್ರಸಂಗ ಜರುಗಿದೆ.

ಪತಿಯನ್ನು (ಮಗುವಿನ ತಂದೆ), 'ಹೆಣ್ಣು ಮಗುವಿನ ಶಾಶ್ವತ ಪಾಲಕ' ಎಂದು ನಿಯೋಜಿಸಿ ಕೌಟುಂಬಿಕ ನ್ಯಾಯಾಲಯ ಆದೇಶಿಸಿತ್ತು. ಈ ಆದೇಶವನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಕೂಡಾ ಎತ್ತಿ ಹಿಡಿದಿದ್ದವು. ಆದರೆ, ವೈದ್ಯೆ ಈ ಆದೇಶ ಪಾಲನೆ ಮಾಡಿರಲಿಲ್ಲ. ಮಗಳನ್ನು ವಶಕ್ಕೆ ಒಪ್ಪಿಸುವಂತೆ ಕೋರಿ ಪತಿ ಹೈಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠವು, ವೈದ್ಯೆಯ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿಗೊಳಿಸಿತ್ತು.

ಬೆಂಗಳೂರು ಮತ್ತು ದೆಹಲಿ ಪೊಲೀಸರು ಸಾಕಷ್ಟು ಶೋಧ ನಡೆಸಿದರೂ ಪತ್ತೆಯಾಗಿರಲಿಲ್ಲ. ಅಂತಿಮವಾಗಿ ಆಕೆ ಸುಪ್ರೀಂ ಕೋರ್ಟ್‌ಗೆ ನೀಡಿದ್ದ ಸ್ವಯಂ ಪ್ರೇರಿತ ವಾಗ್ದಾನದ ಅನುಸಾರ ಹೈಕೋರ್ಟ್‌ಗೆ ಹಾಜರಾಗಿದ್ದರು. ಆ ಸಮಯದಲ್ಲೂ ಆಕೆ ಮಗಳನ್ನು ಪತಿಯ ಸುಪರ್ದಿಗೆ ಒಪ್ಪಿಸಿರಲಿಲ್ಲ. ವೈದ್ಯೆಯ ಈ ನಡವಳಿಕೆಯನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, 'ಇದು ಕಾನೂನಿನ ಸ್ಪಷ್ಟ ದುರ್ಬಳಕೆ. ಇಂತಹ ವರ್ತನೆ ಸಹಿಸಲು ಸಾಧ್ಯವಿಲ್ಲ' ಎಂದು ಅತೃಪ್ತಿ ವ್ಯಕ್ತಪಡಿಸಿತ್ತು.

'ಪೊಲೀಸರು ಆಕೆ ಉದ್ಯೋಗದಲ್ಲಿರುವ ಆಸ್ಪತ್ರೆಯನ್ನು ಸಂಪರ್ಕಿಸಬೇಕು. ಮಗುವನ್ನು ಪತಿಯ ಸುಪರ್ದಿಗೆ ನೀಡುವವರೆಗೂ ಆಕೆಯ ವೇತನ ತಡೆಹಿಡಿಯುವಂತೆ ಸೂಚಿಸಬೇಕು. ಹಾಗೆಯೇ, ಪತಿಯು ಪತ್ನಿ ವಿರುದ್ಧ ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕು. ವೈದ್ಯೆ ಮಗಳನ್ನು ತಂದೆಯ (ಪತಿ) ಸುಪರ್ದಿಗೆ ಒಪ್ಪಿಸುವುದನ್ನು ನಗರ ಪೊಲೀಸ್ ಆಯುಕ್ತರು 24 ಗಂಟೆಯಲ್ಲಿ ಖಾತರಿಪಡಿಸಬೇಕು' ಎಂದು ಕಠಿಣ ಆದೇಶ ಹೊರಡಿಸಿತ್ತು.

ಈ ಆದೇಶ ಹೊರಬಿದ್ದ ಕೂಡಲೇ ಮಹಿಳೆ ಪುನಃ ಮಗುವಿನೊಂದಿಗೆ ಪರಾರಿಯಾಗಬಹುದು ಎಂಬ ಆತಂಕದಿಂದ ಪೊಲೀಸರು ಆಕೆಯ ಚಲನವಲನದ ಮೇಲೆ ಕಣ್ಣಿಟ್ಟು ಕಾವಲು ನಿಂತರು. 'ಹೈಕೋರ್ಟ್ ಆದೇಶದಂತೆ ಮಗುವನ್ನು ಪತಿಯ ವಶಕ್ಕೆ ನೀಡಬೇಕು' ಎಂದು ತಿಳಿ ಹೇಳಿದರು. ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿದ್ದ ವೈದ್ಯೆ, 'ನ್ಯಾಯಾಲಯವೇ 24 ಗಂಟೆ ಸಮಯ ನೀಡಿರುವುದರಿಂದ ತಕ್ಷಣವೇ ಮಗಳನ್ನು ಪತಿಗೆ ಒಪ್ಪಿಸಲಾರೆ' ಎಂದು ಪಟ್ಟುಹಿಡಿದಿದ್ದರು. ಆದರೆ, ಕೆಲಹೊತ್ತಿನ ಹೈಡ್ರಾಮಾದ ಬಳಿಕ ಪೊಲೀಸರ ಕಣ್ಗಾವಲಿನಲ್ಲಿಯೇ ಮಗಳನ್ನು ಪತಿಯ ಸುಪರ್ದಿಗೆ ಒಪ್ಪಿಸಿದರು.

ಕಲುಷಿತ ನೀರು: 132 ಮಕ್ಕಳು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರದ ಸಾಯಿಶ್ರೀ ಬಡಾವಣೆಯಲ್ಲಿರುವ ಮಹಾವೀರ್ ರಾಂಚೆಸ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಕಲುಷಿತ ನೀರು ಕುಡಿದು 132 ಮಕ್ಕಳು ಅಸ್ವಸ್ಥಗೊಂಡಿದ್ದು, ಆರು ಮಕ್ಕಳ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ.

ಕುಡಿಯುವ ನೀರಿನ ಟ್ಯಾಂಕ್ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಿ ಜನರ ಜೀವಕ್ಕೆ ಕುತ್ತು ತಂದ ಆರೋಪದಡಿ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಿದ್ದ ಕಂಪನಿ ಹಾಗೂ ಇತರರ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 1000ಕ್ಕೂ ಹೆಚ್ಚು ಮಂದಿ ವಾಸವಿದ್ದಾರೆ. ಅವರಿಗೆ ಕುಡಿಯುವ ನೀರು ಪೂರೈಸಲು ದೊಡ್ಡ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಎಲ್ಲ ಫ್ಲ್ಯಾಟ್‌ಗಳಿಗೆ ಟ್ಯಾಂಕ್‌ಗಳಿಂದ ನೀರು ಸರಬರಾಜು ಆಗುತ್ತದೆ. ಆದರೆ, ಮೂರು ವರ್ಷಗಳಿಂದ ಟ್ಯಾಂಕ್ ಸ್ವಚ್ಛಗೊಳಿಸಿಲ್ಲ' ಎಂದು ಪೊಲೀಸರು ಹೇಳಿದರು.

'ನಿರ್ವಹಣೆ ಕೊರತೆಯಿಂದಾಗಿ ನೀರು ಕಲುಷಿತಗೊಂಡಿದೆ. ಅದನ್ನು ಕುಡಿದ ಮಕ್ಕಳು, ಬುಧವಾರ ಬೆಳಿಗ್ಗೆಯಿಂದ ಜ್ವರ ಹಾಗೂ ವಾಂತಿ– ಭೇದಿಯಿಂದ ಬಳಲುತ್ತಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸ್ಥಳೀಯ ಆಸ್ಪತ್ರೆಗಳಲ್ಲಿ ಗುರುವಾರ ರಾತ್ರಿಯವರೆಗೂ 135 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ. 'ಆರು ಮಕ್ಕಳ ಸ್ಥಿತಿ ಚಿಂತಾಜನಕವಾಗಿದ್ದು, ಅವರನ್ನು ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇರಿಸಿ ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ. ಉಳಿದ ಮಕ್ಕಳಿಗೆ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಜೊತೆಗೆ, ಮನೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ' ಎಂದರು.

ವೈದ್ಯರ ತಂಡದಿಂದ ನಿಗಾ: ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ವೈದ್ಯರ ತಂಡವೊಂದು ಮಕ್ಕಳಿಗೆ ಚಿಕಿತ್ಸೆ ನೀಡುತ್ತಿದೆ. ಮಕ್ಕಳ ಆರೋಗ್ಯದ ಮೇಲೆ ವೈದ್ಯರು ನಿಗಾ ವಹಿಸಿದ್ದಾರೆ.

ನೀರಿನ ಮಾದರಿ ಸಂಗ್ರಹ: ಮಕ್ಕಳು ಅಸ್ವಸ್ಥಗೊಂಡ ಮಾಹಿತಿ ಬರುತ್ತಿದ್ದಂತೆ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಭೇಟಿ ನೀಡಿ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಟ್ಯಾಂಕ್‌ನಲ್ಲಿದ್ದ ನೀರಿನ ಮಾದರಿ ಸಂಗ್ರಹಿಸಿ, ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಈ ಪ್ರಕರಣದ ಬಗ್ಗೆ ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಆರೋಗ್ಯ ಅಧಿಕಾರಿಗಳು ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಗೌರವಧನ: ಖಜಾನೆಗೆ ಬಿಲ್

ಬೆಂಗಳೂರು: ಆಶಾ ಕಾರ್ಯಕರ್ತೆಯರ ಮಾರ್ಚ್ ಹಾಗೂ ಏಪ್ರಿಲ್ ತಿಂಗಳ ಗೌರವಧನ ಮತ್ತು ಪ್ರೋತ್ಸಾಹಧನ ಪಾವತಿ ಪ್ರಕ್ರಿಯೆ ಮುಗಿದಿದ್ದು, ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಬಾಕಿ ಉಳಿಸಿಕೊಂಡಿರುವ ಗೌರವಧನ ಹಾಗೂ ಪ್ರೋತ್ಸಾಹಧನವನ್ನು ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಆಗ್ರಹಿಸಿತ್ತು. ಈ ಬಗ್ಗೆ ಆಶಾ ಕಾರ್ಯಕರ್ತೆಯರು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೂ ಮನವಿ ಸಲ್ಲಿಸಿದ್ದರು.

'ಪ್ರತಿ ಆರ್ಥಿಕ ವರ್ಷದ ಮೊದಲನೇ ತ್ರೈಮಾಸಿಕದ ಮೊದಲನೇ ತಿಂಗಳಲ್ಲಿ ಆರ್ಥಿಕ ಇಲಾಖೆಯ ಅನುಮೋದನೆ ಬಳಿಕ ಅನುದಾನ ಇಲಾಖೆಗೆ ಹಂಚಿಕೆಯಾಗುತ್ತದೆ. ಹೀಗಾಗಿ, ಸಹಜವಾಗಿ ಆರ್ಥಿಕ ವರ್ಷದ ಆರಂಭದಲ್ಲಿ ವಿಳಂಬವಾಗುತ್ತದೆ. ಗೌರವಧನವನ್ನು ₹ 5 ಸಾವಿರದಿಂದ ₹ 6 ಸಾವಿರಕ್ಕೆ ಏರಿಸಲು ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಚುನಾವಣೆ ನೀತಿ ಸಂಹಿತೆ ಜಾರಿಯಾದ್ದರಿಂದ ಮಾರ್ಚ್ ಹಾಗೂ ಏಪ್ರಿಲ್ ತಿಂಗಳ ಪ್ರೋತ್ಸಾಹಧನ ವಿಳಂಬವಾಗಿದೆ' ಎಂದು ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

'ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ವ್ಯತ್ಯಯದಿಂದಲೂ ಕೆಲವು ವೇಳೆ ವಿಳಂಬವಾಗುತ್ತದೆ. ಏಪ್ರಿಲ್ ತಿಂಗಳು ಹೊರತುಪಡಿಸಿದರೆ ಉಳಿದ ತಿಂಗಳು ನಿಗದಿತ ಸಮಯದಲ್ಲಿ ಗೌರವಧನ ಬಿಡುಗಡೆಯಾಗುತ್ತಿದೆ' ಎಂದು ಹೇಳಿದ್ದಾರೆ.

45 ಕೇಂದ್ರಗಳಲ್ಲಿ ನಡೆದಿದ್ದ ಪರೀಕ್ಷೆ • 25 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ನೋಂದಣಿ

ಪಿಸ್ಯಾಟ್ 2023: ರ‍್ಯಾಂಕ್ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಟೆಕ್ ಕೋರ್ಸ್‌ಗಳ ಪ್ರವೇಶಕ್ಕೆ ಪಿಇಎಸ್ ವಿಶ್ವವಿದ್ಯಾಲಯ ನಡೆಸಿದ 'ಪಿಸ್ಯಾಟ್-2023' ಪರೀಕ್ಷೆಯನ್ನು 25 ಸಾವಿರ ಅಭ್ಯರ್ಥಿಗಳು ಎದುರಿಸಿದ್ದು, ಮೊದಲೆರಡು ಸ್ಥಾನ ಪಡೆದ ಅಭ್ಯರ್ಥಿಗಳು ಬೆಂಗಳೂರಿನವರೇ ಆಗಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್. ದೊರೆಸ್ವಾಮಿ ಅವರು 'ಪಿಸ್ಯಾಟ್-2023' ಪರೀಕ್ಷೆಯ ರ‍್ಯಾಂಕ್ ಪಟ್ಟಿ ಬಿಡುಗಡೆ ಮಾಡಿ, ಮೊದಲ ಸ್ಥಾನ ಪಡೆದ ಸ್ನೇಹಾ ಪಂಡಿತ್ ಅವರನ್ನು ಅಭಿನಂದಿಸಿದರು.

'ದೇಶದಾದ್ಯಂತ 45 ಕೇಂದ್ರಗಳಲ್ಲಿ ಈ ಪರೀಕ್ಷೆ ನಡೆಸಲಾಗಿತ್ತು. ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. 25,699 ಅಭ್ಯರ್ಥಿಗಳು ಈ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಅವರಲ್ಲಿ 17,215 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಕಾರಣಾಂತರಗಳಿಂದ ಪರೀಕ್ಷೆ ಬರೆಯಲು ಸಾಧ್ಯವಾಗದಿದ್ದವರಿಗೆ ಇದೇ 18 ಹಾಗೂ 19ರಂದು ಪರೀಕ್ಷೆ ನಡೆಸಲಾಗುತ್ತದೆ. ಆದರೆ, ಈಗ ಪ್ರಕಟಿಸಿದ ರ‍್ಯಾಂಕ್‌ನಲ್ಲಿ ವ್ಯತ್ಯಾಸವಾಗುವುದಿಲ್ಲ' ಎಂದು ಹೇಳಿದರು.

'ಬೆಂಗಳೂರಿನ ಸುಜಿತ್ ಅಡಿಗ ದ್ವಿತೀಯ ರ‍್ಯಾಂಕ್, ಆಂಧ್ರಪ್ರದೇಶದ ಜಯಂತ್ ರೆಡ್ಡಿ ತೃತೀಯ ರ‍್ಯಾಂಕ್, ಉತ್ತರ ಪ್ರದೇಶದ ಶಶಾಂಕ್ ಸಿನ್ಹಾ ನಾಲ್ಕನೆ ರ‍್ಯಾಂಕ್ ಹಾಗೂ ಅನುಷ್ಕಾ ಸಿಂಘಲ್ ಐದನೇ ರ‍್ಯಾಂಕ್ ಪಡೆದಿದ್ದಾರೆ. ಪರೀಕ್ಷೆ ಎದುರಿಸಿದ ಎಲ್ಲ ವಿದ್ಯಾರ್ಥಿಗಳಿಗೂ ರ‍್ಯಾಂಕ್ ನೀಡಲಿದ್ದು, ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಬಹುದು. 1,188 ಸೀಟುಗಳು ಲಭ್ಯವಿವೆ. ಒಂದು ಸೀಟ್‌ಗೆ 21 ಅಭ್ಯರ್ಥಿಗಳು ಸ್ಪರ್ಧಿಸಬೇಕು. ಮೊದಲ ಸುತ್ತಿನ ಕೌನ್ಸೆಲಿಂಗ್ ಇದೇ 17, 18ರಂದು ವಿವಿ ಆವರಣದಲ್ಲಿ ನಡೆಯಲಿದೆ' ಎಂದರು.

ವಿದ್ಯಾರ್ಥಿಗಳಿಗೆ ಪ್ರೋತ್ಸಾಹ: 'ವಿಶ್ವವಿದ್ಯಾಲಯದಲ್ಲಿ ಹೊಸ ಆಲೋಚನೆ, ಯೋಜನೆಗಳಿಗೆ ಪ್ರೋತ್ಸಾಹ ನೀಡಲಾಗುತ್ತದೆ. ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಯೋಜನೆಯ ಡಿ ಸಂಶೋಧನೆಗೆ ನಮ್ಮ ವಿಶ್ವವಿದ್ಯಾಲಯಕ್ಕೆ ₹ 46.79 ಲಕ್ಷ ಅನುದಾನ ನೀಡಿದೆ. ನವದೆಹಲಿಯ ವಿಜ್ಞಾನ ಮತ್ತು ಎಂಜಿನಿಯರಿಂಗ್ ಸಂಶೋಧನಾ ಮಂಡಳಿಯು ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗಕ್ಕೆ ₹ 28ಲಕ್ಷ ಸಂಶೋಧನಾ ನಿಧಿ ಒದಗಿಸಿದೆ' ಎಂದರು.

'ಸಂಶೋಧನಾ ಚಟುವಟಿಕೆಗಳ ಸಂಬಂಧ ವಿವಿಧ ಸಂಸ್ಥೆಗಳ ಜತೆಗೆ ವಿಶ್ವವಿದ್ಯಾಲವು ಒಪ್ಪಂದ ಮಾಡಿಕೊಂಡಿದೆ' ಎಂದರು. ವಿಶ್ವವಿದ್ಯಾಲಯದ ಕುಲಪತಿ ಸೂರ್ಯಪ್ರಸಾದ್ ಜೆ. ಹಾಗೂ ಕುಲಸಚಿವ ಕೆ.ಎಸ್.ಶ್ರೀಧರ್ ಇದ್ದರು.

ಪ್ರಥಮ ಸ್ಥಾನ ಪಡೆದ ಸ್ನೇಹಾ ಪಂಡಿತ್ ಅವರನ್ನು ಪ್ರೊ.ಎಂ.ಆರ್. ದೊರೆಸ್ವಾಮಿ ಅಭಿನಂದಿಸಿದರು. ಕುಲಪತಿ ಸೂರ್ಯಪ್ರಸಾದ್ ಜೆ. ಇದ್ದಾರೆ

'ರಾಷ್ಟ್ರೀಯ ಶಿಕ್ಷಣ ನೀತಿ ತಿರಸ್ಕಾರ ಸರಿಯಲ್ಲ'

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳ ಕೌಶಲ ವೃದ್ಧಿ, ಸಂಶೋಧನೆಗಳಿಗೆ ಪೂರಕವಾಗಿದೆ. ಹಾಗಾಗಿ, ಗೊಂದಲ ಸೃಷ್ಟಿಸದೆ ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡಬೇಕು' ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಮಾಜಿ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಈಗಾಗಲೇ ಜಾರಿ ಮಾಡಲಾಗಿದೆ. ಇದರಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದೆ. ಹಂತ ಹಂತವಾಗಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಬೇಕಾಗುತ್ತದೆ. ಇದಕ್ಕೆ ಹಲವಾರು ಆಯಾಮಗಳಿವೆ. ಇದನ್ನು ತಿರಸ್ಕರಿಸುತ್ತೇವೆ ಎನ್ನುವುದು ಸರಿಯಲ್ಲ. ಕೇಂದ್ರ ಸರ್ಕಾರವು ಒಂದು ಕಾಯ್ದೆಯನ್ನು ಜಾರಿ ಮಾಡಿದಾಗ ಅದನ್ನು ರಾಜ್ಯ ಸರ್ಕಾರ ರದ್ದು ಮಾಡಲು ಬರುವುದಿಲ್ಲ' ಎಂದು ಹೇಳಿದರು.

'ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಜಾರಿ ಮಾಡಲಾದ ಈ ನೀತಿಗೆ, ದೇಶದ ಪ್ರಮುಖ ಶಿಕ್ಷಣ ತಜ್ಞರು ಶ್ರಮಿಸಿದ್ದಾರೆ. ವಿದ್ಯಾರ್ಥಿಗಳು ಉದ್ಯೋಗ ಸೃಷ್ಟಿಸುವವರಾಗಬೇಕು ಎಂಬುದು ಈ ನೀತಿಯ ಆಶಯ. ಇದರಿಂದ ನವೋದ್ಯಮಕ್ಕೆ ಪ್ರೋತ್ಸಾಹ ಸಿಗುತ್ತಿದೆ. ಸರ್ಕಾರ ಬದಲಾದಂತೆ ಶಿಕ್ಷಣ ನೀತಿಗಳನ್ನು ಬದಲಾಯಿಸಬಾರದು' ಎಂದು ತಿಳಿಸಿದರು.

1,695 ವಿದ್ಯಾರ್ಥಿಗಳಿಗೆ ಉದ್ಯೋಗ

'2023ರಲ್ಲಿ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಅಪ್ಲಿಕೇಷನ್, ಎಂಜಿನಿಯರಿಂಗ್-ಟೆಕ್ನಾಲಜಿ, ಮ್ಯಾನೇಜ್‌ಮೆಂಟ್, ಕಾಮರ್ಸ್, ಫಾರ್ಮಸಿ ಹಾಗೂ ಡಿಸೈನ್ ವಿಷಯದಲ್ಲಿ 2,425 ವಿದ್ಯಾರ್ಥಿಗಳು ಉದ್ಯೋಗವಕಾಶ ಪಡೆಯಲು ಅರ್ಹತೆ ಪಡೆದಿದ್ದರು. ಅವರಲ್ಲಿ 1,695 ವಿದ್ಯಾರ್ಥಿಗಳಿಗೆ ಉದ್ಯೋಗ ಸಿಕ್ಕಿದೆ. 193 ವಿದ್ಯಾರ್ಥಿಗಳಿಗೆ ಒಂದಕ್ಕಿಂತ ಹೆಚ್ಚಿನ ಉದ್ಯೋಗವಕಾಶದ ಆಯ್ಕೆಗಳಿದ್ದವು. 504 ಕಂಪನಿಗಳು ಕ್ಯಾಂಪಸ್ ಸಂದರ್ಶನಕ್ಕೆ ಹಾಜರಾಗಿದ್ದವು' ಎಂದು ವಿಶ್ವವಿದ್ಯಾಲಯದ ಕುಲಸಚಿವ ಕೆ.ಎಸ್.ಶ್ರೀಧರ್ ತಿಳಿಸಿದರು.

'ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದಲ್ಲಿ 97 ಅಭ್ಯರ್ಥಿಗಳಿಗೆ ಅಂತಿಮ ವರ್ಷ ಪ್ರವೇಶಿಸುವ ಮೊದಲೇ ಉದ್ಯೋಗದ ಅವಕಾಶ ದೊರೆತಿದೆ. ಈ ವಿಭಾಗದಲ್ಲಿ ವಾರ್ಷಿಕ ಗರಿಷ್ಠ ವೇತನ ₹ 65 ಲಕ್ಷವಾದರೇ, ಸರಾಸರಿ ವಾರ್ಷಿಕ ವೇತನ ₹ 17.99 ಲಕ್ಷ ಲಭಿಸಿದೆ. ಬಿ.ಕಾಂ ಪದವೀಧರ ಅಭ್ಯರ್ಥಿಯೊಬ್ಬರಿಗೆ ಈ ಬಾರಿ ವಾರ್ಷಿಕ ₹ 22 ಲಕ್ಷ ಪ್ಯಾಕೇಜ್ ಲಭಿಸಿದೆ. ಕಳೆದ ವರ್ಷ ವಿದ್ಯಾರ್ಥಿಯೊಬ್ಬರಿಗೆ ₹ 21 ಲಕ್ಷ ಪ್ಯಾಕೇಜ್ ದೊರೆತಿತ್ತು. ನಮ್ಮಲ್ಲಿನ ಪಠ್ಯವು ವಿಭಿನ್ನವಾಗಿರುವುದರಿಂದ ಕ್ಯಾಂಪಸ್ ಸಂದರ್ಶನಕ್ಕೆ ಕಂಪನಿಗಳು ಹೆಚ್ಚಿನ ಆಸಕ್ತಿ ತೋರುತ್ತಿವೆ' ಎಂದು ಹೇಳಿದರು.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಇಬ್ಬರು ಎಂಜಿನಿಯರ್ ಅಮಾನತು

ಬೆಂಗಳೂರು: ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ ಆರೋಪದ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಇಬ್ಬರು ಕಾರ್ಯನಿರ್ವಾಹಕ ಎಂಜಿನಿಯರ್‌ಗಳನ್ನು ರಾಜ್ಯ ಸರ್ಕಾರ ಅಮಾತನು ಮಾಡಿದೆ.

ತುಮಕೂರಿನ ಪಂಚಾಯತ್ ರಾಜ್ ಎಂಜಿನಿಯರ್ ವಿಭಾಗದಲ್ಲಿ ವಿಳಂಬ ಧೋರಣೆ ಹಾಗೂ ಕರ್ತವ್ಯ ನಿರ್ಲಕ್ಷದಿಂದ ಸುಮಾರು ₹ 2.76 ಕೋಟಿ ನಷ್ಟಕ್ಕೆ ಕಾರಣವಾಗಿದ್ದ ಆರೋಪದಲ್ಲಿ ಕಾರ್ಯನಿರ್ವಾಹಕ ಎಂಜಿನಿಯರ್ ಎಸ್.ಆರ್ ಹರೀಶ್, ಯಾದಗಿರಿಯ ಪಂಚಾಯತ್ ರಾಜ್ ಎಂಜಿನಿಯರ್ ವಿಭಾಗದಲ್ಲಿ 41 ವಿವಿಧ ಕಾಮಗಾರಿಗಳಲ್ಲಿ ₹ 1.3 ಕೋಟಿ ನಷ್ಟ ಮಾಡಿದ್ದ ಆರೋಪದಲ್ಲಿ ಎಂಜಿನಿಯರ್ ಬಸವರಾಜ. ಕೆ. ಹಲಚೇರ ಅವರನ್ನು ಅಮಾನತು ಮಾಡಲಾಗಿದೆ.

ನಗರದ ರಸ್ತೆಗಳ ವಿಸ್ತರಿಸಿ: ಹೈಕೋರ್ಟ್

ಒಂದನೇ ಪುಟದಿಂದ...

'ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆಯಿಂದ ಸಾರ್ವಜನಿಕ ಸಾರಿಗೆ ಲಭ್ಯವಾಗುತ್ತಿಲ್ಲ. ಇದರಿಂದಾಗಿ ಸ್ವಂತ ಬಳಕೆದಾರರ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಅಂತೆಯೇ, ದ್ವಿಚಕ್ರ ವಾಹನ ಚಾಲಕರು ಪಾದಚಾರಿ ಮಾರ್ಗವನ್ನು ಆಟದ ಮೈದಾನದಂತೆ ಬಳಸುತ್ತಿದ್ದಾರೆ' ಎಂದು ನ್ಯಾಯಪೀಠ ಆತಂಕ ವ್ಯಕ್ತಪಡಿಸಿದೆ.

'ಈ ನಿಟ್ಟಿನಲ್ಲಿ ಸಂಬಂಧಿಸಿದ ಪ್ರಾಧಿಕಾರಗಳು ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಎಚ್ಚರಿಸಿರುವ ನ್ಯಾಯಪೀಠ, ನಗರದ ಹಲವು ರಸ್ತೆಗಳಲ್ಲಿ ವಾಹನ ಸವಾರರು ಏಕಮುಖ ರಸ್ತೆಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ಸಂಚರಿಸುತ್ತಿರುವುದು ಆಘಾತಕಾರಿ ವಿಷಯ. ಈ ವಿಷಯದಲ್ಲಿ ನಾಗರಿಕರೂ ತಮ್ಮ ಕರ್ತವ್ಯ ಮತ್ತು ಹೊಣೆಗಾರಿಕೆ ಪ್ರದರ್ಶಿಸಬೇಕಿದೆ' ಎಂದು ಮೌಖಿಕವಾಗಿ ಸೂಚಿಸಿದೆ.

ಪ್ರಕಟಣೆ

ರಂಗಾರೆಡ್ಡಿ
ವಯಸು: 55–60 ವರ್ಷ
ಮಾನಸಿಕ ಅಸ್ವಸ್ಥರಾದ ಇವರು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಇವರಿಗೆ ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ವಿವರ ಕೇಳಿದರೆ ಒಮ್ಮೆ ಲಕ್ಕಸಂದ್ರ ಮತ್ತೊಮ್ಮೆ ಬಿಟಿಎಂ ಹೆಸರು ಹೇಳುತ್ತಾರೆ. ಇವರಿಗೆ ಯಾರಾದರೂ ವಾರಸುದಾರರು ಇದ್ದರೆ ಕೂಡಲೇ ಸಂಪರ್ಕಿಸಿ.
ನಂ. 135, 5ನೇ ಮುಖ್ಯ, 6ನೇ ಕ್ರಾಸ್, ಮಲ್ಲೇಶ್‌ಪಾಳ್ಯ, ನ್ಯೂ ತಿಪ್ಪಸಂದ್ರ ಪೋಸ್ಟ್, ಸಿವಿ ರಾಮನ್ ನಗರ, ಬೆಂಗಳೂರು–75
ಅಶೋಕ್ : 9844189999
ಲೋಕೇಶ್ : 9945053555 / 9008601004

ಹಾಲು ಖರೀದಿ ಪ್ರೋತ್ಸಾಹಧನ ₹ 669 ಕೋಟಿ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲು ಪೂರೈಸಿರುವ ರೈತರಿಗೆ ₹ 669.59 ಕೋಟಿ ಪ್ರೋತ್ಸಾಹಧನ ಪಾವತಿಯನ್ನು ಕರ್ನಾಟಕ ಹಾಲು ಮಹಾಮಂಡಳ ಬಾಕಿ ಇರಿಸಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬುಧವಾರ ಪತ್ರ ಬರೆದಿರುವ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ, 'ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಟ್ಟು ₹ 669.59 ಕೋಟಿ ಪ್ರೋತ್ಸಾಹಧನ ರೈತರಿಗೆ ಪಾವತಿಯಾಗದೆ, ರೈತ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ತಕ್ಷಣವೇ ಈ ಬಾಕಿ ಪಾವತಿಗೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಹಾಲು ಪೂರೈಸುತ್ತಿರುವ ಪ್ರತಿ ರೈತರಿಗೆ ₹ 5,000ದಿಂದ ₹ 30,000ದವರೆಗೂ ಪ್ರೋತ್ಸಾಹಧನ ಬಾಕಿ ಇದೆ. ಕೃಷಿ ಚಟುವಟಿಕೆಗಳು ಆರಂಭವಾಗುತ್ತಿವೆ. ಮಕ್ಕಳಿಗೆ ಶಾಲಾ, ಕಾಲೇಜುಗಳೂ ಆರಂಭವಾಗಿವೆ. ಈ ಸಂದರ್ಭದಲ್ಲಿ ರೈತ ಕುಟುಂಬಗಳ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಇದೆ. ರೈತರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರೋತ್ಸಾಹಧನ ಬಾಕಿ ವಿವರ

ಮೊತ್ತ	ಅವಧಿ
₹45.53 ಕೋಟಿ	2019ರಿಂದ 2022ರ ಅಕ್ಟೋಬರ್
₹421.16 ಕೋಟಿ	2022ರ ನವೆಂಬರ್‌ನಿಂದ 2023ರ ಫೆಬ್ರುವರಿ
₹202.90 ಕೋಟಿ	2023ರ ಮಾರ್ಚ್ ಮತ್ತು ಏಪ್ರಿಲ್
ಒಟ್ಟು: ₹669.59 ಕೋಟಿ	

'ಬಿಜೆಪಿ ಸೋಲಿಗೆ ಕಾರಣ: ಪರಸ್ಪರ ದೂಷಣೆ'

ಒಂದನೇ ಪುಟದಿಂದ...

ಬಿಜೆಪಿ ಸರ್ಕಾರದ ವಿರುದ್ಧ ಕೇಳಿಬಂದಿದ್ದ ಶೇಕಡ 40ರಷ್ಟು ಲಂಚದ ಆರೋಪಕ್ಕೆ ಸರಿಯಾಗಿ ಉತ್ತರ ನೀಡದೇ ಇರುವುದೂ ಸೋಲಿಗೆ ಕಾರಣ ಎಂದು ಕೆಲವರು ಹೇಳಿದ್ದಾರೆ.

'ಅನ್ನ ಭಾಗ್ಯ' ಯೋಜನೆಯಡಿ ಬಿಪಿಎಲ್ ಕುಟುಂಬಗಳ ಪ್ರತಿ ಸದಸ್ಯರಿಗೆ ತಲಾ ಹತ್ತು ಕೆ.ಜಿ. ಅಕ್ಕಿ ನೀಡಲಾಗುತ್ತಿತ್ತು. ಚುನಾವಣೆ ಸಮೀಪದಲ್ಲಿರುವಾಗ ಅದನ್ನು ತಲಾ ಆರು ಕೆ.ಜಿ.ಗೆ ಇಳಿಸಲಾಯಿತು. ಚುನಾವಣೆಯ ಹಿಂದಿನ ತಿಂಗಳು ನಾಲ್ಕು ಕೆ.ಜಿ. ಅಕ್ಕಿ ಮತ್ತು ಎರಡು ಕೆ.ಜಿ. ರಾಗಿ ವಿತರಿಸಿದರು. ಕಾಂಗ್ರೆಸ್ ತಲಾ ಹತ್ತು ಕೆ.ಜಿ. ಅಕ್ಕಿಯ ಭರವಸೆ ನೀಡಿತು.

ಈ ವಿಚಾರದಲ್ಲಿ ಸರ್ಕಾರ ಮಾಡಿದ ತಪ್ಪಿನಿಂದ ತಮಗೆ ಸೋಲಾಯಿತು ಎಂಬುದಾಗಿ ಹಲವು ಅಭ್ಯರ್ಥಿಗಳು ದೂರಿದರು. ಜಿಲ್ಲಾ ಉಸ್ತುವಾರಿ ಸಚಿವರ ಬದಲಾವಣೆ ಬಗ್ಗೆಯೂ ಹಲವರು ಸಭೆಯಲ್ಲಿ ಆಕ್ಷೇಪಿಸಿದ್ದಾರೆ. ಹೊರ ಜಿಲ್ಲೆಯವರನ್ನು ಉಸ್ತುವಾರಿ ಸಚಿವರನ್ನಾಗಿ ಮಾಡಿದ ಪರಿಣಾಮ ಸ್ಥಳೀಯ ಕಾರ್ಯಕರ್ತರಿಗೆ ಸರಿಯಾದ ಸ್ಪಂದನೆ ಸಿಗಲಿಲ್ಲ. ಇಂತಹ ತಪ್ಪುಗಳೇ ಪಕ್ಷದ ಸೋಲಿಗೆ ಕಾರಣ ಎಂಬುದಾಗಿ ಹಲವರು ದೂರಿದ್ದಾರೆ ಎಂದು ಗೊತ್ತಾಗಿದೆ.

ಮುಂದಿನ ವರ್ಷ 'ನೆಕ್ಸ್ಟ್' ಪರೀಕ್ಷೆ

ನವದೆಹಲಿ (ಪಿಟಿಐ): ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಮುಂದಿನ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ನಿರ್ಗಮನ ಪರೀಕ್ಷೆ (ನೆಕ್ಸ್ಟ್) ನಡೆಯುವ ಸಾಧ್ಯತೆ ಇದ್ದು, ದೆಹಲಿಯ ಏಮ್ಸ್ ಈ ಪರೀಕ್ಷೆಯನ್ನು ಸಂಘಟಿಸಲಿದೆ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರೀಯ ವೈದ್ಯಕೀಯ ಆಯೋಗದ ಕಾಯ್ದೆ ಪ್ರಕಾರ ನೆಕ್ಸ್ಟ್ ಪರೀಕ್ಷೆ ನಡೆಸುವುದು ಕಡ್ಡಾಯ. ಇದರಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳು ವೈದ್ಯಕೀಯ ವೃತ್ತಿ ಆರಂಭಿಸಲು ಹಾಗೂ ಮೆರಿಟ್ ಆಧಾರದ ಮೇಲೆ ಸ್ನಾತಕೋತ್ತರ ಪ್ರವೇಶ ಪಡೆಯಲು ಅರ್ಹತೆ ಪಡೆಯುತ್ತಾರೆ. ವಿದೇಶದಲ್ಲಿ ವೈದ್ಯಕೀಯ ವ್ಯಾಸಂಗ ಮಾಡಿದವರು ಭಾರತದಲ್ಲಿ ವೃತ್ತಿ ಮಾಡಲು ಇಚ್ಛಿಸಿದರೆ ಸ್ಕ್ರೀನಿಂಗ್ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಿದೆ.

2020ರ ಸೆಪ್ಟೆಂಬರ್‌ನಲ್ಲಿ ಈ ಕಾಯ್ದೆ ಜಾರಿಗೆ ಬಂದಿದೆ. ಇದರನ್ವಯ ಮೂರು ವರ್ಷದೊಳಗೆ ನೆಕ್ಸ್ಟ್ ಪರೀಕ್ಷೆಯನ್ನು ನಡೆಸಬೇಕಿದೆ. ಆದರೆ, ಕಳೆದ ವರ್ಷ ಕೇಂದ್ರ ಸರ್ಕಾರವು ಈ ಪರೀಕ್ಷೆಯನ್ನು 2024ರ ಸೆಪ್ಟೆಂಬರ್‌ವರೆಗೆ ಮುಂದೂಡಿ ಆದೇಶ ಹೊರಡಿಸಿತ್ತು.

ಪರೀಕ್ಷೆಯನ್ನು ವಿವರಣಾತ್ಮಕವಾಗಿ ಅಥವಾ ಬಹುಆಯ್ಕೆ ಮಾದರಿ ಪ್ರಶ್ನೆಗಳ ರೂಪದಲ್ಲಿ ನಡೆಸಬೇಕೇ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಪರೀಕ್ಷೆಗೆ ಸಿದ್ಧತೆ ನಡೆಸಲು ವಿದ್ಯಾರ್ಥಿಗಳಿಗೆ ಸಮಯಾವಕಾಶ ನೀಡಲಾಗುತ್ತದೆ. ಪರೀಕ್ಷೆಗೂ ಮೊದಲು ಅಣಕು ಪರೀಕ್ಷೆ ನಡೆಯಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರಸ್ತುತ ಆಯಾ ಕಾಲೇಜುಗಳಲ್ಲಿಯೇ ಎಂಬಿಬಿಎಸ್ ಅಂತಿಮ ವರ್ಷದ ಪರೀಕ್ಷೆ ನಡೆಯುತ್ತದೆ. ರಾಷ್ಟ್ರೀಯ ಪರೀಕ್ಷಾ ಮಂಡಳಿ(ಎನ್‌ಬಿಇ)ಯು ನೀಟ್–ಪಿಜಿ ಹಾಗೂ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಸ್ಕ್ರೀನಿಂಗ್ ಪರೀಕ್ಷೆಯನ್ನು ನಡೆಸುತ್ತದೆ.

'ನೆಮ್ಮದಿ ಕೆಡಿಸುವವರ ವಿರುದ್ಧ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಭಯದ ವಾತಾವರಣದಲ್ಲಿ ಬದುಕುವ ಸನ್ನಿವೇಶವನ್ನು ಬದಲಿಸಿ, ಸುರಕ್ಷತೆಯ ಭಾವ ಮೂಡಿಸಲು ಸರ್ಕಾರ ಕೆಲಸ ಮಾಡಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ತಮ್ಮನ್ನು ಭೇಟಿಯಾದ 'ಎದ್ದೇಳು ಕರ್ನಾಟಕ' ಸಂಘಟನೆಯ ಪ್ರತಿನಿಧಿಗಳ ಜೊತೆ ಗುರುವಾರ ಅವರು ಸಂವಾದ ನಡೆಸಿದರು.

'ನಾಡಿನ ಜನತೆ ಬಿಜೆಪಿ, ಆರ್‌ಎಸ್‌ಎಸ್ ಸಿದ್ಧಾಂತವನ್ನು ಚುನಾವಣೆಯಲ್ಲಿ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಇದಕ್ಕಾಗಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದವರ ನಿರೀಕ್ಷೆಗೆ ತಕ್ಕಂತೆ ಸರ್ಕಾರ ಕೆಲಸ ಮಾಡುತ್ತದೆ. ಕನ್ನಡ ನಾಡಿನ ನೆಮ್ಮದಿ ಕೆಡಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಇನ್ನು ಮುಂದೆ ಮತೀಯ ಗೂಂಡಾಗಿರಿಗೆ ಅವಕಾಶ ಇಲ್ಲ. 'ಭೀತಿಯ ವಾತಾವರಣ ಸೃಷ್ಟಿಸುವವರು, ಸಾಮಾಜಿಕ ಜಾಲತಾಣಗಳ ಮೂಲಕ ಸಾಮರಸ್ಯ ಕದಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ' ಎಂದರು.

ನಿಯೋಗದಲ್ಲಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಕೆ.ಎಂ. ರಾಮಚಂದ್ರಪ್ಪ, ನೂರ್ ಶ್ರೀಧರ್, ವಿಜಯಮ್ಮ, ಮಲ್ಲಿಗೆ, ಜೆ.ಎಸ್. ಪಾಟೀಲ್, ಯೂಸುಫ್ ಖನ್ನಿ, ತಾರಾರಾವ್ ಸೇರಿದಂತೆ ವಿವಿಧ ಸಂಘಟನೆಗಳ 30ಕ್ಕೂ ಹೆಚ್ಚು ಪ್ರತಿನಿಧಿಗಳಿದ್ದರು

ನೆಟೆ ರೋಗದ ಹಾನಿ: ₹ 74 ಕೋಟಿ ನೆರವು

ಬೆಂಗಳೂರು: 2022–23ರ ಮುಂಗಾರು ಹಂಗಾಮಿನಲ್ಲಿ ತೊಗರಿ ಬೆಳೆಗೆ ಬಾಧಿಸಿದ ನೆಟೆ ರೋಗದಿಂದ ನಷ್ಟ ಅನುಭವಿಸಿದ ರೈತರಿಗೆ ಮೊದಲ ಹಂತದಲ್ಲಿ ಪರಿಹಾರ ನೀಡಲು ₹74 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಚಿತ್ರಾವಳಿ

ಸಾಹಿತ್ಯ ಪ್ರಕಾಶನ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶತಾವಧಾನಿ ಆರ್. ಗಣೇಶ್ ಅವರು 'ಮನೋಲ್ಲಾಸ' ಪುಸ್ತಕ ಬಿಡುಗಡೆ ಮಾಡಿದರು. ಕೃಷಿ ವಿಜ್ಞಾನಿ ಬಿ.ಎಸ್. ರಾಮರಾವ್, ನಿವೃತ್ತ ಪ್ರಾಧ್ಯಾಪಕ ಜಿ. ಅಶ್ವತ್ಥ ನಾರಾಯಣ, ಲೇಖಕ ಹಳದೀಪುರ ವಾಸುದೇವ ರಾವ್ ಇದ್ದರು



ಬಿಜೆಪಿ ಸರ್ಕಾರ ಇದ್ದಾಗ ಶಿಕ್ಷಣ ಸುಧಾರಣೆಗಳ ಸಲಹೆಗಾರರಾಗಿದ್ದ ಪ್ರೊ.ಎಂ.ಆರ್. ದೊರೆಸ್ವಾಮಿ ಅವರು ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆಯ ಸುಧಾರಣೆಗಳಿಗೆ ಸಂಬಂಧಿಸಿದ ಮಧ್ಯಂತರ ವರದಿಯನ್ನು ಸಲ್ಲಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಇದ್ದರು

ನಗರದಲ್ಲಿ ಇಂದು

'ಕಲ್ಚರಾ-23' ಸಾಂಸ್ಕೃತಿಕ, ತಾಂತ್ರಿಕ ಉತ್ಸವ: ಆಯೋಜನೆ ಮತ್ತು ಸ್ಥಳ: ಸಿ.ಎಂ.ಆರ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆವರಣ, ಕುಂದಲಹಳ್ಳಿ, ಬೆಳಿಗ್ಗೆ 9.30ರಿಂದ

ವಿಸ್ಮಯ–2023: ಉದ್ಘಾಟನೆ: ಬಿ.ಎಸ್. ರಜನಿಕಾಂತ್, ಪ್ರತಿಭಾ ಸಂಶಿಮಠ, ಅತಿಥಿಗಳು: ಶಶಿಧರ್ ಕೋಟೆ, ಅಧ್ಯಕ್ಷತೆ: ಬಿ. ಬೈಲಪ್ಪ, ಬಿ. ಮಂಜುನಾಥ್, ರಾಘವ್ ಬೈಲಪ್ಪ, ಆಯೋಜನೆ ಮತ್ತು ಸ್ಥಳ: ಡಾನ್ ಬಾಸ್ಕೋ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕುಂಬಳಗೋಡು, ಮೈಸೂರು ರಸ್ತೆ, ಬೆಳಿಗ್ಗೆ 9.30ರಿಂದ

'ಭೀಮ ಸಂಕಲ್ಪ' ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಅತಿಥಿಗಳು: ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ್, ಕೆ.ಎಚ್. ಮುನಿಯಪ್ಪ, ಡಾ.ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಜಮೀರ್ ಅಹ್ಮದ ಖಾನ್, ಶಿವರಾಜ್ ತಂಗಡಗಿ, ಇಂದಿರಾ ಕೃಷ್ಣಪ್ಪ, ಆಯೋಜನೆ: ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ, ಸ್ಥಳ: ಟೌನ್ ಹಾಲ್, ಬೆಳಿಗ್ಗೆ 10ರಿಂದ

ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನಾ ಸಮಾರಂಭ: ಅತಿಥಿ: ಭಾಸ್ಕರ್ ರಾವ್, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಪದವಿಪೂರ್ವ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಉದ್ಯೋಗ ಮತ್ತು ನೇಮಕಾತಿ ಅಭಿಯಾನ: ಉದ್ಘಾಟನೆ: ಡಾ.ಎಂ.ಸಿ. ಸುಧಾಕರ್, ಅತಿಥಿಗಳು: ಪಿ.ಸಿ. ಮೋಹನ್, ದಿನೇಶ್ ಗುಂಡೂರಾವ್, ರಿಜ್ವಾನ್ ಅರ್ಷದ್, ಎಸ್.ಆರ್. ಉಮಾಶಂಕರ್, ಪಿ. ಪ್ರದೀಪ್, ಸಂಜಯ್ ಉದಾನಿ, ಅಧ್ಯಕ್ಷತೆ: ಎಲ್. ಗೋಮತಿ ದೇವಿ, ಆಯೋಜನೆ ಮತ್ತು ಸ್ಥಳ: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಅರಮನೆ ರಸ್ತೆ, ಬೆಳಿಗ್ಗೆ 11

ಧ್ಯಾನ ಶಿಬಿರ: ಆಯೋಜನೆ: ರಾಮಚಂದ್ರ ಮಿಷನ್ ಮತ್ತು ಸಂಸ್ಕೃತಿ ಸಚಿವಾಲಯ, ಸ್ಥಳ: ರಾಮಚಂದ್ರ ಮಿಷನ್ (ಹಾರ್ಟ್‌ಫುಲ್‌ನೆಸ್), ಬನಶಂಕರಿ 2ನೇ ಹಂತ, ಸಂಜೆ 5.30ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಂಧ್ಯಾ ಮಣಿಕಂಡನ್, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ವೀಣಾ ಬನ್ನಂಜೆ ಅವರ 'ಅಲ್ಲಮೋಪನಿಷತ್ತು', 'ಅರ್ಥಯಾತ್ರೆ', 'ಪರಮಾರ್ಥ ಯಾತ್ರೆ' ಪುಸ್ತಕಗಳ ಬಿಡುಗಡೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅತಿಥಿಗಳು: ಶತಾವಧಾನಿ ಆರ್. ಗಣೇಶ್, ತೀರ್ಥರಾಮ ವಳಲಂಬೆ, ಉಪಸ್ಥಿತಿ: ವೀಣಾ ಬನ್ನಂಜೆ, ಆಯೋಜನೆ: ಎಂ.ಎ. ಸುಬ್ರಹ್ಮಣ್ಯ, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಪ್ರವಚನ ವಾಹಿನಿ: 'ಪ್ರಭುಲಿಂಗ ಲೀಲೆಯ ಸ್ವಾರಸ್ಯಕರ ಪ್ರಸಂಗಗಳು' ಕುರಿತು ಉಪನ್ಯಾಸ: ಸಿ.ಯು. ಮಂಜುನಾಥ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಕಂದಾಯ ಇಲಾಖೆ
ಉಪವಿಭಾಗಾಧಿಕಾರಿಗಳ ಕಾರ್ಯಾಲಯ ದೊಡ್ಡಬಳ್ಳಾಪುರ ಉಪವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ
ಸಂಖ್ಯೆ: ಎಲ್.ಎನ್.ಡಿ.ಸಿ.ಆರ್:589/2021–22 ದಿನಾಂಕ: 08/06/2023
ಸರ್ಕಾರಿ ಜಮೀನು ಇ–ಹರಾಜು ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ರಾಜ್ಯದಲ್ಲಿ ಸಂಪನ್ಮೂಲ ಕ್ರೋಢೀಕರಿಸುವ (Resource Mobilisation) ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನುಗಳ ಇ–ಹರಾಜಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಭೂ ಮಂಜೂರಾತಿ–1) ಇವರು ತಮ್ಮ ಪತ್ರ ಸಂ: ಆರ್.ಡಿ.15.ಎಲ್.ಜಿ.ಬಿ. 2022 (ಇ) ದಿನಾಂಕ:18–08–2022 ರಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 69 ರಡಿ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿರುತ್ತಾರೆ. ಅದರಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಎಲ್.ಎನ್.ಡಿ(ನೆ)ಸಿ.ಆರ್:66/2021–22 ದಿನಾಂಕ: 25–05–2023 ರಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 69 ರಡಿ ಇ–ಹರಾಜು ಮಾಡಲು ಸೂಚಿಸಿರುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿನ ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಹದೇವಪುರ ಗ್ರಾಮದ ಸ.ನಂ. 86 ರಲ್ಲಿ 1–36 ಎ/ಗುಂಟೆ ಜಮೀನನ್ನು ಇ–ಹರಾಜು ಮೂಲಕ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ https://eproc.karnataka.gov.in ವೆಬ್‌ಸೈಟ್‌ನಲ್ಲಿ ಅಳವಡಿಸಿರುವ ಈ ಕೆಳಕಂಡ E-Auction Notice Number ನ ಜಮೀನನ್ನು ದಿನಾಂಕ:13–06–2023 ರ ಬೆಳಗ್ಗೆ 10–00 ರಿಂದ ದಿನಾಂಕ: 21–06–2023 ರ ಸಂಜೆ 5–00 ಗಂಟೆಯವರೆಗೆ ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ ಇ–ಹರಾಜು ಮಾಡಲಾಗುವುದು.

Sl. No.	E-Auction Notice Number
1	RD/2023-24 Auction-1

ಸಹಿ/–
ಉಪವಿಭಾಗಾಧಿಕಾರಿಗಳು
ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ
DIPR/CP/215/GREENFMC/2023-24

ಆಕ್ಸಿಸ್ ಬ್ಯಾಂಕ್
ಸಾರ್ವಜನಿಕ ಸೂಚನೆ
ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟೀಸ್
ಈ ಮೂಲಕ ಸಾಲಗಾರರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.
ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ ಆಕ್ಸಿಸ್ ಬ್ಯಾಂಕ್ ಲಿಮಿಟೆಡ್‌ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟೀಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು "ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 19.06.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.
ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಸಾಲದ ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿ:	ಒಟ್ಟು ತೂಕ	ನಿವ್ವಳ ತೂಕ
ಕಲ್ಯಾಣನಗರ, ಬೆಂಗಳೂರು [ಕ]	XXXXXXXXXXX8430	ಕೆ. ಪ್ರದೀಪ್	82000	20-Apr-23	27.500	26.800
ಕಸ್ತೂರಿನಗರ, ಬೆಂಗಳೂರು [ಕ]	XXXXXXXXXXX7588	ಅಮ್ರಿತ್ ಪಾಲ್ ಸಿಂಗ್	268289	25-Aug-22	91.000	87.000
ಕಸ್ತೂರಿನಗರ, ಬೆಂಗಳೂರು [ಕ]	XXXXXXXXXXX9420	ಸುನಿತಾ ದೇವಿ	264543.85	22-Jul-22	86.700	84.100
ಸರ್ಜಾಪುರ ರಸ್ತೆ, ಬೆಂಗಳೂರು [ಕ]	XXXXXXXXXXX0037	ಮಂಜುಳಾ.ಇ.	102302	9-Jan-23	29.800	29.500
ವಿದ್ಯಾರಣ್ಯಪುರ, ಬೆಂಗಳೂರು [ಕ]	XXXXXXXXXXX6719	ಸುರೇಶ್‌ಕುಮಾರ್.ಎ.	186518	13-Sep-22	58.200	55.400

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ https://gold.samil.in ನಲ್ಲಿ ದಿನಾಂಕ : 19.06.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ https://gold.samil.in ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್).
ಸ್ಥಳ: ಬೆಂಗಳೂರು ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್

ಚುಚ್ಚುಮದ್ದು: ಎರಡು ತಿಂಗಳ ಶಿಶು ಸಾವು

ಪ್ರಜಾವಾಣಿ ವಾರ್ತೆ

ಹುಳಿಯಾರು (ತುಮಕೂರು): ಹೋಬಳಿಯ ಹೊಯ್ಸಳಕಟ್ಟೆ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗುರುವಾರ ವೈದ್ಯರು ಚುಚ್ಚುಮದ್ದು ನೀಡಿದ ನಂತರ ಎರಡು ತಿಂಗಳ ಮಗು ಮೃತಪಟ್ಟಿದೆ.

ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯ ನಿರ್ಲಕ್ಷ್ಯದಿಂದ ತಮ್ಮ ಮಗು ಸಾವನ್ನಪ್ಪಿದೆ ಎಂದು ಆರೋಪಿಸಿ ಪೋಷಕರು, ಸಂಬಂಧಿಗಳು ಮತ್ತು ಗ್ರಾಮಸ್ಥರು ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿದರು. ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಯನ್ನು ಅಮಾನತು ಮಾಡುವಂತೆ ಪಟ್ಟು ಹಿಡಿದರು.

ಸೋಮನಹಳ್ಳಿ ಗ್ರಾಮದ ಮಧು ಮತ್ತು ಶ್ರುತಿ ದಂಪತಿ ಮಗುವನ್ನು ಚುಚ್ಚುಮದ್ದು ಕೊಡಿಸಲು ಆಸ್ಪತ್ರೆಗೆ ಕರೆತಂದಿದ್ದರು. ಚುಚ್ಚುಮದ್ದು ಪಡೆದು ಮನೆಗೆ ಹೋದ ನಂತರ ಮಗು ಮೃತಪಟ್ಟಿದೆ. ಆಸ್ಪತ್ರೆಗೆ ಕರೆ ತರುವ ಮುನ್ನ ಮಗು ಆರೋಗ್ಯವಾಗಿದ್ದು, ಚುಚ್ಚುಮದ್ದು ಪಡೆದ ನಂತರ ಮಗುವಿನ ಆರೋಗ್ಯದಲ್ಲಿ ಏರುಪೇರಾಯಿತು ಎಂದು ಮಗುವಿನ ತಂದೆ ಮಧು ಆರೋಪಿಸಿದರು.

ಚಿಕ್ಕನಾಯಕನಹಳ್ಳಿ ಶಾಸಕ ಸಿ.ಬಿ.ಸುರೇಶ್ ಬಾಬು ಭೇಟಿ ನೀಡಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದ ನಂತರ ಪ್ರತಿಭಟನೆ ಕೈಬಿಟ್ಟರು.

ಆಸ್ಪತ್ರೆಗೆ ಭೇಟಿ ನೀಡಿದ ತಾಲ್ಲೂಕು ಆರೋಗ್ಯಾಧಿಕಾರಿ ಸಿ.ಆರ್. ಮೋಹನ್ ಅವರು ಆರೋಗ್ಯ ಕೇಂದ್ರದ ಡಾ. ಮಧು ಅವರನ್ನು ತಕ್ಷಣ ಬದಲಾಯಿಸಿ ಡಾ.ಸ್ವರೂಪ್ ಅವರನ್ನು ನಿಯೋಜಿಸಿದರು.

ಕಿರಣ್‌ಗೆ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ

ಹುಬ್ಬಳ್ಳಿ: ಕೇಂದ್ರ ಸರ್ಕಾರ ನೀಡುವ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ 2023ಕ್ಕೆ ಇಲ್ಲಿನ ಹಳೇ ಹುಬ್ಬಳ್ಳಿಯ ಚಿತ್ರಕಲಾವಿದ ಕಿರಣ ಶೇರಖಾನೆ ಭಾಜನರಾಗಿದ್ದಾರೆ.

ಕಿರಣ ಶೇರಖಾನೆ

‘ಪಂಚಭೂತ’ ಪರಿಕಲ್ಪನೆಯಲ್ಲಿ ಅವರು ಬಿಡಿಸಿದ ‘ದಿ ಎಲೆಮೆಂಟ್ಸ್ ಆಫ್ ಲೈಫ್’ ಚಿತ್ರಕಲೆಗೆ ಪ್ರಶಸ್ತಿ ದೊರೆತಿದೆ. ಪ್ರಶಸ್ತಿ ಪತ್ರ ಹಾಗೂ ₹ 2 ಲಕ್ಷ ನಗದು ಒಳಗೊಂಡಿದೆ. ‘ಪ್ರಶಸ್ತಿ ದೊರೆತಿರುವುದಕ್ಕೆ ಸಂತೋಷವಾಗಿದೆ’ ಎಂದು ಕಿರಣ ಶೇರಖಾನೆ ‘ಪ್ರಜಾವಾಣಿ’ ತಿಳಿಸಿದರು.

ಕೆಲ ಲಾಡ್ಜ್‌ಗಳಲ್ಲಿ ಬುಕ್ಕಿಂಗ್ ಸ್ಥಗಿತ, ಆಸ್ಪತ್ರೆಗೆ ಟ್ಯಾಂಕರ್‌ಗಳಿಂದ ನೀರು ಪೂರೈಕೆ

ಉಡುಪಿ, ಮಂಗಳೂರಲ್ಲಿ ನೀರಿಗೆ ತತ್ವಾರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಜೆ ಜಲಾಶಯದಲ್ಲಿ ಅರ್ಧ ಮೀಟರ್ ನೀರು ಲಭ್ಯ
- ಶಾಲಾ ಕಾಲೇಜುಗಳಲ್ಲಿ ಆನಲೈನ್ ತರಗತಿ

ಉಡುಪಿ/ಮಂಗಳೂರು: ಮುಂಗಾರು ವಿಳಂಬ, ಮುಂಗಾರು ಪೂರ್ವ ಮಳೆಯ ಕೊರತೆಯಿಂದ ಉಡುಪಿ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ವಿಶೇಷವಾಗಿ ಮಂಗಳೂರು ನಗರಕ್ಕೆ ಜಲಕ್ಷಾಮದ ಬಿಸಿ ತಟ್ಟಿದೆ.

ಮಂಗಳೂರು ನಗರದ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಪ್ರಥಮ ಪಿಯುಸಿ ತರಗತಿಗಳ ಆರಂಭವನ್ನು ಮುಂದೂಡಲಾಗಿದೆ. ಎ.ಜೆ. ಮೆಡಿಕಲ್ ಕಾಲೇಜಿನ ಕೆಲವು ತರಗತಿಗಳಿಗೆ ಆನ್‌ಲೈನ್ ಕ್ಲಾಸ್ ನಡೆಸಲಾಗುತ್ತಿದೆ. ನೀರಿನ ಸಮಸ್ಯೆಯಿಂದ ಬಂಟ್ವಾಳ ತಾಲ್ಲೂಕಿನ ಖಾಸಗಿ ಶಾಲೆಯೊಂದರಲ್ಲಿ ಒಂದರಿಂದ ಏಳನೇ ತರಗತಿವರೆಗೆ ಅರ್ಧದಿನ ಮಾತ್ರ ಶಾಲೆ ನಡೆಸಲಾಗುತ್ತಿದೆ. ಯೆನೆಪೋಯ ವಿಶ್ವವಿದ್ಯಾಲಯದಲ್ಲಿ ಡೆಂಟಲ್ ಮತ್ತು ಮೆಡಿಕಲ್ ಹೊರತುಪಡಿಸಿ ಉಳಿದ ಎಲ್ಲ ಕೋರ್ಸ್‌ಗಳಿಗೂ ಆನ್‌ಲೈನ್ ತರಗತಿ ಆರಂಭಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದ್ದು, ಉಡುಪಿ ತಾಲ್ಲೂಕಿನ ಐದು ಶಾಲೆಗಳಲ್ಲಿ ಬಿಸಿಯೂಟಕ್ಕೆ ನೀರಿನ ಕೊರತೆ ಎದುರಾಗಿದೆ. ತಾತ್ಕಾಲಿಕವಾಗಿ ನಗರಸಭೆಯಿಂದ ಟ್ಯಾಂಕರ್ ನೀರು ಪೂರೈಸಲಾಗುತ್ತಿದೆ.

ಉಡುಪಿ ನಗರಕ್ಕೆ ನೀರು ಪೂರೈಸುವ ಬಜೆ ಜಲಾಶಯದಲ್ಲಿ ಕೇವಲ ಅರ್ಧ ಮೀಟರ್ ಮಾತ್ರ ನೀರು ಲಭ್ಯವಿದ್ದು, ನಗರಸಭೆಯಿಂದ ಐದು ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಪ್ರತಿದಿನ 13 ಟ್ಯಾಂಕರ್‌ಗಳ ಮೂಲಕ ಸಮಸ್ಯೆ ಗಂಭೀರವಾಗಿರುವ ವಾರ್ಡ್‌ಗಳಿಗೆ ನೀರು ಪೂರೈಸಲಾಗುತ್ತಿದೆ.

ನೀರಿನ ಕೊರತೆಯಿಂದಾಗಿ ಕೆಲವು ಲಾಡ್ಜ್‌ಗಳಲ್ಲಿ ಬುಕ್ಕಿಂಗ್ ಸ್ಥಗಿತಗೊಳಿಸಲಾಗುತ್ತಿದೆ. ಉಡುಪಿ ಹಾಗೂ ಕಟಪಾಡಿಯ ಕೆಲವು ಹೋಟೆಲ್‌ಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ, ಕುಂದಾಪುರ ತಾಲ್ಲೂಕಿನ ಕುಂಭಾಶಿ ಆನೆಗುಡ್ಡೆ ದೇವಸ್ಥಾನ, ಮಂದಾರ್ತಿ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಸದ್ಯ ಭಕ್ತರಿಗೆ ಅನ್ನ ಸಂತರ್ಪಣೆಗೆ ತೊಂದರೆಯಾಗಿಲ್ಲ. ಆದರೆ, ವಾರದಲ್ಲಿ ಮಳೆಯಾಗದಿದ್ದರೆ ಸಮಸ್ಯೆಯಾಗಲಿದೆ ಎಂದು ದೇವಸ್ಥಾನದ ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಅಡಿ ಬರುವ ಮಂಗಳೂರು ತಾಲ್ಲೂಕಿನ ಉರ್ವ, ಕದ್ರಿ, ಮಂಜನಾಡಿ, ಕಣ್ಣೂರು, ಮೂಡುಬಿದಿರೆ ಸೇರಿದಂತೆ ಎಂಟಕ್ಕೂ ಹೆಚ್ಚು ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವಸತಿ ನಿಲಯಗಳ ಜಲಮೂಲಗಳು ಬರಿದಾಗಿವೆ. ‘ಶಾಲೆಗಳು ಆರಂಭವಾದ ಮೇಲೆ ಹಾಸ್ಟೆಲ್‌ಗಳಲ್ಲಿ ನೀರಿನ ಸಮಸ್ಯೆ ಬಿಗಡಾಯಿಸಿದೆ. ಶೌಚಾಲಯದ ಬಳಕೆಗೂ ಮಿತವಾಗಿ ನೀರು ಲಭ್ಯವಾಗುತ್ತಿದೆ. ಅಗತ್ಯವಿದ್ದರಷ್ಟೇ ಬಟ್ಟೆ ತೊಳೆದುಕೊಳ್ಳುವಂತೆ ಸೂಚನೆ ನೀಡಿದ್ದಾರೆ’ ಎಂದು ವಿದ್ಯಾರ್ಥಿಯೊಬ್ಬರು ತಿಳಿಸಿದರು.

‘ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುತ್ತಿದ್ದೇವೆ. ಟ್ಯಾಂಕರ್‌ನವರು ಸಹ ಇನ್ನು ಪೂರೈಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಇನ್ನೊಂದೆರಡು ದಿನಗಳಲ್ಲಿ ಮಳೆಯಾಗದಿದ್ದರೆ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಹಾಸ್ಟೆಲ್‌ಗೆ ರಜೆ ನೀಡಬೇಕಾಗಬಹುದು’ ಎಂದು ಹಾಸ್ಟೆಲ್‌ನ ಅಧಿಕಾರಿಯೊಬ್ಬರು ತಿಳಿಸಿದರು.

ಐದಾರು ಜಿಲ್ಲೆಗಳಿಂದ ರೋಗಿಗಳು ಬರುವ ಮಂಗಳೂರಿನ ಸರ್ಕಾರಿ ವೆನ್ಲಾಕ್ ಆಸ್ಪತ್ರೆಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡಿ, ರೋಗಿಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದು, ನೀರು ನಿರ್ವಹಣೆಯೇ ಸವಾಲಾಗಿದೆ.

6,000 ಲೀಟರ್ ಟ್ಯಾಂಕರ್‌ಗೆ ಈ ಹಿಂದೆ ₹700 ಇದ್ದ ದರ ಈಗ ದುಪ್ಪಟ್ಟಾಗಿದೆ. ಇಷ್ಟು ಕೊಟ್ಟರೂ ಟ್ಯಾಂಕರ್ ನೀರು ಸಿಗುತ್ತಿಲ್ಲ ಎಂಬುದು ಅಪಾರ್ಟ್‌ಮೆಂಟ್ ನಿವಾಸಿಗಳ ಅಳಲು.

ತಂದೆ, ಮಗನ ವಿಚಾರಣೆ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ದೊಂಬಿಗೆ ಕಾರಣವಾದ ಸ್ಟೇಟಸ್ ಇಟ್ಟುಕೊಂಡ ಕಾರಣಕ್ಕೆ ನಿಪ್ಪಾಣಿ ಪೊಲೀಸರು ಗುರುವಾರ ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕ ಹಾಗೂ ಆತನ ತಂದೆಯನ್ನು ವಿಚಾರಣೆ ನಡೆಸಿದರು.

‘ಹೆಡಗೇವಾರ್ ಹೇಡಿ, ಅವರ ಪಠ್ಯ ಬೇಡ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಆರ್‌ಎಸ್‌ಎಸ್ ಸಂಸ್ಥಾಪಕರಲ್ಲೊಬ್ಬರಾದ ಕೇಶವ ಬಲಿರಾಮ್ ಹೆಡಗೇವಾರ್ ತರಹದ ಹೇಡಿಗಳ ಪಾಠಗಳನ್ನು ಶಾಲೆಗಳ ಪಠ್ಯದಲ್ಲಿರಲು ಬಿಡುವುದಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಶಿಕ್ಷಣ ಸೇರಿದಂತೆ ಸರ್ಕಾರದ ಯಾವ ಇಲಾಖೆಯಲ್ಲೂ ಸಂಘ ಪರಿವಾರದ ಸಿದ್ಧಾಂತಗಳು ನುಸುಳಲು ಅವಕಾಶ ನೀಡುವುದಿಲ್ಲ. ಹೆಡಗೇವಾರ್ ತರಹದ ರಣಹೇಡಿಗಳ ವಿಚಾರ ಇನ್ನು ಮುಂದೆ ಪಠ್ಯದಲ್ಲಿ ಇರುವುದಿಲ್ಲ’ ಎಂದರು.

‘ಹೆಡಗೇವಾರ್ ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಎಂಬುದನ್ನು ಬಿಜೆಪಿಯವರು ಸಾಬೀತು ಮಾಡಲಿ. ಬ್ರಿಟಿಷರ ಕ್ಷಮಾಪಣೆ ಕೇಳಿದ ನಕಲಿ ಸ್ವಾತಂತ್ರ್ಯ ಹೋರಾಟಗಾರರಿಗೆಲ್ಲಾ ಮನ್ನಣೆ ನೀಡಲು ಸಾಧ್ಯವಿಲ್ಲ. ಅವರೆಲ್ಲ ಬ್ರಿಟಿಷರಿಗೆ ಕ್ಷಮಾಪಣಾ ಪತ್ರ ನೀಡಿದ್ದು ಏಕೆ ಎನ್ನುವುದನ್ನು ಬಹಿರಂಗಪಡಿಸಲಿ’ ಎಂದರು.

‘ಬಿಜೆಪಿ ತನ್ನ ಸರ್ಕಾರದ ಅವಧಿಯಲ್ಲಿ ಕೃಷಿ,ಕಾರ್ಮಿಕ, ಶಿಕ್ಷಣ ಇಲಾಖೆಗಳನ್ನು ಸಂಪೂರ್ಣವಾಗಿ ಕೇಸರೀಕರಣ ಮಾಡಲು ಹೊರಟಿತ್ತು. ಎಲ್ಲೆಲ್ಲಿ ಸಂಘ ಪರಿವಾರದ ತತ್ವ ಸಿದ್ಧಾಂತಗಳನ್ನು ತುರುಕಲು ಪ್ರಯತ್ನ ನಡೆದಿತ್ತೋ, ಅದನ್ನೆಲ್ಲಾ ಸರಿಪಡಿಸುವ ಕೆಲಸವನ್ನು ಮಾಡಲಿದ್ದೇವೆ’ ಎಂದು ಅವರು ತಿಳಿಸಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸದುರ್ಗ–577527
ತಾ॥ ಹೊಸದುರ್ಗ ಜಿ॥ ಚಿತ್ರದುರ್ಗ
E-mail:apmchosadurga@gmail.com Ph:-08199-230249
ಕ್ರ.ಸಂ: ಕೃ.ಉ.ಮಾ.ಸ(ಹೊ): 02 :2023–24 ದಿನಾಂಕ:– 05/06/2023

ಸಂಕ್ಷಿಪ್ತ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(ಇಂಡೆಂಟ್ ಸಂಖ್ಯೆ: APMC/2023-24/SE0002)

ಹೊಸದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2023–24 ನೇ ಸಾಲಿಗೆ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಭದ್ರತಾ ಸಿಬ್ಬಂದಿಯವರು ಪ್ರತಿ ದಿನ ಸಮಿತಿಯ ಆಸ್ತಿ ಸಂರಕ್ಷಣೆ ಮತ್ತು ಕಛೇರಿಯಲ್ಲಿ ಇನ್ನಿತರೆ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಮೂರು ಜನ ಭದ್ರತಾ ಸಿಬ್ಬಂದಿಗಳು, ಒಬ್ಬ ಕಂಪ್ಯೂಟರ್ ಅಪರೇಟರ್, ಒಬ್ಬ ವಾಹನ ಚಾಲಕ ಹಾಗೂ ಒಬ್ಬ ಡಾಟಾ ಎಂಟ್ರಿ ಆಪರೇಟರ್ ಸಿಬ್ಬಂದಿ ಹೀಗೆ ಒಟ್ಟು 06 ಸಂಖ್ಯೆ ಭದ್ರತಾ ಸಿಬ್ಬಂದಿ ಪೂರೈಸುವುದು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಅನುಭವವುಳ್ಳ ಏಜೆನ್ಸಿದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ:20–06–2023 ಸಂಜೆ 4–00 ಗಂಟೆಯವರೆಗೆ ಏಜೆನ್ಸಿದಾರರು ಹೆಚ್ಚಿನ ಮಾಹಿತಿಯನ್ನು ಕಛೇರಿ ಅಥವಾ ಕರ್ನಾಟಕ ಸರ್ಕಾರದ ವೆಬ್ ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಹೊಸದುರ್ಗ
ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ಹೊಸದುರ್ಗ
RO.No.36:DIPR/CTA/KSMCA/2023-24

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
ಟ್ರೇಡ್ ಸೆಂಟರ್, ಓಲ್ಡ್ ನಂ.29/4, ನ್ಯೂ ನಂ.116/2, ಮೊದಲನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001, ದೂರವಾಣಿ ಸಂಖ್ಯೆ:080–22266540/541
ಇ–ಮೇಲ್: E-mail:kstidcl.bgl@gmail.com
ಸಂಖ್ಯೆ: ಕೆಎಸ್‌ಟಿಐಡಿಸಿಎಲ್/ಪಿಎಸ್‌ಸಿ/ಯ/ಉ/ಬಹಿರಂಗಹರಾಜು/2023–24 ದಿನಾಂಕ: 06.06.2023

ಬಹಿರಂಗ ಹರಾಜು ಪ್ರಕಟಣೆ

ಕೆ.ಎಸ್.ಟಿ.ಐ.ಡಿ.ಸಿ ನಿಗಮವು ಸರ್ಕಾರದ ಅಧೀನ ಸಂಸ್ಥೆಯಾಗಿದ್ದು, ಇದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಮಗ್ಗ ಸೇವಾ ಕೇಂದ್ರ, ಬೆಂಗಳೂರು ಮತ್ತು ದೊಡ್ಡಬಳ್ಳಾಪುರದಲ್ಲಿರುವ ಒಟ್ಟು 63 ಹಳೆಯ ಯಂತ್ರೋಪಕರಣಗಳು/ ಉಪಕರಣಗಳನ್ನು **“ಎಲ್ಲಿದೆಯೋ ಹೇಗಿದೆಯೋ ಹಾಗೆ”** ಬಹಿರಂಗ ಹರಾಜು ಮಾಡಲು ಬಿಡ್ಡುದಾರರನ್ನು ಆಹ್ವಾನಿಸಲಾಗಿದ್ದು, ಪ್ರಿಬಿಡ್ ಸಭೆಯನ್ನು ದಿನಾಂಕ: **15.06.2023 ರಂದು ಮಧ್ಯಾಹ್ನ 03.00 ಗಂಟೆಗೆ** ಹರಾಜು ನಡೆಯುವ ಸ್ಥಳದಲ್ಲಿ ಕರೆಯಲಾಗಿದೆ. ಆದ್ದರಿಂದ ಬಿಡ್ ಅರ್ಜಿ ಶುಲ್ಕ **ರೂ: 500/–** ಪಾವತಿಸಿ ಪಡೆಯಲು ಕಡೆಯ ದಿನಾಂಕ: **23.06.2023.** ಅರ್ಜಿಯೊಂದಿಗೆ ಇ.ಎಂ.ಡಿ ಮೊತ್ತ **ರೂ: 2000/–**ಗಳ ಡಿಡಿ ಯನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಟಿ.ಐ.ಡಿ.ಸಿ, ಬೆಂಗಳೂರು ರವರ ಹೆಸರಿನಲ್ಲಿ ಪಡೆದು ಸಲ್ಲಿಸಲು ಕಡೆಯ ದಿನಾಂಕ: **26.06.2023 ಸಂಜೆ 5.00 ಗಂಟೆವರೆಗೆ.** ದಿನಾಂಕ: **28.06.2023 ರಂದು ಬೆಳಗ್ಗೆ 11.00 ಗಂಟೆಗೆ** ಬಹಿರಂಗ ಹರಾಜನ್ನು **ವಿದ್ಯುತ್ ಮಗ್ಗ ಸೇವಾ ಕೇಂದ್ರ ನಂ: 4910, ಪವರ್ ಲೂಮ್ ಕಾಂಪ್ಲೆಕ್ಸ್ ತಾಲ್ಲೂಕು ಆಫೀಸ್ ಹಿಂಭಾಗ, ದೊಡ್ಡಬಳ್ಳಾಪುರ ಈ ಸ್ಥಳದಲ್ಲಿ ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ನಿಗಮದ ದೂರವಾಣಿ ಸಂಖ್ಯೆ: 080–22266540/541 ಗೆ ಸಂಪರ್ಕಿಸಬಹುದು.**

ವಾಸಾಸಂಇ/ಉನಿ–ಸಿ.ಪಿ/227/ಎಂಸಿಎ/2023–24 ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಯೋಜನೆ (ದಕ್ಷಿಣ) ವಿಭಾಗ, ಜಯನಗರ 2ನೇ ಬ್ಲಾಕ್, ಬೆಂಗಳೂರು.
ಸಂಖ್ಯೆ: ಕಾಪಾಅ/ಯೋ/ದ/ಟೆಂ.ತಿ.ಪ್ರ/ಪಿ.ಆರ್/02/2023–24 ದಿನಾಂಕ: 07–06–2023

ಟೆಂಡರ್ ತಿದ್ದುಪಡಿ ಪ್ರಕಟಣೆ

ವಿಷಯ: ಈ ಕಛೇರಿಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಕರೆಯಲಾದ ಟೆಂಡರ್ ಪ್ರಕಟಣೆಯ ಸಂಖ್ಯೆ: ಕಾಅಯೋ(ದ)/ಇ–ಪ್ರೊಕ್/02/2023–24 (ಕರೆ–2), ದಿನಾಂಕ: 23.05.2023 ಅನ್ನು ತಿದ್ದುಪಡಿ ಮಾಡಿರುವ ಬಗ್ಗೆ.

ಈ ಕಛೇರಿಯಿಂದ ದಿನಾಂಕ: 23–05–2023 ರಂದು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಂಖ್ಯೆ: ಕಾಅಯೋ(ದ)/ಇ–ಪ್ರೊಕ್/02/2023–24 (ಕರೆ–2) ರಲ್ಲಿ ಕರೆಯಲಾದ ಪ್ರಕಟಣೆಯ KW-4 (clause 3.3.3. The minimum required qualification is as follows: ನಲ್ಲಿರುವ ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆಯನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ. ಟೆಂಡರ್‌ನಲ್ಲಿ ಇನ್ನಾವುದೇ ಬದಲಾವಣೆ ಇರುವುದಿಲ್ಲ.

ಕ್ರ. ಸಂ.	ಹುದ್ದೆ	ಕನಿಷ್ಠ ವಿದ್ಯಾರ್ಹತೆ ಅಗತ್ಯತೆ	ಷರಾ
1	ನರ್ಸರಿ ಶಾಲೆ ಶಿಕ್ಷಕರು	ಪಿಯುಸಿ ಮತ್ತು ಎನ್‌ಐಟಿ ಕೋರ್ಸ್ ಪ್ರಮಾಣಪತ್ರ.	ಶಿಕ್ಷಕರ ವಯೋಮಿತಿ: 21 ವರ್ಷ ಮೇಲ್ಪಟ್ಟ ಮತ್ತು 60 ವರ್ಷ ವಯಸ್ಸಿನೊಳಗಿನ ಶಿಕ್ಷಕರು
2	ಪ್ರಾಥಮಿಕ ಶಾಲೆ ಶಿಕ್ಷಕರು	ಪಿಯುಸಿ ಮತ್ತು ಡಿ.ಇಡಿ / ಟಿಸಿಹೆಚ್, ಶಿಕ್ಷಕರು ಟಿಇಟಿ ಪರೀಕ್ಷೆ ತೇರ್ಗಡೆಯಾಗಿರಬೇಕು ಮತ್ತು ಅವರ ಹೆಸರು ಕರ್ನಾಟಕ ಸರ್ಕಾರದಿಂದ ಪ್ರಕಟಿಸಲಾದ ಟಿಇಟಿ ಪರೀಕ್ಷೆ ಫಲಿತಾಂಶ ಪಟ್ಟಿಯಲ್ಲಿ ಇರಬೇಕು.	
3	ಪ್ರೌಢ ಶಾಲೆ ಶಿಕ್ಷಕರು	ಬಿ.ಇಡಿ ಯೊಂದಿಗೆ ಸಂಬಂಧಿತ ವಿಷಯದಲ್ಲಿ ಪದವಿ.	
	ಕಂಪ್ಯೂಟರ್ ಶಿಕ್ಷಕರು	ಸಿಎಸ್/ಐಎಸ್ ನಲ್ಲಿ ಬಿ.ಇ/ಎಂಸಿಎ/ಸಿಎಸ್ ನಲ್ಲಿ ಬಿಎಸ್‌ಸಿ/ಕಂಪ್ಯೂಟರ್ ಅಪ್ಲಿಕೇಶನ್ಸ್‌ನಲ್ಲಿ ಡಿಪ್ಲೊಮಾದೊಂದಿಗೆ ಯಾವುದೇ ಪದವಿ ಅಥವಾ ಸಿಟಿಟಿಸಿ.	
4	ಪಿ.ಯು. ಕಾಲೇಜು ಉಪನ್ಯಾಸಕರು	ಬಿ.ಇಡಿ ಯೊಂದಿಗೆ ಎಂಎ/ಎಂಎಸ್‌ಸಿ/ಎಂಕಾಂ	
5	ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರು	ಯುಜಿಸಿ–2018 ಮಾರ್ಗದರ್ಶನಗಳ ಅನುಸಾರ ಎನ್‌ಇಟಿ/ಎಸ್‌ಎಲ್‌ಇಟಿ/ಎಂಫಿಲ್/ಪಿಹೆಚ್‌ಡಿ ಯೊಂದಿಗೆ ಎಂಎ/ಎಂಎಸ್‌ಸಿ/ಎಂ.ಕಾಂ	
6	ಸ್ನಾತಕೋತ್ತರ ಪದವಿ ಸಹಾಯಕ ಪ್ರಾಧ್ಯಾಪಕರು	ಯುಜಿಸಿ–2018 ಮಾರ್ಗದರ್ಶನಗಳ ಅನುಸಾರ ಎನ್‌ಇಟಿ/ಎಸ್‌ಎಲ್‌ಇಟಿ/ಎಂಫಿಲ್/ಪಿಹೆಚ್‌ಡಿ ಯೊಂದಿಗೆ ಎಂಎ/ಎಂಎಸ್‌ಸಿ/ಎಂ.ಕಾಂ	

ಸಹಿ/– ಕಾರ್ಯಪಾಲಕ ಅಭಿಯಂತರರು
ಯೋಜನೆ (ದಕ್ಷಿಣ) ವಿಭಾಗ, ಬಿಬಿಎಂಪಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಯೋಜನೆ (ಪಶ್ಚಿಮ) ವಿಭಾಗ, ಜಂಟಿ ಆಯುಕ್ತರು (ಪಶ್ಚಿಮ) ಕಛೇರಿ ಆವರಣ,
2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560020.
ಸಂಖ್ಯೆ: ಕಾಅ(ಯೋ–ಪ)/ಪಿ.ಆರ್/39/2023–24 ದಿನಾಂಕ: 07–06–2023

ತಿದ್ದುಪಡಿ–1

ಉಲ್ಲೇಖ: 1) ಕಾಅ(ಯೋ–ಪ)/ಟೆಂಡರ್/15/2023–24/ಕರೆ–2, ದಿನಾಂಕ: 19.05.2023 (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿ ಮೂಲಕ)

ಪಶ್ಚಿಮ ವಲಯದ ಬಿಬಿಎಂಪಿ ಶಾಲೆಗಳು ಮತ್ತು ಕಾಲೇಜುಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕರನ್ನು ಒದಗಿಸುವ ಕಾಮಗಾರಿಗೆ ದಿನಾಂಕ: 19–05–2023ರ ಈ ಕಛೇರಿ ಟೆಂಡರ್ ಸಂಖ್ಯೆ: ಕಾಅ(ಯೋ–ಪ)/ಟೆಂಡರ್/15/2023–24/ಕರೆ–2 ನ್ನು ಕರೆಯಲಾಗಿದ್ದು, ಆರ್‌ಎಫ್‌ಪಿ ದಸ್ತಾವೇಜು ಕಲಂ 3.3.3. ಅನ್ನು ಈ ಕೆಳಕಂಡಂತೆ ಓದಿಕೊಳ್ಳುವುದು. 3.3.3. ಅಗತ್ಯವಾದ ಕನಿಷ್ಠ ವಿದ್ಯಾರ್ಹತೆ ಇಂತಿದೆ.

ಕ್ರ. ಸಂ.	ಹುದ್ದೆ	ಕನಿಷ್ಠ ವಿದ್ಯಾರ್ಹತೆ ಅಗತ್ಯತೆ	ಷರಾ
1	ನರ್ಸರಿ ಶಾಲೆ ಶಿಕ್ಷಕರು	ಪಿಯುಸಿ ಮತ್ತು ಎನ್‌ಟಿಟಿ ಕೋರ್ಸ್ ಪ್ರಮಾಣಪತ್ರ.	ಶಿಕ್ಷಕರ ವಯೋಮಿತಿ: 21 ವರ್ಷ ಮೇಲ್ಪಟ್ಟ ಮತ್ತು 60 ವರ್ಷ ವಯಸ್ಸಿನೊಳಗಿನ ಶಿಕ್ಷಕರು
2	ಪ್ರಾಥಮಿಕ ಶಾಲೆ ಶಿಕ್ಷಕರು	ಪಿಯುಸಿ ಮತ್ತು ಡಿ.ಇಡಿ / ಟಿಸಿಹೆಚ್, ಶಿಕ್ಷಕರು ಟಿಇಟಿ ಪರೀಕ್ಷೆ ತೇರ್ಗಡೆಯಾಗಿರಬೇಕು ಮತ್ತು ಅವರ ಹೆಸರು ಕರ್ನಾಟಕ ಸರ್ಕಾರದಿಂದ ಪ್ರಕಟಿಸಲಾದ ಟಿಇಟಿ ಪರೀಕ್ಷೆ ಫಲಿತಾಂಶ ಪಟ್ಟಿಯಲ್ಲಿ ಇರಬೇಕು.	
3	ಪ್ರೌಢ ಶಾಲೆ ಶಿಕ್ಷಕರು	ಬಿ.ಇಡಿ ಯೊಂದಿಗೆ ಸಂಬಂಧಿತ ವಿಷಯದಲ್ಲಿ ಪದವಿ.	
	ಕಂಪ್ಯೂಟರ್ ಶಿಕ್ಷಕರು	ಸಿಎಸ್/ಐಎಸ್ ನಲ್ಲಿ ಬಿ.ಇ/ಎಂಸಿಎ/ಸಿಎಸ್ ನಲ್ಲಿ ಬಿಎಸ್‌ಸಿ/ಕಂಪ್ಯೂಟರ್ ಅಪ್ಲಿಕೇಶನ್ಸ್‌ನಲ್ಲಿ ಡಿಪ್ಲೊಮಾದೊಂದಿಗೆ ಯಾವುದೇ ಪದವಿ ಅಥವಾ ಸಿಟಿಟಿಸಿ.	
4	ಪಿ.ಯು. ಕಾಲೇಜು ಉಪನ್ಯಾಸಕರು	ಬಿ.ಇಡಿ ಯೊಂದಿಗೆ ಎಂಎ/ಎಂಎಸ್‌ಸಿ/ಎಂಕಾಂ	
5	ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರು	ಯುಜಿಡಿ–2018 ಮಾರ್ಗದರ್ಶನಗಳ ಅನುಸಾರ ಎನ್‌ಇಟಿ/ಎಸ್‌ಎಲ್‌ಇಟಿ/ಎಂಫಿಲ್/ಪಿಹೆಚ್‌ಡಿ ಯೊಂದಿಗೆ ಎಂಎ/ಎಂಎಸ್‌ಸಿ/ಎಂ.ಕಾಂ	
6	ಸ್ನಾತಕೋತ್ತರ ಪದವಿ ಸಹಾಯಕ ಪ್ರಾಧ್ಯಾಪಕರು	ಯುಜಿಸಿ–2018 ಮಾರ್ಗದರ್ಶನಗಳ ಅನುಸಾರ ಎನ್‌ಇಟಿ/ಎಸ್‌ಎಲ್‌ಇಟಿ/ಎಂಫಿಲ್/ಪಿಹೆಚ್‌ಡಿ ಯೊಂದಿಗೆ ಎಂಎ/ಎಂಎಸ್‌ಸಿ/ಎಂ.ಕಾಂ	

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಪಡೆಯಬಹುದು. ಮೂಲ ಟೆಂಡರ್ ಅಧಿಸೂಚನೆಯಲ್ಲಿನ ಇತರೆಲ್ಲಾ ನಿಯಮಗಳು ಮತ್ತು ಷರತ್ತುಗಳಲ್ಲಿ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ಯೋಜನೆ (ಪಶ್ಚಿಮ) ವಿಭಾಗ, ಬಿಬಿಎಂಪಿ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಆ),
9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009

ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರಮ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ
1	ಗುಣ ಆಶ್ವಾಸನೆ	ಬೆಂಜಮಂ/ಇಕ್ಯೂಎಟಿಇ/ಪಿಬಿ/177/2023–24 ದಿನಾಂಕ: 06.06.2023	ರೂ. 71,22,600/–. / ರೂ. 1,42,500/–.	16.06.2023ರ ಸಂಜೆ 5.30 ಗಂಟೆಯವರೆಗೆ	18.06.2023 ಮಧ್ಯಾಹ್ನ 12.00 ಗಂಟೆಗೆ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಗುಣ ಆಶ್ವಾಸನೆ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾ.ಸಾ.ಸಂ.ಇ/ವಾಪ್ರ/226/ಆಕಾರ್/2023–24

ಕರ್ನಾಟಕ ಸರ್ಕಾರ
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102
ದೂರವಾಣಿ : (08472) – 256767, 239556, 255564, ಫ್ಯಾಕ್ಸ್ : (08472) 227527
E-mail : hkadbgulb@gmail.com Website : hkrdb.kar.nic.in
ಸಂಖ್ಯೆ: KKRDB/TECH/Eng Colleges/2023-24/ ದಿನಾಂಕ:07–06–2023.

:: ಅಲ್ಪಾವಧಿ ಟೆಂಡರ ಪ್ರಕಟಣೆ ::

01) ಕಾಮಗಾರಿಯ ಹೆಸರು : Engaging Engineering Colleges for undertaking Quality Assurance and Audit of various projects funded by KKRDB” in **Kalaburagi and Yadgir Districts” (LOT-1)** ಇ.ಎಂ.ಡಿ ಮೊತ್ತ ರೂ. **13,00,000/-,** Engaging Engineering Colleges for undertaking Quality Assurance and Audit of various projects funded by KKRDB” in **Bidar and KKRDB Districts” (LOT-2)** ಇ.ಎಂ.ಡಿ ಮೊತ್ತ ರೂ. **9,00,000/-,** Engaging Engineering Colleges for undertaking Quality Assurance and Audit of various projects funded by KKRDB” in R**aichur and Koppal Districts” (LOT-3)** ಇ.ಎಂ.ಡಿ ಮೊತ್ತ ರೂ. **7,00,000/-,** Engaging Engineering Colleges for undertaking Quality Assurance and Audit of various projects funded by KKRDB” in **Bellary and Viajynagar Districts” (LOT-4)** ಇ.ಎಂ.ಡಿ ಮೊತ್ತ ರೂ. **10,00,000/-,** 02) ಲೆಕ್ಕ ಶೀರ್ಷಿಕೆ: **KKRDB** ನಿಧಿ, 03) ಗುತ್ತಿಗೆದಾರರ ಅರ್ಹತೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 04) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: 08.06.2023, 05) ಕ್ವಾರೀಸ್ ಸಲ್ಲಿಸುವ ದಿನಾಂಕ: 16-06-2023 ಸಾಯಂಕಾಲ 5.30ಕ್ಕೆ, 06) ಪ್ರಿ–ಬಿಡ್ ಸಭೆ ದಿನಾಂಕ (online): 19-06-2023 ಬೆಳಿಗ್ಗೆ 11.30ಕ್ಕೆ, 07) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 23-06-2023 ಮಧ್ಯಾಹ್ನ 4.00ರ ವರೆಗೆ, 08) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26-06-2023 ಬೆಳಿಗ್ಗೆ 11.30ಕ್ಕೆ, 09) ಆರ್ಥಿಕ ಬಿಡ್ ತೆರೆಯುವ ದಿನಾಂಕ : 28-06-2023 ಬೆಳಿಗ್ಗೆ 11.00ಕ್ಕೆ, 10) ಟೆಂಡರ್ ಅರ್ಜಿ ಬೆಲೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 11) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: https:// kppp.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬುರಗಿ ರಲ್ಲಿ ಸಂಪರ್ಕಿಸಬಹುದು, 12) ಅಂತರ್‌ಜಾಲ ತಾಣದ ವಿಳಾಸ: https://kppp.karnataka.gov.in 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://kppp.karnataka.gov.in ಕ್ಕೆ ಸಂಪರ್ಕಿಸಬಹುದು.

ಸಹಿ/– ಉಪ ಕಾರ್ಯದರ್ಶಿಗಳು
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/43/ಕೆ.ಎಸ್.ಎಂ.ಸಿ.&ಎ/2023–24

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ),
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91-80-26560722 / 26560723 / 66697999 E-mail: kidwai@nic.in
No. KMIO/SME(1)/Tender/CW/390/2023-24 Dated: 07.06.2023

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ **ದ್ವಿ–ಲಕೋಟೆ ಪದ್ಧತಿಯಲ್ಲಿ** ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಕಿದ್ವಾಯಿ ಮೆಮೋರಿಯಲ್ ಗಂಥಿ ಆಫ್ ಆಂಕೊಲಾಜಿ ಮತ್ತು VTSM ಪೆರಿಫೆರಲ್ ಕ್ಯಾನ್ಸರ್, ಕಲ್ಬುರ್ಗಿಗೆ ಅಲ್ಪಾವಧಿಯ ಟೆಂಡರ್.

Sl. No.	Tender No. & Date	Name of the Items
1.	No. KMIO/SME(1)/Tender/CW/390/2023-24 Date: 07-06-2023.	Up-grading the Sewage lines with Higher dia Pipes Connecting from Dharmashala and Main Building up to Road in front of the Building and Laying Paver Stones at Open areas of VTSM Peripheral Cancer Centre, Kalburgi.
2.	No. KMIO/SME(1)/Tender/CW/391/359 2023-24 Date: 07-06-2023.	Ancillary Minor Works with False Ceiling to Linear Accelerator, Cobalt Bunkers and other repair works at Wards and other Areas at VTSM Peripheral Cancer Centre, Kalburgi.
3.	No. KMIO/SME(1)/Tender/CW/392/2023-24 Date: 07-06-2023.	Providing Liquid Oxygen medical plant, Laying of Oxygen and other pipe lines for Ot's Minor Ot's and Manifold and other relevant areas at VTSM Peripheral Cancer Centre, Kalburgi.
4.	No. KMIO/SME(1)/Tender/CCTV/393/2023-24 Date: 07-06-2023.	Providing CCTV's to the Balance Areas (Un-Covered) and CMC services to VTSM Peripheral Cancer Center, Kalburgi.
5.	No. KMIO/SME(1)/Tender/CMC AC/394/2023-24 Date: 07-06-2023.	Providing & CMC services for Split Air conditioners installed at KMIO Bangalore & VTSM Peripheral Cancer Center, Kalburgi.
6.	No. KMIO/SME(1)/Tender/RO Plant/395/2023-24 Date: 07-06-2023.	Supply and Installation of RO Plants 50 LPH to VTSM Peripheral Cancer Center, Kalburgi.
7.	No.KMIO/SME(1)/Tender/Chemicals/396/2023-24 Date: 07-06-2023.	Supply of Chemicals to Hematology, Pathology, Biochemistry and Microbiology at VTSM Peripheral Cancer Center, Kalburgi.
8.	No.KMIO/SME(1)/Tender/CW/397/2023-24 Date: 07-06-2023.	Extension of existing Pre-Operative Surgical Ward at KMIO, Bengaluru.
9.	No.KMIO/SME(1)/Tender/RC/398/2023-24 Date: 07-06-2023.	Rate Contract for the Hospital Furniture repair and service works in various department of KMIO and PCC, Kalburgi.
10.	No.KMIO/SME(1)/Tender/CCTV/399/2023-24 Date: 07-06-2023.	Providing additional CCTV's to monitor Areas (Un covered) at various parts of the Buildings of KMIO, Bengaluru.
11.	No.KMIO/SME(1)/Tender/Laundry Equipments/400/2023-24 Date: 07-06-2023.	Supply and Installation of Laundry Equipments on Buy back offer basis for old Laundry equipments at KMIO., Bengaluru.
12.	No.KMIO/SME(1)/Tender/AMC Generators/401/2023-24 Date: 07-06-2023.	Providing AMC Services for Deisel Generators sets at KMIO., Bengaluru and VTSM PCC, Kalburgi.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **12.06.2023 ರಿಂದ 10.07.2023.** ಬಿಡ್ಡರ್‌ಗಳು ಬಿಡ್ ದಾಖಲೆಗಳನ್ನು ವೆಬ್‌ಸೈಟ್: **https://eproc.karnataka.gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500/–**ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **10.07.2023 ರಂದು ಮಧ್ಯಾಹ್ನ 3:00 p.m. ಗಂಟೆಯವರೆಗೆ.** ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು
DIPR/CP/RO218/AAPL/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಹಾವೇರಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ,
ಜಿಲ್ಲಾಡಳಿತ ಭವನ, ಹಾವೇರಿ–581110
Email : dhohaveri@gmail.com Ph.: 08375-249066 Fax : 08375-249009
ಕ್ರಸಂ/ಜಿಆಕುಕಹಾ/ಸಿಬ್ಬಂದಿ–1/ವಹಿ–50/2022–23/084 ದಿನಾಂಕ: 08–06–2023

ಪತ್ರಿಕಾ ಪ್ರಕಟಣೆ

ವಿಷಯ: ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.
ಉಲ್ಲೇಖ: 1. ಸರ್ಕಾರದ ಆದೇಶ **ಸಂಖ್ಯೆ/ಆಕುಕ/297/ಹೆಚ್‌ಎಸ್‌ಹೆಚ್/2015 ಬೆಂಗಳೂರು ದಿ: 22/04/2016**
2. ಸರ್ಕಾರದ ಆದೇಶ **ಸಂಖ್ಯೆ/ಆಕುಕ/240/ಹೆಚ್‌ಎಸ್‌ಹೆಚ್/2017 ಬೆಂಗಳೂರು ದಿ: 31/05/2017**
3. ಸರ್ಕಾರದ ಆದೇಶ **ಸಂಖ್ಯೆ/ಆಕುಕ/228/ಹೆಚ್‌ಎಸ್‌ಹೆಚ್/2020 ಬೆಂಗಳೂರು ದಿ: 01/07/2020**
4. ಮಾನ್ಯ ಜಿಲ್ಲಾಧಿಕಾರಿಗಳು, ಹಾವೇರಿ ಇವರ ಅನುಮೋದನೆ ದಿ: 07/06/2023

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಹಾವೇರಿ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರ, ಆರೋಗ್ಯ ವಿಸ್ತರಣಾ ಕೇಂದ್ರಗಳಲ್ಲಿ ಖಾಲಿ ಇರುವ ಒಟ್ಟು 11 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಅರ್ಹ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಮತ್ತು ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ನೇಮಕಾತಿ ಮಾಡಲು ದಿನಾಂಕ: **16/06/2023** ರಿಂದ **22/06/2023** ರವರೆಗೆ ಅರ್ಜಿ ಆಹ್ವಾನಿಸಲಾಗಿದ್ದು. ಅರ್ಹ ಅಭ್ಯರ್ಥಿಗಳು ಮುದ್ದಾಂ/ನೊಂದಾಯಿತ ಅಂಚೆ ಮುಖಾಂತರ **“ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಆಡಳಿತ ಭವನ ಹಾವೇರಿ–581110”** ಇವರ ಹೆಸರಿಗೆ ಸಲ್ಲಿಸಲು ಸೂಚಿಸಿದೆ. ಇನ್ನು ಮುಂದೆ ಪ್ರತಿ ಸೋಮವಾರ ಹಾಗೂ ಗುರುವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಹಾವೇರಿ ಇಲ್ಲಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಕುರಿತು ನೇರ ಸಂದರ್ಶನ ನಡೆಸಲಾಗುವುದು.

ಗುತ್ತಿಗೆ ಎಂ.ಬಿ.ಬಿ.ಎಸ್. ವೈದರನ್ನು ನೇಮಕಾತಿ ಮಾಡಲು ತಯಾರಿಸಲಾದ ರೋಸ್ಟರ್ ವರ್ಗೀಕರಣ

ಕ್ರ ಸಂ	ಪ್ರವರ್ಗ	ಇತರೆ	ಮಹಿಳಾ	ಗ್ರಾಮೀಣ	ಮಾ.ಸೈ	ಕ.ಮಾ.ಅ	ಯೋ.ನಿ.ರಾ	ಅಂ.ವಿ	ತೃತೀಯ ಲಿಂಗ	ಒಟ್ಟು
1	ಪ.ಜಾ	0	1	1	0	0	0	1	0	3
2	ಪ.ಪಂ	1	1	0	0	0	0	0	0	2
3	ಪ್ರ–1	0	0	0	0	0	0	0	0	0
4	ಪ್ರ–2 ಎ	0	0	1	0	0	0	0	0	1
5	ಪ್ರ–2 ಬಿ	0	0	0	0	0	0	0	0	0
6	ಪ್ರ–3 ಎ	1	0	0	0	0	0	0	0	1
7	ಪ್ರ–3 ಬಿ	1	0	0	0	0	0	0	0	1
8	ಸಾ.ಅ	1	0	1	1	0	0	0	0	3
	ಒಟ್ಟು	4	2	3	1	0	0	1	0	11

ಅರ್ಹ ಅಭ್ಯರ್ಥಿಗಳು ಅರ್ಜಿ ಜೊತೆಗೆ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಎಂಬಿಬಿಎಸ್ ವಿದ್ಯಾರ್ಹತೆಯ ಎಲ್ಲಾ ವರ್ಷದ ಅಂಕಪಟ್ಟಿಗಳು, ಹೌಸ್‌ಮೆನ್‌ಶಿಪ್ ಮುಗಿದ ಬಗ್ಗೆ ಪ್ರಮಾಣ ಪತ್ರ ಮತ್ತು ಕಾನೂನು ಬದ್ಧವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪ್ರಮಾಣ ಪತ್ರ ಹಾಗೂ ಕೆಎಂಸಿ ನೊಂದಣಿ ಪ್ರಮಾಣ ಪತ್ರ ಗುರುತಿನ ಚೀಟಿ (ಆಧಾರ) ಮತ್ತು ಗ್ರಾಮೀಣ ಅಭ್ಯರ್ಥಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಂಬಂಧಿಸಿದ ದಾಖಲಾತಿಗಳನ್ನು ಝರಾಕ್ಸ ಮಾಡಿಸಿ ದೃಢೀಕರಿಸಿ ತಮ್ಮ ಬಯೋಡಾಟಾ ಅರ್ಜಿಯೊಂದಿಗೆ ದ್ವಿ–ಪ್ರತಿಯಲ್ಲಿ ಎಲ್ಲ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯ ವೈದ್ಯರ ಸಂಕಲನದ ವಿಷಯ ನಿರ್ವಾಹಕರಾದ ಶ್ರೀ ಮಂಜು ಗಂಟಿಸಿದ್ದಪ್ಪನವರ, ಪ್ರಥಮ ದರ್ಜೆ ಸಹಾಯಕರು ಇವರನ್ನು (ದೂರವಾಣಿ ಸಂಖ್ಯೆ: 95384 40933) ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ
ವಾ.ಸಾ.ಇ./ಹಾವೇರಿ/30/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ
ಕಛೇರಿ : 272210 (08182) FAX No: 08182-225657 Email ID: dcf.shivamogga@gmail.com
ಸಂಖ್ಯೆ: ಬಿ2/ಜಿಟಿ.ಡಿ/ನಾಟಾ.ಹರಾಜು/ಸಿಆರ್–04/2023–24 ದಿನಾಂಕ: 05.06.2023

ಅರಣ್ಯ ಉತ್ಪನ್ನಗಳ ಇ–ಹರಾಜಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶಿವಮೊಗ್ಗ ವಿಭಾಗದ ಸರ್ಕಾರಿ ನಾಟಾ ಸಂಗ್ರಹಾಲಯ, ಆಲ್ಕೋಳ ಶಿವಮೊಗ್ಗ ಇಲ್ಲಿ ದಾಸ್ತಾನು ಇರುವ ನಾಟಾ/ ಸೌದೆ/ ಬಿಲ್ಲೇಟ್ಸ್/ ಪೋಲ್ಸ್‌ಗಳನ್ನು ದಿನಾಂಕ: 27–06–2023 ಮತ್ತು 28–06–2023 ರವರೆಗೆ ಇ–ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ಈ ಕಛೇರಿಯ ಸವಿಸ್ತಾರ ಹರಾಜು ಪ್ರಕಟಣೆ ಸಂಖ್ಯೆ: ಬಿ2/ಜಿ.ಟಿ.ಡಿ/ನಾಟಾ, ಹರಾಜು/ಸಿಆರ್–04/2023–24 ದಿನಾಂಕ:05–06–2023 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ–ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಇ–ಹರಾಜಿನ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ www.mstcecommerce.com ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಇ–ಹರಾಜಿಗೆ ಇಟ್ಟಿರುವ ಅರಣ್ಯ ಉತ್ಪನ್ನಗಳ ವಿವರ

ಕ್ರ ಸಂ	ಉಗ್ರಾಣದ ಹೆಸರು	ಉತ್ಪನ್ನಗಳ ವಿವರ		ಲಾಟ್ ಸಂಖ್ಯೆ	ಅಂದಾಜು ಪ್ರಮಾಣ (ಎಂ.3ಗಳಲ್ಲಿ)	ದಿನಾಂಕ ಮತ್ತು ಸೆಷನ್ಸ್
1	ಜಿ.ಟಿ.ಡಿ ಆಲ್ಕೋಳ ಶಿವಮೊಗ್ಗ	ಅಕೇಶಿಯಾ	ನಾಟಾ	254	936.496	27.06.2023 I, II, III & IV & 28.06.2023 I & II Session
2		ಬೀಟೆ		86	29.405	
3		ಸಾಗುವಾನಿ		148	72.683	
4		ಇತರೆ ಜಾತಿ		84	50.450	
5		ಅಕೇಶಿಯಾ	ಸೈಜು	01	0.005	
6		ಬೀಟೆ		61	11.471	
7		ಸಾಗುವಾನಿ		66	15.244	
8		ಇತರೆ ಜಾತಿ		21	4.703	
9		ಅಕೇಶಿಯ	ಪೋಲ್ಸ್	18	1144 ನಂ.	
10		ಸಾಗುವಾನಿ		13	164 ನಂ.	
11		ಇತರೆ ಜಾತಿ		09	170 ನಂ.	
12		ಅಕೇಶಿಯಾ	ಸೌದೆ	23	359.168	
13		ಬೀಟೆ		01	16.875	
14		ಇತರೆ ಜಾತಿ		14	98.585	
15		ಅಕೇಶಿಯಾ	ಬಿಲ್ಲೇಟ್ಸ್	13	202.380	
16		ಬೀಟೆ		02	1.342	
17		ಎನ್.ಟಿ.ಎಫ್.ಪಿ	ಸ್ಟೋನ್	01	2.000	
18		ಬಾಂಬು		01	59 ನಂ.	
			ಒಟ್ಟು	816		

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/07/06/23–24/76

Butterfly®
40 Years of Excellence
Super Upgrade Offer
Till June 30th, 2023
ಅತ್ಯಂತ ಸಮರ್ಥ ಹಾಗೂ ಆರೋಗ್ಯಕರವಾಗಿ ಅಡಿಗೆ ಮಾಡಲು
ಬಟರ್‌ಫ್ಲೈ ನೊಂದಿಗೆ ನಿಮ್ಮ ಅಡಿಗೆ ಮನೆಯನ್ನು ಉನ್ನತೀಕರಣಗೊಳಿಸಿ
ವಿನಿಮಯ ಕೊಡುಗೆ
45% ವರೆಗೆ ರಿಯಾಯಿತಿ*
ಎಲ್ಲಾ ಬಟರ್‌ಫ್ಲೈ ಉತ್ಪನ್ನಗಳ ಮೇಲೆ
OUR BEST-SELLERS
TRIPLY TEZ
Pressure Cooker
20% ತ್ವರಿತವಾದ, ಏಕರೀತಿಯ ಹಾಗೂ ಆರೋಗ್ಯಕರ ಅಡಿಗೆಗೆ 3 ಪದರದ ಸಾಮಗ್ರಿ ಬಳಕೆ.
*Compared to conventional Aluminium pressure cookers as per laboratory tests.
2L-MRP ₹2,699 3L-MRP ₹2,999 5L-MRP ₹3,899
BLUELINE SPILLFREE
Pressure Cooker
ಸೋರಿಕೆ ನಿಯಂತ್ರಣ ಕುಕ್ಕರ್‌ಗಳು. ಇನ್ನು ಆಹಾರ ಚೆಲ್ಲುವುದಿಲ್ಲ.
2L-MRP ₹2,399 3L-MRP ₹2,699 5L-MRP ₹3,499
LIFETIME WARRANTY* *ONLY ON MOTOR
ELEKTRA
Food Processor
FPSS TECHNOLOGY
6 JARS
9 ATTACHMENTS
MRP ₹12,199
LIFETIME WARRANTY* *ONLY ON MOTOR
MAGNUM
Mixer Grinder
1.2 HP motor
100% COPPER MOTOR
3J-MRP ₹7,299 4J-MRP ₹8,299
UPGRADE YOUR COOKING EXPERIENCE.
*ಷರತ್ತುಗಳು ಹಾಗೂ ನಿಬಂಧನೆಗಳು ಅನ್ವಯ ಗ. ಮಾ. ಬೆ. ಮೇಲೆ ಹಾಗೂ ಉತ್ಪನ್ನಗಳ ವಿನಿಮಯದ ಮೇಲೆ ಕೊಡುಗೆ ಮಾತ್ರ. ದಾಸ್ತಾನು ಇರುವವರೆಗೆ ಕೊಡುಗೆ ಲಭ್ಯ.
AVAILABLE AT ALL LEADING STORES | CUSTOMER CARE: 9362 01 9362
For further details, contact: BANGALORE: Shiva Shankar – 8884041506, Pradeep B L – 9036442455, Vijay Kumar P – 9900175884, Nikhil Kulkarni – 9241748674, Ramakrishna – 9448474497,
Raghunath G D – 9901339777, Nanda Kumar R – 9986580837, Dheeraj Rao Moray – 7892739450, Muralidhar R – 9886728075, Avinash – 9742032773, Siddaraju L – 9663011378
• HASSAN, SHIMOGA & DAVANAGARE: Mahendra M K – 7760802935 • MYSORE & MANGALORE: Mahesh K C – 7259378583 • HUBLI & BELGAUM: Mazhar Hussain Mujawar – 8884401070
• HASSAN, CHIKKAMAGALURU & TUMKUR: Swamy – 9480059546 • SHIMOGA, DAVANAGERE & CHITRADURGA: Syed Nihal – 6361306305, Mallikarjun – 9964334260,
• MYSURU, CHAMARAJANAGARA, KODAGU, MANDYA & RAMANAGARA: Ramesh Kumar H M – 9980766841 • DAKSHINA KANNADA & UDUPI: Praveen Kulal – 9845971998
• DHARWAD, HAVERI, GADAG & UTTARA KANNADA: Mallaraddi – 9686060011 • BIJAPUR, BAGALKOT & BELGAUM: Santosh Padatare – 8880074937 • BELLARY, KOPPAL & RAICHUR: Vinod Kumar – 8217366790

ಸಿನಿಮಾ ಪುರವಣಿ

ಸುಮಿತ್, ಧನ್ಯಾ ಪಾಟೀಲ್

ಮನೋಹರ ಮರು ಪ್ರವೇಶ

ಈ ಹಿಂದೆ ‘ಓ ಮಲ್ಲಿಗೆ’, ‘ಇಂದ್ರಧನುಷ್’ ಚಿತ್ರಗಳನ್ನು ನಿರ್ದೇಶಿಸಿದ್ದ ಸಂಗೀತ ನಿರ್ದೇಶಕ ವಿ.ಮನೋಹರ್ 23 ವರ್ಷಗಳ ನಂತರ ಸಿನಿಮಾ ನಿರ್ದೇಶನಕ್ಕೆ ಮತ್ತೆ ಮರಳಿದ್ದಾರೆ. ಹೊಸಬರಿಂದಲೇ ಕೂಡಿರುವ ಅವರ ‘ದರ್ಬಾರ್’ ಸಿನಿಮಾ ಇಂದು(ಜೂನ್ 9) ತೆರೆ ಕಾಣುತ್ತಿದೆ. ಈ ಹೊತ್ತಿನಲ್ಲಿ ಮನೋಹರ್ ತಮ್ಮ ನಾಲ್ಕು ದಶಕಗಳ ಸಿನಿ ಪಯಣದ ಒಂದಷ್ಟು ಸಿಹಿ–ಕಹಿ ನೆನಪುಗಳನ್ನಿಲ್ಲಿ ಹಂಚಿಕೊಂಡಿದ್ದಾರೆ...

ದರ್ಬಾರ್
ಜಾಹ್ನವಿ

ವಿನಾಯಕ ಕೆ.ಎಸ್.

• ಸಂಗೀತದಲ್ಲಿ ಸಾಕಷ್ಟು ಹೆಸರು ಗಳಿಸಿದವರು ನೀವು. 23 ವರ್ಷಗಳ ನಂತರ ಮತ್ತೆ ನಿರ್ದೇಶನದ ಆಯ್ಕೆ ಏಕೆ?

ನಿರ್ದೇಶಕನಾಗಬೇಕು ಎಂಬ ಕನಸಿನೊಂದಿಗೆ ಚಿತ್ರರಂಗಕ್ಕೆ ಬಂದೆ. ಆದರೆ ಸಂಗೀತದಲ್ಲಿ ನನಗಿದ್ದ ಆಸಕ್ತಿ ಗಮನಿಸಿ ಆವತ್ತು ನಟ ಉಪೇಂದ್ರ ಮ್ಯೂಸಿಕ್ ಮಾಡಲು ಅವಕಾಶ ನೀಡಿದರು. ಒಂದು ರೀತಿಯಲ್ಲಿ ‘ತರ್ಲೆ ನನ್ಮಗ’ ಸಿನಿಮಾದಿಂದ ಆಕಸ್ಮಿಕವಾಗಿ ಸಂಗೀತ ನಿರ್ದೇಶಕನಾದೆ. ಸಾಮರ್ಥ್ಯದಿಂದಾಗಿ ಸಂಗೀತದಲ್ಲಿ ಗೆಲ್ಲುತ್ತ ಬಂದೆ. ನಂತರ ಜಗ್ಗೇಶ್ ಅವರ ಸಿನಿಮಾಗಳಲ್ಲಿ ಅವಕಾಶ ನೀಡಿ ನನ್ನನ್ನು ಪ್ರೋತ್ಸಾಹಿಸಿದರು. ‘ಜನುಮದ ಜೋಡಿ’ ಸೂಪರ್ ಹಿಟ್ ಆಗಿತ್ತು. ಇದೆಲ್ಲದರ ನಡುವೆ 1997ರಲ್ಲಿ ನಿರ್ದೇಶಕನಾಗಿ ‘ಓ ಮಲ್ಲಿಗೆ’ ಸಿನಿಮಾ ಮಾಡುವ ಅವಕಾಶ ಸಿಕ್ಕಿತು. ಸಿನಿಮಾ ತುಂಬ ಯಶಸ್ವಿಯಾಯಿತು. ಆಗ ಒಂದಷ್ಟು ನಿರ್ಮಾಪಕರು ಹುಡುಕಿಕೊಂಡು ಬರಬಹುದು ಅಂದುಕೊಂಡೆ. ಆದರೆ ಯಾರೂ ಬರಲಿಲ್ಲ. ಎರಡು ವರ್ಷಗಳ ಬಳಿಕ ‘ಇಂದ್ರ ಧನುಷ್’ ಚಿತ್ರ ಮಾಡಲು ನಿರ್ಮಾಪಕರು ಸಿಕ್ಕರು. ಆ ಸಿನಿಮಾ ಯಶಸ್ವಿಯಾಗಲಿಲ್ಲ. ನಂತರ ಸರಿಯಾದ ನಿರ್ಮಾಪಕರು ಸಿಗಲಿಲ್ಲ. ಆಗ ‘ಓಂ’ ಸಿನಿಮಾ ಬಿಡುಗಡೆಯಾಗಿತ್ತು. ಹೀಗಾಗಿ ಬಂದ ನಿರ್ಮಾಪಕರೆಲ್ಲ ಮಚ್ಚು, ಲಾಂಗ್‌ನ ಕಥೆ ನಿರೀಕ್ಷೆ ಮಾಡುತ್ತಿದ್ದರು.



ವಿ.ಮನೋಹರ್

• ನಂತರ ನಿರ್ದೇಶನಕ್ಕೆ ಮತ್ತೆ ಪ್ರಯತ್ನ ಮಾಡಲಿಲ್ಲವೆ?

ಪ್ರಯತ್ನ ಜಾರಿಯಲ್ಲಿತ್ತು. ಆದರೆ ನನ್ನ ಅಭಿರುಚಿಗೆ ತಕ್ಕ ನಿರ್ಮಾಪಕರು ಸಿಗಲಿಲ್ಲ. ನಾನು ನಂತರ ಧಾರಾವಾಹಿಗಳಲ್ಲಿ ತೊಡಗಿಸಿಕೊಂಡೆ. ‘ಚಿಗುರಿದ ಕನಸು’, ‘ದುನಿಯಾ’, ‘ಮೆರವಣಿಗೆ’, ‘ಕಿರಾತಕ’ ಸಿನಿಮಾಗಳ ಹಾಡುಗಳು ಹಿಟ್ ಆದವು. ಹೀಗಾಗಿ ಸಂಗೀತ ಬಿಟ್ಟು ಹೊರಬರಲು ಸಾಧ್ಯವಾಗಲಿಲ್ಲ. ಆದರೆ ನನ್ನೊಳಗೆ ಸಿನಿಮಾ ನಿರ್ದೇಶನ ಮಾಡುವ ಆಸೆ ಹಾಗೆಯೇ ಇತ್ತು. ‘ದಿಲ್‌ದಾರ್’ ಸಿನಿಮಾಕ್ಕೆ ಪಾಲುದಾರರಾಗಿದ್ದ ಸತೀಶ್ ಪರಿಚಯವಾಯ್ತು. ಅವರ ಬಳಿ ರಾಜಕೀಯ ವಿಡಂಬನೆ ಕಥೆಯಿತ್ತು. ನಾನು ಈ ಹಿಂದೆ ವ್ಯಂಗಚಿತ್ರಕಾರನಾಗಿದ್ದರಿಂದ ಕಥೆ ನನ್ನ ಅಭಿರುಚಿಗೆ ತಕ್ಕಹಾಗೆ ಇದೆ ಎನ್ನಿಸಿತು. ಹೀಗಾಗಿ ಮೂರನೆ ಸಿನಿಮಾ ನಿರ್ದೇಶನ ಮಾಡುವ ಅವಕಾಶವಾಯ್ತು.

• ಸಂಗೀತದ ಕೆಲಸಗಳನ್ನು ನಿಲ್ಲಿಸಿದ್ದೀರಾ?

ಈ ಚಿತ್ರ ಯಶಸ್ವಿಯಾದರೆ ಮತ್ತೆ ಒಂದಷ್ಟು ನಿರ್ಮಾಪಕರು ಬರಬಹುದು ಎಂದುಕೊಂಡಿದ್ದೇನೆ. ಸಂಗೀತದ ಕೆಲಸಗಳು ನಿಂತಿಲ್ಲ. ಆದರೆ ಸ್ಟಾರ್ ನಟರ ಸಿನಿಮಾಗಳು ಬರುತ್ತಿಲ್ಲ. ಎಲ್ಲವೂ ಸಣ್ಣ ಬಜೆಟ್‌ನ ಸಿನಿಮಾಗಳು. ಇವುಗಳಲ್ಲಿ ಹಾಡು, ಸಂಗೀತ ಉತ್ತಮವಾಗಿದ್ದರೂ ಜನರಿಗೆ ತಲುಪುತ್ತಿಲ್ಲ.

• 40 ವರ್ಷಗಳ ನಿಮ್ಮ ಈ ಸಿನಿ ಪಯಣ ಹೇಗಿತ್ತು?

ಹಿಂದೆ ತಿರುಗಿ ನೋಡಿದರೆ ಕಲರ್‌ಫುಲ್ ಆಗಿದೆ. ಎಷ್ಟೊಂದು ಜನ ಕೈ ಹಿಡಿದು ನಡೆಸಿದರು. ಉಪೇಂದ್ರ, ಕಾಶಿನಾಥ್, ಸುಂದರನಾಥ್ ಸುವರ್ಣ...ಹೀಗೆ ಸಹಾಯ ಮಾಡಿದವರ ದೊಡ್ಡ ಪಟ್ಟಿ ಇದೆ. ಇಲ್ಲಿ ಗೆಲ್ಲುವ ಕುದುರೆ ಮುಖ್ಯ. ಹಾಗಂತ ನಾವು ಸುಮ್ಮನೆ ನಿಂತರೆ ಜೀವನ ಸಾಗದು. ಓಡೋ ಥರ ನಟನೆಯನ್ನಾದರೂ ಮಾಡಬೇಕು. ಸಿನಿಮಾ ಬಿಟ್ಟು ಬೇರೆ ಜಗತ್ತು ನನಗೆ ಗೊತ್ತಿಲ್ಲ.

• ‘ದರ್ಬಾರ್’ ಸಿನಿಮಾ ಇವತ್ತಿಗೆ ಎಷ್ಟು ಪ್ರಸ್ತುತವಾಗಿದೆ?

ನಾನು ಬಹಳ ವರ್ಷಗಳ ಹಿಂದೆಯೇ ಅಪ್‌ಡೇಟ್ ಆಗಿರುವೆ. ‘ದರ್ಬಾರ್’ ನೋಡಿದರೆ ಅಪ್‌ಡೇಟ್ ಆಗಿರುವುದು ತಿಳಿಯುತ್ತದೆ. ಈಗಿನ ರಾಜಕೀಯ ವಿಡಂಬನೆ ಕಥೆಯಿದು. ಇವತ್ತು ಜನ ಚಿತ್ರಮಂದಿರಗಳಿಗೆ ಬರಬೇಕೆಂದರೆ, ಅವರಿಗೆ ಒಂದೊಳ್ಳೆ ಟೈಂಪಾಸ್ ಮಾಡುವ ಪ್ಯಾಕೇಜ್ ಬೇಕು. ಮನರಂಜನೆ ಜೊತೆಗೆ ಮನೆಗೆ ಹೋದ ನಂತರ ನೆನಪಿರುವ ಅಂಶಗಳು ಬೇಕು. ಅದು ಈ ಸಿನಿಮಾದಲ್ಲಿದೆ.

• ಒಂದು ಹೊಸ ನಾಯಕನಿಗೆ ಸಿನಿಮಾ ಮಾಡುವಾಗಿನ ಸವಾಲು ಹೇಗಿತ್ತು?

ನಾಯಕ, ನಿರ್ಮಾಪಕ ಸತೀಶ್ ಅವರೇ ಕಥೆ, ಚಿತ್ರಕಥೆ ಚೆನ್ನಾಗಿ ಮಾಡಿಕೊಂಡಿದ್ದರು. ಅವರಲ್ಲಿ ಹಾಸ್ಯಪ್ರಜ್ಞೆ ಇದೆ. ನಟನೆಯಲ್ಲಿ ಸಣ್ಣಪುಟ್ಟ ಪಾತ್ರ ಮಾಡಿದ ಅನುಭವ ಇರುವುದರಿಂದ ನನ್ನ ಕೆಲಸ ಸುಲಭವಾಯ್ತು. ಸಿನಿಮಾ ಚೆನ್ನಾಗಿ ಬಂದಿರೋದರಿಂದ ಆತ್ಮವಿಶ್ವಾಸವಿದೆ. ಗೆಲ್ಲುವ ಭರವಸೆಯಿದೆ. ಒಳ್ಳೆ ಕಂಟೆಂಟ್ ಇದೆ.

• ಈ ಸಿನಿಮಾದ ಸಂಗೀತದಲ್ಲಿ ಏನು ನಿರೀಕ್ಷೆ ಮಾಡಬಹುದು?

‘ಬಂದೇಬುಡ್ತು ಊರಹಬ್ಬದಂಗೆ’ ಎಂಬ ರಾಜಕೀಯ ವಿಡಂಬನೆಯ ಹಾಡೊಂದನ್ನು ಉಪೇಂದ್ರ ಹಾಡಿದ್ದು, ಚುನಾವಣೆ ಸಮಯದಲ್ಲಿ ಬಿಡುಗಡೆ ಮಾಡಿದ್ದೆವು. ಅದನ್ನು ತುಂಬ ಜನ ಕೇಳಿ ಇಷ್ಟಪಟ್ಟರು. ಚಂದನ್ ಶೆಟ್ಟಿ ಹಾಡಿರುವ ಟೈಟಲ್ ಸಾಂಗ್ ಕೂಡ ಜನಪ್ರಿಯತೆ ಪಡೆಯುತ್ತಿದೆ. ❖

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಕ್ರಿಕೆಟ್‌ನಿಂದ ಸಿನಿಮಾದತ್ತ ಸುಮಿತ್ ಚಿತ್ತ

ವಾಮಾಚಾರದ ಸುತ್ತ ನಡೆಯುವ ಘಟನೆಗಳನ್ನೇ ಕಥೆಯಾಗಿ ಹೊಂದಿರುವ ಚಿತ್ರ ‘ಗದಾಯುದ್ಧ’ ಇಂದು ತೆರೆ ಕಾಣುತ್ತಿದೆ. ಈ ಹಿಂದೆ ‘ಮೃಗಶಿರ’ ಚಿತ್ರ ನಿರ್ದೇಶಿಸಿದ್ದ ಶ್ರೀವತ್ಸ ರಾವ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಮೊದಲ ಸಲ ನಾಯಕನಾಗಿ ಬಣ್ಣ ಹಚ್ಚಿರುವ ಬೆಳಗಾವಿ ಮೂಲದ ಸುಮಿತ್ ಒಂದಷ್ಟು ಅನುಭವ ಹಂಚಿಕೊಂಡಿದ್ದಾರೆ...

• ನಿಮ್ಮ ನಟನೆಯ ಹಿನ್ನೆಲೆ ಏನು?

ಇದು ನಾಯಕನಾಗಿ ಮಾತ್ರವಲ್ಲ, ನಟನಾಗಿಯೂ ನನ್ನ ಮೊದಲ ಸಿನಿಮಾ. ಹೀಗಾಗಿ ಮುಂಬೈನಲ್ಲಿ ನಟನೆ ತರಬೇತಿ ತೆಗೆದುಕೊಂಡೆ. ಜೊತೆಗೆ ನಿರ್ದೇಶಕ ಶ್ರೀವತ್ಸ ಕೂಡ ಒಂದಷ್ಟು ತರಬೇತಿ ನೀಡಿದರು. ಇದಕ್ಕೂ ಮೊದಲು ನಾನು ನಿರ್ದೇಶನ ಮತ್ತು ಛಾಯಾಚಿತ್ರಗ್ರಹಣ ಕ್ಷೇತ್ರದಲ್ಲಿದ್ದೆ. ಒಂದಷ್ಟು ಜಾಹೀರಾತುಗಳನ್ನು ನಿರ್ದೇಶಿಸಿದ್ದೆ.

• ಚಿತ್ರದಲ್ಲಿ ನಿಮ್ಮ ಪಾತ್ರವೇನು? ಚಿತ್ರೀಕರಣದ ಅನುಭವ ಹೇಗಿತ್ತು?

ಚಿತ್ರದಲ್ಲಿ ‘ಭೀಮ’ ಎಂಬ ಪಾತ್ರ ಮಾಡಿರುವೆ. ವಾಮಾಚಾರದ ವಿರುದ್ಧ ಹೋರಾಡುವ, ಸಮಾಜದ ಒಳಿತಿನ ಜೊತೆಗೆ ನಿಲ್ಲುವ ಪಾತ್ರವಿದು. ಆ್ಯಕ್ಷನ್, ರೊಮ್ಯಾನ್ಸ್ ಎಲ್ಲವುಗಳಿಂದ ಕೂಡಿದ ಪಾತ್ರ. ಇಡೀ ಚಿತ್ರೀಕರಣ ಒಂದು ಕಲಿಕೆ. ತುಂಬ ಕಲಿಕೆ. ಸಾಧು ಕೋಕಿಲಾ, ಶರತ್ ಲೋಹಿತಾಶ್ವ, ರಮೇಶ್ ಭಟ್, ಡ್ಯಾನಿಯವರಂತಹ ಹಿರಿಯ ನಟರ ಜೊತೆಗೆ ಅಭಿನಯಿಸಿದ್ದು ಒಂದು ಭಿನ್ನ ಅನುಭವ. ಅವರೆಲ್ಲ ಹೊಸಬ ಎಂದು ಪರಿಗಣಿಸದೆ ಸಾಕಷ್ಟು ತಿದ್ದಿ ನಟನೆ ಮಾಡಿಸಿದರು.

• ನಟರಾಗಬೇಕೆಂಬ ಕನಸಿತ್ತಾ?

ಮೂಲತಃ ನಾನು ಕ್ರಿಕೆಟ್ ಆಟಗಾರ. ಸುಮಾರು 15 ವರ್ಷ ಕ್ರಿಕೆಟ್‌ನಲ್ಲಿದ್ದೆ. ಕ್ರಿಕೆಟ್‌ನಲ್ಲಿ ಸಾಧಿಸಬೇಕೆಂದು ಬೆಳಗಾವಿಯಿಂದ ಬೆಂಗಳೂರಿಗೆ ಬಂದು ನೆಲೆಸಿದೆ. ರಾಜ್ಯಮಟ್ಟದ ಪಂದ್ಯಗಳಲ್ಲಿಯೂ ಆಡಿರುವೆ. ಆದರೆ ಬೆನ್ನಿಗೆ ಏಟು ಬಿದ್ದು ಅಲ್ಲಿಂದ ಹೊರಬರಬೇಕಾಯಿತು. ಬಹುತೇಕರಿಗೆ ಕ್ರಿಕೆಟಿಗ ಅಥವಾ ನಟನಾಗಬೇಕೆಂಬ ಕನಸಿರುತ್ತದೆ. ನನಗೂ ಅದೇ ರೀತಿ ಕನಸು ಬಾಲ್ಯದಿಂದಲೂ ಇತ್ತು.

• ನಿಮ್ಮ ಮುಂದಿನ ಯೋಜನೆಗಳು?

ಈ ಸಿನಿಮಾದಿಂದ ನಟನಾಗಿ ಗುರುತಿಸಿಕೊಳ್ಳುವೆ ಎಂಬ ಭರವಸೆಯಿದೆ. ಆದರೆ ಒಂದೇ ಸಿನಿಮಾದಿಂದ ದೊಡ್ಡ ಮಟ್ಟಕ್ಕೆ ಬೆಳೆಯಲು ಸಾಧ್ಯವಿಲ್ಲ. ಕಠಿಣ ಪರಿಶ್ರಮ ಬೇಕು. ಆ ಯತ್ನ ಮುಂದುವರಿಯುತ್ತಿದೆ. ❖

ಶ್ವಾನ ಪ್ರೀತಿಯ ‘...ಮೋಹನ ಮುರಳಿ’

ಕನ್ನಡದಲ್ಲಿ ಶ್ವಾನ ಪ್ರೀತಿಯ ಕಥೆಗಳ ಸಿನಿಮಾ ವಿರಳ. ‘ನಾನು ಮತ್ತು ಗುಂಡ’, ‘777 ಚಾರ್ಲಿ’ಯಂತಹ ಬೆರಳೆಣಿಕೆಯಷ್ಟು ಚಿತ್ರಗಳ ಸಾಲಿಗೆ ಇದೀಗ ಮತ್ತೊಂದು ಸೇರ್ಪಡೆ ‘ಯಾವ ಮೋಹನ ಮುರಳಿ ಕರೆಯಿತು’.

ಕವಿ ಗೋಪಾಲಕೃಷ್ಣ ಅಡಿಗರ ಸಾಲುಗಳನ್ನೇ ಚಿತ್ರದ ಶೀರ್ಷಿಕೆಯಾಗಿಸಿಕೊಳ್ಳಲಾಗಿದೆ. ಇತ್ತೀಚೆಗೆ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್ ಟೀಸರ್ ಬಿಡುಗಡೆ ಮಾಡಿ, ಚಿತ್ರಕ್ಕೆ ಶುಭ ಕೋರಿದರು.

‘ಇದು ಮನುಷ್ಯ ಹಾಗೂ ಶ್ವಾನದ ನಡುವಿನ ಪ್ರೀತಿಯ ಕುರಿತಾದ ಚಿತ್ರ. ಭರವಸೆಯ ಹುಡುಕಾಟದಲ್ಲಿರುವ ಅಂಗವಿಕಲ ಹುಡುಗಿಗೆ ಮನುಷ್ಯ ಪ್ರೀತಿ ಅರಸಿ ಹೊರಟಿರುವ ಶ್ವಾನ ಸಿಗುತ್ತದೆ. ಇಬ್ಬರ ನಡುವೆ ಉತ್ತಮ ಬಾಂಧವ್ಯ ಬೆಳೆಯುತ್ತದೆ. ಆ ಸಮಯದಲ್ಲಿ ಇವರಿಬ್ಬರ ನಡುವೆ ಮತ್ತೊಬ್ಬ ವ್ಯಕ್ತಿ ಪ್ರವೇಶಿಸುತ್ತಾನೆ. ನಂತರ ಏನಾಗುತ್ತದೆ ಎಂಬುದು ಚಿತ್ರದ ಕಥೆ. ಈಗಾಗಲೇ ಚಿತ್ರೀಕರಣ ಮುಗಿದು ಬಿಡುಗಡೆಗೆ ಸಿದ್ಧವಾಗಿದೆ. ಮೂರು ಹಾಡುಗಳಿವೆ. ಸದ್ಯದಲ್ಲೇ ಟ್ರೇಲರ್ ಬರಲಿದೆ. ಇದು ನನ್ನ ನಿರ್ದೇಶನದ ಮೊದಲ ಚಿತ್ರ’ ಎಂದರು ನಿರ್ದೇಶಕ ವಿಶ್ವಾಸ್ ಕೃಷ್ಣ.

‘ನಾನು ಉದ್ಯಮಿ. ಕಿಕ್ ಬಾಕ್ಸಿಂಗ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದೇನೆ. ಸಿನಿಮಾ ಬಗ್ಗೆ ಅಷ್ಟು ಗೊತ್ತಿಲ್ಲ. ಸಾಹಿತಿ ಗೌಸ್ ಪೀರ್ ಅವರ ಮೂಲಕ ನಿರ್ದೇಶಕರ ಪರಿಚಯವಾಯಿತು. ಕಥೆ ಇಷ್ಟವಾಯಿತು. ನಿರ್ಮಾಣಕ್ಕೆ ಮುಂದಾದೆ’ ಎಂದು ನಿರ್ಮಾಪಕ ಶರಣಪ್ಪ ಗೌರಮ್ಮ ತಿಳಿಸಿದರು.

ಬೇಬಿ ಪ್ರಕೃತಿ ಚಿತ್ರದಲ್ಲಿ ಪ್ರಮುಖ ಪಾತ್ರ ಮಾಡಿದ್ದಾರೆ. ಹೊಸಬರೇ ಇರುವ ಚಿತ್ರದಲ್ಲಿ ಮಾಧವ, ಸ್ವಪ್ನಾ ಶೆಟ್ಟಿಗಾರ್, ಪಟೇಲ್ ವರುಣ್ ರಾಜ್ ಮೊದಲಾದವರಿದ್ದಾರೆ. ಅನಿಲ್ ಸಿ.ಜೆ ಸಂಗೀತ ನಿರ್ದೇಶಕರು. ❖

ಸ್ವಪ್ನಾ ಶೆಟ್ಟಿಗಾರ್, ಮಾಧವ

‘ಸಪ್ತ ಸಾಗರದ’ Side-A ಮತ್ತು Side-B!

ಸಪ್ತ ಸಾಗರದಾಚೆ ಎಲ್ಲೋ
ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ್

ಈ ‘ಪ್ಯಾನ್ ಇಂಡಿಯಾ’ ಸಮಯದಲ್ಲಿ ಸಿನಿಮಾಗಳು ಎರಡು ಭಾಗಗಳಲ್ಲಿ ಬರುವುದು ಸಾಮಾನ್ಯ. ಆದರೆ ಹಳೆಯ ಟೇಪ್‌ರೆಕಾರ್ಡರ್‌ನ ಕ್ಯಾಸೆಟ್‌ನಂತೆ ಎರಡು ಬದಿಗಳಲ್ಲಿ(ಸೈಡ್) ಸಿನಿಮಾವೊಂದು ಸಿದ್ಧವಾದರೆ! ಹೀಗೊಂದು ಪ್ರಯತ್ನವನ್ನು ನಿರ್ದೇಶಕ ಹೇಮಂತ್ ಎಂ.ರಾವ್ ಮಾಡಿದ್ದಾರೆ.

ಅವರ ಹೊಸ ಸಿನಿಮಾ, ರಕ್ಷಿತ್ ಶೆಟ್ಟಿ ನಟನೆಯ ‘ಸಪ್ತ ಸಾಗರದಾಚೆ ಎಲ್ಲೋ’ ಎರಡು ಭಾಗಗಳಲ್ಲಿ ಪ್ರತ್ಯೇಕವಾಗಿ ತೆರೆಕಾಣಲಿದೆ. ರಕ್ಷಿತ್ ಅವರ ಜನ್ಮದಿನದಂದು ಚಿತ್ರದ ಹೊಸ ಟೀಸರ್ ಬಿಡುಗಡೆಯಾಗಿದ್ದು, ಜೂನ್ 15ರಂದು ಎರಡೂ ಭಾಗಗಳ ಬಿಡುಗಡೆ ದಿನಾಂಕವನ್ನು ಘೋಷಿಸುವುದಾಗಿ ಹೇಮಂತ್ ತಿಳಿಸಿದ್ದಾರೆ. ಜುಲೈ ಅಂತ್ಯದಲ್ಲಿ ಚಿತ್ರದ ಮೊದಲ ಭಾಗ ಬಿಡುಗಡೆಯಾಗುವ ಸಾಧ್ಯತೆ ಇದೆ.

ಮೊದಲ ಟೀಸರ್‌ನಲ್ಲೇ ಕ್ಯಾಸೆಟ್ ಒಂದನ್ನು ತೋರಿಸಲಾಗಿತ್ತು. ಇದುವೇ ಚಿತ್ರಕಥೆಯನ್ನು ಸೂಕ್ಷ್ಮವಾಗಿ ಹೇಳಿದಂತಿದೆ. ಚಿತ್ರದಲ್ಲಿ ‘ಮನು’ ಎಂಬ ಪಾತ್ರವನ್ನು ರಕ್ಷಿತ್ ಶೆಟ್ಟಿ ಅವರು ನಿಭಾಯಿಸಿದ್ದು, ಅವರಿಗೆ ಎರಡು ಶೇಡ್ಸ್ ಇವೆ. 2010ರಲ್ಲಿ ನಡೆಯುವ ಕಥೆಯನ್ನು ಸಿನಿಮಾ ಹೊಂದಿದ್ದು, ನಟಿ ರುಕ್ಮಿಣಿ ವಸಂತ್ ‘ಪ್ರಿಯಾ’ ಎಂಬ ಪಾತ್ರದ ಮೂಲಕ ಹಾಗೂ ‘ಸುರಭಿ’ ಎಂಬ ಪಾತ್ರದ ಮೂಲಕ ನಟಿ ಚೈತ್ರಾ ಆಚಾರ್ ರಕ್ಷಿತ್‌ಗೆ ಜೋಡಿಯಾಗಿದ್ದಾರೆ.

ಚಿತ್ರಕ್ಕೆ ದೈಹಿಕವಾಗಿಯೂ ರಕ್ಷಿತ್ ಶೆಟ್ಟಿ ಅವರು ಬದಲಾಗಬೇಕಿದ್ದ ಕಾರಣ 137 ದಿನಗಳ ಸುದೀರ್ಘ ಚಿತ್ರೀಕರಣ ನಡೆದಿತ್ತು. ಚಿತ್ರದಲ್ಲಿ ಎಲ್ಲ ಪಾತ್ರಗಳಿಗೂ ಎರಡು ನೋಟ ಇದ್ದು, 10 ವರ್ಷದ ಹಿಂದೆ ಹಾಗೂ ಪ್ರಸ್ತುತ ಇರುವ ಪಾತ್ರ ಇದಾಗಿದೆ. ಬದಲಾವಣೆ ಹೇಗಾಗುತ್ತದೆ, ಅವರ ದೃಷ್ಟಿಕೋನ ಹೇಗಿರುತ್ತದೆ ಎನ್ನುವುದೇ ಕಥಾಹಂದರ ಎಂದಿದೆ ಚಿತ್ರತಂಡ. ಎರಡೂ ಭಾಗಗಳ ಚಿತ್ರೀಕರಣವನ್ನು ಏಕಕಾಲದಲ್ಲೇ ಪೂರ್ಣಗೊಳಿಸಿರುವ ಕಾರಣ, ಎರಡೂ ಭಾಗಗಳೂ ತಿಂಗಳುಗಳ ಅಂತದಲ್ಲೇ ಬಿಡುಗಡೆಯಾಗುವ ಸಾಧ್ಯತೆ ಇದೆ. ❖

ಗೆಲುವಿನ ನಗೆ ಬೀರಿದ ‘ಮುಸ್ತಾಫಾ’

ಡಾಲಿ ಧನಂಜಯ ‘ಡೇರ್ ಡೆವಿಲ್ ಮುಸ್ತಾಫಾ’ ಚಿತ್ರತಂಡದೊಂದಿಗೆ ವೇದಿಕೆಯಲ್ಲಿದ್ದರು. ಅದಕ್ಕೆ ಕಾರಣ ಈ ಸಿನಿಮಾದ ಯಶಸ್ಸು. ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಪಡೆದ ಸಿನಿಮಾ ಮೂರನೇ ವಾರಕ್ಕೆ ಕಾಲಿಟ್ಟಿದೆ.

ಖ್ಯಾತ ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ ಕಥೆಯಾಧಾರಿತ ‘ಡೇರ್ ಡೆವಿಲ್ ಮುಸ್ತಾಫಾ’ ರಾಜ್ಯ ಹಾಗೂ ಹೊರ ದೇಶದಲ್ಲಿ 80ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಮೂರನೇ ವಾರವೂ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ. ನ್ಯೂಜಿಲೆಂಡ್, ಆಸ್ಟ್ರೇಲಿಯಾ, ದುಬೈ, ಅಮೆರಿಕ, ಯುರೋಪ್ ದೇಶದಲ್ಲಿ ಬಿಡುಗಡೆಯಾಗಿರುವ ಸಿನಿಮಾಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ ಎಂದು ಚಿತ್ರತಂಡ ಹೇಳಿದೆ.

ಡಾಲಿ ಧನಂಜಯ ಮಾತನಾಡಿ, ‘ನಾನು ಇಲ್ಲಿ ಕುಳಿತು ಈ ಗೆಲುವಿನ ಸಂಭ್ರಮವನ್ನು ನೋಡಲು ಬಂದೆ. ಎಲ್ಲಾ ಸಿನಿಮಾಗಳಲ್ಲಿಯೂ ದುಡ್ಡು ಇರುವುದಿಲ್ಲ. ಕಷ್ಟಪಟ್ಟು ಸಿನಿಮಾ ಮಾಡಿರುತ್ತಾರೆ. ಬಿಡುಗಡೆಗೆ ಖರ್ಚು ಮಾಡಲು ಸಾಧ್ಯವಾಗುತ್ತಿರುವುದಿಲ್ಲ. ಈ ಸಿನಿಮಾ ಪೂರ್ಣಚಂದ್ರ ತೇಜಸ್ವಿ ಅವರನ್ನು ಸಂಭ್ರಮಿಸಲು ಸಿಕ್ಕ ಅವಕಾಶ. ನನ್ನ ಕಟೌಟ್ ಮುಂದೆ ಕುಣಿದಾಗಲೂ ಇಷ್ಟು ಖುಷಿ ಸಿಕ್ಕಿರಲಿಲ್ಲ. ಅಷ್ಟೊಂದು ಖುಷಿ ಪೂರ್ಣಚಂದ್ರ ತೇಜಸ್ವಿ ಅವರ ಕಟೌಟ್ ಮುಂದೆ ಕುಣಿದಾಗ ಸಿಕ್ಕಿದೆ’ ಎಂದರು.

ಈ ಸಿನಿಮಾಗೆ ಶಶಾಂಕ್ ಸೋಗಾಲ್ ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಅಭಿಮಾನಿಗಳೇ ಈ ಸಿನಿಮಾ ನಿರ್ಮಿಸಿದ್ದಾರೆ. ರಾಹುಲ್ ರಾಯ್ ಛಾಯಾಗ್ರಹಣ, ನವನೀತ್ ಶ್ಯಾಮ್ ಸಂಗೀತವಿದೆ. ಶಿಶಿರ್ ಬೈಕಾಡಿ, ಆದಿತ್ಯ ಅಶ್ರೀ, ಎಂ.ಎಸ್. ಉಮೇಶ್, ಮಂಡ್ಯ ರಮೇಶ್, ನಾಗಭೂಷಣ್ ಸೇರಿದಂತೆ ಅನೇಕ ಕಲಾವಿದರು ಚಿತ್ರದಲ್ಲಿದ್ದಾರೆ. ❖

ಕನಕ ಮಾರ್ಗ ಚಿತ್ರದಲ್ಲಿ ಕಾಗಿನೆಲೆ ಶ್ರೀಗಳು

‘ಕನಕನ ಹೆಜ್ಜೆ’ ಕಾದಂಬರಿ ಆಧಾರಿತ ‘ಕನಕ ಮಾರ್ಗ’ ಚಿತ್ರ ಬಿಡುಗಡೆಗೆ ಸಜ್ಜಾಗಿದ್ದು, ಕಾಗಿನೆಲೆ ಶ್ರೀಗಳು ಈ ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ವಿಶಾಲ್ ರಾಜ್ ನಿರ್ದೇಶನದ ಚಿತ್ರಕ್ಕೆ ಕೆಂಪೇಗೌಡ ಪಾಟೀಲ್ ಬಂಡವಾಳ ಹೂಡಿದ್ದಾರೆ. ಇತ್ತೀಚೆಗಷ್ಟೇ ಗಣ್ಯರಿಗಾಗಿ ಚಿತ್ರದ ಪ್ರದರ್ಶನ ಏರ್ಪಡಿಸಲಾಗಿತ್ತು. ಕಾಗಿನೆಲೆ ಗುರುಪೀಠದ ಶ್ರೀನಿರಂಜನಾನಂದ ಪುರಿ ಸ್ವಾಮೀಜಿ ಸೇರಿದಂತೆ ಅನೇಕ ಸ್ವಾಮೀಜಿಗಳು ಹಾಗೂ ಮಾಜಿ ಸಚಿವ ಎಚ್.ಎಂ.ರೇವಣ್ಣ ಸೇರಿದಂತೆ ಅನೇಕ ಗಣ್ಯರು ಚಿತ್ರ ವೀಕ್ಷಿಸಿದರು.

‘ಕರ್ನಾಟಕ ದಾಸರ, ಶರಣರ ನೆಲೆವೀಡು. ಕನಕದಾಸರು ತಮ್ಮ ಸಾಹಿತ್ಯದ ಮೂಲಕ ಜ್ಞಾನ ದೀವಿಗೆ ಬೆಳಗಿದವರು. ಅಂತಹ ದಾಸಶ್ರೇಷ್ಠರ ಜೀವನವನ್ನು ಆದರ್ಶವಾಗಿ ತೆಗೆದುಕೊಂಡಾಗ ನಾವು ಸನ್ಮಾರ್ಗದಲ್ಲಿ ಸಾಗಬಹುದು. ಈಗಿನ ಮಕ್ಕಳು ಕನಕದಾಸರಂತಹ ದಾರ್ಶನಿಕರ ಬಗ್ಗೆ ತಿಳಿದುಕೊಳ್ಳಬೇಕು ಎಂಬುದನ್ನು ಈ ಚಿತ್ರದ ಮೂಲಕ ತೋರಿಸಿದ್ದೇವೆ. ಹೊರಪೇಟೆ ಮಲೇಶಪ್ಪ ಅವರ ಕಾದಂಬರಿ ನನಗೆ ಚಿತ್ರ ಮಾಡಲು ಸ್ಫೂರ್ತಿಯಾಯಿತು. ಶೀಘ್ರದಲ್ಲೇ ಚಿತ್ರ ತೆರೆಗೆ ಬರಲಿದೆ’ ಎಂದರು ನಿರ್ದೇಶಕ ವಿಶಾಲ್ ರಾಜ್.

ಕಾಗಿನೆಲೆ, ಬಾಡ ಮೊದಲಾದೆಡೆ ಚಿತ್ರೀಕರಣ ಮಾಡಲಾಗಿದೆ. ಸುಚೇಂದ್ರ ಪ್ರಸಾದ್, ಮಾಸ್ಟರ್ ಸ್ಕಂದ, ಗಿರೀಶ್ ಜತ್ತಿ, ಮಾಸ್ಟರ್ ವಿಶ್ವ, ಬೇಬಿ ಸಾನ್ವಿ ಮುಂತಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ❖

ಕನಕ ಮಾರ್ಗ ಚಿತ್ರ ಪ್ರದರ್ಶನದಲ್ಲಿ ಸ್ವಾಮೀಜಿಗಳು ಹಾಗೂ ಗಣ್ಯರು

ಐದು ದಿನ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಪೊರ್‌ಜಾಯ್’ ಚಂಡಮಾರುತದ ಪರಿಣಾಮ ಮುಂದಿನ ಐದು ದಿನಗಳು ರಾಜ್ಯದ ವಿವಿಧೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯಲ್ಲಿ ಬಿರುಗಾಳಿಯು ಗಂಟೆಗೆ 40–45 ಕಿ.ಮೀ. ಇಂದ, 55 ಕಿ.ಮೀ. ವೇಗದಲ್ಲಿ ಶುಕ್ರವಾರ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಮುನ್ನೆಚ್ಚರಿಕೆ ನೀಡಿದೆ.

ಕರಾವಳಿಯ ಹಲವೆಡೆ ಹಾಗೂ ಒಳನಾಡಿನ ಕೆಲವೆಡೆ ಶುಕ್ರವಾರ ಗುಡುಗು ಸಹಿತ ಮಳೆಯಾಗಲಿದೆ. ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮಳೆಯ ತೀವ್ರತೆ ಹೆಚ್ಚಲಿದೆ. ಕೆಲವೆಡೆ ಬಿರುಗಾಳಿ ಸಹಿತ ಮಳೆ ಸುರಿಯಲಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ ಗುಡುಗು ಸಹಿತ ಮಳೆಯಾಗಲಿದೆ ಎಂದು ತಿಳಿಸಿದೆ.

ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಹಾಗೂ ತುಮಕೂರು ಜಿಲ್ಲೆಗೆ ಇದೇ ಶನಿವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. 12ರವರೆಗೂ ಏಳು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಮುಂದುವರಿಯಲಿದೆ.

ಗುಡುಗು, ಸಿಡಿಲು ಸಹಿತ ಮಳೆ

ಹುಬ್ಬಳ್ಳಿ: ವಿಜಯಪುರ, ಬಾಗಲಕೋಟೆ ಮತ್ತು ಕಾರವಾರ ಜಿಲ್ಲೆಯ ಕೆಲವೆಡೆ ಗುರುವಾರ ಮಳೆಯಾಯಿತು.

ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ ಹಾಗೂ ಸುತ್ತಲಿನ ಪ್ರದೇಶದಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಯಿತು.ಕಾರವಾರ ಮತ್ತು ಕುಮಟಾದಲ್ಲಿ ನಸುಕಿನಲ್ಲಿ ಮಳೆ ಸುರಿಯಿತು.

ಬೀದರ್ ವರದಿ: ನಗರದ ಕೆಲವು ಭಾಗಗಳಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು. ತಾಲ್ಲೂಕಿನ ಬುಧೇರಾ ಗ್ರಾಮದಲ್ಲಿ ಬಿರುಗಾಳಿಗೆ ಮನೆಯ ತಗಡಿನ ಜೊತೆಗೆ ಜೋಲಿಯಲ್ಲಿದ್ದ ಪಾಯಲ್ ಎಂಬ ಬಾಲಕಿಯೂ ಹಾರಿ ಹೋಗಿ ಗಾಯಗೊಂಡಿದ್ದಳು. ಚಿಕಿತ್ಸೆಗಾಗಿ ಹೈದರಾಬಾದ್‌ನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಂಗಳೂರು ವರದಿ: ನಗರ, ಉಳ್ಳಾಲ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಬುಧವಾರ ರಾತ್ರಿ ಹಾಗೂ ಗುರುವಾರ ಸಂಜೆ ಮಳೆಯಾಯಿತು.

₹ 2 ಲಕ್ಷ ಲಂಚ ಪಡೆದ ಪಿಡಿಒ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿಯ ಖಾತೆ ಬದಲಾವಣೆಗೆ ₹ 2 ಲಕ್ಷ ಲಂಚ ಪಡೆದ ಆರೋಪದ ಮೇಲೆ ನೆಲಮಂಗಲ ತಾಲ್ಲೂಕಿನ ಅಗಲಕುಪ್ಪೆ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಎನ್. ನರಸಿಂಹಮೂರ್ತಿ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ನೆಲಮಂಗಲದ ಸುಭಾಷನಗರದಲ್ಲಿ ಗುರುವಾರ ಬೆಳಿಗ್ಗೆ ರಸ್ತೆಯಲ್ಲೇ ನಿಂತು ಲಂಚದ ಹಣ ಪಡೆದ ಆರೋಪಿಯನ್ನು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ಗ್ರಾಮಾಂತರ ಘಟಕದ ಡಿವೈಎಸ್‌ಪಿ ರೇಣುಕಾಪ್ರಸಾದ್ ತಂಡ ಬಂಧಿಸಿತು. ಆರೋಪಿಯ ಮನೆಯ ಮೇಲೂ ದಾಳಿಮಾಡಿ, ₹ 13.50 ಲಕ್ಷ ನಗದು ಪತ್ತೆಯಾಗಿದೆ.

ಕುಟುಂಬದಲ್ಲಿ ಆಸ್ತಿ ವಿಭಾಗ ಬಳಿಕ ತಮ್ಮ ಪಾಲಿಗೆ ಬಂದಿದ್ದ ಎರಡು ಎಕರೆ ಜಮೀನಿನ ಖಾತೆಯ ವರ್ಗಾವಣೆಗೆ ಕೋರಿ ಬೆಂಗಳೂರಿನ ವಿಜಯನಗರ ನಿವಾಸಿ ಶಿವಣ್ಣ ವರ್ಷದ ಹಿಂದೆ ಅರ್ಜಿ ಸಲ್ಲಿಸಿದ್ದರು. ಆದರೆ, ಮೂರು ತಿಂಗಳ ಹಿಂದೆ ₹ 10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

‘ಲಂಚದ ಮೊತ್ತ ಕಡಿತಕ್ಕೆ ಶಿವಣ್ಣ ಚೌಕಾಸಿ ನಡೆಸಿದ್ದರು. ₹ 6 ಲಕ್ಷ ಕೊಟ್ಟರೆ ಖಾತೆ ಬದಲಾವಣೆ ಮಾಡುವುದಾಗಿ ಒಪ್ಪಿಕೊಂಡಿದ್ದ ಆರೋಪಿ, ಬಾಕಿ ಮೊತ್ತ ₹ 4 ಲಕ್ಷ ನೀಡದೇ ಖಾತೆ ಬದಲಾವಣೆ ಮಾಡುವುದಿಲ್ಲ ಎಂದಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

ಕಾರ ಹುಣ್ಣಿಮೆ ಕಾರ ಹುಣ್ಣಿಮೆ ಪ್ರಯುಕ್ತ ಹಾವೇರಿ ತಾಲ್ಲೂಕಿನ ಕರ್ಜಗಿ ಗ್ರಾಮದಲ್ಲಿ ಗುರುವಾರ ಸಹಸ್ರಾರು ಜನರ ಸಮ್ಮುಖದಲ್ಲಿ ಬಂಡಿ ಉತ್ಸವ ನಡೆಯಿತು – ಪ್ರಜಾವಾಣಿ ಚಿತ್ರ/ ಮಾಲತೇಶ ಇಚ್ಚಂಗಿ

ಖಾಸಗಿಯೇ ಆಸರೆ; ಸಿಗುವುದೇ ‘ಶಕ್ತಿ’

ಒಂದನೇ ಪುಟದಿಂದ...

ಇಂಥವರಿಗೆ ಸರ್ಕಾರ ‘ಶಕ್ತಿ’ ಯೋಜನೆಯನ್ನು ಹೇಗೆ ಜಾರಿಗೊಳಿಸುತ್ತದೆ ಎಂಬ ಪ್ರಶ್ನೆ ಗ್ರಾಮೀಣ ಭಾಗದ ಬಹುತೇಕ ಮಹಿಳೆಯರನ್ನು ಕಾಡುತ್ತಿದೆ.

ಇಲ್ಲಿ ಸರ್ಕಾರಿ ಸಾರಿಗೆ ವಿರಳ: ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಶತಮಾನದಿಂದ ಖಾಸಗಿ ಬಸ್ಸುಗಳು ಜನರಿಗೆ ಸೇವೆ ಒದಗಿಸುತ್ತಿವೆ. ಮಂಗಳೂರು ಮತ್ತು ಉಡುಪಿ ನಗರಗಳಲ್ಲಿ ಕೆಎಸ್‌ಆರ್‌ಟಿಸಿ ನಗರ ಸಾರಿಗೆ ಬಸ್‌ಗಳಿದ್ದರೂ, ಅವುಗಳ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ‘ಜೆ– ನರ್ಮ್’ ಯೋಜನೆಯಡಿ ರಾಜ್ಯದ ಇತರ ನಗರಗಳಲ್ಲಿ ಸಾರಿಗೆ ಸಂಸ್ಥೆಯವರು ಬಸ್‌ಗಳನ್ನು ಖರೀದಿಸಿದ್ದರೂ, ಈ ಎರಡು ನಗರಗಳಲ್ಲಿ ಸೇವೆ ಒದಗಿಸುತ್ತಿರುವ ಬಸ್ಸುಗಳ ಸಂಖ್ಯೆ ತೀರಾ ಕಡಿಮೆ.

ಮಂಗಳೂರು ನಗರವೊಂದರಲ್ಲೇ ಖಾಸಗಿಯವರಿಗೆ ಸೇರಿದ 328 ನಗರ ಸಾರಿಗೆ ಬಸ್ಸುಗಳು ನಿತ್ಯ ಸಾವಿರಕ್ಕೂ ಹೆಚ್ಚು ಟ್ರಿಪ್‌ಗಳನ್ನು ಮಾಡುತ್ತಿವೆ. ಆದರೆ ಸರ್ಕಾರಿ ಬಸ್ಸುಗಳ ಸಂಖ್ಯೆ ಎರಡಂಕಿ ದಾಟಿಲ್ಲ. ಜಿಲ್ಲೆಯಲ್ಲಿ 400ಕ್ಕೂ ಹೆಚ್ಚು ಖಾಸಗಿ ಸರ್ವಿಸ್ ಬಸ್‌ಗಳಿದ್ದು ಅವು ಸಾವಿರಕ್ಕೂ ಹೆಚ್ಚು ಟ್ರಿಪ್‌ಗಳನ್ನು ನಡೆಸುತ್ತಿವೆ. ರಾಷ್ಟ್ರೀಕರಣಗೊಂಡಿರುವ ರಸ್ತೆಗಳಲ್ಲಿ ಖಾಸಗಿಯವರಿಗೆ ಸೇರಿದ ಒಪ್ಪಂದದ ಸಾರಿಗೆಯ (ಕಾಂಟ್ರ್ಯಾಕ್ಟ್ ಕ್ಯಾರೇಜ್) 68 ಬಸ್‌ಗಳು ಸೇವೆ ನೀಡುತ್ತಿವೆ. ಇವುಗಳಿಗೆ ಹೋಲಿಸಿದರೆ ಸರ್ಕಾರಿ ಬಸ್‌ಗಳ ಸಂಖ್ಯೆ ಕಡಿಮೆಯೇ.

ಸರ್ಕಾರಿ ಬಸ್ಸಿಗೆ ಒತ್ತಾಯ: ‘ಶಕ್ತಿ’ ಯೋಜನೆ ಜಾರಿಯ ಘೋಷಣೆಯಾಗುತ್ತಿದ್ದಂತೆಯೇ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸರ್ಕಾರಿ ಬಸ್‌ಗಳ ಸಂಖ್ಯೆ ಹೆಚ್ಚಿಸುವಂತೆ ವಿವಿಧ ವರ್ಗದವರಿಂದ ಒತ್ತಡ ಆರಂಭವಾಗಿದೆ. ಕೊರೊನಾ ಕಾಲದಲ್ಲಿ ಸೇವೆ ಸ್ಥಗಿತಗೊಳಿಸಿದ್ದ ಕೆಲವು ಮಾರ್ಗಗಳಲ್ಲಿ ಮತ್ತೆ ಸೇವೆಯನ್ನು ಸಾರಿಗೆ ನಿಗಮವು ಆರಂಭ ಮಾಡಿಲ್ಲ. ಅಂಥ ಕಡೆಗಳಲ್ಲಿ ಪುನಃ ಸೇವೆ ಆರಂಭಿಸಬೇಕು, ಗ್ರಾಮೀಣ ಪ್ರದೇಶಕ್ಕೆ ಸೇವೆ ಹೆಚ್ಚಿಸಬೇಕು ಎಂದು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆಗಳೂ ನಡೆದಿವೆ.

> ಸರ್ಕಾರಿ ಬಸ್ಸುಗಳ ರೀತಿ ಮಹಿಳೆಯರಿಗೆ ಉಚಿತವಾಗಿ ಪ್ರಯಾಣಕ್ಕೆ ಅವಕಾಶ ಮಾಡಿಕೊಡಲು ನಾವೂ ಸಿದ್ಧರಿದ್ದೇವೆ. ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರ ಪ್ರತೀ ಮೂರು ತಿಂಗಳಿಗೊಮ್ಮೆ ಕಟ್ಟಿಸಿಕೊಳ್ಳುವ ರಸ್ತೆ ತೆರಿಗೆಯನ್ನು ಮನ್ನಾ ಮಾಡಬೇಕು. ಮೀನುಗಾರಿಕೆ ದೋಣಿಗಳಿಗೆ ಕೊಡುವಂತೆ ನಮಗೂ ಡೀಸೆಲ್‌ಗೆ ಸಬ್ಸಿಡಿ ಕೊಡಬೇಕು
>
> **ಮೀಸೆ ರಂಗಸ್ವಾಮಿ,**
> ಸಂಘಟನಾ ಕಾರ್ಯದರ್ಶಿ, ರಾಜ್ಯ ಖಾಸಗಿ ಬಸ್‌ಗಳ ಮಾಲೀಕರ ಒಕ್ಕೂಟ

ಇನ್ನೊಂದೆಡೆ, ‘ಸರ್ಕಾರಿ ಬಸ್‌ಗಳನ್ನು ಹೆಚ್ಚಿಸಿ, ಜಿಲ್ಲೆಯ ಮಹಿಳೆಯರಿಗೂ ‘ಶಕ್ತಿ ಯೋಜನೆ’ಯ ಲಾಭ ಸಿಗುವಂತೆ ಮಾಡಿ’ ಎಂದು ರಾಜಕೀಯ ಪಕ್ಷಗಳ ಮುಖಂಡರು ಒತ್ತಾಯ, ಪ್ರತಿಭಟನೆಯನ್ನೂ ಆರಂಭಿಸಿದ್ದಾರೆ.

ಖಾಸಗಿ ಮೇಲೆಯೇ ಅವಲಂಬನೆ: ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಖಾಸಗಿ ಬಸ್ ಸೇವೆಯೇ ಪರಿಣಾಮಕಾರಿಯಾಗಿದೆ. ಜಿಲ್ಲೆಯಲ್ಲಿ 450ಕ್ಕೂ ಅಧಿಕ ಖಾಸಗಿ ಬಸ್ಸುಗಳು ಸುಮಾರು 400 ಮಾರ್ಗಗಳಲ್ಲಿ ಸಂಚರಿಸುತ್ತಿವೆ. ಬಹುತೇಕ ಮಾರ್ಗಗಳಲ್ಲಿ ಸರ್ಕಾರಿ ಬಸ್ ಸೇವೆ ಲಭ್ಯವಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ 280ಕ್ಕೂ ಹೆಚ್ಚು ಖಾಸಗಿ ಬಸ್ಸುಗಳು ಕಾರ್ಯಾಚರಣೆ ಮಾಡುತ್ತಿವೆ. ಪ್ರಮುಖವಾಗಿ ಕೊಪ್ಪ ಮತ್ತು ಸುತ್ತಮುತ್ತಲ ಗ್ರಾಮೀಣ ಪ್ರದೇಶಕ್ಕೆ ಖಾಸಗಿ ಬಸ್ಸುಗಳೇ ನರನಾಡಿ. ಈ ಭಾಗದಲ್ಲಿ 130ಕ್ಕೂ ಹೆಚ್ಚು ಬಸ್ಸುಗಳು ಸಂಚರಿಸುತ್ತಿವೆ. ಚಿಕ್ಕಮಗಳೂರು ನಗರದಿಂದಲೂ 40ಕ್ಕೂ ಹೆಚ್ಚು ಬಸ್‌ಗಳು ನಿಗದಿತ ಗ್ರಾಮೀಣ ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ತರೀಕೆರೆ ಮತ್ತು ಕಡೂರು ಭಾಗದಲ್ಲೂ ಖಾಸಗಿ ಬಸ್‌ಗಳನ್ನು ಜನ ಅವಲಂಬಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್‌ಗಳು ಮುಖ್ಯ ರಸ್ತೆಯಲ್ಲಿ ಮಾತ್ರ ಸಂಚರಿಸುತ್ತಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ಮಲೆನಾಡಿನ ಗುಡ್ಡದಲ್ಲಿರುವ ಹಳ್ಳಿಗಳಿಗೆ ಖಾಸಗಿ ಬಸ್ಸುಗಳು ಸೇವೆ ಒದಗಿಸುತ್ತಿವೆ. ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದರೆ ಅವರು ಖಾಸಗಿ ಬಸ್ಸುಗಳನ್ನು ಹತ್ತುವುದಿಲ್ಲ. ಮುಖ್ಯರಸ್ತೆ ತನಕ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಸಾಗಿ, ಆ ಬಸ್ಸುಗಳು ಬಾರದ ಊರುಗಳಿಗೆ ತೆರಳಲು ಖಾಸಗಿ ಬಸ್ಸುಗಳಿಗಾಗಿ ಪ್ರಯಾಣಿಕರು ಕಾಯಬೇಕಾಗುತ್ತದೆ. ಖಾಸಗಿ ಬಸ್ಸುಗಳು ಮುಖ್ಯ ರಸ್ತೆಯಲ್ಲಿ ಖಾಲಿ–ಖಾಲಿಯಾಗಿ ಸಂಚರಿಸಿ, ಹಳ್ಳಿಗಳಿಗೆ ಮಾತ್ರ ಸೇವೆ ಒದಗಿಸುತ್ತವೆ ಎಂದು ನಿರೀಕ್ಷಿಸುವುದು ಹೇಗೆ ಎಂಬ ಜಿಜ್ಞಾಸೆಯೂ ಪ್ರಯಾಣಿಕರನ್ನು ಕಾಡುತ್ತಿದೆ.

ಕಾಡಂಚಿನಲ್ಲಿ ಖಾಸಗಿ ಬಸ್ಸುಗಳೇ ಗತಿ: ಗಡಿ ಜಿಲ್ಲೆ ಚಾಮರಾಜನಗರದ ಹನೂರು ತಾಲ್ಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಖಾಸಗಿ ಬಸ್ಸುಗಳೇ ಹೆಚ್ಚು. ಗ್ರಾಮೀಣ ಪ್ರದೇಶದವರು ನಗರ, ಪಟ್ಟಣಗಳಿಗೆ ಬರಲು ಖಾಸಗಿ ಸಾರಿಗೆಯನ್ನೇ ಅವಲಂಬಿಸಿದ್ದಾರೆ. ‘ಹೆಚ್ಚುವರಿ ಬಸ್‌ಗಳನ್ನು ಕೊಡಿ’ ಎಂದು ಕೆಎಸ್‌ಆರ್‌ಟಿಸಿಗೆ ಹಲವು ವರ್ಷಗಳಿಂದ ಮನವಿ ಮಾಡುತ್ತಲೇ ಇದ್ದರೂ ಪ್ರಯೋಜನವಾಗಿಲ್ಲ.

ಮಂಡ್ಯ, ಮೈಸೂರು ಜಿಲ್ಲೆಗಳಲ್ಲೂ ಬಹುತೇಕರು ಖಾಸಗಿ ಬಸ್ಸುಗಳನ್ನೇ ಆಶ್ರಯಿಸಿದ್ದಾರೆ. ತಾಲ್ಲೂಕು, ಹೋಬಳಿ ಕೇಂದ್ರಗಳಿಂದ ತುಂಬಾ ದೂರದಲ್ಲಿರುವ ಊರುಗಳಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳು ದಿನಕ್ಕೆ ಒಂದೆರಡು ಬಾರಿಯಷ್ಟೇ ಸಂಚರಿಸುತ್ತಿವೆ. ಮಂಡ್ಯ ಜಿಲ್ಲೆಯ ನಾಗಮಂಗಲ, ಮಳವಳ್ಳಿ, ಶ್ರೀರಂಗಪಟ್ಟಣ, ಹಲಗೂರು ಭಾಗದಲ್ಲಿ ಖಾಸಗಿ ಬಸ್ಸುಗಳು ಹೆಚ್ಚಾಗಿ ಓಡಾಡುತ್ತಿದ್ದು, ಕೆಎಸ್‌ಆರ್‌ಟಿಸಿ ಬಸ್ಸುಗಳ ಕೊರತೆ ಇದೆ. ಮಂಡ್ಯದಿಂದ 65 ಖಾಸಗಿ ಬಸ್ಸುಗಳು ಮಳವಳ್ಳಿ, ನಾಗಮಂಗಲ ಮಾರ್ಗದಲ್ಲಿ ಸಂಚರಿಸುತ್ತಿವೆ.

ಖಾಸಗಿ ಸವಾರಿಯನ್ನೇ ನೆಚ್ಚಿಕೊಂಡಿರುವ ಜನ: ದಾವಣಗೆರೆ ಜಿಲ್ಲೆಯ ಚನ್ನಗಿರಿ, ಜಗಳೂರು, ಹೊನ್ನಾಳಿ, ಮಲೇಬೆನ್ನೂರು, ಸಂತೇಬೆನ್ನೂರು ಭಾಗಗಳಲ್ಲಿ ಹೆಚ್ಚಾಗಿ ಖಾಸಗಿ ಬಸ್ಸುಗಳು ಸಂಚರಿಸುತ್ತವೆ. ಶಿವಮೊಗ್ಗ, ಚಿತ್ರದುರ್ಗ, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳಿಗೆ ದಾವಣಗೆರೆ ಜನರು ಖಾಸಗಿ ಬಸ್ಸುಗಳನ್ನೇ ಹೆಚ್ಚಾಗಿ ಅವಲಂಬಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಿಂದ 646 ಖಾಸಗಿ ಬಸ್ಸುಗಳು ಪಕ್ಕದ ದಾವಣಗೆರೆ, ಚಿತ್ರದುರ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾವೇರಿ, ಬಳ್ಳಾರಿ ಜಿಲ್ಲೆಗಳ ನಡುವೆ ಸಂಚರಿಸುತ್ತಿದ್ದು, ಜನರು ತಮ್ಮ ಸಂಚಾರಕ್ಕೆ ಇವುಗಳನ್ನೇ ನೆಚ್ಚಿಕೊಂಡಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ 300ಕ್ಕೂ ಹೆಚ್ಚು ಖಾಸಗಿ ಬಸ್ಸುಗಳು ನಿತ್ಯ ಸಂಚರಿಸುತ್ತಿವೆ. ಪ್ರಮುಖವಾಗಿ ತುಮಕೂರು– ಕುಣಿಗಲ್, ತುಮಕೂರು– ಮಧುಗಿರಿ– ಪಾವಗಡ ಮಾರ್ಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ಬಸ್ಸುಗಳ ಓಡಾಟವಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 100ಕ್ಕೂ ಹೆಚ್ಚು ಖಾಸಗಿ ಬಸ್ಸುಗಳ ಸೇವೆ ಇದೆ. ಇವುಗಳು ಹೆಚ್ಚಾಗಿ ಬೆಂಗಳೂರಿಗೆ ಸಂಚರಿಸುತ್ತಿವೆ. ಬಾಗೇಪಲ್ಲಿ, ಶಿಡ್ಲಘಟ್ಟ ಮತ್ತು ಚಿಂತಾಮಣಿ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ಖಾಸಗಿ ಬಸ್ಸುಗಳ ಅವಲಂಬನೆಯೇ ಹೆಚ್ಚಿದೆ. ರಾಮನಗರ ಜಿಲ್ಲೆಯಲ್ಲಿ ಸುಮಾರು 200 ಖಾಸಗಿ ಬಸ್ಸುಗಳು ಸಂಚರಿಸುತ್ತಿವೆ. ರಾಮನಗರ, ಕನಕಪುರ, ಮಾಗಡಿ, ಚನ್ನಪಟ್ಟಣ, ಬೆಂಗಳೂರು ಹಾಗೂ ಗ್ರಾಮೀಣ ಭಾಗಗಳಲ್ಲಿ ಇವುಗಳು ಕಾರ್ಯಾಚರಣೆ ನಡೆಸುತ್ತಿವೆ.

‘ಗ್ರಾಮೀಣ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಬಸ್ಸುಗಳು ಸಂಚರಿಸಬೇಕು.ಹೊಸ ಮಾರ್ಗಗಳಲ್ಲೂ ಬಸ್ ಸಂಚಾರ ಆರಂಭವಾಗಬೇಕು. ಮಹಿಳಾ ಉದ್ಯೋಗಿಗಳು, ಕಾರ್ಮಿಕರು ಕೆಲಸಕ್ಕೆ ಹೋಗುವ ಮತ್ತು ಮರಳುವ ಸಮಯಕ್ಕೆ ಬಸ್ ಸೌಲಭ್ಯ ದೊರೆಯಬೇಕು. ಆಗ ಯೋಜನೆಯಿಂದ ಮಹಿಳೆಯರಿಗೆ ಅನುಕೂಲವಾಗುತ್ತದೆ’ ಎಂಬುದು ಮಹಿಳೆಯರ ಅಭಿಪ್ರಾಯ.

ಶವ ಸಾಗಿಸುತ್ತಿದ್ದ ಮೂವರ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಚಾಲಕನ ನಿಯಂತ್ರಣ ತಪ್ಪಿದ ಆಂಬುಲೆನ್ಸ್ ಒಂದು ಹೆದ್ದಾರಿ ಬದಿಯಲ್ಲಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದರಿಂದ ಅದರಲ್ಲಿದ್ದ ಮೂವರು ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿ– 48ರ ಮಲ್ಲಾಪುರ ಸಮೀಪ ಗುರುವಾರ ಮುಂಜಾನೆ ಘಟನೆ ನಡೆದಿದ್ದು, ಮೃತರು ಗುಜರಾತ್‌ನಿಂದ ತಮಿಳುನಾಡಿಗೆ ಆಂಬುಲೆನ್ಸ್‌ನಲ್ಲಿ ಶವ ಕೊಂಡೊಯ್ಯುತ್ತಿದ್ದರು.

ತಮಿಳುನಾಡಿನ ತಿರುನೆಲ್ವೇಲಿಯ ಕನಕಮಣಿ (72), ಆಕಾಶ್ (17) ಹಾಗೂ ಗುಜರಾತ್‌ನ ಆಂಬುಲೆನ್ಸ್ ಚಾಲಕ ಮನೀಶ್ ಮೃತರು. ಗಂಭೀರವಾಗಿ ಗಾಯಗೊಂಡಿರುವ ಜ್ಞಾನಶೇಖರ್ (51) ಹಾಗೂ ಮೌಳಿರಾಜನ್ (45) ಅವರನ್ನು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ತಿರುನೆಲ್ವೇಲಿಯ ಜ್ಞಾನಶೇಖರ್ ಅವರ ಕುಟುಂಬ ಗುಜರಾತ್‌ನ ಅಹಮದಾಬಾದ್‌ನಲ್ಲಿ ನೆಲೆಸಿದ್ದು, ಇವರ ತಾತ ಮುತ್ತಯ್ಯ (ತಾಯಿಯ ತಂದೆ) ಮೃತಪಟ್ಟಿದ್ದರು. ಸ್ವಂತ ಊರಲ್ಲಿ ಅಂತ್ಯಸಂಸ್ಕಾರಕ್ಕಾಗಿ, ತಾಯಿ ಕನಕಮಣಿ ಹಾಗೂ ಪುತ್ರ ಆಕಾಶ್ ಅವರೊಂದಿಗೆ ಜ್ಞಾನಶೇಖರ್ ಆಂಬುಲೆನ್ಸ್‌ನಲ್ಲಿ ಹೊರಟಿದ್ದರು.

‘ವಿರಾಮವಿಲ್ಲದೇ ಸತತ ವಾಹನ ಚಾಲನೆ ಮಾಡಿದ್ದರಿಂದ ಆಂಬುಲೆನ್ಸ್ ಚಾಲಕ ನಿದ್ದೆಯ ಮಂಪರಿಗೆ ಜಾರಿರುವ ಸಾಧ್ಯತೆ ಇದೆ. ರಸ್ತೆ ಬದಿಯ ಲಾರಿಗೆ ಡಿಕ್ಕಿ ಹೊಡೆದಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ಮಾಹಿತಿ ನೀಡಿದ್ದಾರೆ.

ಮೀಸಲಾತಿ: ನೇಮಕಾತಿಗೆ ಗ್ರಹಣ

ಒಂದನೇ ಪುಟದಿಂದ...

ಆದರೆ, ಈ ಹಂಚಿಕೆಗೆ ಅನುಗುಣವಾಗಿ ಸರ್ಕಾರ ಹೊಸ ರೋಸ್ಟರ್ ಮಾಡಿಲ್ಲ. ಅಲ್ಲದೆ, ಪರಿಷ್ಕೃತ ಮೀಸಲಾತಿ ಹಂಚಿಕೆಯನ್ನು ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಗಳು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ.

ಮರು ಪ್ರಸ್ತಾವನೆಗೆ ಕೆಪಿಎಸ್‌ಸಿ ಸೂಚನೆ: ಹಿಂದಿನ ಸರ್ಕಾರ ಹೊಸತಾಗಿ ಮೀಸಲಾತಿ ಹಂಚಿಕೆ ಮಾಡಿ ಆದೇಶ ಹೊರಡಿಸುವುದಕ್ಕೆ ಕೆಲವು ದಿನಗಳ ಮೊದಲು ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಮ್ಮಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಂತೆ ಕೋರಿ ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಿದ್ದವು. ಆದರೆ, ನೇಮಕಾತಿ ಅಧಿಸೂಚನೆ ಹೊರಬಿದ್ದಿರಲಿಲ್ಲ.

ಚುನಾವಣೆ ನೀತಿಸಂಹಿತೆಯಿಂದಾಗಿ ಸ್ಥಗಿತಗೊಂಡಿದ್ದ ನೇಮಕಾತಿ ಪ್ರಕ್ರಿಯೆಗಳಿಗೆ ಚಾಲನೆ ನೀಡಲು ಕೆಪಿಎಸ್‌ಸಿ ಮುಂದಾಗಿದೆ. ರಾಜ್ಯ ಸರ್ಕಾರದ (ಬಿಜೆಪಿ ಅವಧಿಯ) ಹೊಸ ಮೀಸಲಾತಿ ನಿಯಮದಂತೆ ಹುದ್ದೆಗಳನ್ನು ವರ್ಗೀಕರಿಸಿ, ಮರು ಪ್ರಸ್ತಾವನೆ ಸಲ್ಲಿಸುವಂತೆ ಏಪ್ರಿಲ್ 24ರಂದೇ ವಿವಿಧ ಇಲಾಖೆಗಳಿಗೆ ಕೆಪಿಎಸ್‌ಸಿ ಪತ್ರ ಬರೆದಿದೆ. ಅಲ್ಲದೆ, ಮೇ 31ರಂದು ನೆನಪೋಲೆಯನ್ನೂ ಬರೆದಿದೆ.

ಏತನ್ಮಧ್ಯೆ, ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ರದ್ದುಪಡಿಸಿದ್ದ ಮೀಸಲಾತಿಯನ್ನು ಮರುನೀಡುವ ವಾಗ್ದಾನವನ್ನು ಆ ಪಕ್ಷ ಚುನಾವಣೆ ಪ್ರಣಾಳಿಕೆಯಲ್ಲಿಯೇ ನೀಡಿತ್ತು. ಸರ್ಕಾರ ಬಂದ ಬಳಿಕ, ಅನೇಕ ಬಾರಿ ಮಾತನಾಡಿರುವ ಸಿದ್ದರಾಮಯ್ಯ, ಮೀಸಲಾತಿ ಗೊಂದಲ ಬಗೆಹರಿಸುವುದಾಗಿ ಹೇಳಿದ್ದಾರೆ. ಹೀಗಾಗಿ, ಇಲಾಖೆಗಳಲ್ಲಿಯೇ ಈ ಬಗ್ಗೆ ಸ್ಪಷ್ಟತೆ ಮೂಡಿಲ್ಲ.

ಕೆಇಎ– ಹಳೆ ಮೀಸಲಾತಿ ಪಾಲನೆ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಚುನಾವಣೆ ಘೋಷಣೆಗೆ ಕೆಲವೇ ದಿನಗಳ ಮೊದಲು (ಮಾರ್ಚ್ 24) ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿ, ಆಹಾರ ನಿಗಮ, ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಎಂಎಸ್‌ಐಎಲ್‌ನಲ್ಲಿ ಖಾಲಿ ಇರುವ ವಿವಿಧ ವೃಂದಗಳ 700ಕ್ಕೂ ಹೆಚ್ಚು ಹುದ್ದೆಗಳ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದೆ. ಆದರೆ, ಅರ್ಜಿ ಆಹ್ವಾನಿಸಿಲ್ಲ. ಹೀಗಾಗಿ, ಮೀಸಲಾತಿ ಗೊಂದಲ ಇಲ್ಲದೆ (ಹಳೆ ಮೀಸಲಾತಿಯಲ್ಲಿ) ನೇಮಕಾತಿ ನಡೆಯಲಿದೆ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಅವರು ತಿಳಿಸಿದರು.

MAXVALUE™ CREDITS AND INVESTMENTS LTD.
Transforming Life...

ನೋಂದಾಯಿತ ಕಛೇರಿ/ಮುಖ್ಯ ಕಛೇರಿ: ತ್ರಿಶೂರ್ CIN: U65921KL1995PLC009581
ಬೆಂಗಳೂರು ಪ್ರಾದೇಶಿಕ ಕಚೇರಿ: ನಂ. 16/ಎ, 9ನೇ ಮುಖ್ಯ ರಸ್ತೆ, 3ನೇ ಬ್ಲಾಕ್ ಜಯನಗರ ಬೆಂಗಳೂರು – 560011.
Tele: 08068415566 Email ID : blrro.goldloans@maxvaluecredits.com

ಹರಾಜು ಪ್ರಕಟಣೆ

ಕಂಪನಿಯ ವಿವಿಧ ಕೆಳಕಂಡ ಶಾಖೆಗಳಲ್ಲಿ ಗಿರವಿ ಇಟ್ಟಿರುವ ಚಿನ್ನದ ಆಭರಣಗಳನ್ನು ವಿಮೋಚನೆಗೆ ನಿಗದಿ ಪಡಿಸಿದ ಅವಧಿ ಮೀರಿರುವುದರಿಂದ ಮತ್ತು ಪುನರಾವರ್ತಿತ ಜ್ಞಾಪನೆಗಳು ಮತ್ತು ಸೂಚನೆಗಳ ಹೊರತಾಗಿಯೂ ಚಿನ್ನದ ಆಭರಣಗಳನ್ನು ಇದುವರೆಗೆ ಹಿಂಪಡೆದುಕೊಳ್ಳದಿರುವ ಬಗ್ಗೆ ಸಂಬಂಧಿಸಿದ ಎಲ್ಲರ ಮಾಹಿತಿಗಾಗಿ ಈ ಮೂಲಕ ಸೂಚನೆ ನೀಡಲಾಗಿದೆ. ಈ ಎಲ್ಲಾ ಆಭರಣಗಳನ್ನು ಕೆಳಗೆ ನೀಡಲಾದ ವೇಳಾಪಟ್ಟಿಯ ಪ್ರಕಾರ ಹರಾಜು ಮಾಡಲಾಗುತ್ತದೆ. ಬಿಡ್‌ದಾರರು 500000/– ರ ಹಣದ ಠೇವಣಿಯನ್ನು ಪಾವತಿಸಲು ಮತ್ತು ಫೋಟೋ ID ಕಾರ್ಡ್ ಮತ್ತು ಪ್ಯಾನ್ ಕಾರ್ಡ್ ಅನ್ನು ಸಲ್ಲಿಸಲು ವಿನಂತಿಸಲಾಗಿದೆ. ಯಶಸ್ವಿ ಬಿಡ್ಡಾ ದಾರರು VAT ಸೇರಿದಂತೆ ಎಲ್ಲಾ ಪಾವತಿಗಳನ್ನು RTGS/NEFT ಮೂಲಕ ಮಾತ್ರ ಮಾಡಲು ವಿನಂತಿಸಲಾಗಿದೆ

BANGALORE : AUCTION CENTRE: BANGALORE JAYANAGAR, DATE & TIME:14/06/2023, 3:00 PM BRANCH JAYANAGAR 3RD BLOCK 10026420000159,165,167,171,177, 10026560000016, Traders Loan- 10026320000012, 015,019,028,029. **BRANCH:** MARSUR 10036400000109, 112,10036420000283, 290,317,324. **BRANCH:** CHUNCHAGATTA 10046420000248. **BRANCH: BANASWADI:** 10056420000436. **BRANCH:** AKSHAYANAGAR 10326420000170.

BANGALORE RURAL : AUCTION CENTRE: BANGALORE JAYANAGAR, DATE & TIME:14/06/2023, 3:00 PM **BRANCH:** DEVANAHALLI 10076420000415, 436, 442, 467. **BRANCH:** DODDABALLAPURA 10366420000053.

CHICKBALLAPUR: AUCTION CENTRE:CHICKBALLAPURA, **DATE & TIME:** 15/06/2023, 11:00 AM **BRANCH:** CHICKBALLAPURA 10066420000711. **BRANCH:** GAURIBIDANUR 10086420000730,739,752,788,793,817,872. **BRANCH:** BAGEPALLI COURT RD 10266400000105, 112, 10266420000087,093,094, 101,116,129,134,142,159,175,177, 10266490000009. **BRANCH:** BAGEPALLI MARKET RD 10276400000104, 10276420000211, 220,247,250,263,265,304,305,307,308,309,311,10276530000343. BRANCH: SIDLAGHATTA 10376420000089. **BRANCH:** MULBAGAL 10486400000007, 10486420000221, 255 .

TUMKUR: AUCTION CENTRE TUMKUR, **DATE & TIME:**15/06/2023, 3:00PM **BRANCH:** TUMKUR KYATHASANDRA 10170030000122, 10176400000104, 10176420000454, 464,484,503,528,539,586,598,602,603,10177130000017, Traders Loan - 10176320000005,007,010. BRANCH: TUMKUR SADASHIVANAGAR 10256420000493, 502,528,529, 548,555,562,563,564,565,566,567,568,573,579,580, 581,582,583,584,585,587,588,589,590,603,629,640,648, 10257070000024. **BRANCH:** SIRA10306420000135,158,10306560000055,063.Traders Loan-10306320000002,003. **BRANCH:** PAVAGADA 10316420000183,191,245,272,295,296,308,323,328,331,372, Traders Loan 10316320000001, 002. **BRANCH:**TIPTUR Traders loan-10356320000001,002,003. **BRANCH:** KUNIGAL 10426420000056, 059,063,074, 078,106,124, 10427210000011, Traders Loan-10426320000002.

HAVERI AUCTION CENTRE: RANEBENNUR,DATE & TIME:16/06/2023, 11:00AM BRANCH: RANEBENNUR 10116400000332,334,346,371,10116420000976,10116420001001,1060,1107,1121. **BRANCH:** HAVERI 10226400000119, 128, 179, 10226420000598, 604,685,750.

DAVANGERE AUCTION CENTRE: DAVANGERE,DATE & TIME: 16/06/2023, 3:00PM **BRANCH:** HARIHAR 10216400000167,196, 10216420000759,790, 818, 872.

BELAGAVI AUCTION CENTRE: DHARWAD, DATE & TIME:17/06/2023, 11:00AM **BRANCH:** BAILAHONGAL 10416420000252,285,359,387. **BRANCH:** KITTUR10446420000326,337,354,511,526, 537, 562, 580.

DHARWAD AUCTION CENTRE: DHARWAD, DATE & TIME:17/06/2023, 3:00PM **BRANCH:** DHARWAD, 10206420000965,973,979,10206420001020,1024,1039,1047,1054,1062,1064,1119,1120,1121,1124,1131,1141, 1151,1182,1200,1232,1251,1264,1266,1270,1273.BRANCH : HUBLI 10286420000235, 236, 280,374,379. BRANCH: KESHWPUR HUBLI 10346420000162, 169, 10346680000224.

DAKSHINA KANNADA AUCTION CENTRE: MANGALORE, DATE & TIME: 19/06/2023, 11:00AM **BRANCH:** MANGALORE 10096420000341.

UDUPI AUCTION CENTRE: MANGALORE, DATE & TIME: 19/06/2023, 3:00PM **BRANCH :** UDUPI 10186420000394.

HASSAN AUCTION CENTRE:CHANNARAYAPATNA, DATE &TIME:20/06/2023, 11:00AM **BRANCH:** HOLENARASIPURA 10106420002343,2344,2472,2502,2607,2608,2613,2668,2692,2729. **BRANCH:** CHANNARAYAPATNA 10196420001638,1715,1779,1813,1921, 10196560000089,107,108, 176, 241,242. **BRANCH:** BELUR 10406400000006 Traders Loan- 10406320000005.

MANDYA AUCTION CENTRE: MANDYA, DATE & TIME:20/06/2023, 3:00PM **BRANCH:** MANDYA HOSAHALLI,10156420000386,406,440,445. Traders Loan-10156320000001. **BRANCH :** MANDYA ASHOK NAGAR10166420000522,543,559,564, 578,585,10167070000001,Traders Loan- 10166320000005.

MYSORE AUCTION CENTRE: MYSORE, DATE & TIME: 21/06/2023,11:00AM **BRANCH :** T NARASIPURA 10126420000784,789,790,793,810,831,841,862,871,879,884,885,886,890,899,907,908,912,913,915,916, 10127210000034,070.BRANCH :N R MOHALLA 10136420000745,747,778,788, 10136560000133,147. **BRANCH:** NANJANGUD 10146420000716,724,735,742,763,784,805,825,827,830, 854,857,858,859,861,862, 866,871,891,896. **BRANCH :** MYSORE K R MOHALLA 10236420000269,270.

CHAMARAJANAGARA AUCTION CENTRE: MYSORE, DATE & TIME: 21/06/2023,3:00 PM **BRANCH:** CHAMARAJANAGAR 10396420000098,103,110,117,10396490000041,10396680000014, 10397130000019

ಯಾವುದೇ ಕಾರಣಕ್ಕೂ ಮೇಲೆ ತಿಳಿಸಿದ ದಿನಾಂಕದಂದು ಹರಾಜು ನಡೆಸದಿದ್ದಲ್ಲಿ ನಂತರ ನಡೆಸಲಾಗುವುದು ಮತ್ತು ಪರಿಷ್ಕ ರಿಸಿದ ದಿನಾಂಕ ಹಾಗೂ ಸ್ಥಳದ ವಿವರಗಳನ್ನು ಕಂಪೆನಿಯ ವೆಬ್ ಸೈಟ್ ಮತ್ತು ಹರಾಜು ಕೇಂದ್ರ ಗಳಲ್ಲಿ ಪ್ರ ಕಟಿಸಲಾಗುವುದು

Sd/- Maxvalue Credits and Investments Ltd Bangalore

‘ಜಾತಿಗಣತಿ ವರದಿ ಕೇಳಿದರೆ ಸಲ್ಲಿಸುತ್ತೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಜಾತಿವಾರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿಗಣತಿ) ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಿದ್ಧ ಇದ್ದೇವೆ’ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿದರು.



ಜಯಪ್ರಕಾಶ್ ಹೆಗ್ಡೆ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬುಧವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ವರದಿಯನ್ನು ಸ್ವೀಕರಿಸುವುದಾಗಿ ಮುಖ್ಯಮಂತ್ರಿ ಹೇಳಿರುವುದು ಖುಷಿ ನೀಡಿದೆ’ ಎಂದರು.

‘ಆಯೋಗದಿಂದ ಸಿದ್ಧಪಡಿಸಿರುವ ವರದಿ ಜಾತಿಗಣತಿ ಅಲ್ಲ. ಅದು ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿ. ಈ ವರದಿ ಸಿದ್ಧವಾಗಿದೆ’ ಎಂದರು.

‘ವರದಿಯ ದತ್ತಾಂಶಗಳಲ್ಲಿ ಯಾವುದೇ ಲೋಪ ಇಲ್ಲ. ಆಯೋಗದ ಸದಸ್ಯ ಕಾರ್ಯದರ್ಶಿ ಸಹಿ ಇಲ್ಲ ಎಂಬ ಆಕ್ಷೇಪ ಇತ್ತು. ಆದರೆ, ಈಗ ವರದಿ ಸಲ್ಲಿಕೆಗೆ ಯಾವುದೇ ಸಮಸ್ಯೆ ಇಲ್ಲ’ ಎಂದರು.

ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಿಸಿದ ಕುರಿತು ಕೇಳಿದ ಪ್ರಶ್ನೆಗೆ, ಈ ವಿಚಾರ ಕೋರ್ಟ್‌ನಲ್ಲಿ ಇರುವುದರಿಂದ ಪ್ರತಿಕ್ರಿಯಿಸಲು ನಿರಾಕರಿಸಿದರು.

ಹಳೆಯ ವಿದ್ಯುತ್ ಬಿಲ್ ಬಾಕಿ ಪಾವತಿಗೆ ಸೆ.30ರವರೆಗೆ ಅವಕಾಶ

ಆಗಸ್ಟ್‌ನಿಂದ ‘ಜ್ಯೋತಿ’, ‘ಲಕ್ಷ್ಮಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಜ್ಯೋತಿಗೆ ಆ.1 ರಂದು ಕಲಬುರಗಿಯಲ್ಲಿ, ಗೃಹಲಕ್ಷ್ಮಿಗೆ ಆ.17 ಅಥವಾ 18ರಂದು ಬೆಳಗಾವಿಯಲ್ಲಿ ಚಾಲನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಯೋಜನೆಗಳ ಅನುಷ್ಠಾನ ಕುರಿತು ಉನ್ನತಮಟ್ಟದ ಸಭೆ ನಡೆಸಿದ ನಂತರ ಅವರು ಮಾತನಾಡಿದರು.

‘ಗ್ಯಾರಂಟಿ’ ಯೋಜನೆಗಳ ಜಾರಿಗೆ ಷರತ್ತುಗಳನ್ನು ವಿಧಿಸಲಾಗುತ್ತಿದೆ ಎಂಬ ಆರೋಪದಲ್ಲಿ ಸತ್ಯಾಂಶವಿಲ್ಲ. ಗೃಹಜ್ಯೋತಿಯನ್ನು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ಎಲ್ಲರಿಗೂ ಅನ್ವಯಿಸಲಾಗುವುದು.

ಮುಖ್ಯಾಂಶಗಳು

- ವಿದ್ಯುತ್ ಕಂಪನಿಯ ಎಲ್ಲ ಕಚೇರಿಗಳಲ್ಲೂ ಸಹಾಯವಾಣಿ
- ಅರ್ಜಿ ಸಲ್ಲಿಕೆಗೆ ನಾಡ ಕಚೇರಿಯಲ್ಲೂ ಕೌಂಟರ್
- ಬಾಡಿಗೆ ಮನೆವಾಸಿಗಳು ವಾಸದ ದೃಢೀಕರಣ ನೀಡಿದರೆ ಸಾಕು

ಅನಗತ್ಯ ದಾಖಲೆ ಸಂಗ್ರಹಕ್ಕೆ ಕಡಿವಾಣ ಹಾಕುವಂತೆ ಸೂಚಿಸಲಾಗಿದೆ. ತಾವು ನೆಲೆಸಿರುವ ಮನೆಯ ದೃಢೀಕರಣದ ಯಾವುದಾದರೂ ದಾಖಲೆ ನೀಡಿದರೂ ಸಾಕು. ಗ್ರಾಹಕರ ಸಹಾಯಕ್ಕಾಗಿ ಕೆಪಿಟಿಸಿಎಲ್‌ನ ಎಲ್ಲ ಕಚೇರಿಗಳಲ್ಲಿ ಸಹಾಯವಾಣಿ ಕೇಂದ್ರ ಸ್ಥಾಪಿಸಲಾಗುವುದು. ಹಳೆಯ ವಿದ್ಯುತ್ ಬಿಲ್ ಪಾವತಿಗೆ ಸೆ.30ರವರೆಗೆ ಅವಕಾಶ ನೀಡಲಾಗುವುದು ಎಂದರು.

ಘೋಷಿರುವ ಗ್ಯಾರಂಟಿ ಯೋಜನೆಗಳಿಗಾಗಿ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಅತ್ಯಂತ ಸರಳಗೊಳಿಸಲಾಗಿದೆ. ಪ್ರತಿ ನಾಡ ಕಚೇರಿಯಲ್ಲೂ ಪ್ರತ್ಯೇಕ ಕೌಂಟರ್ ತೆರೆಯಲಾಗುವುದು. ಸಕಾರಣವಿಲ್ಲದೆ ಯಾವುದೇ ಅರ್ಜಿ ತಿರಸ್ಕರಿಸಬಾರದು. ತಿರಸ್ಕರಿಸಿದ ಪ್ರತಿ ಅರ್ಜಿಗೂ ಸೂಕ್ತ ವಿವರಣೆ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಸೀಮಿತ ಅವಧಿಯಲ್ಲಿ ಅಧಿಕ ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗುವ ಕಾರಣ ಅಪಾರ ಪ್ರಮಾಣದ ದತ್ತಾಂಶ ಸಲ್ಲಿಕೆಗೆ ಅನುಗುಣವಾಗಿ ಸೇವಾ ಸಿಂಧು ಪೋರ್ಟಲ್ ಸಾಮರ್ಥ್ಯ ಹೆಚ್ಚಿಸುವಂತೆ ಇ-ಆಡಳಿತ ಇಲಾಖೆಯ ಅಧಿಕಾರಿಗಳು ನಿಗಾವಹಿಸಲಿದ್ದಾರೆ ಎಂದು ಹೇಳಿದರು.

ಪತಿ ತೆರಿಗೆ ಪಾವತಿಸಿದರೆ ಪತ್ನಿಗಿಲ್ಲ ‘ಗೃಹಲಕ್ಷ್ಮಿ’

ಪ್ರಸ್ತುತ ರೂಪಿಸಿರುವ 'ಗೃಹಲಕ್ಷ್ಮಿ' ನಿಯಮಗಳಲ್ಲಿ ಫಲಾನುಭವಿಯ ಪತಿ ಅಥವಾ ಪುತ್ರ ತೆರಿಗೆ ಪಾವತಿದಾರರಾಗಿದ್ದರೆ ಮಹಿಳೆಗೆ ಯೋಜನೆಯ ಲಾಭ ಸಿಗುವುದಿಲ್ಲ. ರಾಜ್ಯದಲ್ಲಿ ಇಂತಹ 10 ಲಕ್ಷ ಮಹಿಳೆಯರು ಇದ್ದಾರೆ. ಅವರನ್ನೂ ಯೋಜನೆ ವ್ಯಾಪ್ತಿಗೆ ತರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿನಂತಿಸಲಾಗಿದೆ. ಮುಂದಿನ ದಿನಗಳಲ್ಲಿ ಯೋಜನೆ ವಿಸ್ತರಿಸುವ ಭರವಸೆ ನೀಡಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಸುದ್ದಿ 2 ನಿಮಿಷ

ಉಪಸಭಾಧ್ಯಕ್ಷ ಸ್ಥಾನಕ್ಕೆ ಒಪ್ಪಿಗೆ: ಪುಟ್ಟರಂಗಶೆಟ್ಟಿ

ಚಾಮರಾಜನಗರ: ‘ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ವಿಧಾನಸಭೆ ಉಪ ಸಭಾಧ್ಯಕ್ಷ ಸ್ಥಾನವನ್ನು ಒಪ್ಪಿಕೊಂಡಿದ್ದೇನೆ’ ಎಂದು ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದಲ್ಲಿ ಗುರುವಾರ ಮಾಧ್ಯಮ ಸಂವಾದದಲ್ಲಿ ಮಾತನಾಡಿ, ‘ಆರಂಭದಲ್ಲಿ ಹುದ್ದೆ ಬೇಡವೆಂದಿದ್ದು ನಿಜ. ಯಾವುದಾದರೂ ನಿಗಮದ ಅಧ್ಯಕ್ಷ ಸ್ಥಾನ ಕೊಡಿ ಎಂದು ಮನವಿ ಮಾಡಿದ್ದೆ. ಒಂದು ವರ್ಷ ಉಪಸಭಾಧ್ಯಕ್ಷ ಸ್ಥಾನ ನಿರ್ವಹಿಸಿದ ಬಳಿಕ ಸಚಿವ ಸ್ಥಾನ ನೀಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ’ ಎಂದರು.

‘ವರಿಷ್ಠರ ಸೂಚನೆ ಪಾಲಿಸಲೇಬೇಕಾಗುತ್ತದೆ. ಉಪ ಸಭಾಧ್ಯಕ್ಷನಾದರೆ ಕ್ಷೇತ್ರದ ಜೊತೆ ಸಂಪರ್ಕ ಕಡಿಮೆಯಾಗುತ್ತದೆ ಎಂಬ ಕಾರಣಕ್ಕೆ ಬೇಡವೆಂದಿದ್ದೆ' ಎಂದರು.

ಜೋಶಿ ಬದಲಾವಣೆಗೆ ಕೂಗು

ಹುಬ್ಬಳ್ಳಿ: 2024ರ ಚುನಾವಣೆಯಲ್ಲಿ ಧಾರವಾಡ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಹೊಸಬರಿಗೆ ಅವಕಾಶ ನೀಡಬೇಕೆಂದು ವೀರಶೈವ ಲಿಂಗಾಯತ ಸಂಘಟನೆಯ ಟ್ವಿಟ್ಟರ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ 2004ರಿಂದ ಸಂಸದರಾಗಿದ್ದಾರೆ. ಅವರ ಬದಲು ಹೊಸಬರಿಗೆ ಬಿಜೆಪಿ ಅವಕಾಶ ನೀಡಬೇಕೆಂದು ಕೋರಲಾಗಿದೆ.

‘ಧಾರವಾಡ ಲೋಕಸಭಾ ಕ್ಷೇತ್ರಕ್ಕೆ ಹೊಸ ಮುಖದ ಅವಶ್ಯಕತೆ ಇದೆ. ಪ್ರಲ್ಹಾದ ಜೋಶಿ ಅವರು 2004ರಿಂದ 2023ರವರೆಗೆ ಧಾರವಾಡ ಕ್ಷೇತ್ರ ಆಳಿದ್ದಾರೆ. ಆದ್ದರಿಂದ ಬರುವಂತಹ 2024ರ ಲೋಕಸಭಾ ಚುನಾವಣೆಗೆ ಬಿಜೆಪಿಯಿಂದ ಹೊಸಬರಿಗೆ ಅವಕಾಶ ಮಾಡಿಕೊಡಬೇಕು’ ಎಂದು ಪೋಸ್ಟ್ ಮಾಡಲಾಗಿದೆ. ಅಮಿತ್ ಶಾ, ನರೇಂದ್ರ ಮೋದಿ, ಬಿಜೆಪಿ4ಇಂಡಿಯಾ, ಬಿಜೆಪಿ4ಕರ್ನಾಟಕ ಟ್ವಿಟ್ಟರ್ ಖಾತೆಗೆ ಟ್ಯಾಗ್ ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಮುಳ್ಳಿನ ಪೊದೆಯಲ್ಲಿ ನವಜಾತ ಹೆಣ್ಣು ಶಿಶು ಪತ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಪ್ರಗತಿ ನಗರ ಗ್ರಾಮದಲ್ಲಿ ಗುರುವಾರ ಬೆಳಗಿನ ಜಾವ ಹೆಣ್ಣು ನವಜಾತ ಶಿಶು ಮುಳ್ಳಿನ ಗಿಡಗಳ ಪೊದೆಯಲ್ಲಿ ಪತ್ತೆಯಾಗಿದೆ.

ಶಿಶು ಅಳುತ್ತಿರುವುದನ್ನು ಗಮನಿಸಿದ ಸ್ಥಳೀಯರು ರಕ್ಷಿಸಿ ಆರೈಕೆ ಮಾಡಿ ಬಳಿಕ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಶಿಶುವಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

‘ಮಗುವನ್ನು ಸುಪರ್ದಿಗೆ ಪಡೆಯಲಾಗಿದ್ದು, ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು. ಪೊದೆಯಲ್ಲಿ ಯಾರು ಎಸೆದು ಹೋಗಿದ್ದಾರೆ ಎನ್ನುವುದು ಪೊಲೀಸರ ತನಿಖೆ ಬಳಿಕ ಗೊತ್ತಾಗಲಿದೆ’ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರೋಹಿಣಿ ಕೊಟಗಾರ ‘ಪ್ರಜಾವಾಣಿ’ಗೆ ತಿಳಿಸಿದರು.

ಇಬ್ಬರ ಬಲಿ ಪಡೆದ ಕಾಡಾನೆ ಸೆರೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ವಾರದಲ್ಲಿ ಇಬ್ಬರನ್ನು ಬಲಿ ಪಡೆದ 45 ವರ್ಷದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಗುರುವಾರ ತಾಲ್ಲೂಕಿನ ತೆಂಗಿನಕಲ್ಲು ಕಾಡು ಪ್ರದೇಶದಲ್ಲಿ ಸತತ ಐದು ತಾಸುಗಳ ಕಾರ್ಯಾಚರಣೆ ನಂತರ ಸೆರೆ ಹಿಡಿದಿದ್ದಾರೆ.

ಮತ್ತಿಗೋಡು ಆನೆ ಶಿಬಿರದಿಂದ ಕರೆತರಲಾಗಿದ್ದ ಪಳಗಿದ ಆನೆಗಳಾದ ಭೀಮ, ಅರ್ಜುನ, ಮಹೇಂದ್ರ, ಶ್ರೀಕಂಠ ಹಾಗೂ ಅಭಿಮನ್ಯು ನೆರವಿನಿಂದ ಸಿಬ್ಬಂದಿ ಮೂರು ದಿನಗಳಿಂದ ಆನೆ ಸೆರೆಗೆ ಸತತ ಪ್ರಯತ್ನ ನಡೆಸಿದ್ದರು.

ಗುರುವಾರ ಬೆಳಿಗ್ಗೆ 6ಕ್ಕೆ ಪತ್ತೆಯಾದ ಆನೆಯನ್ನು ಅರಿವಳಿಕೆ ನೀಡಿ ಸೆರೆ ಹಿಡಿಯಲಾಯಿತು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಮೇ 30ರಂದು ಕನಕಪುರ ತಾಲ್ಲೂಕಿನ ಕಬ್ಬಾಳು ಗ್ರಾಮದ ರೈತ ಕಾಳಯ್ಯ ಹಾಗೂ ಜೂನ್ 3ರಂದು ಚನ್ನಪಟ್ಟಣ ತಾಲ್ಲೂಕಿನ ವಿರುಪಸಂದ್ರದಲ್ಲಿ ಮಾವಿನ ತೋಟದ ಕಾವಲುಗಾರ ವೀರಭದ್ರಯ್ಯ ಎಂಬುವರು ಕಾಡಾನೆ ದಾಳಿಯಲ್ಲಿ ಮೃತಪಟ್ಟಿದ್ದರು.

ಚನ್ನಪಟ್ಟಣ ತಾಲ್ಲೂಕಿನ ತೆಂಗಿನಕಲ್ಲು ಅರಣ್ಯ ಇಲಾಖೆ ಸಿಬ್ಬಂದಿ ಗುರುವಾರ ಸೆರೆ ಹಿಡಿದ ಕಾಡಾನೆ (ಮಧ್ಯ ಇರುವುದು)

ನ್ಯಾ.ಜಿ.ನರೇಂದರ್ ನೇಮಕ

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದರ್ ಅವರನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಕಾರಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಈ ಕುರಿತಂತೆ ರಾಜ್ಯ ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿ ಗುರುವಾರ ಅಧಿಸೂಚನೆ ಹೊರಡಿಸಿದ್ದಾರೆ.

ಜಿ.ನರೇಂದರ್

ಶೇ 99ರಷ್ಟು ಗ್ರಾಮಗಳಿಗೆ ಸ್ಮಶಾನ ಭೂಮಿ: ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಜನವಸತಿಯಿರುವ ಒಟ್ಟು 28,281 ಗ್ರಾಮಗಳ ಪೈಕಿ ಈವರೆಗೂ 28,276 ಗ್ರಾಮಗಳಿಗೆ ಸ್ಮಶಾನ ಭೂಮಿ ಒದಗಿಸಲಾಗಿದ್ದು, ಒಟ್ಟಾರೆ ಶೇ 99.8ರಷ್ಟು ಗ್ರಾಮಗಳಿಗೆ ಸ್ಮಶಾನ ಭೂಮಿ ಒದಗಿಸಲಾಗಿದೆ’ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ತಿಳಿಸಿದೆ.

ಈ ಸಂಬಂಧ ಮೊಹಮ್ಮದ್ ಇಕ್ಬಾಲ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸರ್ಕಾರಿ ವಕೀಲರು ಈ ಕುರಿತಂತೆ ನ್ಯಾಯಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿದರು.

‘ಒತ್ತುವರಿ ಸೇರಿದಂತೆ ಭವಿಷ್ಯದಲ್ಲಿ ಉದ್ಭವಿಸುವ ಯಾವುದೇ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸ್ಮಶಾನ ಭೂಮಿಯನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಸರ್ಕಾರ ಕ್ರಮ ಕೈಗೊಂಡಿದೆ. ರಾಜ್ಯದಾದ್ಯಂತ 16 ಜಿಲ್ಲೆಗಳ 606 ಗ್ರಾಮಗಳ ಜಮೀನನ್ನು ಶೀಘ್ರವೇ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗುವುದು. ಈ ಸಂಬಂಧ ಕಂದಾಯ ದಾಖಲೆಗಳ ನೋಂದಣಿ ಕಾರ್ಯಕ್ಕೂ ಚಾಲನೆ ನೀಡಲಾಗಿದೆ‘ ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

‘ರಾಜ್ಯದಲ್ಲಿ ಒಟ್ಟು 30,781 ಗ್ರಾಮಗಳಲ್ಲಿ 2,500 ಬೇಚರಕ್ (ಜನವಸತಿ ಇಲ್ಲದ) ಗ್ರಾಮಗಳಿವೆ. ಜನವಸತಿಯ 28,281 ಗ್ರಾಮಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಒಟ್ಟು 28,276 ಗ್ರಾಮಗಳಿಗೆ ಸ್ಮಶಾನ ಭೂಮಿ ಒದಗಿಸಲಾಗಿದೆ. ಉಡುಪಿ ಜಿಲ್ಲೆಯ ಎರಡು ಮತ್ತು ರಾಯಚೂರು ಜಿಲ್ಲೆಯಲ್ಲಿನ ಮೂರು ಗ್ರಾಮಗಳಲ್ಲಿ ಸ್ಮಶಾನ ಭೂಮಿಗಾಗಿ ಖಾಸಗಿಯವರ ಭೂಮಿ ಗುರುತಿಸಲಾಗಿದೆ. ಸರ್ಕಾರಿ ಜಮೀನು ಲಭ್ಯವಿಲ್ಲದಿರುವುದೇ ಇದಕ್ಕೆ ಕಾರಣ’ ಎಂದು ಪತ್ರದಲ್ಲಿ ವಿವರಿಸಲಾಗಿದೆ.

‘ಸರ್ಕಾರ ಮತ್ತು ಅರ್ಜಿದಾರರು ಕೋರ್ಟ್‌ಗೆ ನೀಡಿರುವ ಮಾಹಿತಿಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಆದ್ದರಿಂದ, ಸಂಬಂಧಿಸಿದ ಜಿಲ್ಲಾಧಿಕಾರಿಗಳು ಇದೇ 22ರಂದು ವಿಚಾರಣೆಗೆ ಖುದ್ದು ಹಾಜರಾಗಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಕಗ್ಗಂಟಾದ ವಿರೋಧ ಪಕ್ಷದ ನಾಯಕನ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷದ ನಾಯಕನ ಆಯ್ಕೆ ವಿಚಾರದಲ್ಲಿ ಬಿಜೆಪಿಯಲ್ಲಿ ಕಗ್ಗಂಟು ಮುಂದುವರಿದಿದೆ. ಈ ವಿಚಾರದಲ್ಲಿ ಶಾಸಕರ ವೈಯಕ್ತಿಕ ಅಭಿಪ್ರಾಯ ಸಂಗ್ರಹಿಸಿರುವ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಅದನ್ನು ಪಕ್ಷದ ವರಿಷ್ಠರ ಗಮನಕ್ಕೆ ತರಲು ನಿರ್ಧರಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಗುರುವಾರ ನಡೆದ ಆತ್ಮಾವಲೋಕನ ಸಭೆಯ ಬಳಿಕ ಅರುಣ್ ಸಿಂಗ್ ಎಲ್ಲ ಶಾಸಕರನ್ನೂ ಪ್ರತ್ಯೇಕವಾಗಿ ಭೇಟಿಮಾಡಿ ಅಭಿಪ್ರಾಯ ಆಲಿಸಿದ್ದಾರೆ. ವಿರೋಧ ಪಕ್ಷದ ನಾಯಕರನ್ನಾಗಿ ಯಾರನ್ನು ಆಯ್ಕೆ ಮಾಡಿದರೆ ಪಕ್ಷಕ್ಕೆ ಅನುಕೂಲ ಆಗಬಹುದು ಎಂಬ ಪ್ರಶ್ನೆಯನ್ನು ಮುಂದಿಟ್ಟು ಉತ್ತರ ಪಡೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಿಕಟಪೂರ್ವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ, ವಿ. ಸುನಿಲ್ ಕುಮಾರ್ ಸೇರಿದಂತೆ ಕೆಲವರ ಹೆಸರುಗಳನ್ನು ಶಾಸಕರು ಸಲಹೆ ಮಾಡಿದ್ದಾರೆ. ವಿಧಾನಸಭೆ ಮತ್ತು ವಿಧಾನ ಪರಿಷತ್‌ಗಳಲ್ಲಿ ವಿರೋಧ ಪಕ್ಷದ ನಾಯಕ ಹಾಗೂ ಉಪ ನಾಯಕನ ಆಯ್ಕೆ ಸಂದರ್ಭದಲ್ಲಿ ಎರಡೂ ಕಡೆ ತಲಾ ಒಂದು ಸ್ಥಾನವನ್ನು ಕಟು ಹಿಂದುತ್ವ ಪ್ರತಿಪಾದಕರಿಗೆ ನೀಡಬೇಕು ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ. ಜುಲೈ 3ರಿಂದ ವಿಧಾನಸಭೆ ಅಧಿವೇಶನ ಆರಂಭವಾಗಲಿದೆ. ಅದಕ್ಕೂ ಮೊದಲು ಬಿಜೆಪಿ ವರಿಷ್ಠರೇ ವಿರೋಧ ಪಕ್ಷದ ನಾಯಕನ ಆಯ್ಕೆಯನ್ನು ಪ್ರಕಟಿಸಲಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಕುರಿತಂತೆ ಗುರುವಾರ ಯಾವುದೇ ಚರ್ಚೆ ನಡೆದಿಲ್ಲ ಎಂದು ಮೂಲಗಳು ಹೇಳಿವೆ.

ಪ್ರಮುಖರ ಸಮಿತಿ ಸಭೆ ರದ್ದು: ಆತ್ಮಾವಲೋಕನ ಸಭೆ ಬಳಿಕ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿ ಸಭೆಯೂ ನಿಗದಿಯಾಗಿತ್ತು. ಆದರೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ ಕೆಲವರು ಬಾರದ ಕಾರಣ ಈ ಸಭೆಯನ್ನು ರದ್ದುಗೊಳಿಸಲಾಯಿತು.

ಆರ್.ಹಿತೇಂದ್ರ ಕಾನೂನು, ಸುವ್ಯವಸ್ಥೆ ಎಡಿಜಿಪಿ

ಬೆಂಗಳೂರು: ಐಪಿಎಸ್ ಅಧಿಕಾರಿ ಆರ್.ಹಿತೇಂದ್ರ ಅವರನ್ನು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ಈವರೆಗೆ ಆ ಹುದ್ದೆ ನಿಭಾಯಿಸುತ್ತಿದ್ದ ಅಲೋಕ್ ಕುಮಾರ್ ಅವರನ್ನು ಬೆಂಗಳೂರು ಸಂಚಾರಿ ಮತ್ತು ರಸ್ತೆ ಸುರಕ್ಷತೆ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಉಮೇಶ್ ಅವರನ್ನು ಅಪರಾಧ ಮತ್ತು ತಾಂತ್ರಿಕ ಸೇವೆಗಳು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಸೌಮೇಂದು ಮುಖರ್ಜಿಯವರನ್ನು ಆಡಳಿತ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಕಿಯೋನಿಕ್ಸ್‌ಗೆ ಗಿರೀಶ್: ಐಎಫ್‌ಎಸ್ ಅಧಿಕಾರಿ ಗಿರೀಶ್ ಎಚ್.ಸಿ ಅವರನ್ನು ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ನೇಮಿಸಲಾಗಿದ್ದು, ಆ ಹುದ್ದೆಯಲ್ಲಿದ್ದ ಐಪಿಎಸ್ ಅಧಿಕಾರಿ ರವಿ ಚನ್ನಣ್ಣವರ್ ಅವರನ್ನು ವರ್ಗಾಯಿಸಲಾಗಿದೆ.

ಕೆಕೆಆರ್‌ಡಿಬಿ: ಅಕ್ರಮ ತನಿಖೆಗೆ ತಂಡ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಹಾಗೂ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸಲು ಸರ್ಕಾರ ಐವರು ಅಧಿಕಾರಿಗಳ ತಂಡವನ್ನು ರಚಿಸಿ ಗುರುವಾರ ಆದೇಶಿಸಿದೆ.

ಯೋಜನಾ ಇಲಾಖೆಯ ಎಡಿಬಿ ವಿಭಾಗದ ನಿರ್ದೇಶಕ ಡಿ. ಚಂದ್ರಶೇಖರಯ್ಯ, ಉಪನಿರ್ದೇಶಕಿ ಸಿ.ಆರ್. ಶಿವರೂಪ, ಸಹಾಯಕ ನಿರ್ದೇಶಕ ಗಿರೀಶ್ ಬಿ.ಜಿ, ಶಾಖಾಧಿಕಾರಿ ದಿಲೀಪ್ ಕುಮಾರ್, ದತ್ತ ನಮೂದಕಿ, ವರಲಕ್ಷ್ಮಿ ಆರ್. ಅವರು ತನಿಖಾ ತಂಡದಲ್ಲಿದ್ದಾರೆ.

ವಿದ್ಯುತ್, ಅದಿರು ಅಕ್ರಮ ತನಿಖೆ ವರದಿ ಬಹಿರಂಗಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ಇಲಾಖೆಯಲ್ಲಿ ನಡೆದ ಸೋಲಾರ್ ವಿದ್ಯುತ್ ಖರೀದಿ ಅಕ್ರಮ ಹಾಗೂ ಅಕ್ರಮ ಅದಿರು ಸಾಗಣೆ ಕುರಿತು ತನಿಖೆಗೆ ನೇಮಿಸಿದ್ದ ಸದನ ಸಮಿತಿಯ ವರದಿಗಳನ್ನು ರಾಜ್ಯ ಸರ್ಕಾರ ಬಹಿರಂಗಪಡಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದರು.



ಕುಮಾರಸ್ವಾಮಿ

ಪಕ್ಷದ ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿವಿಧ ಜಿಲ್ಲೆಗಳ ಮುಖಂಡರ ಜತೆಗಿನ ಆತ್ಮಾವಲೋಕನ ಸಭೆಯ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

ಮುಕ್ತ ಮಾರುಕಟ್ಟೆಯಲ್ಲಿ ₹ 2.30 ರೂಪಾಯಿಗೆ ಲಭ್ಯವಿದ್ದ ಸೋಲಾರ್ ವಿದ್ಯುತ್ತನ್ನು ₹ 9.50 ರೂಪಾಯಿ ಕೊಟ್ಟು ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಅಂದು ವಿಧಾನಸಭಾಧ್ಯಕ್ಷರಾಗಿದ್ದ ಕಾಗೋಡು ತಿಮ್ಮಪ್ಪ ಅವರು ಸದನ ಸಮಿತಿ ರಚಿಸಿದ್ದರು. ಇದುವರೆಗೂ ವರದಿ ಏನಾಯಿತು ಎಂಬ ಮಾಹಿತಿ ಇಲ್ಲ. ಈಗ ಕುರಿ ಕಾಯೋಕೆ ತೋಳ ತಂದ ಹಾಗಾಯ್ತು. ಸರ್ಕಾರಕ್ಕೆ ತಾಕತ್ತು ಇದ್ದರೆ ಒಪ್ಪಂದವನ್ನು ರದ್ದು ಮಾಡಲಿ ಎಂದು ಸವಾಲು ಹಾಕಿದರು.

2013-18ರಲ್ಲಿ ಎಚ್.ಕೆ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಅಕ್ರಮ ಅದಿರು ಸಾಗಣೆ ಕುರಿತಂತೆ ಸದನ ಸಮಿತಿ ರಚನೆ ಮಾಡಲಾಗಿತ್ತು. 35 ಕೋಟಿ ಟನ್ ಅದಿರು ಅಕ್ರಮವಾಗಿ ರಫ್ತಾಗಿದೆ ಎನ್ನುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅದಿರಿನ ಮೌಲ್ಯ ₹ 1.43 ಲಕ್ಷ ಕೋಟಿ. ತಿಂದವರಿಂದ ವಸೂಲಿ ಮಾಡಿದರೆ ’ಗ್ಯಾರಂಟಿ‘ಗಳಿಗೆ ಹಣ ಸಿಗುತ್ತದೆ. ಬಿಜೆಪಿಯನ್ನು ’40 ಪರ್ಸೆಂಟ್ ಪಕ್ಷ‘ ಎಂದವರು ಈ ವರದಿ ಬಹಿರಂಗಪಡಿಸಲಿ ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ವರ್ಗಾವಣೆ ದಂಧೆ ಶುರುವಾಗಿದೆ. ಪ್ರತಿ ಹುದ್ದೆಗೂ ದರ ನಿಗದಿ ಮಾಡಲಾಗಿದೆ. ಹಿಂದಿನ ಬಿಜೆಪಿ ಸರ್ಕಾರವನ್ನು ಟೀಕೆ ಮಾಡುತ್ತಿದ್ದ ಕಾಂಗ್ರೆಸ್ ನಾಯಕರು ಪೇಸಿಎಂ ಅಭಿಯಾನ ಹಮ್ಮಿಕೊಂಡಿದ್ದರು. ಈಗ ಅದಕ್ಕಿಂತ ಜಾಸ್ತಿ ದರ ನಿಗದಿಯಾಗುತ್ತಿದೆ. ಇದನ್ನು ಎಷ್ಟು ಪರ್ಸೆಂಟ್ ಸರ್ಕಾರ ಎಂದು ಕರೆಯಬೇಕು ಎಂದು ಪ್ರಶ್ನಿಸಿದರು.

ಹೊಸ ಪಿಂಚಣಿ ರದ್ದತಿಗೆ ಡಿಸಿಎಂ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಹೊಸ ಪಿಂಚಣಿ ನೀತಿಯನ್ನು (ಎನ್‌ಪಿಎಸ್) ರದ್ದುಪಡಿಸಿ, ಹಳೆಯ ಪಿಂಚಣಿ ಯೋಜನೆಯನ್ನೇ (ಒಪಿಎಸ್) ಪುನರ್ ಜಾರಿಗೆ ತರಲು ಕ್ರಮ ಕೈಗೊಳ್ಳುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದ ನಿಯೋಗ ಗುರುವಾರ ಸಲ್ಲಿಸಿದ ಮನವಿ ಸ್ವೀಕರಿಸಿದ ನಂತರ ಅವರು ಮಾತನಾಡಿದರು.

ಎನ್‌ಪಿಎಸ್ ರದ್ದತಿ ಕುರಿತು ಪರಿಶೀಲಿಸಲು ಹಿಂದಿನ ಸರ್ಕಾರ ಸಮಿತಿ ರಚಿಸಿತ್ತು. ಶೀಘ್ರ ಸಮಿತಿಯ ವರದಿ ಅವಲೋಕಿಸಬೇಕು. ಇಲ್ಲವೇ, ಸರ್ಕಾರವೇ ಸ್ವಯಂ ನಿರ್ಧಾರ ತೆಗೆದುಕೊಳ್ಳಬೇಕು. ಇದರಿಂದ 2006ರ ನಂತರ ನೇಮಕವಾದ ಎಲ್ಲ ಸರ್ಕಾರಿ ನೌಕರರು ಹಾಗೂ ಅವರ ಅವಲಂಬಿತ ಕುಟುಂಬಗಳಿಗೆ ಅನುಕೂಲವಾಗುತ್ತದೆ ಎಂದು ನೌಕರರು ಮನವಿ ಮಾಡಿದರು.

7ನೇ ವೇತನ ಆಯೋಗದ ವರದಿಯನ್ನು ತ್ವರಿತವಾಗಿ ಪಡೆಯಬೇಕು. ಸರ್ಕಾರಿ ನೌಕರರ ವೇತನ ಮತ್ತು ಭತ್ಯೆ ಪರಿಷ್ಕರಿಸಬೇಕು. ಸರ್ಕಾರಿ ನೌಕರರ ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಡೇರಿಸಬೇಕು ಎಂದು ಕೋರಿದರು.

ಸಂಘದ ಪದಾಧಿಕಾರಿಗಳಾದ ಎಂ.ವಿ.ರುದ್ರಪ್ಪ, ಎಸ್. ಬಸವರಾಜು, ಡಾ. ನೆಲ್ಕುದ್ರಿ ಸದಾನಂದಪ್ಪ, ಮೋಹನ್ ಕುಮಾರ್, ಶ್ರೀ ಹರ್ಷ, ಎನ್. ಮಾಲತೇಶ್, ಹರಿರಾಮಕೃಷ್ಣ, ಚಿಕ್ಕದೇವೇಗೌಡ, ಚೇತನ್‌ಕುಮಾರ್ ಇದ್ದರು.

ಕೃಷಿ ಸಿದ್ಧತೆ ಬಲು ಜೋರು

ಮುಂಗಾರು ಹಂಗಾಮಿನ ಬಿತ್ತನೆ ಶುರುವಾಗಲು ಕ್ಷಣಗಣನೆ ಆರಂಭವಾಗಿದ್ದು, ಕಲಬುರಗಿ ಹೊರವಲಯದ ತಾಜಸುಲ್ತಾನಪುರದ ರೈಲ್ವೆ ಗೂಡ್ಸ್ ಶೆಡ್‌ನಲ್ಲಿ ಯೂರಿಯಾ ರಸಗೊಬ್ಬರದ ಚೀಲಗಳನ್ನು ಕಾರ್ಮಿಕರು ಗುರುವಾರ ರೈಲಿನ ಬೋಗಿಗಳಿಂದ ಲಾರಿಗೆ ತುಂಬಿಸಿದರು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ವಾಂತಿ–ಭೇದಿಗೆ ಬಾಲಕಿ ಸಾವು: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕುಷ್ಟಗಿ ತಾಲ್ಲೂಕಿನ ಬಿಜಕಲ್‌ನಲ್ಲಿ ವಾಂತಿ–ಭೇದಿಯಿಂದ ಬಾಲಕಿ ನಿರ್ಮಲಾ ಈರಪ್ಪ ಬೆಳಗಲ್ (9) ಗುರುವಾರ ಮೃತಪಟ್ಟಿದ್ದಾಳೆ. ಮೂರು ದಿನಗಳ ಅವಧಿಯಲ್ಲೇ ಜಿಲ್ಲೆಯಲ್ಲಿ ವಾಂತಿ–ಭೇದಿಯಿಂದ ಇಬ್ಬರು ಮಕ್ಕಳು ಮೃತಪಟ್ಟಂತಾಗಿದೆ. ಮೊದಲು ಕನಕಗಿರಿ ತಾಲ್ಲೂಕಿನ ಬಸರಿಹಾಳದಲ್ಲಿ 9 ತಿಂಗಳ ಮಗು ಮೃತಪಟ್ಟಿತ್ತು.

ನಿರ್ಮಲಾ

ನಿರ್ಮಲಾಗೆ ಬುಧವಾರ ರಾತ್ರಿ ವಾಂತಿ–ಭೇದಿ ಕಾಣಿಸಿಕೊಂಡಿತ್ತು. ರಾತ್ರಿ ಆಸ್ಪತ್ರೆಗೆ ಕರೆದೊಯ್ಯಲು ಸಾಧ್ಯವಾಗಿರಲಿಲ್ಲ. ಗುರುವಾರ ಬೆಳಿಗ್ಗೆ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಕರೆತರುವ ಮೊದಲೇ ಮೃತಪಟ್ಟಿದ್ದಳು ಎಂದು ವೈದ್ಯರು ತಿಳಿಸಿದ್ದಾರೆ.

ಕಲುಷಿತ ನೀರು ಸೇವನೆಯಿಂದಲೇ ವಾಂತಿ–ಭೇದಿ ಉಂಟಾಗಿದೆ ಎಂದು ಮೂಲಗಳು ತಿಳಿಸಿವೆ.

‘ಬಿಜಕಲ್‌ನಲ್ಲಿ ಸಾರ್ವಜನಿಕ ನಲ್ಲಿಯ ಕಲುಷಿತ ನೀರು ಸೇವನೆ ಮಾಡಿದ ಕಾರಣಕ್ಕಾಗಿ ಮಗು ಮೃತಪಟ್ಟಿದೆ’ ಎಂದು ಸಂಬಂಧಿ ಹನುಮವ್ವ ಧರ್ಮಣ್ಣವರ್ ಕುಷ್ಟಗಿ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಎಫ್‌ಐಆರ್ ಕೂಡ ದಾಖಲಾಗಿದೆ. ಆದರೆ, ಯಾರನ್ನೂ ಆರೋಪಿಯನ್ನಾಗಿ ಮಾಡಿಲ್ಲ.

ಘಟನೆ ಕುರಿತು ಪ್ರತಿಕ್ರಿಯಿಸಿದ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಆನಂದ ಗೋಟೂರು, ‘ಮನೆಯವರು ಹೇಳಿರುವ ಪ್ರಕಾರ ಬಾಲಕಿಗೆ ವಾಂತಿ–ಭೇದಿ ಉಂಟಾಗಿತ್ತು. ಸಕಾಲದಲ್ಲಿ ಆಸ್ಪತ್ರೆಗೆ ಕರೆತಂದಿರಲಿಲ್ಲ. ಈ ಬಗ್ಗೆ ಪರಿಶೀಲಿಸಲಾಗುವುದು’ ಎಂದರು.

ಪಾಲಕರು ಗುಳೆ: ಬಾಲಕಿ 4ನೇ ತರಗತಿಯಲ್ಲಿ ಓದುತ್ತಿದ್ದು, ಸಂಬಂಧಿಕರ ಮನೆಯಲ್ಲಿ ವಾಸಿಸುತ್ತಿದ್ದಳು. ಆಕೆಯ ಪಾಲಕರು ದುಡಿಮೆ ಅರಸಿ ಬೆಂಗಳೂರಿಗೆ ಗುಳೆ ಹೋಗಿದ್ದಾರೆ ಎಂದು ಗ್ರಾಮದ ಮನೋಹರ ಬಡಿಗೇರ ತಿಳಿಸಿದರು.

ಕೊಪ್ಪಳ ತಾಲ್ಲೂಕಿನ ಶಹಾಪುರ, ಕುಕನೂರು, ಕನಕಗಿರಿ ತಾಲ್ಲೂಕಿನ ಬಸರಿಹಾಳ ಮತ್ತು ಯಲಬುರ್ಗಾ ತಾಲ್ಲೂಕಿನ ಗೆದ್ದಿಗೇರಿ ತಾಂಡಾದಲ್ಲಿ ಗುರುವಾರ ಹೊಸದಾಗಿ ವಾಂತಿ–ಭೇದಿ ಪ್ರಕರಣ ಕಂಡುಬಂದಿದೆ. ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ಮತ್ತೆ ಕೆಲವರು ಚಿಕಿತ್ಸೆ ಪಡೆದು ಮನೆಗೆ ಹೋಗಿದ್ದಾರೆ.

26 ವರ್ಷದ ಬಳಿಕ ರಾಜೀನಾಮೆ ಅಂಗೀಕಾರ!

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನ್ ಹಾಗೂ ಭಾರತೀಯ ಸಮಾಜ ವಿಜ್ಞಾನ ಅಕಾಡೆಮಿ (ಐಎಸ್‌ಎಸ್‌ಎ) ಅಧ್ಯಕ್ಷರೂ ಆಗಿರುವ ಪ್ರೊ.ಮುಜಾಫರ್ ಅಸ್ಸಾದಿ ಅವರು ಗೋವಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದ ರಾಜೀನಾಮೆಯ ಅನುಮೋದನೆ ಪತ್ರ 26 ವರ್ಷಗಳ ಬಳಿಕ ಅವರ ಕೈಸೇರಿದೆ.

ಆ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಮೂರು ವರ್ಷ ಕೆಲಸ ಮಾಡಿದ್ದ ಅವರು, ಮೈಸೂರು ವಿಶ್ವವಿದ್ಯಾಲಯದಲ್ಲಿ ಉದ್ಯೋಗ ಸಿಕ್ಕಿದ್ದರಿಂದ ರಾಜೀನಾಮೆ ಸಲ್ಲಿಸಿದ್ದರು.

‘ಗೋವಾ ವಿಶ್ವವಿದ್ಯಾಲಯಕ್ಕೆ 1997ರಲ್ಲಿ ರಾಜೀನಾಮೆ ಸಲ್ಲಿಸಿದ್ದೆ. ನಿಮ್ಮ ರಾಜೀನಾಮೆಯನ್ನು ಶಿಕ್ಷಣ ಮಂಡಳಿ ಸಭೆಯಲ್ಲಿ ಅನುಮೋದಿಸಲಾಗಿದೆ. ರಾಜೀನಾಮೆ ಸಲ್ಲಿಸಿದ ದಿನದಿಂದಲೇ ಅನ್ವಯವಾಗಲಿದೆ ಎಂದು ಜೂನ್ 5ರಂದು ಪತ್ರ ಬಂದಿದೆ. ವಿಶ್ವವಿದ್ಯಾಲಯಗಳ ವ್ಯವಸ್ಥೆಯು ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದಕ್ಕೆ ಈ ಪ್ರಸಂಗ ಕನ್ನಡಿ ಹಿಡಿದಿದೆ. ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ಕೆಲಸಕ್ಕೆ ಸೇರಲು ಯಾವುದೇ ತೊಂದರೆಯಾಗಿರಲಿಲ್ಲ. ಅಲ್ಲಿಗೆ ರಾಜೀನಾಮೆ ಸಲ್ಲಿಸಿದ್ದ ಪತ್ರವನ್ನು ಇಲ್ಲಿಗೆ ನೀಡಿದ್ದೆ’ ಎಂದು ಅಸ್ಸಾದಿ ತಿಳಿಸಿದರು.

ಒಂದೆಡೆ ಹೂಳೆತ್ತಲು ಸರ್ಕಾರ ಹೆಣಗಾಟ, ಇನ್ನೊಂದೆಡೆ ಹಿನ್ನೀರಿನ ಮಡಿಲಿಗೆ ಮಣ್ಣು, ಕಟ್ಟಡ ತ್ಯಾಜ್ಯ

ಆಲಮಟ್ಟಿ ಹಿನ್ನೀರು ಪ್ರದೇಶಕ್ಕೆ ರಾಶಿ, ರಾಶಿ ತ್ಯಾಜ್ಯ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಬಾಗಲಕೋಟೆಯಲ್ಲಿ ಆಲಮಟ್ಟಿ ಹಿನ್ನೀರು ನಿಲ್ಲುವ ಸ್ಥಳದಲ್ಲಿ ನೂರಾರು ಲಾರಿ ಮಣ್ಣು, ತ್ಯಾಜ್ಯವನ್ನು ತಂದು ಸುರಿಯಲಾಗುತ್ತಿದೆ. ಇದರಿಂದ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹ ಪ್ರಮಾಣದ ಕಡಿಮೆಯಾಗಲಿದೆ.

ಆಲಮಟ್ಟಿ ಜಲಾಶಯವು ಪೂರ್ಣ ಪ್ರಮಾಣದಲ್ಲಿ (519.60 ಮೀಟರ್) ಭರ್ತಿಯಾದಾಗ 123 ಟಿಎಂಸಿ ಅಡಿ ನೀರು ಸಂಗ್ರಹವಾಗುತ್ತದೆ. ಈಗ 507.88 ಮೀಟರ್ ಇದ್ದು, 20.97 ಟಿಎಂಸಿ ಅಡಿ ನೀರಿದೆ. ಅದರಲ್ಲಿ ಡೆಡ್ ಸ್ಟೋರೇಜ್ ಹೊರತುಪಡಿಸಿ 3.35 ಬಳಸಬಹುದಾಗಿದೆ.

ಆಲಮಟ್ಟಿ ಜಲಾಶಯದಲ್ಲಿಯೂ ಸಂಗ್ರಹವಾಗಿರುವ ಹೂಳಿನ ಕುರಿತು ಕರ್ನಾಟಕ ಎಂಜಿನಿಯರಿಂಗ್ ಸಂಶೋಧನಾ ಕೇಂದ್ರ (ಕೆಇಆರ್ ಎಸ್) ಸರ್ವೆ ಮಾಡಿದೆ. ಕೇಂದ್ರ ಜಲ ಆಯೋಗಕ್ಕೆ ವರದಿ ಸಲ್ಲಿಸಬೇಕಿದೆ. 2008ರಲ್ಲಿ ದೆಹಲಿ ಮೂಲದ ತೇಜೋವಿಕಾಸ ಲಿಮಿಟೆಡ್ ಸಂಸ್ಥೆ ಅಧ್ಯಯನ ನಡೆಸಿ, 2.78 ಟಿಎಂಸಿ ಅಡಿ ಹೂಳು ಸಂಗ್ರಹವಾಗಿದೆ ಎಂದು ವರದಿ ನೀಡಿತ್ತು.

ಬಾಗಲಕೋಟೆ ಬಳಿ ಆಲಮಟ್ಟಿ ಹಿನ್ನೀರಿ ಪ್ರದೇಶದಲ್ಲಿ ರಾಶಿ, ರಾಶಿ ಮಣ್ಣು, ತ್ಯಾಜ್ಯ ತಂದು ಸುರಿದಿರುವುದು

ತುಂಗಭದ್ರಾ ಜಲಾಶಯದಲ್ಲಿ 30 ಟಿಎಂಸಿ ಅಡಿಯಷ್ಟು ಹೂಳು ತುಂಬಿಕೊಂಡ ಕಾರಣ ನೀರಿನ ಸಂಗ್ರಹ ಪ್ರಮಾಣ ಕಡಿಮೆಯಾಗಿದೆ. ಹೂಳೆತ್ತಲು ಸಾಧ್ಯವಿಲ್ಲದಂತಹ ಸ್ಥಿತಿ ನಿರ್ಮಾಣಗೊಂಡಿದೆ. ಪರ್ಯಾಯ ಜಲಾಶಯ ನಿರ್ಮಾಣಕ್ಕೂ ಸಾಧ್ಯವಾಗುತ್ತಿಲ್ಲ. ನೀರಾವರಿ ಪ್ರಮಾಣ ಕಡಿಮೆಯಾಗುತ್ತಿದೆ

ನೈಸರ್ಗಿಕವಾಗಿ ಬಂದು ಸೇರುವ ಹೂಳಿನ ಜತೆಗೆ ಇಂತಹ ತ್ಯಾಜ್ಯ ತಂದು ಹಾಕಿದರೆ, ಹೂಳು ಸಂಗ್ರಹದ ಪ್ರಮಾಣ ಹೆಚ್ಚಾಗಲಿದೆ. ಹಿನ್ನೀರು ನಿಲ್ಲುವ ಇದೇ ಜಾಗದಲ್ಲಿ ದ್ವಿಪಥವಿದ್ದ ರಾಷ್ಟ್ರೀಯ ಹೆದ್ದಾರಿಯನ್ನು ಚತುಷ್ಪಥಕ್ಕೆ ವಿಸ್ತರಿಸಲಾಗುತ್ತಿದೆ. ರಸ್ತೆ ನಿರ್ಮಾಣಕ್ಕಾಗಿಯೂ ಕಲ್ಲು, ಮಣ್ಣು ತಂದು ಸುರಿಯಲಾಗುತ್ತಿದೆ. ಅದನ್ನು ನೋಡಿದ ಸಾರ್ವಜನಿಕರೂ ಕಟ್ಟಡಗಳ ತ್ಯಾಜ್ಯ ತಂದು ಸುರಿಯುತ್ತಿದ್ದಾರೆ.

‘ಮುಂಗಾರು ಮಳೆಯಾಗುತ್ತಿದ್ದಂತೆಯೇ ಘಟಪ್ರಭಾ ನದಿಯಲ್ಲಿ ಈ ತ್ಯಾಜ್ಯ ಕೊಚ್ಚಿಕೊಂಡು ಹೋಗಿ ಆಲಮಟ್ಟಿ ಹಿನ್ನೀರು ಸೇರಲಿದೆ. ಉಳಿದದ್ದು ಸಹ ಹಿನ್ನೀರಿನಲ್ಲಿ ಮುಳುಗಿ ಹೋಗಲಿದೆ’ ಎನ್ನುವ ಆತಂಕ ವ್ಯಕ್ತಪಡಿಸುತ್ತಾರೆ ಬಾಗಲಕೋಟೆಯ ಸಂಗಮೇಶ ದೊಡ್ಡಮನಿ.

ಕೊಳಚೆ ನೀರು ಸೇರ್ಪಡೆ: ಬಾಗಲಕೋಟೆ ಪಟ್ಟಣದ ಕೊಳಚೆ ನೀರೂ ಸಹ ಘಟಪ್ರಭಾದ ಮೂಲಕ ಆಲಮಟ್ಟಿ ಹಿನ್ನೀರು ಸೇರುತ್ತಿದೆ. ಇಲ್ಲಿಯ ನೀರನ್ನೇ ಪಟ್ಟಣ ಸೇರಿದಂತೆ ಹಲವು ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ಬಳಸಲಾಗುತ್ತದೆ.

ಆಲಮಟ್ಟಿ ಹಿನ್ನೀರಿನಲ್ಲಿ ತ್ಯಾಜ್ಯ ತಂದು ಹಾಕುತ್ತಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸುತ್ತೇನೆ

ನವೀದ್ ಖಾಜಿ, ಜೂನಿಯರ್ ಎಂಜಿನಿಯರ್, ನಗರಸಭೆ, ಬಾಗಲಕೋಟೆ

‘ಅಗ್ನಿ ಪ್ರೈಮ್’ ಪರೀಕ್ಷಾರ್ಥ ಉಡಾವಣೆ ಯಶಸ್ವಿ

ಬಾಲೇಶ್ವರ (ಪಿಟಿಐ): ಹೊಸ ತಲೆಮಾರಿನ ಬ್ಯಾಲೆಸ್ಟಿಕ್ ಕ್ಷಿಪಣಿ ‘ಅಗ್ನಿ ಪ್ರೈಮ್’ನ ಉಡಾವಣಾ ಪರೀಕ್ಷೆಯನ್ನು ಒಡಿಶಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ದ್ವೀಪದಲ್ಲಿ ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಕ್ಷಿಪಣಿಯ ಅಭಿವೃದ್ಧಿ ಹಂತದ ಪರೀಕ್ಷಾರ್ಥ ಪ್ರಯೋಗಗಳು ಈ ಹಿಂದೆ ಮೂರು ಬಾರಿ ಯಶಸ್ವಿಯಾಗಿ ನಡೆದಿದ್ದವು. ಇದೇ ಮೊದಲ ಬಾರಿ ರಾತ್ರಿ ವೇಳೆ ಉಡಾವಣಾ ಪರೀಕ್ಷೆ ನಡೆಸಲಾಗಿದೆ ಎಂದು ವಿವರಿಸಿದ್ದಾರೆ.

ಈ ಮೂಲಕ ಸಶಸ್ತ್ರ ಪಡೆಗಳ ಬಳಕೆಗಾಗಿ ಈ ಕ್ಷಿಪಣಿಯನ್ನು ಸೇರ್ಪಡೆಗೊಳಿಸಲು ದಾರಿ ಸುಲಭವಾಗಿದೆ ಎಂದಿದ್ದಾರೆ. ಡಿಆರ್‌ಡಿಒದ ಹಿರಿಯ ಅಧಿಕಾರಿಗಳು ಮತ್ತು ರಕ್ಷಣಾ ಇಲಾಖೆಯ ಅಧಿಕಾರಿಗಳು ಕ್ಷಿಪಣಿಯ ಉಡಾವಣಾ ಪರೀಕ್ಷೆಗೆ ಸಾಕ್ಷಿಯಾದರು ಎಂದೂ ಹೇಳಿದ್ದಾರೆ.

‘ಅಗ್ನಿ ಪ್ರೈಮ್’ನ ಉಡಾವಣಾ ಪರೀಕ್ಷೆ ನಡೆಯಿತು –ಪಿಟಿಐ ಚಿತ್ರ

ಸಮುದ್ರಯಾನಕ್ಕೆ ‘ಮತ್ಸ್ಯ’ ನೌಕೆ ನಿರ್ಮಾಣ

ಚೆನ್ನೈ (ಪಿಟಿಐ): ಆಳ ಸಮುದ್ರದ ರಹಸ್ಯ ಭೇದಿಸುವ ಸಬ್‌ಮರ್ಸಿಬಲ್ ವೆಹಿಕಲ್ (ಸಮುದ್ರದಡಿ ಸಂಚರಿಸುವ ನೌಕೆ) ನಿರ್ಮಾಣ ಕಾರ್ಯವು ಭರದಿಂದ ನಡೆಯುತ್ತಿದ್ದು, ಶೀಘ್ರವೇ ಸಮುದ್ರಯಾನ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ಕೇಂದ್ರ ಭೂವಿಜ್ಞಾನ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

ವಿಶ್ವ ಸಾಗರ ದಿನಾಚರಣೆಯಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರೀಯ ಸಾಗರ ತಂತ್ರಜ್ಞಾನ ಸಂಸ್ಥೆಯು ಈ ಅಭಿಯಾನ ಸಂಬಂಧ ಕೆಲಸ ಮಾಡುತ್ತಿದೆ. ಈ ನೌಕೆಗೆ ‘ಮತ್ಸ್ಯ 6000’ ಎಂದು ಹೆಸರಿಡಲಾಗಿದೆ. ಇದರ ಮೂಲಕ ಮೂವರು ತಜ್ಞರು ಸಾಗರದ ಆರು ಸಾವಿರ ಮೀಟರ್ ಆಳಕ್ಕೆ ತೆರಳಿ ಜೈವಿಕ ವೈವಿಧ್ಯದ ಮೌಲ್ಯಮಾಪನ ಮಾಡಲಿದ್ದಾರೆ ಎಂದರು.

ನೌಕೆಯ ನಿರ್ಮಾಣ ಕಾರ್ಯದಲ್ಲಿ ವಿಜ್ಞಾನಿಗಳು ಕಾರ್ಯನಿರತರಾಗಿದ್ದು, ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಲಿದೆ ಎಂದರು.

ಇಂದಿರಾ ಗಾಂಧಿ ಹತ್ಯೆಯ ಸ್ತಬ್ಧಚಿತ್ರದ ಮೆರವಣಿಗೆ: ವಿದೇಶಾಂಗ ಸಚಿವ ಎಸ್. ಜೈಶಂಕರ್ ತೀವ್ರ ಖಂಡನೆ

ಕೆನಡಾ: ಖಾಲಿಸ್ತಾನಿಗಳ ವಿಕೃತಿಗೆ ಆಕ್ರೋಶ

ನವದೆಹಲಿ (ಪ್ರಜಾವಾಣಿ ವಾರ್ತೆ/ ಪಿಟಿಐ): ಕೆನಡಾದ ಬ್ರಾಂಪ್ಟನ್ ನಗರದಲ್ಲಿ ಖಾಲಿಸ್ತಾನ ಪ್ರತ್ಯೇಕತಾವಾದಿಗಳು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಹತ್ಯೆಯನ್ನು ಬಿಂಬಿಸುವ ಸ್ತಬ್ಧಚಿತ್ರದ ಮೆರವಣಿಗೆ ನಡೆಸಿರುವುದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಭಾರತ ವಿರೋಧಿ ಕೃತ್ಯಗಳಿಗೆ ಕೆನಡಾ ಸರ್ಕಾರ ಮಣೆ ಹಾಕುತ್ತಿದ್ದು, ಉಭಯ ದೇಶಗಳ ನಡುವಣ ದ್ವಿಪಕ್ಷೀಯ ಸಂಬಂಧಗಳ ವೃದ್ಧಿಗೆ ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಹೇಳಿದೆ.

ಮಾಜಿ ಪ್ರಧಾನಿಯನ್ನು ಹತ್ಯೆಗೈಯ್ಯುತ್ತಿರುವ ಸ್ತಬ್ಧಚಿತ್ರ ಸಹಿತ ಖಾಲಿಸ್ತಾನ ಪ್ರತ್ಯೇಕತಾವಾದಿಗಳು ಇಂದಿರಾ ಗಾಂಧಿ ಹತ್ಯೆಯ ಸಂಭ್ರಮಾಚರಣೆಯ ಮೆರವಣಿಗೆ ನಡೆಸಿ ವಿಕೃತಿ ಮೆರೆದಿದ್ದಾರೆ. ಈ ಕುರಿತ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ವ್ಯಾಪಕ ಟೀಕೆ ವ್ಯಕ್ತವಾಗಿದೆ. ವಿದೇಶಾಂಗ ಸಚಿವ ಜೈಶಂಕರ್ ಅವರೂ ಈ ಕೃತ್ಯವನ್ನು ಕಟುವಾಗಿ ಖಂಡಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಒಂಬತ್ತು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜೈಶಂಕರ್, ‘ಭಾರತ ವಿರೋಧಿ ಸಂಘಟನೆಗಳಿಗೆ ತನ್ನ ನೆಲದಲ್ಲಿ ಚಟುವಟಿಕೆ ನಡೆಸಲು ಕೆನಡಾ ಅವಕಾಶ ನೀಡುತ್ತಿದೆ. ಪ್ರತ್ಯೇಕತಾವಾದಿಗಳು, ಉಗ್ರವಾದಿಗಳು ಮತ್ತು ಹಿಂಸೆಯನ್ನು ಉತ್ತೇಜಿಸುವವರಿಗೆ ಅವಕಾಶ ನೀಡುವ ಕೆನಡಾದ ಧೋರಣೆಯಲ್ಲಿ ಬೇರೆಯದ್ದೇ ರಾಜಕಾರಣ ಅಡಗಿದೆ’ ಎಂದು ಟೀಕಿಸಿದರು.

ಇಂದಿರಾ ಹತ್ಯೆಯ ಸಂಭ್ರಮಾಚರಣೆ ಕುರಿತು ಭಾರತದಲ್ಲಿರುವ ಕೆನಡಾ ರಾಯಭಾರಿ ಕ್ಯಾಮರಾನ್ ಮ್ಯಾಕೇ ಕೂಡ ತಬ್ಬಿಬ್ಬುಕೊಂಡಿದ್ದಾರೆ. ‘ದ್ವೇಷ ಅಥವಾ ಹಿಂಸೆಯ ವೈಭವೀಕರಣಕ್ಕೆ ಕೆನಡಾದಲ್ಲಿ ಜಾಗವಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಆಪರೇಷನ್ ಬ್ಲೂ ಸ್ಟಾರ್ ಕಾರ್ಯಾಚರಣೆಯ 39ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಈ ಕೃತ್ಯ ನಡೆಸಲಾಗಿದೆ ಎನ್ನಲಾಗಿದೆ.

ಕೆನಡಾ ಜೊತೆಗೆ ಚರ್ಚಿಸಿ: ಸ್ತಬ್ಧಚಿತ್ರದ ಮೆರವಣಿಗೆ ವಿರುದ್ಧ ಕೆನಡಾ ಸರ್ಕಾರದ ಜೊತೆ ವಿದೇಶಾಂಗ ಸಚಿವರು ಪ್ರಖರವಾಗಿ ಚರ್ಚೆ ನಡೆಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

‘ಸ್ತಬ್ಧಚಿತ್ರದ ಮೆರವಣಿಗೆಯು 5 ಕಿ.ಮೀ ದೂರ ಸಾಗಿದೆ ಎಂದು ತಿಳಿದು ನಾನು ಗಾಬರಿಗೊಂಡೆ. ಇದು ಪರ–ವಿರೋಧದ ಚರ್ಚೆಯಲ್ಲ. ಇದು ಒಂದು ದೇಶದ ಇತಿಹಾಸ ಮತ್ತು ಆ ದೇಶದ ಪ್ರಧಾನಿಯ ಹತ್ಯೆಯಾದಾಗ ಉಂಟಾಗುವ ನೋವನ್ನು ಗೌರವಿಸುವ ಕುರಿತ ವಿಷಯವಾಗಿದೆ’ ಎಂದು ಕಾಂಗ್ರೆಸ್ ನಾಯಕ ಮಿಲಿಂದ್ ದೇವಡಾ ಟ್ವೀಟ್ ಮಾಡಿದ್ದಾರೆ.

ಈ ಟ್ವೀಟ್ ಅನ್ನು ಮರುಟ್ವೀಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ‘ಈ ಕುರಿತು ನನ್ನ ಸಂಪೂರ್ಣ ಸಹಮತವಿದೆ. ಇದು ಅತ್ಯಂತ ಹೀನ ಕೃತ್ಯ. ಜೈಶಂಕರ್ ಅವರು ಕೆನಡಾ ಸರ್ಕಾರದ ಜೊತೆಗೆ ಚರ್ಚಿಸಬೇಕು’ ಎಂದಿದ್ದಾರೆ.

‘ಉಗ್ರರ ಕೃತ್ಯ ಸಹಿಸುವುದಿಲ್ಲ’: ಗಡಿ ಭಾಗದಲ್ಲಿ ಭಯೋತ್ಪಾದನೆ ಕೃತ್ಯಗಳನ್ನು ಭಾರತ ಸಹಿಸುವುದಿಲ್ಲ. ಇದನ್ನು ಪಕ್ಕಕ್ಕಿಟ್ಟು ಪಾಕಿಸ್ತಾನದ ಜೊತೆಗೆ ಬಾಂಧವ್ಯ ವೃದ್ಧಿಯೂ ಸಾಧ್ಯವಿಲ್ಲ ಎಂದೂ ಜೈಶಂಕರ್ ಹೇಳಿದ್ದಾರೆ.

ಸಂಬಂಧ ಮುಂದುವರಿಸಲು ಪಾಕಿಸ್ತಾನ ಬಯಸುತ್ತಿದೆ. ಏನು ಮಾಡುತ್ತಿದ್ದೇವೆ ಎಂಬುದು ಆ ರಾಷ್ಟ್ರಕ್ಕೆ ಗೊತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸಂವಿಧಾನದ ವಿಧಿ 370 ರದ್ದತಿ ಸುದೀರ್ಘ ಕಾಲದಿಂದ ಬಾಕಿ ಇದ್ದ ಕ್ರಮ. ರಾಷ್ಟ್ರೀಯ ಭದ್ರತೆಗೆ ಇದು ಬಹಳ ನಿರ್ಣಾಯಕವೂ ಆಗಿದೆ ಎಂದು ಹೇಳಿದರು.

‘ಮೋದಿ ಸರ್ಕಾರಕ್ಕೆ 9 ವರ್ಷಗಳು’ ಎಂಬ ವಿಚಾರದ ಮೇಲೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಸಚಿವರಾದ ಮೀನಾಕ್ಷಿ ಲೇಖಿ ಮತ್ತು ವಿ. ಮುರುಳೀಧರನ್ ಅವರು ದೆಹಲಿಯಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದರು –ಪಿಟಿಐ ಚಿತ್ರ

‘ಭಾರತ ಟೀಕಿಸುವುದು ರಾಹುಲ್‌ಗೆ ಚಟ’

‘ವಿದೇಶಗಳಲ್ಲಿ ಭಾರತವನ್ನು ಟೀಕಿಸುವುದನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಚಟವನ್ನಾಗಿ ಮಾಡಿಕೊಂಡಿದ್ದಾರೆ. ಆಂತರಿಕ ರಾಜಕಾರಣವನ್ನು ದೇಶದ ಹೊರಗೆ ಚರ್ಚಿಸುವುದು ‘ದೇಶದ ಹಿತಾಸಕ್ತಿ’ ಎನಿಸಿಕೊಳ್ಳುವುದಿಲ್ಲ’ ಎಂದು ಜೈಶಂಕರ್ ಹೇಳಿದರು.

ಅಮೆರಿಕ ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಕೇಂದ್ರ ಸರ್ಕಾರವನ್ನು ಹಲವಾರು ಕಾರಣಗಳಿಗೆ ಟೀಕಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಜೈಶಂಕರ್, ‘ಜಗತ್ತು ನಮ್ಮನ್ನು ಗಮನಿಸುತ್ತಿರುತ್ತದೆ’ ಎಂದರು.

ಕಾಂಗ್ರೆಸ್ ತಿರುಗೇಟು: ಜೈಶಂಕರ್ ಅವರ ಈ ಟೀಕೆಗೆ ಕಾಂಗ್ರೆಸ್ ಪ್ರಬಲ ತಿರುಗೇಟು ನೀಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ‘ರಾಷ್ಟ್ರದ ರಾಜಕೀಯವನ್ನು ವಿದೇಶಕ್ಕೆ ಕೊಂಡೊಯ್ಯುವ ಅಭ್ಯಾಸವನ್ನು ಆರಂಭಿಸಿದ ವ್ಯಕ್ತಿಯೇ ನಿಮಗೆ (ಜೈಶಂಕರ್) ಸಚಿವ ಸ್ಥಾನ ನೀಡಿದ್ದಾರೆ. ಇದು ನಿಮಗೆ ತಿಳಿದಿದೆ. ಆದರೆ, ನೀವು ಅದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ’ ಎಂದು ಪ್ರಧಾನಿ ಮೋದಿಯವರ ಹೆಸರನ್ನು ನೇರವಾಗಿ ಉಲ್ಲೇಖಿಸದೇ ಪತ್ರಿಕಾಗೋಷ್ಠಿಯಲ್ಲಿ ತಿರುಗೇಟು ಕೊಟ್ಟಿದ್ದಾರೆ.

ಲಡಾಕ್: ಶಾಂತಿ ಸಂದೇಶ ರವಾನೆ

ನವದೆಹಲಿ (ಪಿಟಿಐ): ಪೂರ್ವ ಲಡಾಕ್‌ನ ಗಡಿ ಭಾಗದಲ್ಲಿ ಶಾಂತಿಯ ವಾತಾವರಣ ನೆಲೆಸದ ಹೊರತು ನೆರೆಯ ದೇಶದೊಂದಿಗೆ ಯಾವುದೇ ರೀತಿಯ ಸಂಬಂಧ ಸಾಧ್ಯವಿಲ್ಲ ಎಂದು ಚೀನಾಕ್ಕೆ ಭಾರತವು ಸ್ಪಷ್ಟ ಸಂದೇಶ ರವಾನಿಸಿದೆ.

‘ಚೀನಾ ಜೊತೆಗಿನ ಬಾಂಧವ್ಯವನ್ನು ಸುಧಾರಿಸುವ ಆಸೆ ನಮಗೂ ಇದೆ. ಆದರೆ, ಲಡಾಕ್ ಗಡಿಯಲ್ಲಿ ಸೇನೆ ಜಮಾವಣೆ ಮಾಡುವುದನ್ನು ಚೀನಾ ಮುಂದುವರಿದಿದೆ. ಇದೇ ಅಲ್ಲಿನ ದೊಡ್ಡ ಸಮಸ್ಯೆಯಾಗಿದೆ. ಅಲ್ಲಿ ಯಥಾಸ್ಥಿತಿ ಕಾಯ್ದುಕೊಂಡರಷ್ಟೇ ಆ ದೇಶದೊಂದಿಗಿನ ಸಂಬಂಧ ಬಲಗೊಳ್ಳಲು ಸಾಧ್ಯ’ ಎಂದು ಜೈಶಂಕರ್ ಸ್ಪಷ್ಟಪಡಿಸಿದರು.

‘ಗಡಿಯಲ್ಲಿ ಶಾಂತಿ ಕಾಪಾಡಿಕೊಳ್ಳುವಂತೆ ಭಾರತ ಈಗಾಗಲೇ ಸ್ಪಷ್ಟಪಡಿಸಿದೆ. ಅದರ ಹೊರತಾಗಿ ಉಭಯ ದೇಶಗಳ ನಡುವಣ ಸಂಬಂಧ ಸುಧಾರಣೆ ಕಷ್ಟಸಾಧ್ಯ’ ಎಂದು ಪುನರುಚ್ಚರಿಸಿದರು.

‘ಸುಳ್ಳು ವ್ಯಾಖ್ಯಾನಗಳಿಗೆ ಬಲಿಯಾಗಲ್ಲ’

‘ಭಾರತವು ಬೆದರಿಕೆ, ಪ್ರಲೋಭನೆ ಮತ್ತು ಸುಳ್ಳು ವ್ಯಾಖ್ಯಾನಗಳ ಪ್ರಭಾವಕ್ಕೆ ಈಡಾಗುವುದಿಲ್ಲ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಹೇಳಿದರು.

ದೇಶದ ಉತ್ತರ ಭಾಗದ ಗಡಿಯಲ್ಲಿನ ಪರಿಸ್ಥಿತಿ ಮತ್ತು ಚೀನಾದ ‘ಒನ್ ಬೆಲ್ಟ್ ಮತ್ತು ರೋಡ್’ ಯೋಜನೆ ಕುರಿತು ಮಾತನಾಡಿದ ಅವರು, ‘ಗಡಿಯಲ್ಲಿನ ಭಯೋತ್ಪಾದನೆಯನ್ನು ದೇಶವು ಕಾನೂನುಬಾಹಿರಗೊಳಿಸಿದೆ’ ಎಂದು ಹೇಳಿದರು.

ದೇಶದ ವಿದೇಶಾಂಗ ನೀತಿಗಳು, ಪ್ರಮುಖ ದೇಶಗಳ ಜೊತೆ ಭಾರತ ಹೊಂದಿರುವ ಸಂಬಂಧ ಕುರಿತು ಒತ್ತಿ ಹೇಳಿದ ಅವರು, ‘ಜಗತ್ತಿನ ಬಹುಭಾಗವು ಭಾರತವನ್ನು ಅಭಿವೃದ್ಧಿಯ ಸಹಭಾಗಿ ಎಂದು ಪರಿಗಣಿಸುತ್ತಿದೆ. ಜಗತ್ತಿನ ದಕ್ಷಿಣ ಭೂ ಭಾಗದ ದೇಶಗಳು ಭಾರತವನ್ನು ವಿಶ್ವಾಸಾರ್ಹ ಸಹಭಾಗಿ ದೇಶವೆಂದು ಪರಿಗಣಿಸುತ್ತಿವೆ. ಆರ್ಥಿಕತೆಯಲ್ಲಿ ನಾವು ಮಹತ್ವದ ಪ್ರಭಾವ ಬೀರುತ್ತಿದ್ದೇವೆ. ಇದನ್ನು ಜಗತ್ತಿನಾದ್ಯಂತ ಗುರುತಿಸಲಾಗುತ್ತಿದೆ ಎಂದು ಅವರು ಹೇಳಿದರು.

ದೋಣಿಗಳಿಗೆ ಲಂಗರು... ಬಿಪರ್‌ಜಾಯ್ ಚಂಡಮಾರುತದ ಮುನ್ಸೂಚನೆ ಇರುವ ಕಾರಣ ಕೇರಳದ ವಿಳಿಂಜ ಬಂದರಿನಲ್ಲಿ ಮೀನುಗಾರ ದೋಣಿಗಳನ್ನು ಗುರುವಾರ ನಿಲುಗಡೆ ಮಾಡಲಾಗಿತ್ತು –ಪಿಟಿಐ ಚಿತ್ರ

ಪರಿಸ್ಥಿತಿ ಶಾಂತ, ಸಹಜ ಸ್ಥಿತಿಗೆ ಮರಳಿದ ನಗರ

ಕೊಲ್ಹಾಪುರ ಹಿಂಸಾಚಾರ: ಐವರು ವಶಕ್ಕೆ

ಪುಣೆ (ಪಿಟಿಐ): ಔರಂಗಜೇಬ್ ಮತ್ತು ಟಿಪ್ಪು ಸುಲ್ತಾನ್ ಚಿತ್ರ ಹಾಗೂ ಆಕ್ಷೇಪಾರ್ಹ ಆಡಿಯೊವನ್ನು ತಮ್ಮ ಸಾಮಾಜಿಕ ಮಾಧ್ಯಮದ ‘ಸ್ಟೇಟಸ್’ನಲ್ಲಿ ಹಾಕಿದ್ದರು ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಐವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಇಲ್ಲಿನ ಪೊಲೀಸ್ ವರಿಷ್ಠಾಧಿಕಾರಿ ಮಹೇಂದ್ರ ಪಂಡಿತ್ ತಿಳಿಸಿದರು.

ವಶಕ್ಕೆ ಪಡೆದವರು ಕಾಲೇಜಿನಲ್ಲಿ ಓದುತ್ತಿರುವ ಅಪ್ರಾಪ್ತ ವಯಸ್ಸಿನವರು. ಇವರು ಇಂಥ ಕೃತ್ಯ ಎಸಗಲು ಪ್ರೇರೇಪಣೆ ನೀಡಿದ್ದು ಏನು ಮತ್ತು ಯಾರು ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಇವರಿಂದ ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದು ಪರಿಶೀಲಿಸಲಾಗುತ್ತಿದೆ. ಇಂಟರ್‌ನೆಟ್ ಮೂಲಕ ಡೌನ್‌ಲೋಡ್ ಮಾಡಲಾದ ವಿಡಿಯೊಗಳನ್ನು ಎಲ್ಲರೂ ತಮ್ಮ ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದಾರೆ ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ’ ಎಂದು ಹೇಳಿದರು.

ಪರಿಸ್ಥಿತಿ ಶಾಂತ: ಹಿಂಸಾಚಾರದಿಂದ ಉದ್ವಿಗ್ನಗೊಂಡಿದ್ದ ಕೊಲ್ಹಾಪುರ ಗುರುವಾರ ಶಾಂತವಾಗಿದೆ, ನಗರವು ನಿಧಾನವಾಗಿ ಸಾಮಾನ್ಯ ಸ್ಥಿತಿಗೆ ಮರಳುತ್ತಿದೆ. ಮುಖ್ಯ ಮಾರುಕಟ್ಟೆಯಲ್ಲಿ ಅಂಗಡಿಗಳು ತೆರೆದಿವೆ. ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಗುರುವಾರ ಮಧ್ಯರಾತ್ರಿವರೆಗೂ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿದರು.

ಸಭೆ: ಹಿಂಸಾಚಾರದ ಬೆನ್ನಲ್ಲೇ ಮಹಾರಾಷ್ಟ್ರ ಶಾಲಾ ಶಿಕ್ಷಣ ಮತ್ತು ಮರಾಠಿ ಭಾಷೆ ಸಚಿವ ದೀಪಕ್ ಕೇಸರ್ಕರ್ ಕೊಲ್ಹಾಪುರದ ಹಲವು ಸಾಮಾಜಿಕ ಸಂಘಟನೆಗಳೊಂದಿಗೆ ಸಭೆ ನಡೆಸಿದರು. ಸ್ಥಳೀಯರು ಶಾಂತಿ ಕಾಪಾಡಬೇಕು ಎಂದು ಮನವಿ ಮಾಡಿದರು.

ಮಹಾರಾಷ್ಟ್ರದ ಸಂಸ್ಕೃತಿ ಅಲ್ಲ: ಪವಾರ್

ಟಿಪ್ಪು ಸುಲ್ತಾನ್ ಮತ್ತು ಔರಂಗಜೇಬ್ ವೈಭವೀಕರಣ ವಿಚಾರವಾಗಿ ಕೊಲ್ಹಾಪುರ ಮತ್ತಿತರ ಕಡೆಗಳಲ್ಲಿ ನಡೆದ ಹಿಂಸಾಚಾರವು ಮಹಾರಾಷ್ಟ್ರದ ಸಂಸ್ಕೃತಿ ಅಲ್ಲ ಎಂದು ಎನ್‌ಸಿಪಿ ಪರಮೋಚ್ಚ ನಾಯಕ ಶರದ್ ಪವಾರ್ ಹೇಳಿದರು.

‘ಜನರು ಶಾಂತಿ ಕಾಪಾಡಬೇಕು. ಇದು ಮಹಾರಾಷ್ಟ್ರದ ಸಂಸ್ಕೃತಿಗೆ ತಕ್ಕುದಲ್ಲ. ರಾಜ್ಯವು ಶಾಂತಿ, ಸಹನೆಗೆ ಹೆಸರುವಾಸಿಯಾಗಿದೆ. ರಾಜ್ಯದ ಜನರು ಕಾನೂನನ್ನು ಕೈಗೆತ್ತಿಕೊಳ್ಳಬಾರದು’ ಎಂದು ಮನವಿ ಮಾಡಿದರು.

ಟೂಲ್‌ಕಿಟ್ ಭಾಗ: ಸಚಿವ ಸುಧೀರ್

ಇಂದೋರ್: ಮಹಾರಾಷ್ಟ್ರದ ಕೆಲ ಪ್ರದೇಶಗಳಲ್ಲಿ ನಡೆದ ಹಿಂಸಾಚಾರವು ಅಭಿವೃದ್ಧಿಯನ್ನು ಬಯಸದ ಕೆಲವು ಪಕ್ಷಗಳ ‘ಟೂಲ್‌ಕಿಟ್’ನ ಭಾಗ ಎಂದು ಸಚಿವ ಸುಧೀರ್ ಮುನ್‌ಗಂಟೀವಾರ್ ಆರೋಪಿಸಿದರು.

‘ಅಭಿವೃದ್ಧಿ ರಾಜಕೀಯದ ಮೂಲಕ ಅಧಿಕಾರಕ್ಕೆ ಬರುವುದಿಲ್ಲ ಎಂದು ಈ ಪಕ್ಷಗಳಿಗೆ ತಿಳಿದಿದೆ. ಹೀಗಾಗಿ ಮತಬ್ಯಾಂಕ್‌ಗಾಗಿ ಔರಂಗಜೇಬ್‌ನನ್ನು ನಿರಂತರವಾಗಿ ವೈಭವೀಕರಿಸುತ್ತಿವೆ’ ಎಂದು ವಾಗ್ದಾಳಿ ನಡೆಸಿದರು.

ಸಹಜೀವನ ಸಂಗಾತಿ ಹತ್ಯೆ

ಒಂದನೇ ಪುಟದಿಂದ...

ಬುಧವಾರದಂದು ಇವರು ವಾಸವಿದ್ದ ಫ್ಲ್ಯಾಟ್‌ನಿಂದ ದುರ್ವಾಸನೆ ಬರುತ್ತಿತ್ತು. ಮೊದಲಿಗೆ ನೆರೆಹೊರೆಯವರು ದುರ್ನಾತ ಕುರಿತಂತೆ ಪ್ರಶ್ನಿಸಿದಾಗ ಆರೋಪಿ ದಿಗಿಲುಗೊಂಡಿದ್ದು, ಕೆಲಹೊತ್ತಿನಲ್ಲಿ ಬರುವುದಾಗಿ ಹೇಳಿ ಗೋಣಿಚೀಲದೊಂದಿಗೆ ಹೊರಹೋಗಿದ್ದಾನೆ. ನಿವಾಸಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಫ್ಲ್ಯಾಟ್‌ನ ಬಾಗಿಲು ಒಡೆದು ಒಳಗೆ ಪ್ರವೇಶಿಸಿದಾಗ ಕೃತ್ಯ ಗೊತ್ತಾಗಿದೆ.

ಸರಸ್ವತಿ

ಪೊಲೀಸರ ವಶಕ್ಕೆ ಆರೋಪಿ: ಆರೋಪಿ ಸಾನೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನ್ಯಾಯಾಲಯವು ಈತನನ್ನು ಜೂನ್ 16ರವರೆಗೂ ಪೊಲೀಸರ ವಶಕ್ಕೆ ಒಪ್ಪಿಸಿದೆ.

ಈತನ ವಿರುದ್ಧ ಐಪಿಸಿ ಕಾಯ್ದೆ ಕೊಲೆ (302), ಸಾಕ್ಷ್ಯ ನಾಶ (201) ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ. ಜೀವನಸಂಗಾತಿ ಆತ್ಮಹತ್ಯೆ ಮಾಡಿಕೊಂಡಳು ಎಂದು ಆರೋಪಿ ಒಂದು ಹಂತದಲ್ಲಿ ತಿಳಿಸಿದ್ದಾನೆ. ತನಿಖೆಯ ಹಾದಿ ತಪ್ಪಿಸುವ ಯತ್ನ ಇದಾಗಿದ್ದು, ಸಮಗ್ರ ತನಿಖೆ ನಂತರವೇ ಕೃತ್ಯದ ಕಾರಣ ತಿಳಿಯಬೇಕಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವರದಿ ಕೇಳಿದ ಮಹಿಳಾ ಆಯೋಗ

ಮುಂಬೈ: 32 ವರ್ಷದ ಮಹಿಳೆಯ ಭೀಕರ ಹತ್ಯೆ ಕೃತ್ಯವನ್ನು ‘ಆಘಾತಕಾರಿ’ ಎಂದು ಮಹಾರಾಷ್ಟ್ರ ರಾಜ್ಯ ಮಹಿಳಾ ಆಯೋಗ (ಎಂಎಸ್‌ಸಿಡಬ್ಲ್ಯು) ಪ್ರತಿಕ್ರಿಯಿಸಿದೆ. ಈ ಕುರಿತು ವರದಿ ಸಲ್ಲಿಸುವಂತೆಯೂ ಪೊಲೀಸ್ ಕಮಿಷನರೇಟ್‌ಗೆ ಸೂಚಿಸಿದೆ.

ನಿಯಮಾನುಸಾರ ಪ್ರಕರಣದ ವಸ್ತುಸ್ಥಿತಿ ವರದಿಯನ್ನು ಶೀಘ್ರಗತಿಯಲ್ಲಿ ಸಲ್ಲಿಸುವಂತೆ ಆಯೋಗದ ಅಧ್ಯಕ್ಷೆ ರೂಪಾಲಿ ಚಕಂಕರ್ ಅವರು ಪೊಲೀಸ್ ಕಮಿಷನರ್ ಮಧುಕರ್ ಪಾಂಡೆ ಅವರಿಗೆ ಪತ್ರ ಬರೆದಿದ್ದಾರೆ.

ಇಂತಹ ಕೃತ್ಯಗಳು ಮರುಕಳಿಸುತ್ತಿವೆ. ತಡೆಯುವ ಕುರಿತಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಗೃಹ ಇಲಾಖೆಯು ಮುಂದಾಗಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮನೆ ಆವರಿಸಿದ್ದ ದುರ್ನಾತ

ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ, ಫ್ಲ್ಯಾಟ್‌ನ ಬಾಗಿಲು ಒಡೆದು ತೆರೆಯುತ್ತಿದ್ದಂತೆದುರ್ನಾತ ಆವರಿಸಿದೆ. ಮೊದಲಿಗೆ ಬೆಡ್‌ರೂಂ ಪ್ರವೇಶಿಸಿದ್ದು ಅಲ್ಲಿ ಪ್ಲಾಸ್ಟಿಕ್ ಚೀಲಗಳಿದ್ದು, ನೆಲದಲ್ಲಿ ರಕ್ತದ ಕಲೆಗಳು ಇದ್ದವು.

ಪೊಲೀಸರು ಬಳಿಕ ಅಡುಗೆ ಮನೆ ಪ್ರವೇಶಿಸಿದಾಗ ಕಂಡ ಅಲ್ಲಿನ ದೃಶ್ಯಗಳು ಕೃತ್ಯದ ಕರಾಳ ಚಿತ್ರಣವನ್ನು ತೆರೆದಿಟ್ಟವು.

ಮಹಿಳೆ ದೇಹವನ್ನು ತುಂಡುಗಳಾಗಿ ಕತ್ತರಿಸಿ ಸಾಕ್ಷ್ಯ ನಾಶ ಮಾಡಲು ಆರೋಪಿ ಯತ್ನಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ದೆಹಲಿಯಲ್ಲಿ ಕಳೆದ ವರ್ಷದ ಮೇ ತಿಂಗಳಲ್ಲಿ ಇಂತಹದೇ ಪ್ರಕರಣ ನಡೆದಿತ್ತು. ಆರೋಪಿ ಅಫ್ತಾಬ್ ಪೂನಾವಾಲಾ ತನ್ನ ಸಹಜೀವನ ಸಂಗಾತಿ ಶ್ರದ್ಧಾ ವಾಕರ್ ಅವರನ್ನು ಕೊಲೆ ಮಾಡಿ ಕತ್ತರಿಸಿದ್ದು, ಅಂಗಾಂಗಳನ್ನು ಮೂರು ವಾರ ಕಾಲ ಫ್ರಿಜ್‌ನಲ್ಲಿ ಇಟ್ಟಿದ್ದ.

ನಾಯಿಗಳಿಗೂ ಮಾಂಸ ಹಾಕಿದ್ದ...

ಠಾಣೆ (ಮಹಾರಾಷ್ಟ್ರ) (ಪಿಟಿಐ): ಬಾಗಿಲು ಒಡೆದು ಫ್ಲ್ಯಾಟ್‌ನ ಅಡುಗೆ ಮನೆಗೆ ತೆರಳಿದ ಪೊಲೀಸರು ಅಲ್ಲಿನ ಚಿತ್ರಣ ಕಂಡು ಬೆಚ್ಚಿಬಿದ್ದಿದ್ದಾರೆ. ಕುಕ್ಕರ್‌ನಲ್ಲಿ ಕತ್ತರಿಸಿದ್ದ ಅಂಗಾಂಗಗಳನ್ನು ಹಾಕಿ ಬೇಯಿಸಿದ್ದರೆ, ಮಹಿಳೆಯ ಕೂದಲು ನೆಲದ ಮೇಲೆ ಚೆಲ್ಲಾಡಿತ್ತು.

ಅಲ್ಲದೆ, ಕೆಲವು ಪಾತ್ರೆಗಳಲ್ಲೂ ಮಾಂಸವನ್ನು ತುಂಬಿಡಲಾಗಿತ್ತು. ಭಾಗಶಃ ಬೇಯಿಸಿದ್ದ ಮೂಳೆಗಳು ಹಾಗೂ ಮಹಿಳೆ ದೇಹದ ಮಾಂಸವನ್ನು ಪಾತ್ರೆ ತೊಳೆಯುವ ಸಿಂಕ್‌ನಲ್ಲಿ ಇಡಲಾಗಿತ್ತು. ಬಕೆಟ್‌ಗಳು, ಪ್ಲಾಸ್ಟಿಕ್ ಟಬ್‌ನಲ್ಲಿಯೂ ಮಾಂಸ ತುಂಬಿಡಲಾಗಿತ್ತು. ಆರೋಪಿ ಸಾನೆಯು ಒಂದೆರಡು ದಿನಗಳಿಂದ ಬೀದಿ ನಾಯಿಗಳಿಗೆ ಮಾಂಸ ತಿನ್ನಿಸುತ್ತಿದ್ದನ್ನು ತಾವು ಗಮನಿಸಿದ್ದಾಗಿ ನೆರೆಯವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಹಿಂದೆಂದೂ ಆತ ನಾಯಿಗಳಿಗೆ ಮಾಂಸ ತಿನ್ನಿಸಿದ್ದನ್ನು ನೋಡಿರಲಿಲ್ಲ ಎಂದು ತಿಳಿಸಿದ್ದಾರೆ.

ಮೊದಲಿಗೆ ಮನೆಯಿಂದ ವಾಸನೆ ಬರುತ್ತಿರುವ ಗಮನೆಳೆದಾಗ ಆರೋಪಿಯು, ವಾಸನೆ ತಗ್ಗುವಂತೆ ರೂಮ್ ಫ್ರೆಷನರ್ ಸಿಂಪಡಿಸಿ ತೆರಳಿದ್ದ ಎಂದು ಸಮುಚ್ಚಯದ ನಿವಾಸಿ ವಿಕಾಸ್ ಶ್ರೀವಾತ್ಸವ ಹೇಳಿದರು.

ಜೋಡಿಯು ಮೂರು ವರ್ಷದಿಂದ ಬಾಡಿಗೆಗೆ ಇದ್ದು, ಬಹುತೇಕ ಒಳಗೆ ಇರುತ್ತಿದ್ದರು. ಅಕ್ಕಪಕ್ಕದವರ ಜೊತೆಗೆ ಬೆರೆಯುತ್ತಿರಲಿಲ್ಲ. ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿರಲಿಲ್ಲ. ಏನು ಕೆಲಸ ಮಾಡುತ್ತಿದ್ದರು ಎಂಬ ಮಾಹಿತಿಯೂ ಇರಲಿಲ್ಲ ಎಂದು ತಿಳಿಸಿದರು.

‘ಫ್ಲ್ಯಾಟ್‌ನಿಂದ ಸಂಗ್ರಹಿಸಲಾಗಿರುವ ಅಂಗಾಂಗಗಳ ಮಾದರಿಯನ್ನು ಜೆ.ಜೆ. ಆಸ್ಪತ್ರೆಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಡಿಸಿಪಿ ಜಯಂತ್ ಬಜ್‌ಬಲೆ ತಿಳಿಸಿದ್ದಾರೆ.

ಅಭಿಷೇಕ್‌ಗೆ ಇ.ಡಿ ಸಮನ್ಸ್

ಕೋಲ್ಕತ್ತಾ (ಪಿಟಿಐ): ಪಶ್ಚಿಮ ಬಂಗಾಳದ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ) ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಾಯಕ ಅಭಿಷೇಕ್ ಬ್ಯಾನರ್ಜಿ ಅವರಿಗೆ ಸಮನ್ಸ್ ನೀಡಿದೆ. ಜೂನ್ 13ರಂದು ಇ.ಡಿ ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗುವಂತೆ ಅವರಿಗೆ ಸೂಚಿಸಿದೆ.

ಕಲ್ಲಿದ್ದಲು ಕಳವು ಪ್ರಕರಣದಲ್ಲಿ ಅಭಿಷೇಕ್ ಪತ್ನಿ ರುಜಿರಾ ಅವರನ್ನು ಗುರುವಾರ 4 ತಾಸು ವಿಚಾರಣೆಗೆ ಒಳಪಡಿಸಲಾಗಿತ್ತು. ಇದರ ಬೆನ್ನಲ್ಲೇ ಅಭಿಷೇಕ್ ಅವರಿಗೆ ಇ.ಡಿ ಸಮನ್ಸ್ ನೀಡಿದೆ.

ವಿಚಾರಣೆಗೆ ಹಾಜರಾಗುವುದಿಲ್ಲ: ಟಿಎಂಸಿಯ ಬೃಹತ್ ಪ್ರಚಾರ ಸಭೆಯಲ್ಲಿ ತೊಡಗಿರುವ ಕಾರಣ ಜೂನ್ 13ರಂದು ವಿಚಾರಣೆಗೆ ಹಾಜರಾಗಲು ಸಾಧ್ಯವಿಲ್ಲ ಎಂದು ಅಭಿಷೇಕ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಅವಧಿಗೂ ಮುನ್ನ ಪದವಿಗೆ ಅವಕಾಶ’

ನವದೆಹಲಿ (ಪಿಟಿಐ): ಸರ್ಟಿಫಿಕೇಟ್, ಡಿಪ್ಲೊಮಾ ಅಥವಾ ಪದವಿ ವಿದ್ಯಾರ್ಥಿಯು ಅಗತ್ಯವಿರುಷ್ಟು ‘ಕ್ರೆಡಿಟ್’ (ಅಂಕ)ಗಳನ್ನು ಪಡೆದಿದ್ದರೆ, ಕೋರ್ಸ್‌ನ ಕನಿಷ್ಠ ಅವಧಿಯನ್ನೂ ಲೆಕ್ಕಿಸದೆ, ಸಂಬಂಧಿಸಿದ ಪದವಿ ನೀಡಲು ಪರಿಗಣಿಸಬಹುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಸಮಿತಿಯೊಂದು ಶಿಫಾರಸು ಮಾಡಿದೆ.

ಎನ್‌ಇಪಿ 2020ಗೆ ಪೂರಕವಾಗಿ ಉನ್ನತ ಶಿಕ್ಷಣದಲ್ಲಿ ‘ಮಲ್ಟಿಪಲ್ ಎಂಟ್ರಿ’ ಮತ್ತು ‘ಎಕ್ಸಿಟ್’ಗೆ ಅವಕಾಶ ಒದಗಿಸುವಂತೆ ಸಮಿತಿ ಸೂಚಿಸಿದೆ.

ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ಪದವಿ ನಿಯಮಾವಳಿಗಳನ್ನು ನವೀಕರಿಸುವಂತೆಯೂ ಸಮಿತಿ ಶಿಫಾರಸು ಮಾಡಿದೆ. ಈ ಶಿಫಾರಸುಗಳಿಗೆ ಅನುಮೋದನೆ ದೊರೆತ ಬಳಿಕ ಆಯೋಗ ಪದವಿಗೆ ಸಂಬಂಧಿಸಿದ ಹೊಸ ನಿಯಮಗಳನ್ನು ಪ್ರಕಟಿಸಲಿದೆ.

‘ದಯಾಮರಣ ಕೋರಿ ಪತ್ರ’

ವಾರಾಣಸಿ (ಉತ್ತರಪ್ರದೇಶ) (ಪಿಟಿಐ): ಜ್ಞಾನವಾಪಿ- ಶೃಂಗಾರ ಗೌರಿ ಸಂಕೀರ್ಣ ವಿವಾದದ ಪ್ರಮುಖ ಅರ್ಜಿದಾರ ಮಹಿಳೆಯೊಬ್ಬರು ತಮಗೆ ದಯಾಮರಣಕ್ಕೆ ಅನುಮತಿ ನೀಡಬೇಕು ಎಂದು ಕೋರಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದಾರೆ.

ಈ ಪ್ರಕರಣದ ಹಿಂದೂ ಅರ್ಜಿದಾರರಲ್ಲಿ ಒಬ್ಬರಾಗಿದ್ದ ರಾಖಿ ಸಿಂಗ್ ಅವರು ರಾಷ್ಟ್ರಪತಿಗಳಿಗೆ ಬರೆದಿರುವ ಪತ್ರದಲ್ಲಿ ‘ ಕೆಲವರು ನನಗೆ ಕಿರುಕುಳ ನೀಡುತ್ತಿದ್ದಾರೆ. ಮಾನಸಿಕ ಯಾತನೆ ಮತ್ತು ಸಂಕಟದಿಂದ ಮುಕ್ತಿ ಹೊಂದಲು ನನಗೆ ದಯಾಮರಣಕ್ಕೆ ಅನುಮತಿ ನೀಡಿ, ನೆರವಾಗಬೇಕೆಂದು ವಿನಂತಿಸುವೆ. ಜೂನ್ 9ರ ಬೆಳಿಗ್ಗೆ 9ರವರೆಗೆ ನಿಮ್ಮ ಸ್ಪಂದನೆಗಾಗಿ ಕಾಯುವೆ, ನಂತರ ಸ್ವಂತ ನಿರ್ಧಾರ ತೆಗೆದುಕೊಳ್ಳುವೆ’ ಎಂದೂ ಹೇಳಿದ್ದಾರೆ.

ಮಣಿಪುರ: ₹101.75 ಕೋಟಿ ಪ್ಯಾಕೇಜ್‌ಗೆ ಅನುಮೋದನೆ

ಇಂಫಾಲ್/ಗುವಾಹಟಿ : ಮಣಿಪುರ ಹಿಂಸಾಚಾರದಲ್ಲಿ ನಿರಾಶ್ರಿತರಾದ ಜನರಿಗೆ ಕೇಂದ್ರ ಸರ್ಕಾರ ₹ 101.75 ಕೋಟಿ ಪರಿಹಾರ ಪ್ಯಾಕೇಜ್ ಅನ್ನು ಅನುಮೋದಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಿರ್ದೇಶನದ ಮೇರೆಗೆ ಈ ಪ್ಯಾಕೇಜ್ ದೊರೆತಿದೆ ಎಂದು ಮಣಿಪುರ ಸರ್ಕಾರದ ಭದ್ರತಾ ಸಲಹೆಗಾರ ಕುಲದೀಪ್ ಸಿಂಗ್ ಗುರುವಾರ ತಿಳಿಸಿದರು.

ರಾಜ್ಯದಲ್ಲಿ ಎರಡು ದಿನಗಳಿಂದ ಯಾವುದೇ ಹಿಂಸಾಚಾರದ ಘಟನೆ ನಡೆದಿಲ್ಲ. ಪರಿಸ್ಥಿತಿ ಶಾಂತಿಯುತವಾಗಿದ್ದು, ನಿಯಂತ್ರಣದಲ್ಲಿದೆ ಎಂದು ಅವರು ಹೇಳಿದರು.

ಇತ್ತೀಚೆಗೆ ಮಣಿಪುರಕ್ಕೆ ಭೇಟಿ ನೀಡಿದ್ದ ಅಮಿತ್ ಶಾ ಅವರು, ಪರಿಹಾರ ಪ್ಯಾಕೇಜ್‌ಗಾಗಿ ಗೃಹ ಸಚಿವಾಲಯಕ್ಕೆ ಪ್ರಸ್ತಾವ ಕಳುಹಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದರು ಎಂದು ಅವರು ತಿಳಿಸಿದರು.

ಕೆಲವೆಡೆ ಎಎಫ್‌ಎಸ್‌ಪಿಎ ಹಿಂದಕ್ಕೆ: ಮಣಿಪುರದ ಕೆಲ ಭಾಗಗಳಿಂದ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ–1958 (ಎಎಫ್‌ಎಸ್‌ಪಿಎ) ಅನ್ನು ತೆಗೆದುಹಾಕಲಾಗಿದ್ದು, ಅಲ್ಲಿ ಎಕ್ಸಿಕ್ಯುಟಿವ್ ಮ್ಯಾಜಿಸ್ಟ್ರೇಟ್‌ಗಳ ಸಮ್ಮುಖದಲ್ಲಿ ಸೇನೆಯ ಕಾರ್ಯಾಚರಣೆ ನಡೆಯುತ್ತಿದೆ. 43 ವರ್ಷಗಳಲ್ಲಿ ಇದೇ ಮೊದಲ ಬಾರಿ ಹೀಗಾಗುತ್ತಿದೆ. ಕಾಂಗ್‌ಪೋಕ್ಪಿ, ಇಂಫಾಲ್ ಈಸ್ಟ್, ಇಂಫಾಲ್ ವೆಸ್ಟ್, ಕಾಕ್‌ಚಿಂಗ್, ಬಿಷ್ಣುಪುರ್ ಮತ್ತು ಜಿರಿಬಾಮ್ ಜಿಲ್ಲೆಗಳ ಕೆಲ ಪ್ರದೇಶಗಳಲ್ಲಿ ಎಎಫ್‌ಎಸ್‌ಪಿಎ ಕಾಯ್ದೆಯನ್ನು ತೆಗೆಯಲಾಗಿದೆ.

ರೊಹ್ಟಾಸ್ ಜಿಲ್ಲೆಯ ಸೋನ್ ನದಿಯ ಸೇತುವೆಯಲ್ಲಿ ಸಿಲುಕಿದ್ದ ಬಾಲಕ ಸಾವು

ಫಲನೀಡದ 20 ಗಂಟೆ ರಕ್ಷಣಾ ಕಾರ್ಯಾಚರಣೆ

ರೊಹ್ಟಾಸ್ (ಬಿಹಾರ) (ಪಿಟಿಐ): ಸೇತುವೆಯ ಪಿಲ್ಲರ್ ಮತ್ತು ಸ್ಲ್ಯಾಬ್ ನಡುವೆ ಸಿಲುಕಿದ್ದ 11 ವರ್ಷದ ಬಾಲಕನೊಬ್ಬ, ಸುಮಾರು 20 ಗಂಟೆ ಕಾಲ ಸಾವು–ಬದುಕಿನ ಹೋರಾಟದ ನಂತರ ಅಸುನೀಗಿದ್ದಾನೆ.

ಜಿಲ್ಲೆಯ ಅತಿಮಿ ಗ್ರಾಮದಲ್ಲಿ ಸೋನ್ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿದ್ದ ನಸ್ರಿಗಂಜ್–ದೌಡ್‌ನಗರ ಸೇತುವೆಯ ಬಳಿ ಘಟನೆ ನಡೆದಿದೆ. ಮೃತ ಬಾಲಕನನ್ನು ರಂಜನ್ ಕುಮಾರ್ ಎಂದು ಗುರುತಿಸಲಾಗಿದೆ. ಈತ, ಮಾನಸಿಕ ಅಸ್ವಸ್ಥನಾಗಿದ್ದ ಎಂದು ಹೇಳಲಾಗಿದೆ.

ಪಿಲ್ಲರ್ ಮತ್ತು ಸ್ಲ್ಯಾಬ್ ನಡುವೆ ಬಾಲಕ ಸಿಕ್ಕಿಬಿದ್ದಿರುವುದು ತಿಳಿಯುತ್ತಿದ್ದಂತೆ ಆತನ ರಕ್ಷಣೆಗೆ ಸಿಬ್ಬಂದಿ ಅವಿರತ ಶ್ರಮಿಸಿದರು. ಸ್ಲ್ಯಾಬ್ ಕತ್ತರಿಸಿ ಬೇರ್ಪಡಿಸಿದ್ದು, 20 ಗಂಟೆಯ ಬಳಿಕ ರಕ್ಷಿಸಿದರು. ಆತನನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಬಾಲಕನನ್ನು ಪರೀಕ್ಷಿಸಿದ ಸಾದರ್ ಆಸ್ಪತ್ರೆಯ ಸರ್ಜನ್ ಕೆ.ಎನ್.ತಿವಾರಿ ಅವರು, ‘ಬಾಲಕನು ಆಸ್ಪತ್ರೆಗೆ ಕರೆತರುವ ಮಾರ್ಗದಲ್ಲಿಯೇ ಆತ ಮೃತಪಟ್ಟಿದ್ದಾನೆ’ ಎಂದು ಪ್ರಕಟಿಸಿದರು.

ಬಾಲಕ ನಾಪತ್ತೆಯಾಗಿದ್ದಾನೆ ಎಂದು ಆತನ ತಂದೆ ಶತ್ರುಘ್ನ ಪ್ರಸಾದ್ ಸ್ಥಳೀಯ ಪೊಲೀಸರಿಗೆ ತಿಳಿಸಿದ್ದರು. ನಂತರ ಬಾಲಕಿ ಸೇತುವೆ ಬಳಿ ಸಿಕ್ಕಿಬಿದ್ದಿರುವುದನ್ನು ಮಹಿಳೆಯೊಬ್ಬರು ಗುರುತಿಸಿ, ಅಧಿಕಾರಿಗಳ ಗಮನಕ್ಕೆ ತಂದಿದ್ದರು.

ಬಾಲಕ ಸ್ವತಃ ಸೇತುವೆ ಹತ್ತಿದ್ದು, ಆಕಸ್ಮಿಕವಾಗಿ ಸಿಕ್ಕಿಬಿದ್ದಿರಬಹುದು. ರಕ್ಷಣಾ ಕಾರ್ಯಾಚರಣೆ ಸಂದರ್ಭದಲ್ಲಿ ಬಾಲಕನ ಉಸಿರಾಟಕ್ಕೆ ಪೂರಕವಾಗಿ ಪೈಪ್ ಮೂಲಕ ಆಮ್ಲಜನಕ ಒದಗಿಸಲಾಗಿತ್ತು ಎಂದು ನಸ್ರಿಗಂಜ್‌ನ ಬಿಡಿಒ ಜಾಫರ್ ಇಮಾಮ್ ಹೇಳಿದರು.

ಎನ್‌ಡಿಆರ್‌ಎಫ್ ಮತ್ತು ರಾಜ್ಯದ ಪ್ರಕೃತಿ ವಿಕೋಪ ರಕ್ಷಣಾ ಪಡೆಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಬಿಹಾರದ ರೊಹ್ಟಾಸ್ ಜಿಲ್ಲೆಯಲ್ಲಿ ಸೇತುವೆಯ ಪಿಲ್ಲರ್ ಮತ್ತು ಸ್ಲ್ಯಾಬ್ ನಡುವೆ ಸಿಲುಕಿದ್ದ ಬಾಲಕನ ರಕ್ಷಣೆಗೆ ಕಾರ್ಯಾಚರಣೆ ನಡೆಸಲಾಯಿತು –ಪಿಟಿಐ ಚಿತ್ರ

ಮಧ್ಯಪ್ರದೇಶ: ಕೊಳವೆ ಬಾವಿಗೆ ಬಿದ್ದ ಬಾಲಕಿ ಸಾವು

ಸೃಷ್ಟಿ

ಸಿಹೋರ್ (ಮಧ್ಯಪ್ರದೇಶ) (ಪಿಟಿಐ): ‘ಮಧ್ಯಪ್ರದೇಶದ ಸಿಹೋರ್ ಜಿಲ್ಲೆಯ ಮುಂಗೋಲಿ ಗ್ರಾಮದಲ್ಲಿ ಕೊಳವೆಬಾವಿಗೆ ಬಿದ್ದಿದ್ದ ಎರಡೂವರೆ ವರ್ಷದ ಬಾಲಕಿ ಸೃಷ್ಟಿ ಗುರುವಾರ ಮೃತಪಟ್ಟಿದ್ದಾಳೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸುಮಾರು 52 ಗಂಟೆಗಳವರೆಗೂ ಸತತ ರಕ್ಷಣಾ ಕಾರ್ಯಾಚರಣೆ ನಡೆಸಿ ಕೊಳವೆಬಾವಿಯಿಂದ ಬಾಲಕಿಯನ್ನು ಹೊರತೆಗೆದು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಬಾಲಕಿ ಮೃತಪಟ್ಟಿರುವುದಾಗಿ ವೈದ್ಯರು ಖಚಿತಪಡಿಸಿದರು’ ಎಂದಿದ್ದಾರೆ.

‘ಬಾಲಕಿಯನ್ನು ಕೊಳವೆಬಾವಿಯಿಂದ ಗುರುವಾರ ಸಂಜೆ 5.30ಕ್ಕೆ ಹೊರತೆಗೆದಾಗ ಆಕೆ ಅದಾಗಲೇ ಮೃತಪಟ್ಟಿದ್ದಳು. ಆಕೆಯ ದೇಹ ಕೊಳೆಯುತ್ತಿತ್ತು. ವೈದ್ಯಕೀಯ ತಪಾಸಣೆಗಾಗಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಯಿತು’ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದರು.

‘ಬಾಲಕಿ ಕೊಳವೆ ಬಾವಿಗೆ ಬಿದ್ದಾಗ ಆರಂಭದಲ್ಲಿ ಸುಮಾರು 40 ಅಡಿ ಆಳದಲ್ಲಿ ಸಿಲುಕಿದ್ದಳು. ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಯಂತ್ರಗಳು ಭೂಮಿ ಕೊರೆಯುವಾಗ ಉಂಟಾದ ಕಂಪನದಿಂದ, ಬಾಲಕಿ ಸುಮಾರು 135 ಅಡಿಯಷ್ಟು ಆಳ ತಲುಪಿದ್ದಳು ಎಂದು ಇನ್ನೊಬ್ಬ ಅಧಿಕಾರಿ ಗುರುವಾರ ಮಾಹಿತಿ ನೀಡಿದ್ದರು.

ಸುಭಾಷಿತ

ಅಭಾವದಿಂದ ವಸ್ತುಗಳ ಮಹತ್ವ ಗೊತ್ತಾಗುತ್ತದೆ.
-ಶಿವರಾಮ ಕಾರಂತ

ಹುರುಳಿಲ್ಲದ ಪ್ರಕರಣ: ಸರ್ಕಾರಗಳು 'ಸುಪ್ರೀಂ' ಮಾತಿಗೆ ಕಿವಿಗೊಡಬೇಕು

ಸರ್ಕಾರಗಳು ಅನಗತ್ಯವಾಗಿ ಕೋರ್ಟ್ ಪ್ರಕರಣಗಳಲ್ಲಿ ತೊಡಗಿಸಿಕೊಂಡಿರುತ್ತವೆ, ನ್ಯಾಯಾಲಯಗಳಲ್ಲಿ ವಿಚಾರಣೆಯ ಹಂತದಲ್ಲಿರುವ ಪ್ರಕರಣಗಳ ಸಂಖ್ಯೆ ಹೆಚ್ಚಲು ಇದು ಕೂಡ ಕಾರಣ ಎಂದು ಸುಪ್ರೀಂ ಕೋರ್ಟ್ ಮಾಡಿರುವ ಟೀಕೆಯು ಕಿವಿಗೊಡಲು ಅರ್ಹವಾಗಿರುವಂಥದ್ದು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ದಾಖಲು ಮಾಡಿರುವ ಪ್ರಕರಣಗಳ ಪೈಕಿ ಕನಿಷ್ಠ ಶೇಕಡ 40ರಷ್ಟು ಪ್ರಕರಣಗಳು ಹುರುಳಿಲ್ಲದವು ಎಂದು ಕೋರ್ಟ್ ಈಚೆಗೆ ಹೇಳಿದೆ. ನಗರ ಸ್ಥಳೀಯ ಸಂಸ್ಥೆಗಳು, ಸರ್ಕಾರಿ ಸ್ವಾಮ್ಯದ ಕಂಪನಿಗಳು ಹಾಗೂ ಸಂಸ್ಥೆಗಳು ದಾಖಲು ಮಾಡಿರುವ ಪ್ರಕರಣಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಈ ಸಂಖ್ಯೆ ಇನ್ನಷ್ಟು ಹೆಚ್ಚಬಹುದು. ಸರ್ಕಾರಿ ನೌಕರರೊಬ್ಬರಿಗೆ ಪ್ರತಿ ತಿಂಗಳು ₹ 700 ಕೊಡುವುದನ್ನು ಪ್ರಶ್ನಿಸಿ ರಾಜ್ಯ ಸರ್ಕಾರವೊಂದು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. 'ಈ ಪ್ರಕರಣದಲ್ಲಿ, ವ್ಯಕ್ತಿಯೊಬ್ಬರಿಗೆ ಪ್ರತಿ ತಿಂಗಳು ₹ 700 ಕೊಡುವುದನ್ನು ನಿರಾಕರಿಸಲು ಸರ್ಕಾರವು ಬೊಕ್ಕಸದಿಂದ ₹ 7 ಲಕ್ಷ ವೆಚ್ಚ ಮಾಡಿರಬೇಕು' ಎಂದು ಕೋರ್ಟ್ ಹೇಳಿದೆ.



ಅನಗತ್ಯವಾದ ಹಾಗೂ ಹುರುಳಿಲ್ಲದ ಪ್ರಕರಣಗಳು ನ್ಯಾಯಾಲಯಗಳ ಪಾಲಿಗೆ ಹೊರೆಯಾಗಿ ಪರಿಣಮಿಸುತ್ತವೆ ಎಂಬುದು ಸರ್ಕಾರಗಳಿಗೆ ಮನವರಿಕೆ ಆಗಬೇಕು

ಸರ್ಕಾರದ ನಡುವಿನ ಕಾನೂನು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮಧ್ಯಸ್ಥಿಕೆಯ ಮೊರೆ ಹೋಗುವುದು ಒಳ್ಳೆಯದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಈಚೆಗೆ ಕೇಂದ್ರ ಸರ್ಕಾರಕ್ಕೆ ಹೇಳಿದ್ದರು. ಸರ್ಕಾರ ಹಾಗೂ ಅದರ ಅಡಿಯಲ್ಲಿ ಕೆಲಸ ಮಾಡುವ ಸಂಸ್ಥೆಗಳ ಪ್ರಯತ್ನವು ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ ಬಗೆಹರಿಸಿಕೊಳ್ಳುವುದಾಗಿರಬೇಕೆ ವಿನಾ ಕೋರ್ಟ್ ಕಟಕಟೆಗೆ ಒಯ್ಯುವುದಾಗಿರಬಾರದು ಎಂದು ಸಿಜೆಐ ಹೇಳಿದ್ದರು. ನ್ಯಾಯಾಲಯಗಳಲ್ಲಿ ವಿಚಾರಣೆಯ ಹಂತದಲ್ಲಿ ಇರುವ ಪ್ರಕರಣಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭಾಗಿಯಾಗಿರುವ ಪ್ರಕರಣಗಳ ಪ್ರಮಾಣವು ಶೇಕಡ 46ರಷ್ಟು ಇದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದೇಶದಲ್ಲಿ ಅತಿಹೆಚ್ಚಿನ ಸಂಖ್ಯೆಯ ಪ್ರಕರಣಗಳಲ್ಲಿ ವಾದಿ ಅಥವಾ ಪ್ರತಿವಾದಿಯಾಗಿ ನಿಲ್ಲುತ್ತವೆ. ಕೆಲವು ಸಂದರ್ಭಗಳಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೆ ಮತ್ತೆ ಪ್ರಕರಣಗಳನ್ನು ದಾಖಲು ಮಾಡಲಾಗುತ್ತದೆ. ಹಲವು ಸಮಸ್ಯೆಗಳನ್ನು ಇಲಾಖೆಗಳ ನಡುವೆಯೇ ಬಗೆಹರಿಸಿಕೊಳ್ಳಬಹುದು, ಕೆಲವು ಸಮಸ್ಯೆಗಳನ್ನು ಉಪೇಕ್ಷಿಸಲೂಬಹುದು. ವ್ಯಾಜ್ಯಗಳನ್ನು ಬಗೆಹರಿಸಲು ಇರುವ ವೇದಿಕೆಗಳು ನೀಡುವ ತೀರ್ಮಾನವನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲಾಗುತ್ತದೆ. ಅಧಿಕಾರಿಗಳಿಗೆ ನಿರ್ದಿಷ್ಟ ತೀರ್ಮಾನ ತೆಗೆದುಕೊಂಡಿದ್ದಕ್ಕೆ ಹೊಣೆಗಾರರಾಗುವ ಮನಸ್ಸು ಇರುವುದಿಲ್ಲ ಎಂಬುದು, ಈ ರೀತಿ ಮೇಲ್ಮನವಿ ಸಲ್ಲಿಸುವ ಪ್ರವೃತ್ತಿಗೆ ಹಲವು ಸಂದರ್ಭಗಳಲ್ಲಿ ಕಾರಣವಾಗಿರುತ್ತದೆ. ಕೆಲವರಿಗೆ ತೊಂದರೆ ಕೊಡುವ ಉದ್ದೇಶದಿಂದಲೂ ಪ್ರಕರಣ ದಾಖಲು ಮಾಡುವುದಿದೆ. ಆದರೆ ಇದಕ್ಕೆಲ್ಲ ಆಗುವ ಖರ್ಚುಗಳ ಬಗ್ಗೆ ಸರ್ಕಾರವು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ ಪ್ರಕರಣಗಳನ್ನು ನಡೆಸಲಿಕ್ಕೆಂದೇ ಅದರ ಬಳಿ ಪ್ರತ್ಯೇಕ ವ್ಯವಸ್ಥೆ ಇರುತ್ತದೆ.

2010ರಲ್ಲಿ ರಾಷ್ಟ್ರೀಯ ವ್ಯಾಜ್ಯ ನೀತಿಯನ್ನು ರೂಪಿಸಲಾಗಿತ್ತು. ಸರ್ಕಾರವು ವ್ಯಾಜ್ಯಗಳನ್ನು ದಾಖಲಿಸುವ ವಿಚಾರದಲ್ಲಿ ಜವಾಬ್ದಾರಿಯುತ ಹಾಗೂ ದಕ್ಷ ಆಗುವಂತೆ ಮಾಡುವುದು ಈ ನೀತಿಯ ಉದ್ದೇಶ ಆಗಿತ್ತು. ಇದನ್ನು 2015ರಲ್ಲಿ ಪರಿಷ್ಕರಿಸಲಾಯಿತು. ಆದರೆ, ಸರ್ಕಾರಗಳ ನಡೆಯಲ್ಲಿ ಯಾವ ಬದಲಾವಣೆಯೂ ಕಂಡುಬಂದಿಲ್ಲ. ನ್ಯಾಯಾಂಗದ ಎಲ್ಲ ಹಂತಗಳಲ್ಲಿಯೂ ನ್ಯಾಯಾಧೀಶರ ಹಾಗೂ ನ್ಯಾಯಮೂರ್ತಿಗಳ ಕೊರತೆ ಇದೆ. ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಹೆಚ್ಚಿದಂತೆಲ್ಲ ಪರಿಸ್ಥಿತಿ ಬಿಗಡಾಯಿಸುತ್ತದೆ. ಅನಗತ್ಯವಾದ, ಹುರುಳಿಲ್ಲದ ಪ್ರಕರಣಗಳನ್ನು ಕೋರ್ಟ್ ಮುಂದೆ ತಂದಾಗ ಅವು ನ್ಯಾಯಾಲಯಗಳ ಪಾಲಿಗೆ ಹೊರೆಯಾಗಿ ಪರಿಣಮಿಸುತ್ತವೆ. ಮಾತ್ರವಲ್ಲದೆ, ಗಂಭೀರ ಪ್ರಕರಣಗಳ ವಿಚಾರಣೆ ಕೂಡ ನಿಧಾನವಾಗಿ ಸಾಗುವಂತೆ ಆಗುತ್ತದೆ. ಆಗ ನಿಜವಾಗಿ ನ್ಯಾಯ ಸಿಗಬೇಕಾದವರಿಗೆ ನ್ಯಾಯದಾನ ವಿಳಂಬವಾಗುತ್ತದೆ. ಪ್ರಕರಣಗಳ ಸಂಖ್ಯೆ ಹೆಚ್ಚಾಗುವುದು ಹಾಗೂ ಕೋರ್ಟ್ ಮುಂದೆ ಇರುವ ಪ್ರಕರಣಗಳಲ್ಲಿ ನಿರ್ಣಯವೊಂದು ಬಾರದೇ ಇರುವುದು ಆಡಳಿತದ ಮೇಲೂ ಕೆಟ್ಟ ಪರಿಣಾಮ ಉಂಟುಮಾಡುತ್ತದೆ. ಸರ್ಕಾರವು ಕೋರ್ಟ್‌ಗಳ ಮುಂದೆ ಇರುವ ಎಲ್ಲ ಪ್ರಕರಣಗಳನ್ನು ಪರಿಶೀಲಿಸಬೇಕು. ಅನಗತ್ಯ ಅನ್ನಿಸುವಂತಹ ಪ್ರಕರಣಗಳನ್ನು ಹಿಂಪಡೆಯಬೇಕು. ಈ ರೀತಿ ಮಾಡುವುದರಿಂದ ಆಡಳಿತಕ್ಕೂ ಒಳ್ಳೆಯದಾಗುತ್ತದೆ.

ಮನುಷ್ಯತ್ವದ ಎರಡು ಎತ್ತರದ ಸ್ಥಿತಿಗಳೆಂದರೆ, ಉತ್ಕೃಷ್ಟ ರಂಗಪ್ರಯೋಗ ಮಾಡುವುದು, ಸವಿಯುವುದು

ರಂಗಕಾಯಕ, ಶಿಕ್ಷಣ, ಅನುದಾನ

ವಿಶ್ಲೇಷಣೆ

ರಘುನಂದನ

ನಮ್ಮ ರಾಜ್ಯದಲ್ಲಿ ವೃತ್ತಿಪರವಾದ ರಂಗಶಿಕ್ಷಣ ನೀಡುತ್ತಿರುವ ಶಾಲೆಗಳು, ಅಂದರೆ ವಿದ್ಯಾರ್ಥಿಗಳನ್ನು ಕನಿಷ್ಠ ಒಂದು ವರ್ಷ ತಮ್ಮಲ್ಲಿ ಇಟ್ಟುಕೊಂಡು, ಅವರಿಗೆ ಊಟ, ವಸತಿ ಒದಗಿಸಿ, ಕ್ರಮಬದ್ಧವೂ ಕಠಿಣ-ಪ್ರಾಯೋಗಿಕವೂ ಆಗಿರುವ ರಂಗಶಿಕ್ಷಣ ನೀಡುತ್ತಿರುವ ಶಾಲೆಗಳ ಸಂಖ್ಯೆ ಒಂದು ಕೈ ಬೆರಳೆಣಿಕೆಯಷ್ಟೂ ಇಲ್ಲ. ಈ ಶಾಲೆಗಳು ಕೊಡುವುದು ಎಸ್‌ಎಸ್‌ಎಲ್‌ಸಿ ನಂತರದ ಡಿಪ್ಲೊಮಾ ಮಾತ್ರವೇ ಆದರೂ ಇವುಗಳಿಂದ ನಾಡಿನ ಸಂಸ್ಕೃತಿಗೆ ಸಲ್ಲುತ್ತಾ ಬಂದಿರುವ ಕೊಡುಗೆ ದೊಡ್ಡದು.

ಇವು ತಮ್ಮ ವಿದ್ಯಾರ್ಥಿಗಳಿಗೆ ಕನ್ನಡ ಕಾವ್ಯ, ಕತೆ, ಕಾದಂಬರಿ, ನಾಟಕಗಳ ಅರಿವು ಮೂಡಿಸುವುದರ ಜೊತೆಗೆ ತಾವು ಕೈಗೊಳ್ಳುತ್ತಾ ಬಂದಿರುವ 'ತಿರುಗಾಟ' ಹಾಗೂ 'ಸಂಚಾರ'ಗಳ ಮೂಲಕ ಕನ್ನಡದವೂ ಸೇರಿದಂತೆ ಜಗತ್ತಿನ ಕ್ಲಾಸಿಕ್ ನಾಟಕಗಳನ್ನು ನಾಡಿನ ಮೂಲೆಮೂಲೆಗೆ ತಲುಪಿಸಿವೆ.

ಈ ಶಾಲೆಗಳಿಂದ ನೂರಾರು ಜನ ಪದವೀಧರರು ಹೊರಬಂದಿದ್ದಾರೆ. ಅವರಿಂದಾಗಿ ಆಧುನಿಕ ನಾಟಕದ ಸಂಸ್ಕೃತಿ ಮಾತ್ರವಲ್ಲದೆ ಹೊಸ ಕಾಲಕ್ಕೆ ಬೇಕಾದ ಸಾಹಿತ್ಯ ಮತ್ತು ಇತರ ಕಲೆಗಳ ಸಂವೇದನೆ ಕೂಡ ಹೋಬಳಿ, ಹಳ್ಳಿಗಳಿಗೂ ತಲುಪುತ್ತಾ ಬಂದಿದೆ.

ನಾಡಿನ ಯಾವ ತಾಲ್ಲೂಕಿಗೆ ಹೋದರೂ ಈ ಶಾಲೆಗಳಿಂದ ಬಂದ ಒಬ್ಬರಲ್ಲ ಒಬ್ಬರು ಅಲ್ಲಿನ ಅನೇಕ ಮಿತಿಗಳ ನಡುವೆಯೂ ನಾಟಕ ಆಡುತ್ತ, ರಂಗಕಮ್ಮಟ ನಡೆಸುತ್ತ ಇರುವುದನ್ನು ಕಾಣುತ್ತೇವೆ. ಅವರಿಂದಾಗಿ ಕುವೆಂಪು, ಬೇಂದ್ರೆ, ತೇಜಸ್ವಿ, ಜಿ.ಬಿ. ಜೋಶಿ, ಕಾರ್ನಾಡ, ಬೆಸಗರಹಳ್ಳಿ ರಾಮಣ್ಣ, ಲಂಕೇಶ್, ಸಿದ್ಧಲಿಂಗಯ್ಯ, ದೇವನೂರ ಮಹಾದೇವ, ರವೀಂದ್ರನಾಥ ಠಾಕೂರ್, ಯು.ಆರ್.ಅನಂತಮೂರ್ತಿ, ಮುಕುಂದರಾವ್, ಭಾಸ, ಕಾಳಿದಾಸ, ಷೇಕ್ಸ್‌ಪಿಯರ್, ಪ್ರಾಚೀನ ಗ್ರೀಕ್ ನಾಟಕಕಾರರು, ಬ್ರೆಖ್ಟ್, ಚೆಕೊಫ್, ಮೊಲಿಯೇರ್ ಅವರಂತಹವರ ಕೃತಿಗಳು ನಾಡಿನ ಊರೂರಿನಲ್ಲಿ ರಂಗದ ಮೇಲೆ ನಾಟಕ, ಕಾವ್ಯ, ಸಂಗೀತವಾಗಿ ಜೀವತಳೆದಿವೆ. ಸಮಾನತೆ ಮತ್ತು ಭ್ರಾತೃತ್ವ ಭಾವದ ಸಂಸ್ಕಾರ, ಸಂಸ್ಕೃತಿ ಉದ್ದೀಪನಗೊಂಡು, ಉಳಿದುಕೊಳ್ಳುತ್ತಿವೆ.

ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಅವರ ಪಠ್ಯೇತರ ಕಲಿಕೆಯ ಭಾಗವಾಗಿ ನಾಟಕ ಕಲೆಯನ್ನು ಪರಿಚಯಿಸುತ್ತಿರುವುದು ಕೂಡ ರಂಗಶಿಕ್ಷಣ ಪಡೆದ ಈ ವೃತ್ತಿನಿರತರೇ ಅನ್ನುವುದನ್ನು ನಾಡಿನ ಎಲ್ಲೆಡೆಯೂ ಕಾಣಬಹುದು. ಈ ಥರದ ಕೆಲಸ ದಕ್ಷಿಣ ಭಾರತದ ಬೇರೆ ಯಾವ ರಾಜ್ಯದಲ್ಲಿಯೂ ಇಷ್ಟರಮಟ್ಟಿಗೆ ನಡೆಯುತ್ತಿರುವುದು ಕಾಣದು. ನಮ್ಮಲ್ಲಿರುವ ನಾಟಕ ಶಾಲೆಗಳಂಥವು ಆ ರಾಜ್ಯಗಳಲ್ಲಿಲ್ಲ. ಆದ್ದರಿಂದ, ಕರ್ನಾಟಕಕ್ಕೆ ದಕ್ಕಿರುವ ಈ ಸೌಭಾಗ್ಯಕ್ಕೆ ನಮ್ಮ ಈ ನಾಟಕಶಾಲೆಗಳು ಮತ್ತು ಇವು ಬೋಧಿಸುವ ಕಾಯಕಬದ್ಧತೆಯೇ ನೇರ, ನಿಚ್ಚಳ ಕಾರಣ ಅನ್ನುವುದು ಅತಿಶಯೋಕ್ತಿಯಲ್ಲ.

ಈ ಶಾಲೆಗಳ ಪದವೀಧರರ ಪೈಕಿ ಐವತ್ತೆರಡು ಜನ ಸರ್ಕಾರಿ ಪ್ರೌಢಶಾಲೆಗಳಲ್ಲಿ ನಾಟಕ ಕಲೆ ಬೋಧಿಸಲು ನೇಮಕಗೊಂಡಿದ್ದಾರೆ. ಹಳ್ಳಿ ಮತ್ತು ತಾಲ್ಲೂಕು ಕೇಂದ್ರಗಳ ಆ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಅವರ ಕಲಿಕೆ ಮುದ ನೀಡುವಲ್ಲಿಯೂ, ಅವರಲ್ಲಿ ಒಳ್ಳೆಯ ಆಲೋಚನೆ ಮತ್ತು ನಡೆನುಡಿಯನ್ನು ಉಂಟುಮಾಡುವುದರಲ್ಲಿಯೂ ಈ ಶಿಕ್ಷಕರು ಮಾಡುತ್ತಿರುವ ಕೆಲಸ ದೊಡ್ಡದು. ಮಕ್ಕಳ ಪ್ರತಿಭೆಯನ್ನು ಬೆಳೆಸುತ್ತ, ಅದು ಆರೋಗ್ಯಕರವಾಗಿ ಹೊಮ್ಮುವಂತೆ ಮಾಡುತ್ತಿದ್ದಾರೆ ಇವರು. ತಮ್ಮ ಶಾಲೆಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹಲವು ಪ್ರಶಸ್ತಿಗಳನ್ನು ಗೆದ್ದುಕೊಟ್ಟಿದ್ದಾರೆ. ವಿಶೇಷವೆಂದರೆ, ತಮ್ಮತಮ್ಮ ವಿದ್ಯಾರ್ಥಿಗಳ ಮನಸ್ಸನ್ನು ಅರಳಿಸುವುದರ ಜೊತೆಗೆ, ಆ ಮಕ್ಕಳ ಕುಟುಂಬದವರಿಗೂ, ಆಯಾ ಊರಿನ ಜನರಿಗೂ ಜಾತಿ, ಮತ, ವರ್ಗ, ವರ್ಣದಂತಹವುಗಳ ಸಂಬಂಧ ಇರುವ ಪೂರ್ವಗ್ರಹಗಳನ್ನು ಹೋಗಲಾಡಿಸಿ, ಅವರ ಮನಸ್ಸನ್ನು ಒಂದಷ್ಟು ಬದಲಾಯಿಸುವುದರಲ್ಲಿ ಸಫಲ-ರಾಗಿದ್ದಾರೆ. ಇವೆಲ್ಲವೂ ಕಾಲಕಾಲಕ್ಕೆ ಪತ್ರಿಕೆಗಳು ಮತ್ತು ಇತರ ಮಾಧ್ಯಮಗಳಲ್ಲಿ ಮೆಚ್ಚುಗೆ ಪಡೆದಿವೆ.

ರಂಗಕಲೆಯ ಕಾಯಕದಲ್ಲಿ ಪೂರ್ಣಾವಧಿ ತೊಡಗಿಕೊಂಡವರಿಗೆ ಆರ್ಥಿಕ ಮತ್ತು ಸಾಮಾಜಿಕ ಅಭದ್ರತೆ ತಪ್ಪಿದ್ದಲ್ಲ. ಹಾಗಿದ್ದೂ, ತಮ್ಮೆಲ್ಲ ಕಷ್ಟಗಳ ನಡುವೆಯೂ ಈ ಪದವೀಧರರು ತಮ್ಮ ಕಾಯಕಕ್ಕೆ ಬದ್ಧರಾಗಿದ್ದು ಕೆಲಸ ಮಾಡುತ್ತ ಬಂದಿದ್ದಾರೆ. ಇವರಲ್ಲಿ ಹೆಚ್ಚುಕಮ್ಮಿ ಎಲ್ಲರೂ ಸಾಮಾಜಿಕವಾಗಿ ದುರ್ಬಲವಾದ ಜಾತಿ ಮತ್ತು ವರ್ಗಗಳವರು, ಬಡತನದ ಹಿನ್ನೆಲೆಯುಳ್ಳವರು, ಗ್ರಾಮೀಣ ಪ್ರದೇಶಗಳವರು. ಮೇಲಾಗಿ, ಇವರಲ್ಲಿ ಎಷ್ಟೋ ಜನ ತಮ್ಮ ತಂದೆತಾಯಿ ಇಲ್ಲವೆ ಪೋಷಕರ ಇಚ್ಛೆಗೆ ವಿರುದ್ಧವಾಗಿ ಈ ನಾಟಕಶಾಲೆಗಳಲ್ಲಿ ಓದಿ, ಈಗ ವೃತ್ತಿನಿರತರಾಗಿದ್ದಾರೆ. ಆದ್ದರಿಂದ ಈ ಶಾಲೆಗಳಿಗೆ ಸೇರುವ ತರುಣತರುಣಿಯರ ವ್ಯಾಸಂಗಕ್ಕೆ ಸಮಾಜದ, ಅಂದರೆ ಸರ್ಕಾರದ ಧಾರಾಳ ನೆರವು ಬೇಕಾಗುತ್ತದೆ.

ಕರ್ನಾಟಕ ಸರ್ಕಾರವು ಈ ಶಾಲೆಗಳಲ್ಲಿನ ವಿದ್ಯಾರ್ಥಿಗಳ ವ್ಯಾಸಂಗ ವೇತನ, ಬೋಧಕವರ್ಗ ಮತ್ತು ಸಿಬ್ಬಂದಿಯ ಸಂಬಳ, ಸಾರಿಗೆ ಹಾಗೂ ಒಂದು ಮಿತಿಯಲ್ಲಿ, ಕಲಿಕೆಯ ಸಲುವಾಗಿ ಇವುಗಳಲ್ಲಿ ನಡೆಯುವ ನಾಟಕ ಪ್ರಯೋಗ– ಇದಕ್ಕೆಲ್ಲ ಬೇಕಾದ ಆರ್ಥಿಕ ಅನುದಾನವನ್ನು ಇಷ್ಟು ವರ್ಷಗಳ ಕಾಲವೂ ನೀಡುತ್ತಾ ಬಂದಿದೆ. ವಿದ್ಯಾರ್ಥಿಗಳ ಆ ವ್ಯಾಸಂಗ ವೇತನವು ಅವರಿಗೆ ಸರಳವಾದ ಊಟ, ತಿಂಡಿ ಮತ್ತು ವಸತಿ ನೀಡಲು ಬಳಕೆಯಾಗುತ್ತಾ ಬಂದಿದೆ. ಆದರೆ ಇಲ್ಲೊಂದು ತಾರತಮ್ಯ ಕಾಣುತ್ತದೆ. ಒಂದು ಶಾಲೆಯ ವಿದ್ಯಾರ್ಥಿಗಳಿಗೆ ತಿಂಗಳೊಂದಕ್ಕೆ ಐದು ಸಾವಿರ ರೂಪಾಯಿ ಕೊಡಲಾಗುತ್ತಿದ್ದರೆ, ಮತ್ತೊಂದು ಶಾಲೆಯವರಿಗೆ ಹಿಂದಿನ ಹದಿನೆಂಟು ವರ್ಷಗಳಿಂದಲೂ ತಿಂಗಳೊಂದಕ್ಕೆ ಬರೀ ಸಾವಿರದ ಇನ್ನೂರೈವತ್ತು ರೂಪಾಯಿ ಕೊಡಲಾಗುತ್ತಿದೆ. ಇಂದಿನ ದಿನ, ವಿದ್ಯಾರ್ಥಿಯೊಬ್ಬರಿಗೆ ಊಟ-ತಿಂಡಿ ಒದಗಿಸಲು ತಿಂಗಳಿಗೆ ಕನಿಷ್ಠ ನಾಲ್ಕೂವರೆ ಸಾವಿರ ರೂಪಾಯಿಯಾದರೂ ಬೇಕಾಗುತ್ತದೆ! ಆದರೆ ಅನುದಾನ ಹೆಚ್ಚಿಸಬೇಕೆಂದು ಆ ಶಾಲೆಯವರು ಎಷ್ಟು ಸಲ ಕೇಳಿಕೊಂಡರೂ ಸರ್ಕಾರವು ಮಿಸುಕಾಡಿಲ್ಲ. ಹಾಗಾಗಿ, ಆ ನಾಟಕಶಾಲೆಯು ಊಟ, ವಸತಿ, ಶಿಕ್ಷಣದ ಖರ್ಚುವೆಚ್ಚವನ್ನು ತುಂಬಿಕೊಳ್ಳಲು ತನ್ನ ವಿದ್ಯಾರ್ಥಿಗಳಿಂದ ಹತ್ತಾರು ಸಾವಿರ ರೂಪಾಯಿ ಶುಲ್ಕವನ್ನು ತೆಗೆದುಕೊಳ್ಳುವುದು ಈಗ ಅನಿವಾರ್ಯವಾಗಿದ್ದು, ಬಡವರ ಮಕ್ಕಳು ಅವರಲ್ಲಿ ರಂಗಶಿಕ್ಷಣವನ್ನು ಪಡೆದುಕೊಳ್ಳುವುದು ಅಸಾಧ್ಯವಾಗುತ್ತಿದೆ. ಆ ಶಾಲೆಯವರು ವಿದ್ಯಾರ್ಥಿಗಳ ವ್ಯಾಸಂಗದ ಭಾಗವಾದ ನಾಟಕ ಪ್ರಯೋಗಕ್ಕೂ, ಬೋಧನ ಸಾಮಗ್ರಿಯಂಥದ್ದಕ್ಕೂ ಬೇಕಾದ ಹಣವನ್ನು ಕೂಡ ಇದೀಗ ಬೇರೆಬೇರೆ ದಾನಿಗಳಿಂದ ಬಹಳ ಕಷ್ಟಪಟ್ಟು ಸಂಗ್ರಹಿಸುವಂತಾಗಿದೆ. ಅವರ ಪ್ರಯತ್ನ ಕೆಲವೊಮ್ಮೆ ಫಲ ನೀಡುತ್ತಿದೆ, ಕೆಲವೊಮ್ಮೆ ನೀಡುತ್ತಿಲ್ಲ.

ಆದರೆ, ಬೊಮ್ಮಾಯಿ ನೇತೃತ್ವದ ಸರ್ಕಾರವು ಈ ಎಲ್ಲ ಸತ್ಯ ಮತ್ತು ಅಗತ್ಯಗಳನ್ನು ಸಂಪೂರ್ಣ ನಿರ್ಲಕ್ಷಿಸಿ, ಆ ಶಾಲೆಗೆ ತಾನು ನೀಡುತ್ತಿದ್ದ ಕಡಿಮೆ ಮೊತ್ತದ ಅನುದಾನದಲ್ಲಿಯೂ ದೊಡ್ಡ ಕಡಿತ ಮಾಡಿಬಿಟ್ಟಿತು. ಒಟ್ಟು ಶಿಕ್ಷಣ ಸಂಸ್ಕೃತಿ ಮತ್ತು ಆರ್ಥಿಕತೆಯನ್ನು ಸಾರ್ವಜನಿಕ ವಲಯದಿಂದ ದೂರಮಾಡಿ ಖಾಸಗೀಕರಣದತ್ತ ದೂಡಿದ್ದಕ್ಕೆ ಅದರ ಆ ತೀರ್ಮಾನವು ಮತ್ತೊಂದು ಉದಾಹರಣೆ.

ಅಗಾಧ ಗಹನ, ವಿಸ್ತಾರವಾದ ಭಾವನೆ ಮತ್ತು ವಿಚಾರಗಳನ್ನು ಭಾಷೆಯಲ್ಲಿ ದಾಖಲು ಮಾಡಿ ತಲೆಮಾರಿನಿಂದ ತಲೆಮಾರಿಗೆ ದಾಟಿಸುವುದು ಮನುಷ್ಯತ್ವದ ಅತ್ಯಂತ ಮುಖ್ಯವಾದ ಕುರುಹು. ಕಾವ್ಯವು ಭಾಷೆಯ ಉತ್ತುಂಗಸ್ಥಿತಿ, ನಾಟಕವೆಂಬ ಪ್ರಕಾರವು ಕಾವ್ಯಪ್ರಕಾರದಲ್ಲಿಯೇ ರಮ್ಯ, ಉತ್ಕೃಷ್ಟವಾದದ್ದು. ನಾಟಕದ ಅತಿ ಎತ್ತರದ ದೆಸೆ ನಾಟ್ಯ ಅರ್ಥಾತ್ ರಂಗಪ್ರಯೋಗ. ಉತ್ಕೃಷ್ಟವಾದ ರಂಗಪ್ರಯೋಗವನ್ನು ಮಾಡಲು, ಸವಿಯಲು ಬೇಕಾದ ಸ್ಥಿತಿ ಮನುಷ್ಯತ್ವದ ಅತಿ ಎತ್ತರದ ಸ್ಥಿತಿಗಳಲ್ಲೊಂದು. ಅಂಥ ಸ್ಥಿತಿಗೆ ನಮ್ಮನ್ನು ಕೊಂಡೊಯ್ಯಬಲ್ಲ ಕಲಾವಿದರು, ಅವರನ್ನು ತಯಾರು ಮಾಡುವ ರಂಗಶಾಲೆಗಳು ನಮ್ಮ ನಾಡಿಗೆ ಬೇಡವೇ?

ಪ್ರಜಾಸತ್ತೆ ಉಳಿಯಬೇಕಾದರೆ ರಂಗಭೂಮಿ ಉಳಿಯಬೇಕು. ರಂಗಭೂಮಿಯ ಗುಣಮಟ್ಟ ಬೆಳೆಯುತ್ತ, ಕಲೆಗಾರಿಕೆಯ ಹೊಸ ಹಾದಿಗಳು ತೆರೆದುಕೊಳ್ಳಬೇಕಾದರೆ, ವಿಜ್ಞಾನ, ತಂತ್ರಜ್ಞಾನ, ಸಂಗೀತ, ಸಿನಿಮಾ, ಚಿತ್ರಕಲೆಯಂತಹ ಕ್ಷೇತ್ರಗಳಲ್ಲಿಯಂತೆಯೇ ನಾಟಕರಂಗದಲ್ಲಿಯೂ ಉತ್ಕೃಷ್ಟವಾದ ವೃತ್ತಿಪರತೆ ಇರಬೇಕು. ಅದಕ್ಕಾಗಿ ರಂಗಕಲೆಯ ಇಂಥ ಶಾಲೆಗಳು ಬೇಕು. ಆದ್ದರಿಂದ, ಕರ್ನಾಟಕದ ಇಂದಿನ ಸರ್ಕಾರವು ಈ ಶಾಲೆಗಳಿಗೆ ಈ ಶೈಕ್ಷಣಿಕ ವರ್ಷದಿಂದಲೇ ಧಾರಾಳ ಅನುದಾನ ಮತ್ತು ನೆರವು ನೀಡಬೇಕಿದೆ.

ಚುರುಮುರಿ



ಸ್ಥಾನ'ಮಾನ'

• ಬಿ.ಎನ್.ಮಲ್ಲೇಶ್

'ಹಲೋ... ಮಿನಿಸ್ಟ್ರು ಸಾಹೇಬ್ರೆ, ನಾನು ತೆಪರೇಸಿ. ಏನಾ, ಮಿನಿಸ್ಟ್ರಾದ ಮೇಲೆ ನಮ್ಮನ್ನ ಮರೆತೇಬಿಟ್ರ?'

'ಇಲ್ಲ ಕಣಯ್ಯ ಬಿಜಿ ಇದ್ದೆ, ಏನ್ಸಮಾಚಾರ?'

'ಸರ್ಕಾರದಲ್ಲಿ ನಮ್ಗೂ ಏನಾದ್ರು ಸ್ಥಾನಮಾನ ಕೊಡ್ಸಿ ಸಾ. ನಿಮ್ಮನ್ನು ಗೆಲ್ಸಾಕೆ ಎಷ್ಟು ಕಷ್ಟ ಪಟ್ಟಿದೀವಿ... ನಿಮಗೇ ಗೊತ್ತಲ್ಲ'.

'ಗೊತ್ತು ಕಣಯ್ಯ, ಏನು ಸ್ಥಾನಮಾನ ಬೇಕು ನಿಂಗೆ?'

'ಒಂದು ಎಮ್ಮೆಲ್ಸಿ ಮಾಡ್ಸಿಬಿಡಿ ಸಾ, ಸಾಯಾತಂಕ ನಿಮ್ ಹೆಸರೇಳ್ಕಂಡು ಇರ್ತೀನಿ' ತೆಪರೇಸಿ ತೊದಲಿದ.

'ಏಯ್, ಎಮ್ಮೆಲ್ಸಿ ಅಂದ್ರೆ ಏನಂತ ತಿಳಿದಿದಿ? ಬೆಳಬೆಳಿಗ್ಗೆ ಆಗ್ಲೇ ತಗಂಡಿದೀಯಾ?' ಸಚಿವರಿಗೆ ಸಿಟ್ಟು ಬಂತು.

'ರಾತ್ರಿದು ಸ್ವಲ್ಪ ಉಳಿದಿತ್ತು ಸಾ... ಅಷ್ಟೆ, ಜಾಸ್ತಿ ಏನಿಲ್ಲ'.

'ಅಲ್ಲ ಮೇಲ್ಮನೆ ಅಂದ್ರೆ ಏನ್ ತಮಾಷೆನಾ. ಕೇಳಾಕಾದ್ರು ಮರ್ವಾದಿ ಬೇಡ್ವಾ?'

'ಗೊತ್ತು ಸಾ, ಅದು ಮೇಲ್ಮನೆ ಅಲ್ಲ, ದುಡ್ಡಿನ ಮನೆ ಅಂತ. ಆದ್ರೆ ನಮ್ಹತ್ರ ದುಡ್ಡು ಎಲ್ಲೈತೆ?'

'ಅದೆಲ್ಲ ಆಗಲ್ಲ, ಯಾವುದಾದ್ರು ನಿಗಮ, ಮಂಡಳಿಗೆ ಮೆಂಬರ್ ಮಾಡ್ಸೋಣ ಬಿಡು'.

'ಹಂಗಾರೆ ಬಿಡಿಎ ಅಥವಾ ಕೆಪಿಎಸ್‌ಸಿ ಮೆಂಬರ್ ಮಾಡ್ಸಿ, ಅಡ್ಜಸ್ಟ್ ಮಾಡ್ಕಂತೀನಿ'.

'ಏಯ್, ಅದೆಲ್ಲ ಏನು ಜುಜುಬಿ ಅನ್ಕಂಡ್ಯಾ? ಅವಕ್ಕೆಲ್ಲ ಭಾಳ ಡಿಮಾಂಡ್ ಐತೆ, ಬೇಕಾದ್ರೆ ಮುನ್ಸಿಪಾಲ್ಟಿ ನಾಮಿನಿ ಮಾಡಿಸ್ತೀನಿ ಹೋಗು'.

'ಯಾಕೆ ಕಸ ಹೊಡಿಯಾಕಾ? ಅದೆಲ್ಲ ಏನೂ ಬೇಕಿಲ್ಲ. ಒಂದ್ ಕೆಲ್ಸ ಮಾಡಿ, ನನ್ನ ಡೆಪ್ಟಿ ಸ್ಪೀಕರ್ ಮಾಡಿಸ್ತೀರಾ? ಅದು ಯಾರ್ಗೂ ಬ್ಯಾಡಂತೆ ಈಗ'.

'ಯಾಕೆ ಸ್ಪೀಕರ್ರೇ ಆಗಿಬಿಡು...' ಸಚಿವರು ರಾಂಗಾದರು.

'ಸ್ಪೀಕರ್ರಾ? ಒಂದೇ ಮನೇಲಿ ಇಬ್ಬಿಬ್ರು ಸ್ಪೀಕರ್ ಹೆಂಗ್ಸಾ? ನನ್ನೆಂಡ್ತಿ ಒಪ್ಪಲ್ಲ'.

'ನಿನ್ ತಲೆಹರಟೆ ಎಲ್ಲ ಬ್ಯಾಡ, ಇಡು ಫೋನು'.

'ಆತು ಬಿಡಿ, ನೀವು ಹಿಂಗೆಲ್ಲ ಮಾತಾಡಿದ್ರೆ ನಾನು ವಿರೋಧ ಪಕ್ಷದ ನಾಯಕ ಆಗ್ತೀನಿ. ವಿಧಾನಸಭೇಲಿ ಹೆಂಗೂ ಅದು ಖಾಲಿ ಐತಲ್ಲ'.

ಸಚಿವರು ಫೋನ್ ಕಟ್ ಮಾಡಿದರು.

ದಿನದ ಟ್ವೀಟ್

ಹೆಸರಿಡುವ ಅವಕಾಶವಿರಲಿ

ಚಂಡಮಾರುತಗಳಿಗೆ ಹೆಸರಿಡುವ ರೀತಿಯಲ್ಲೇ ಕೇಂದ್ರ ಸರ್ಕಾರದ ಯೋಜನೆಗಳಿಗೂ ಹೆಸರಿಡುವ ಪದ್ಧತಿ ಜಾರಿಗೆ ಬರಬೇಕು. ಯೋಜನೆಗಳಿಗೆ ತಮ್ಮ ಭಾಷೆಯಲ್ಲಿ ಹೆಸರಿಡುವ ಅವಕಾಶ ರಾಜ್ಯಗಳಿಗೆ ಒದಗಿ ಬರಬೇಕು. ಎಲ್ಲ ಯೋಜನೆಗಳಿಗೂ ಹಿಂದಿ ಹೆಸರುಗಳನ್ನೇ ಇಡುವ ಅಗತ್ಯವಿಲ್ಲ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ಯುದ್ಧ ಕ್ರೌರ್ಯದ ಪರಾಕಾಷ್ಠೆ. ವಿಶ್ವದ ಬೃಹತ್ ಅಣೆಕಟ್ಟು ಕಖೋವ್ಕಾ ಅನ್ನು ಒಡೆಯಲಾಗಿದೆ. ಒಡೆದವರು ನಾನಲ್ಲ- ನಾನೂ ಅಲ್ಲ ಎನ್ನುತ್ತಿದ್ದಾರೆ. ಲಕ್ಷಾಂತರ ಜನರಿಗೆ ಕುಡಿಯಲು, ಕೃಷಿ ಮಾಡಲು, ಮೀನು ಸಾಕಲು, ವಿದ್ಯುತ್ ಪಡೆಯಲು ಬೇಕಾದ ಜೀವದಾಯಿಯ ಗರ್ಭ ಸೀಳುವ ಮಾನವನ ಈ ಅತಿರೇಕ ಎಲ್ಲಿಗೆ ಮುಟ್ಟುತ್ತದೆ? ಶಿಕ್ಷಣ ಮತ್ತು ನಾಗರಿಕತೆ ಎಲ್ಲೋ ನಾಪತ್ತೆಯಾಗಿವೆ.

ನಾಗತಿಹಳ್ಳಿ ಚಂದ್ರಶೇಖರ, ಚಲನಚಿತ್ರ ನಿರ್ದೇಶಕ

25 ವರ್ಷಗಳ ಹಿಂದೆ

ಮಂಗಳವಾರ, 9-6-1998

• **ಅಯೋಧ್ಯೆ: ಕೋರ್ಟ್ ತೀರ್ಪು ಜಾರಿಗೆ ಲೋಕಸಭೆಯಲ್ಲಿ ಭರವಸೆ**

ನವದೆಹಲಿ, ಜೂನ್ 8– ವಿವಾದಿತ ಅಯೋಧ್ಯೆ ನಿವೇಶನದ ಬಗೆಗೆ ಸುಪ್ರೀಂ ಕೋರ್ಟ್ ನೀಡುವ ತೀರ್ಪು ಹಾಗೂ ಸಂವಿಧಾನವನ್ನು ಎತ್ತಿ ಹಿಡಿಯುವುದಾಗಿ ಪ್ರಧಾನಿ ವಾಜಪೇಯಿ ಮತ್ತು ಗೃಹ ಸಚಿವ ಲಾಲ್ ಕೃಷ್ಣ ಅಡ್ವಾಣಿ ಅವರು ಇಂದು ಲೋಕಸಭೆಯಲ್ಲಿ ಪುನರುಚ್ಚರಿಸಿದರು.

ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ಯಾವುದೇ ಸಂಘಟನೆಯು ನಡೆದುಕೊಂಡರೆ ಕಾನೂನು ವ್ಯವಸ್ಥೆ ಅದನ್ನು ನೋಡಿಕೊಳ್ಳುವುದು ಎಂದರು.

ಆದರೆ, ರಾಮಮಂದಿರ ನಿರ್ಮಾಣಕ್ಕೆ ವಿಎಚ್‌ಪಿ ಮತ್ತು ಬಜರಂಗದಳ ನಡೆಸುತ್ತಿರುವ ಸಿದ್ಧತೆಯ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸಿ ಪ್ರತಿಪಕ್ಷಗಳ ಸದಸ್ಯರು ಸುಮಾರು ಅರ್ಧ ಗಂಟೆ ಕಾಲ ಗದ್ದಲ ನಡೆಸಿದರು.

• **ಅಸಮಾನತೆ ನಿವಾರಣೆಗೆ ಕೇಂದ್ರಕ್ಕೆ ಮನವಿ**

ಬೆಂಗಳೂರು, ಜೂನ್ 8– ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಪ್ರದೇಶಗಳಲ್ಲಿನ ಅಸಮತೋಲನ ಹೋಗಲಾಡಿಸಲು ಪ್ರಾದೇಶಿಕ ಮೀಸಲಾತಿ ಕಲ್ಪಿಸುವುದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ಕೇಂದ್ರಕ್ಕೆ ಶಿಫಾರಸು ಮಾಡಲು ಹಾಗೂ ಸ್ಟಾಪ್‌ಗ್ಯಾಪ್ ಅಧ್ಯಾಪಕರನ್ನು ಕಾಯಂಗೊಳಿಸಲು ಸರ್ಕಾರ ಇಂದು ನಿರ್ಧಾರ ಕೈಗೊಂಡಿತು.

50 ವರ್ಷಗಳ ಹಿಂದೆ

ಶನಿವಾರ, 9-6-1973

• **'ಕಾಗದದ ಚೂರು' ಹೇಳಿಕೆಗೆ ಸಚಿವರ ವಿಷಾದ**

ಬೆಂಗಳೂರು, ಜೂನ್ 8– ಕೃಷಿ ಕೈಗಾರಿಕಾ ಕಾರ್ಪೊರೇಷನ್‌ಗೆ ಸಂಬಂಧಿಸಿದಂತೆ ವಿಧಾನಮಂಡಲದ ಸಾರ್ವಜನಿಕ ಉದ್ಯಮ ಸಮಿತಿ ನೀಡಿದ ವರದಿ 'ಕಾಗದದ ಚೂರು' ಎಂಬ ನಿನ್ನೆಯ ಕೃಷಿ ಮಂತ್ರಿಗಳ ಟೀಕೆ, ಅವರನ್ನು ಇಂದು ವಿಧಾನ ಪರಿಷತ್ತಿನಲ್ಲಿ ಪಟ್ಟು ಹಿಡಿದ ವಿರೋಧ ಪಕ್ಷದವರಿಂದ ಹಕ್ಕುಬಾಧ್ಯತೆ ಸೂಚನೆಯ ದಾಳಿಯನ್ನು ಎದುರಿಸುವಂತೆ ಮಾಡಿತು.

ಸೂಚನೆಯ ಅಂಗೀಕಾರ ನಿರ್ಣಯದ ನಿರ್ಧಾರವನ್ನು ಮುಂದೆ ನೀಡುವುದಾಗಿ ಸಭಾಪತಿ ಶ್ರೀ ಎಸ್.ಡಿ. ಗಾಂವ್‌ಕರ್ ಅವರು ಹೇಳಿದರೂ, ಪ್ರಾರಂಭದ ಸುಮಾರು ಅರ್ಧಗಂಟೆಯ ಕಾರ್ಯಕಲಾಪ ಬಿಟ್ಟರೆ, ಇಡೀ ದಿನ ಬೇರೆ ಯಾವ ಕಲಾಪಕ್ಕೂ ಅವಕಾಶ ಕೊಡದಂತೆ ತಡೆಯುವುದರಲ್ಲಿ ವಿರೋಧ ಪಕ್ಷ ಯಶಸ್ವಿಯಾಯಿತು.

ದೀರ್ಘಕಾಲದ ಗೊಂದಲದಿಂದಾಗಿ, ಒಂದು ಘಟ್ಟದಲ್ಲಿ ಸಭೆಯು ಸುಮಾರು ಎರಡೂ ಮುಕ್ಕಾಲು ಗಂಟೆಗಳ ಕಾಲ ಮುಂದಕ್ಕೆ ಹೋಗಿ, ಕೊನೆಗೆ ಐದು ನಿಮಿಷಗಳ ಕಾಲ ಸೇರಿದಾಗ, ಸಚಿವ ಶ್ರೀ ಕೆ.ಎಚ್. ಪಾಟೀಲರು, 'ತಮ್ಮ ನಿನ್ನೆಯ ಕೆಲವು ಮಾತುಗಳಿಂದ ಸದಸ್ಯರಿಗೆ ನೋವಾಗಿದ್ದರೆ, ಅಂಥ ಮಾತುಗಳನ್ನು ವಾಪಸು ಪಡೆದುಕೊಳ್ಳುವುದಾಗಿ ವಿಷಾದ' ಸೂಚಿಸಿದರು.

• **ಪ್ರಸಕ್ತ ಸಾಲಿನಿಂದ ಬಿ.ಆರ್. ಪ್ರಾಜೆಕ್ಟಿನಲ್ಲಿ ಮೈಸೂರು ವಿ.ವಿ. ಸ್ನಾತಕೋತ್ತರ ಕೇಂದ್ರ**

ಶಿವಮೊಗ್ಗ, ಜೂನ್ 8– ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವನ್ನು ಈ ಶಿಕ್ಷಣ ಸಾಲಿನಿಂದಲೇ ಇಲ್ಲಿಗೆ 18 ಮೈಲಿಗಳ ದೂರದಲ್ಲಿರುವ ಬಿ. ಆರ್. ಪ್ರಾಜೆಕ್ಟಿನಲ್ಲಿ ಆರಂಭಿಸಲಾಗುವುದೆಂದು ಆ ಪ್ರದೇಶವನ್ನು ಪರಿಶೀಲಿಸಿದ ಶಿಕ್ಷಣ ಸಚಿವ ಶ್ರೀ ಎ.ಆರ್. ಬದರಿನಾರಾಯಣ್ ಅವರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಸಂಗತ

ಎಸ್‌ಎಸ್‌ಎಲ್‌ಸಿ: ಇರಲಿ ಮುನ್ನೋಟ

ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶಕ್ಕೆ ಮೂರು ವರ್ಷಗಳ ಮುನ್ನೋಟವನ್ನು ಹೊಂದಿದ ಯೋಜನೆ ಸಿದ್ಧಪಡಿಸುವುದು ಪರಿಣಾಮಕಾರಿ

• ಡಾ. ಎಚ್.ಬಿ.ಚಂದ್ರಶೇಖರ್

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಒಂದೆರಡು ತಿಂಗಳು ಇರುವಾಗ, ಫಲಿತಾಂಶ ಹೆಚ್ಚಿಸುವ ಕಾರ್ಯತಂತ್ರ ಮತ್ತು ಕಾರ್ಯಚಟುವಟಿಕೆ ಬಗ್ಗೆ ಎಲ್ಲಾ ಶಾಲೆಗಳಲ್ಲಿ ಗಮನ ನೀಡಲಾಗುತ್ತದೆ. ಇದು, ವಿಷಯವಾರು ತೇರ್ಗಡೆ, ಶಿಕ್ಷಕರಿಂದ ವಿದ್ಯಾರ್ಥಿಗಳ ಮನೆ ಮನೆ ಭೇಟಿಯಂತಹ ಅಂಶಗಳನ್ನು ಒಳಗೊಂಡಿರುತ್ತದೆ. ಆದರೆ ಶೈಕ್ಷಣಿಕ ವರ್ಷದ ಆರಂಭದಿಂದಲೇ ಈ ದಿಸೆಯಲ್ಲಿ ಕ್ರಮ ಕೈಗೊಳ್ಳುವುದು ಒಂದಷ್ಟು ಉತ್ತಮ ಪರಿಣಾಮ ಬೀರಬಲ್ಲದು.

ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯ ಆಡಳಿತವು ಜಿಲ್ಲೆಯ ವ್ಯಾಪ್ತಿಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಿಸಲು ಅನುಸರಿಸಬೇಕಾದ ಕ್ರಮಗಳ ಕುರಿತು ಪರ್ಯಾಲೋಚಿಸಲು ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನು ಒಳಗೊಂಡ ಚಿಂತನಾಶೀಲ ಸಭೆಯನ್ನು ಇತ್ತೀಚೆಗೆ ಹಮ್ಮಿಕೊಂಡಿತ್ತು. ಈ ಸಭೆಯಲ್ಲಿ ಹೊರಬಂದ ಒಂದಷ್ಟು ಅಂಶಗಳು ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳಕ್ಕೆ ದಿಕ್ಸೂಚಿಯಾಗಬಹುದು.

ಜಿಲ್ಲೆಯಲ್ಲಿ ಅತ್ಯುತ್ತಮ ಫಲಿತಾಂಶ ಪಡೆದ ಶಾಲೆಗಳನ್ನು ಗಮನಿಸಿದಲ್ಲಿ, ಆಯಾ ಶಾಲೆಯ ಎಲ್ಲಾ ಶಿಕ್ಷಕರು ಸಾಂಘಿಕ ಪ್ರಯತ್ನ ನಡೆಸಿರುವುದು, ಶಾಲಾ ಅವಧಿಯ ನಂತರವೂ ಪೋಷಕರ ಸಹಕಾರ, ಬೆಂಬಲದ ಬಲದಿಂದ ವಿದ್ಯಾರ್ಥಿಗಳನ್ನು ನಿರಂತರವಾಗಿ ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಸಿರುವುದು ಕಂಡುಬರುತ್ತದೆ. ವಿವಿಧ ವಿಷಯಗಳನ್ನು ಬೋಧಿಸುವ ಶಿಕ್ಷಕರೆಲ್ಲರೂ ಜೊತೆಗೂಡಿ ಪ್ರತಿ ವಿದ್ಯಾರ್ಥಿಯ ಬಲ, ಕೊರತೆಗಳ ಬಗ್ಗೆ ಪರಸ್ಪರ ಚರ್ಚಿಸುತ್ತಾ ಸಮಸ್ಯೆ, ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ವಿಧಾನವನ್ನು ಅನುಸರಿಸಿದ ಶಾಲೆಗಳು ಫಲಿತಾಂಶ ಹೆಚ್ಚಳದಲ್ಲಿ ಯಶ ಕಂಡಿವೆ.

ಹೆಚ್ಚಿನ ಶಾಲೆಗಳು ಗುಣಮಟ್ಟದ ಶಿಕ್ಷಣ, ಫಲಿತಾಂಶ ಹೆಚ್ಚಳಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ನಿಗದಿಪಡಿಸಿರುವ ಮಾದರಿಯಲ್ಲಿ ಶಾಲಾ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುತ್ತವೆ. ಆದರೆ ಹೆಚ್ಚಿನ ಶಾಲೆಗಳು ವಿವಿಧ ಮಾಹಿತಿಗಳನ್ನು ಒಳಗೊಂಡ ನಮೂನೆಯನ್ನು ಭರ್ತಿ ಮಾಡಿ, ಯೋಜನೆಯನ್ನು ಸಿದ್ಧಪಡಿಸಿದ ಶಾಸ್ತ್ರ ಮಾಡುತ್ತವೆ. ಇಂತಹ ಯೋಜನೆಯಿಂದ ಹೆಚ್ಚಿನ ಸಹಾಯವಾಗದು. ಯೋಜನೆ ಸಿದ್ಧಪಡಿಸುವ ಮೊದಲು ಎಲ್ಲಾ ವಿಷಯ ಶಿಕ್ಷಕರು ಸಮಾಲೋಚನೆ ನಡೆಸಿ, ಶಾಲೆಯ ಪರಿಸ್ಥಿತಿ, ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ಅನುಗುಣವಾಗಿ, ಯಾವ ಕಾರ್ಯಚಟುವಟಿಕೆಯನ್ನು ಯಾವಾಗ ಹಮ್ಮಿಕೊಳ್ಳಬೇಕು ಎಂಬುದರ ಚಿಂತನ ಮಂಥನ ನಡೆಸಬೇಕು. ಈ ಕುರಿತ ವಿವರಗಳನ್ನು ಪಟ್ಟಿ ಮಾಡಬೇಕು. ಪೋಷಕರ ಸಹಭಾಗಿತ್ವ ಪಡೆಯುವ ವಿಧಾನಗಳ ಕುರಿತೂ ಸಮಾಲೋಚನಾ ಸಭೆಗಳಲ್ಲಿ ಚರ್ಚೆ ನಡೆಸಬೇಕು. ಇದಕ್ಕಾಗಿ ಪೋಷಕರ ಸಭೆ ನಡೆಸಿ, ಅವರ ಸಲಹೆ, ಅಭಿಪ್ರಾಯ ಮತ್ತು ಮಾರ್ಗದರ್ಶನವನ್ನು ಪಡೆಯುವುದು ಪರಿಣಾಮಕಾರಿ ಆಗಬಲ್ಲದು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಹೆಚ್ಚಳಕ್ಕೆ ಒಂದು ವರ್ಷದ ಯೋಜನೆಗಿಂತಲೂ ಮೂರು ವರ್ಷಗಳ ಮುನ್ನೋಟವನ್ನು ಹೊಂದಿದ ಯೋಜನೆಯನ್ನು ಸಿದ್ಧಪಡಿಸುವುದು ಹೆಚ್ಚು ಉತ್ತಮ. ಪ್ರಸಕ್ತ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಾಗೂ ಮುಂದಿನ ಎರಡು ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಅಭಿವೃದ್ಧಿಪಡಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಈ ಮುನ್ನೋಟ ಯೋಜನೆ ಹೊಂದಿರಬಹುದು.

ಪ್ರೌಢಶಾಲೆ ಪ್ರವೇಶಿಸುವ ಹಲವಾರು ವಿದ್ಯಾರ್ಥಿಗಳಲ್ಲಿ ಕಲಿಕೆಗೆ ಸಂಬಂಧಿಸಿದಂತೆ ಅನೇಕ ಮಿತಿಗಳು ಇರುತ್ತವೆ. ಕೆಲವರಿಗೆ ಓದುವ, ಬರೆಯುವ, ಸರಳ ಲೆಕ್ಕಾಚಾರ ಕೌಶಲದ ಕೊರತೆಯೂ ಇರುತ್ತದೆ. ಆಗ ಸಾಮಾನ್ಯವಾಗಿ ಪ್ರೌಢಶಾಲಾ ಶಿಕ್ಷಕರು 'ಪ್ರಾಥಮಿಕ ಶಾಲಾ ಶಿಕ್ಷಕರು ಸರಿಯಾಗಿ ಬೋಧಿಸದೇ ಇದ್ದದ್ದರಿಂದ ಈ ವಿದ್ಯಾರ್ಥಿಗಳಿಗೆ ಕಲಿಸುವುದು ಕಷ್ಟವಾಗುತ್ತಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ಮಾತಿನಲ್ಲಿ ನಿಜಾಂಶ ಇದೆಯಾದರೂ ವಿದ್ಯಾರ್ಥಿ ತಮ್ಮ ಶಾಲೆಗೆ ಬಂದಾದ ಮೇಲೆ, ಆತನಲ್ಲಿ ಇರಬಹುದಾದ ಕಲಿಕಾ ಮಿತಿಗಳನ್ನು ಗುರುತಿಸಿ, ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಈ ಕಾರ್ಯವನ್ನು ವಿದ್ಯಾರ್ಥಿ 8ನೇ ತರಗತಿಯಲ್ಲಿ ಇದ್ದಾಗಲೇ ಮಾಡಿದರೆ, ಆತ 10ನೇ ತರಗತಿಗೆ ಬರುವ ವೇಳೆಗೆ ಮೂಲಭೂತ ಕೌಶಲಗಳ ಕೊರತೆ ಇಲ್ಲದೇ ವಿಷಯಗಳಲ್ಲಿನ ಪರಿಕಲ್ಪನೆಗಳನ್ನು ಕರಗತ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಹಿಂದಿನ ಎರಡು ವರ್ಷಗಳಲ್ಲಿ ಇಂತಹ ಕ್ರಮಗಳನ್ನು ತೆಗೆದುಕೊಳ್ಳದಿದ್ದಾಗ್ಯೂ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿ-ಗಳಲ್ಲಿರುವ ಮೂಲಭೂತ ಕೌಶಲಗಳ ಕೊರತೆಯನ್ನು ಜೂನ್ ತಿಂಗಳಿನಲ್ಲಿಯೇ ಗುರುತಿಸುವುದು, ಪರಿಹಾರಕ್ಕಾಗಿ ಕ್ರಮ ತೆಗೆದುಕೊಳ್ಳುವುದು ಉತ್ತಮ ಹೆಜ್ಜೆಯಾಗುತ್ತದೆ.

ಮುನ್ನೋಟ ಯೋಜನೆಯನ್ನು ಶಾಲಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಶಾಲೆಯು ಗುಣಮಟ್ಟ ಕುರಿತಾದ ತನ್ನ ಬದ್ಧತೆಯನ್ನು ಪ್ರದರ್ಶಿಸಬಹುದು. ಇದು ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಒಂದಷ್ಟು ಸೌಮ್ಯ ಒತ್ತಡ ಸೃಷ್ಟಿಗೆ ನೆರವಾಗುವುದರ ಜೊತೆಗೆ, ಅವರಲ್ಲಿ ಸಾಧನೆಯ ಕನಸು ಚಿಗುರೊಡೆಯಲು ನೆರವಾಗುತ್ತದೆ. ಸಾಧಿಸುವ ಕನಸಿನ ಬೀಜವು ಗಿಡವಾಗಿ ಬೆಳೆದು, ಮರವಾಗಿ ಫಲ ನೀಡಲು ಮುಖ್ಯ ಶಿಕ್ಷಕರ ನೇತೃತ್ವದಲ್ಲಿ, ಪೋಷಕರ ಸಹಕಾರದಿಂದ ಎಲ್ಲಾ ಶಿಕ್ಷಕರು ಒಂದು ತಂಡವಾಗಿ ಕಾರ್ಯನಿರ್ವಹಿಸ ಬೇಕಾಗುತ್ತದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳ ಗೈರುಹಾಜರಿಯನ್ನು ನಿಯಂತ್ರಿಸುವು-ದರ ಜೊತೆಗೆ ಅವರಲ್ಲಿ ಸಾಧಿಸುವ ತುಡಿತ, ಹುಮ್ಮಸ್ಸನ್ನು ಹುಟ್ಟಿಸಿ, ಕ್ರಿಯಾಶೀಲ ರನ್ನಾಗಿ ಮಾಡುವಲ್ಲಿ ಶಿಕ್ಷಕರು ಯಶ ಕಾಣುವುದು ಅಗತ್ಯವಾದ ಅಂಶವಾಗಿದೆ.

ವಾಚಕರ ವಾಣಿ

ಜಲಮಂಡಳಿಯ ನಷ್ಟಕ್ಕಿದೆ ಹಲವು ಕಾರಣ

'ಜಲಮಂಡಳಿಯ ಆರ್ಥಿಕ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ವೇತನ ಹಾಗೂ ವಿದ್ಯುತ್ ಬಿಲ್ ಪಾವತಿಸಲೂ ಹಣವಿಲ್ಲ. ಸಿಬ್ಬಂದಿ ಬಹಳಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಜೂನ್ 7). ಇದಕ್ಕೆಲ್ಲಾ ಕಾರಣ, ಬಹಳಷ್ಟು ವರ್ಷಗಳಿಂದ ಒಂದೇ ಸ್ಥಳದಲ್ಲಿ ಅಚ್ಚುಕಟ್ಟಾಗಿ ಮೊಕ್ಕಾಂ ಹೂಡಿರುವ ಸಿಬ್ಬಂದಿ ಎಂಬುದು ಮೇಲ್ನೋಟಕ್ಕೇ ಕಂಡುಬರುವ ಸಂಗತಿ.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಜಲ ಜೀವನ್ ಮಿಷನ್ ಕಾರ್ಯಕ್ರಮವನ್ನು ಅಧಿಕಾರಿಗಳು ಯಥಾವತ್ತಾಗಿ ಜಾರಿಗೊಳಿಸದೆ, ರಾಜಕಾರಣಿಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಸೂಕ್ತ ಫಲಾನುಭವಿಗಳಿಗೆ ಸಂಪರ್ಕ ನೀಡದೆ ಉಳ್ಳವರು, ನೀರು ವ್ಯಾಪಾರಿಗಳು, ಕೇಟರಿಂಗ್ ಮಾಡುವವರು ಹಾಗೂ ಕಾರ್ಖಾನೆಗಳಿಗೆ ಅನಧಿಕೃತ ಸಂಪರ್ಕ ನೀಡುವ ಮೂಲಕ ಜಲಮಂಡಳಿಯ ನಷ್ಟಕ್ಕೆ ಕಾರಣರಾಗಿದ್ದಾರೆ. ಕೆಲವು ಕಟ್ಟಡಗಳ ಮಾಲೀಕರು ಈ ಯೋಜನೆಯಡಿ ಉಚಿತ ಸಂಪರ್ಕ ಪಡೆದು, ತಮ್ಮ ಬಾಡಿಗೆದಾರರಿಂದ ತಿಂಗಳಿಗೊಮ್ಮೆ ಹಣ ವಸೂಲಿ ಮಾಡುತ್ತಾ ಅವರನ್ನು ಶೋಷಿಸುತ್ತಿರುವುದಲ್ಲದೆ, ಸರ್ಕಾರದ ಕಣ್ಣಿಗೂ ಮಣ್ಣೆರಚುತ್ತಿದ್ದಾರೆ. ಮಹಾನಗರಪಾಲಿಕೆ ಹಾಗೂ ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ) ಅಳವಡಿಸುವ ಇಂಟರ್ನೆಟ್ ಕಂಪನಿಗಳು ರಸ್ತೆಗಳನ್ನು ಬೇಕಾಬಿಟ್ಟಿ ಅಗೆಯುವ ಮೂಲಕ, ಜಲಮಂಡಳಿಯ ನಷ್ಟಕ್ಕೆ ತಮ್ಮ ಕೊಡುಗೆಯನ್ನೂ ನೀಡುತ್ತಿವೆ. ಚುನಾವಣೆಗೆ ಮುನ್ನ ಮೇಲಧಿಕಾರಿಗಳು ಹಾಗೂ ಅಂದಿನ ನಗರಾಭಿವೃದ್ಧಿ ಸಚಿವರು ನಗರದ ಯಾವುದೇ ಬಡಾವಣೆಗೆ ಪ್ರದಕ್ಷಿಣೆ ಹಾಕಿದ್ದರೆ, ಕೆಳಹಂತದ ಅಧಿಕಾರಿಗಳ ಇಂತಹ ಕರ್ಮಕಾಂಡ ಜಗಜ್ಜಾಹೀರಾಗುತ್ತಿತ್ತು. ಹೊಸ ನಗರಾಭಿವೃದ್ಧಿ ಸಚಿವರು ಇತ್ತ ಗಮನಹರಿಸಬೇಕಾಗಿದೆ.

ಟಿ. ಉಮಾಶಂಕರ್ ಲಕ್ಷ್ಮೀಪುರ, ಬೆಂಗಳೂರು

ಚಾಲಕನ ನಿರ್ಲಕ್ಷ್ಯ ಅಲ್ಲ

ಬೀದರ್‌ನ ಔರಾದ್‌ನಲ್ಲಿ ಪ್ರಯಾಣಿಕನೊಬ್ಬ ಇತ್ತೀಚೆಗೆ ಸ್ವತಃ ಬಸ್ ಚಲಾಯಿಸಿಕೊಂಡು ಹೋಗಿ ಅಪಘಾತಕ್ಕೆ ಕಾರಣನಾಗಿದ್ದಕ್ಕೆ, ಬಸ್‌ನಲ್ಲೇ ಕೀ ಬಿಟ್ಟುಹೋಗಿದ್ದ ಚಾಲಕನ ನಿರ್ಲಕ್ಷ್ಯವೇ ಕಾರಣ ಎಂದು ಡಾ. ಎಚ್.ತುಕಾರಾಂ ಆರೋಪಿಸಿದ್ದಾರೆ (ವಾ.ವಾ., ಜೂನ್ 7). ಆದರೆ ನಾನು ಗಮನಿಸಿರುವಂತೆ, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಬಸ್ ಸ್ಟಾರ್ಟ್ ಮಾಡಲು ಕಾರ್ ಅಥವಾ ಸ್ಕೂಟರ್‌ನಲ್ಲಿ ಇರುವಂತೆ ಕೀ ಇರುವುದಿಲ್ಲ. ಬದಲಾಗಿ, ಇಗ್ನಿಷನ್ ಬಟನ್ ಇರುತ್ತದೆ. ಬಟನ್ ಒತ್ತಿದರೆ ಬಸ್ ಸ್ಟಾರ್ಟ್ ಆಗುತ್ತದೆ. ಇದರಿಂದ ಚಾಲನೆ ಬಲ್ಲ, ಬಾರದಿರುವ ಯಾರು ಬೇಕಾದರೂ ವಾಹನವನ್ನು ಸ್ಟಾರ್ಟ್ ಮಾಡಿಬಿಡಬಹುದು. ಹೀಗಾಗಿ, ಈ ಪ್ರಕರಣದಲ್ಲಿ ಚಾಲಕನ ತಪ್ಪಿಲ್ಲ ಎನಿಸುತ್ತದೆ.

ಮುಳ್ಳೂರು ಪ್ರಕಾಶ್, ಮೈಸೂರು

ಶಿಕ್ಷಕರಿಂದ ಮಾಹಿತಿ ಪಡೆಯಲಾಗಿದೆಯೇ?

ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ನೇಮಿಸಿದ್ದ ಶಾಲಾ ಪಠ್ಯ ಪರಿಷ್ಕರಣಾ ಸಮಿತಿಯು ಸೇರಿಸಿದ್ದ ವಿವಾದಿತ ಪಠ್ಯಗಳ ಪೈಕಿ, ಈ ತಕ್ಷಣದಿಂದ ಕೈಬಿಡಬೇಕಾದ ಪಾಠಗಳು ಯಾವುವು ಎನ್ನುವುದನ್ನು ಪತ್ರಿಕೆ ಪ್ರಕಟಿಸಿದೆ (ಪ್ರ.ವಾ., ಜೂನ್ 7). ಈಗ ಎರಡು ವರ್ಷಗಳಿಂದ ಮಕ್ಕಳಿಗೆ ಈ ಪಾಠಗಳಾಗಿವೆ. ಇವನ್ನು ಬೋಧಿಸುವಾಗ ಶಿಕ್ಷಕರಿಗೆ ಏನಾದರೂ ಮುಜುಗರವಾಗಿದೆಯೇ, ಮಕ್ಕಳು ಸುಲಭವಾಗಿ ಗ್ರಹಿಸಿದರೇ, ಅವರ ಪ್ರತಿಕ್ರಿಯೆ ಏನಾಗಿತ್ತು, ಈ ಪಾಠಗಳ ಕಲಿಕೆಯಿಂದ ಮಕ್ಕಳ ಮನಸ್ಸಿನಲ್ಲಿ ದುಷ್ಪರಿಣಾಮ ಆಗಿರುವ ಸಾಧ್ಯತೆಗಳಿವೆಯೇ, ಮಕ್ಕಳಲ್ಲಿ ಮೇಲು ಕೀಳು ಭಾವನೆಗಳಿಗೆ, ದ್ವೇಷ ಭಾವನೆಗೆ ಎಡೆಯಾಗಿದೆಯೇ ಎಂಬಂಥ ಅತ್ಯಗತ್ಯ ಮಾಹಿತಿಯನ್ನು ಶಿಕ್ಷಕರಿಂದ ಸಂಗ್ರಹಿಸಲಾಯಿತೇ? ಪೋಷಕವರ್ಗವು ಈ ಪಾಠಗಳ ಬಗ್ಗೆ ಏನಾದರೂ ಆಕ್ಷೇಪಗಳನ್ನು ಎತ್ತಿತ್ತೇ? ಇಂತಹ ಸಂಗತಿಗಳನ್ನು ಒಳಗೊಂಡ ಮಾಹಿತಿಯ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳಲಾಯಿತೇ? ಅಥವಾ ಕೆಲವು ತಜ್ಞರ ಜೊತೆ ಸಮಾಲೋಚಿಸಿ ತೀರ್ಮಾನ ಕೈಗೊಳ್ಳಲಾಯಿತೇ?

ಈ ತಜ್ಞರು ಪಠ್ಯಪುಸ್ತಕಗಳ ವಿಷಯದಲ್ಲಿ ತಮ್ಮ ತೀವ್ರ ಆಕ್ಷೇಪಗಳನ್ನು ಈ ಹಿಂದೆಯೇ ವ್ಯಕ್ತಪಡಿಸಿದವರಾಗಿದ್ದರೆ, ಮತ್ತೆ ಅವರ ಸಲಹೆಯನ್ನು ಪಡೆಯುವ ಅವಶ್ಯಕತೆ ಇರಲಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಎಷ್ಟೋ ಮಂದಿ ತಜ್ಞರು ಇದ್ದಾರಲ್ಲವೇ. ಸರ್ಕಾರ ಅವರನ್ನೂ ಸಂಪರ್ಕಿಸಿ ಸಲಹೆ ಪಡೆದಿದ್ದರೆ ಚೆನ್ನಾಗಿತ್ತು. ಇಂತಲ್ಲಿ ಪಾರದರ್ಶಕತೆ ಮುಖ್ಯವಾಗುತ್ತದೆ. ರಾಜಕೀಯ ತತ್ವ, ಸಿದ್ಧಾಂತಗಳು ಶಿಕ್ಷಣ ಕ್ಷೇತ್ರದಲ್ಲಿ ತೂರಬಾರದು, ಅದರಲ್ಲೂ ಮಕ್ಕಳ ಪಠ್ಯ ವಿಷಯಗಳನ್ನಂತೂ ನಿರ್ಧರಿಸಬಾರದು.

ಸಾಮಗ ದತ್ತಾತ್ರಿ, ಬೆಂಗಳೂರು

ಜಾತಿಗಣತಿ ವರದಿ: ವಸ್ತುಸ್ಥಿತಿ ಆಧಾರವಾಗಲಿ

ಜಾತಿಗಣತಿ ವರದಿ ಸ್ವೀಕರಿಸಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಹಿಂದುಳಿದ ವರ್ಗ ಮತ್ತು ದಲಿತ ಸಮುದಾಯಗಳ ಮಠಾಧೀಶರ ಒಕ್ಕೂಟದ ನಿಯೋಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿರುವುದು ಸ್ವಾಗತಾರ್ಹ ಸಂಗತಿ. ಆರ್ಥಿಕ, ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತವಾದ, ಸಾಮಾಜಿಕವಾಗಿ ಅತ್ಯಂತ ಹಿಂದುಳಿದ, ರಾಜಕೀಯ ಪ್ರಾತಿನಿಧ್ಯವಿಲ್ಲದ ಹಲವಾರು ಜನಸಮುದಾಯಗಳು ಈ ನಾಡಿನಲ್ಲಿವೆ. ಅವುಗಳ ಸ್ಥಿತಿ ಇಂದೂ ಶೋಚನೀಯವಾಗಿದೆ. ಅಂಥ ಜನಸಮುದಾಯಗಳ ನೈಜ ಸ್ಥಿತಿಗತಿಯನ್ನು ಈ ವರದಿ ಹೊಂದಿದೆ ಎಂದು ಹೇಳಲಾಗುತ್ತಿದೆ. ಹಾಗಾಗಿ, ಮುಖ್ಯಮಂತ್ರಿಯವರು ವಸ್ತುಸ್ಥಿತಿಯನ್ನು ಆಧರಿಸಿ, ನತದೃಷ್ಟ ಜನಸಮುದಾಯಗಳನ್ನು ಮೇಲೆತ್ತಲು ಕಂಕಣಬದ್ಧರಾಗಲೆಂದು ಆಶಿಸೋಣ.

ಸಿ.ಪಿ.ಸಿದ್ಧಾಶ್ರಮ, ಮೈಸೂರು

ಸರ್ಕಾರಿ ಆಸ್ಪತ್ರೆಯಲ್ಲಿರಲಿ ಇಂದಿರಾ ಕ್ಯಾಂಟೀನ್

ಬೆಂಗಳೂರಿನಲ್ಲಿರುವ ವಿಕ್ಟೋರಿಯಾ, ನಿಮ್ಹಾನ್ಸ್, ಕಿದ್ವಾಯಿ, ಕೆ.ಸಿ. ಜನರಲ್, ಬೌರಿಂಗ್‌ನಂತಹ ಆಸ್ಪತ್ರೆಗಳು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕು ಕೇಂದ್ರಗಳ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಇಂದಿರಾ ಕ್ಯಾಂಟೀನ್ ಸ್ಥಾಪಿಸಲು ಸರ್ಕಾರ ಮುಂದಾಗಬೇಕು. ರೋಗಿಗಳು ಹಾಗೂ ಅವರ ಆರೈಕೆಗಾಗಿ ಬರುವವರು ಹೆಚ್ಚಿನ ಹಣ ನೀಡಿ ಹೋಟೆಲ್‌ಗಳಲ್ಲಿ ತಿಂಡಿ, ಊಟ ಮಾಡುವುದು ಕಷ್ಟವಾಗುತ್ತದೆ. ಸಾಮಾನ್ಯವಾಗಿ ಇಂತಹ ಆಸ್ಪತ್ರೆಗಳಿಗೆ ಬರುವವರು ನಿಶ್ಚಿತ ಆದಾಯವಿಲ್ಲದ ಬಡ ಮತ್ತು ಕೆಳ ಮಧ್ಯಮ ವರ್ಗದವರಾಗಿರುತ್ತಾರೆ. ಇಂದಿರಾ ಕ್ಯಾಂಟೀನ್ ಸ್ಥಾಪಿಸಿದರೆ ಅಂತಹವರಿಗೆ ಸಹಾಯವಾಗುತ್ತದೆ.

ಕೆ.ಎಸ್.ನಾಗರಾಜ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆನಡಾದಲ್ಲಿ ಉನ್ನತ ಶಿಕ್ಷಣ ಮತ್ತು ಉದ್ಯೋಗ

ಭಾರತದ ವಿದ್ಯಾರ್ಥಿಗಳ ಅತಂತ್ರ ಪ್ರಸಂಗ

ಕೆನಡಾದಲ್ಲಿರುವ ಭಾರತದ 700 ವಿದ್ಯಾರ್ಥಿಗಳು ಈಗ ಗಡಿಪಾರಿನ ಅಪಾಯವನ್ನು ಎದುರಿಸುತ್ತಿದ್ದಾರೆ. ಕೆನಡಾ ನಮ್ಮನ್ನು ಬಳಸಿಕೊಂಡು, ಅನಂತರ ದೂರತಳ್ಳುತ್ತಿದೆ ಎಂಬುದು ಈ ವಿದ್ಯಾರ್ಥಿಗಳ ಆರೋಪ. ಆದರೆ ಇದರಲ್ಲಿ ವಿದ್ಯಾರ್ಥಿಗಳ ತಪ್ಪು ಇಲ್ಲವಾದರೂ, ಕೆನಡಾದ ವ್ಯವಸ್ಥೆ ಸರಿಯಾಗಿಯೇ ಇದೆ ಎಂಬುದು ಕೇಂದ್ರ ಸರ್ಕಾರದ ನಿಲುವು. ಉನ್ನತ ಶಿಕ್ಷಣಕ್ಕಾಗಿ ಭಾರತದ ಅತಿಹೆಚ್ಚು ವಿದ್ಯಾರ್ಥಿಗಳು ಆಕರ್ಷಿಸುವ ದೇಶಗಳಲ್ಲಿ ಕೆನಡಾವೂ ಒಂದು. ಅಲ್ಲಿನ ಶಿಕ್ಷಣ ಮತ್ತು ಶಿಕ್ಷಣದ ನಂತರ ಸುಲಭವಾಗಿ ಸಿಗುವ ಉದ್ಯೋಗದ ಅನುಮತಿ ಭಾರತೀಯರ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತದೆ

ಪ್ರಜಾವಾಣಿ ವಾರ್ತೆ

ಕೆನಡಾವು 2022ರಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಂದ 5.51 ಲಕ್ಷದಷ್ಟು ವಿದ್ಯಾರ್ಥಿಗಳನ್ನು ಬರಮಾಡಿಕೊಂಡಿದೆ. ಇದರಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯೇ 2.26 ಲಕ್ಷದಷ್ಟಿದೆ. ಅಂದರೆ, ಒಂದು ವರ್ಷದಲ್ಲಿ ಕೆನಡಾಕ್ಕೆ ಉನ್ನತ ಶಿಕ್ಷಣಕ್ಕಾಗಿ ಎಂದು ಬರುವ ವಿದೇಶಿ ವಿದ್ಯಾರ್ಥಿಗಳಲ್ಲಿ ಅರ್ಧದಷ್ಟು ಮಂದಿ ಭಾರತೀಯರೇ ಇರುತ್ತಾರೆ. ಕೆನಡಾದಲ್ಲಿ ದೊರೆಯುವ ಗುಣಮಟ್ಟದ ಉನ್ನತ ಶಿಕ್ಷಣ ಅದಕ್ಕೆ ಒಂದು ಪ್ರಮುಖ ಕಾರಣ. ಅದರ ಜತೆಯಲ್ಲಿ, ಶಿಕ್ಷಣ ಮುಗಿದ ನಂತರ ಅಲ್ಲಿಯೇ ನೆಲೆಸಲು ಸುಲಭವಾಗಿ ಅವಕಾಶ ದೊರೆಯುತ್ತದೆ ಎಂಬುದೂ ಸಹ ಅಷ್ಟೇ ಪ್ರಮುಖವಾದ ಮತ್ತೊಂದು ಕಾರಣ.

ಹೀಗೆ ಉನ್ನತ ಶಿಕ್ಷಣಕ್ಕೆಂದು ಅಲ್ಲಿಗೆ ತೆರಳಿದ್ದ ಭಾರತದ ವಿದ್ಯಾರ್ಥಿಗಳಲ್ಲಿ 700 ಮಂದಿ ಈಗ ಗಡಿಪಾರಿನ ಅಪಾಯ ಎದುರಿಸುತ್ತಿದ್ದಾರೆ. ಕೆನಡಾದ ಆಯ್ದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 8 ತಿಂಗಳಿಗಿಂತ ಹೆಚ್ಚು ಅವಧಿಯ ಕೋರ್ಸ್‌ಗಳನ್ನು ಪೂರೈಸುವ ವಿದ್ಯಾರ್ಥಿಗಳು, ಕೋರ್ಸ್ ಮುಗಿದ ನಂತರವೂ ಅಲ್ಲಿಯೇ ಪೂರ್ಣ ಪ್ರಮಾಣದ ಉದ್ಯೋಗ ಪಡೆಯಲು ಅನುಮತಿ ಪಡೆಯುತ್ತಾರೆ. ಹೀಗೆ ಅನುಮತಿ ಪಡೆಯಲು ಅರ್ಜಿ ಸಲ್ಲಿಸಿದ ವೇಳೆ ಅವರ ದಾಖಲಾತಿಗಳನ್ನು ಪರಿಶೀಲಿಸಲಾಗುತ್ತದೆ. ಈ 700 ವಿದ್ಯಾರ್ಥಿಗಳ ಅರ್ಜಿಗಳನ್ನೂ ಹೀಗೆಯೇ ಪರಿಶೀಲಿಸಲಾಗಿದೆ. ಅರ್ಜಿಗಳಲ್ಲಿ ಅವರು ಸಲ್ಲಿಸಿರುವ ಶೈಕ್ಷಣಿಕ ದಾಖಲೆಗಳು ನಕಲಿ ಎಂಬುದು ಪರಿಶೀಲನೆ ವೇಳೆ ಗೊತ್ತಾಗಿದೆ. ಹೀಗಾಗಿ ಅವರನ್ನು ಗಡಿಪಾರು ಮಾಡಲು ಅಲ್ಲಿನ ಸರ್ಕಾರ ನಿರ್ಧರಿಸಿದೆ. ಆದರೆ, ವಿಷಯ ಇಷ್ಟು ಸರಳವಾಗಿಲ್ಲ.

ಕೆನಡಾದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುವಾಗ, ವಿದೇಶಿ ವಿದ್ಯಾರ್ಥಿಗಳು ಯಾವುದೇ ರೀತಿಯ ಅರೆಕಾಲಿಕ ಉದ್ಯೋಗ ಮಾಡಲು ಅವಕಾಶವಿದೆ. ಕೋರ್ಸ್ ಪೂರ್ಣಗೊಂಡ ನಂತರ ಎಂಟು ತಿಂಗಳಿನಿಂದ ಗರಿಷ್ಠ ಮೂರು ವರ್ಷಗಳವರೆಗೆ ಅಲ್ಲಿಯೇ ಉಳಿದು, ಪೂರ್ಣ ಪ್ರಮಾಣದ ಉದ್ಯೋಗ ಮಾಡಲು ಅವಕಾಶವಿದೆ. ಆದರೆ, ಇದಕ್ಕೆ ಅನುಮತಿ ಪಡೆಯಬೇಕು. ಈ ಆಯ್ದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೊಡಮಾಡುವ ಕೋರ್ಸ್‌ಗಳಲ್ಲಿ ಕೆಲವನ್ನು 'ಪೋಸ್ಟ್ ಗ್ರಾಜುಯೇಷನ್ ವರ್ಕಿಂಗ್ ಪರ್ಮಿಟ್–ಪಿಜಿಡಬ್ಲ್ಯುಪಿ' ವರ್ಗೀಕರಣದಲ್ಲಿ ತರಲಾಗಿದೆ. ಅಂದರೆ, ಇಂತಹ ಕೋರ್ಸ್‌ಗಳನ್ನು ಪೂರೈಸಿದ ನಂತರ ನಿಗದಿತ ಅವಧಿಯವರೆಗೆ ಪೂರ್ಣ ಪ್ರಮಾಣದ ಉದ್ಯೋಗ ಮಾಡಲು ಅನುಮತಿ ನೀಡಲಾಗುತ್ತದೆ. ಕೋರ್ಸ್‌ನ ಅವಧಿಯನ್ನು ಆಧರಿಸಿ, ಅವರ ಉದ್ಯೋಗ ಅನುಮತಿಯ ಅವಧಿಯು ನಿರ್ಧಾರವಾಗುತ್ತದೆ.

ಈ ರೀತಿ ಉದ್ಯೋಗ ಮಾಡಲು ಅನುಮತಿ ಪಡೆದವರು, ಮತ್ತೂ ಒಂದು ವರ್ಷದವರೆಗೆ ಹೆಚ್ಚುವರಿ ಅವಧಿಯ ಅನುಮತಿ ಪಡೆಯಲು ಅವಕಾಶವಿದೆ. ಹೀಗೆ ಅಲ್ಲಿಯೇ ಶಿಕ್ಷಣ ಪೂರೈಸಿ, ಕನಿಷ್ಠ ಮೂರು ವರ್ಷ ಉದ್ಯೋಗ ಮಾಡಿದರೆ ಅಂತಹವರು ಕೆನಡಾದ ಪೌರತ್ವ ಪಡೆಯಲು ಅವಕಾಶವಿದೆ. ಅಲ್ಲಿನ ಪೌರತ್ವ ಪಡೆಯುವುದು ಇಷ್ಟು ಸರಳವಾಗಿದೆ. ವಿದೇಶಿ ವಿದ್ಯಾರ್ಥಿಗಳಿಗೆ ಸುಲಭವಾಗಿ ಸಿಗುವ ಉದ್ಯೋಗದ ಅವಕಾಶ, ಭಾರತಕ್ಕೆ ಹೋಲಿಸಿದರೆ ಹೆಚ್ಚಿನ ವೇತನ, ಉತ್ತಮ ಗುಣಮಟ್ಟದ ಜೀವನದ ಕಾರಣಗಳಿಗಾಗಿ ವಿದೇಶಿ ವಿದ್ಯಾರ್ಥಿಗಳಲ್ಲಿ ಬಹುತೇಕರು ಅಲ್ಲಿಯೇ ಉಳಿಯಲು ಬಯಸುತ್ತಾರೆ. ವಿದೇಶಗಳಲ್ಲಿ ನೆಲೆಸಬೇಕು ಎಂಬ ಕನಸು ಇಟ್ಟುಕೊಂಡವರೂ, ಕೆನಡಾದಲ್ಲಿ ಉನ್ನತ ಶಿಕ್ಷಣ ಕೋರ್ಸ್ ಪಡೆಯುವ ಮೂಲಕ ಅಲ್ಲಿಯ ಪೌರತ್ವ ಪಡೆಯುವ ಪರಿಪಾಟವೂ ಇದೆ. ಭಾರತದಿಂದ ಅಲ್ಲಿಗೆ ತೆರಳುವವರಲ್ಲಿ ಇಂತಹವರ ಸಂಖ್ಯೆಯೂ ದೊಡ್ಡದೇ ಇದೆ. ಹೀಗಾಗಿ ಉನ್ನತ ಶಿಕ್ಷಣಕ್ಕೆಂದು ಕೆನಡಾಕ್ಕೆ ಹೋದ ಭಾರತದ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಅಲ್ಲಿಯೇ ಉಳಿಯುತ್ತಾರೆ.

ಈಗ ಗಡಿಪಾರಿನ ಅಪಾಯ ಎದುರಿಸುತ್ತಿರುವ ಭಾರತದ 700 ವಿದ್ಯಾರ್ಥಿಗಳು ಹೀಗೆಯೇ ವಿದ್ಯಾರ್ಥಿ ವೀಸಾದಡಿ ಕೆನಡಾಕ್ಕೆ ತೆರಳಿದ್ದವರು. ಇವರಲ್ಲಿ ಪಂಜಾಬ್‌ನವರ ಸಂಖ್ಯೆಯೇ ಹೆಚ್ಚು. ಈ ವಿದ್ಯಾರ್ಥಿಗಳ ಶೈಕ್ಷಣಿಕ ಕೋರ್ಸ್‌ಗಳು 2022ರ ನವೆಂಬರ್‌ನಲ್ಲಿಯೇ ಮುಗಿದಿದೆ. ಆನಂತರ ಅವರು 'ಪೋಸ್ಟ್ ಗ್ರಾಜುಯೇಷನ್ ವರ್ಕಿಂಗ್ ಪರ್ಮಿಟ್'ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಸಿದ ತಕ್ಷಣವೇ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದಾರೆ (ಅನುಮತಿ ದೊರೆಯುವವರೆಗೂ ಅವರು ಉದ್ಯೋಗ ಮಾಡಲು ಅವಕಾಶವಿದೆ). ಆದರೆ ಅವರ ಅರ್ಜಿಯ ಪರಿಶೀಲನೆ ವೇಳೆ, ಅವರು ಪಡೆದಿರುವ ಶೈಕ್ಷಣಿಕ ಪ್ರವೇಶಾತಿ ದಾಖಲಾತಿಗಳು ನಕಲಿ ಎಂಬುದು ಗೊತ್ತಾಗಿದೆ. ಈ ಬಗ್ಗೆ ತನಿಖೆಯೂ ನಡೆಯುತ್ತಿದೆ. ಈ ದಾಖಲಾತಿಗಳನ್ನು ಪಡೆಯಲು ಈ ಎಲ್ಲಾ ವಿದ್ಯಾರ್ಥಿಗಳು ಚಂಡೀಗಡದ ಏಜೆನ್ಸಿಯೊಂದಕ್ಕೆ ತಲಾ ₹16 ಲಕ್ಷ ಪಾವತಿಸಿದ್ದಾರೆ. ಆದರೆ, ಆ ವಿದ್ಯಾರ್ಥಿಗಳನ್ನು ಗಡಿಪಾರು ಮಾಡಬೇಕಾಗುತ್ತದೆ ಎಂದು ಕೆನಡಾದ ವಲಸೆ ಸಚಿವಾಲಯ ಹೇಳಿದೆ.

ಈ ಸಮಸ್ಯೆಯಿಂದ ನಮ್ಮನ್ನು ಪಾರು ಮಾಡಿ ಎಂದು ಆ ವಿದ್ಯಾರ್ಥಿಗಳು ಭಾರತ ಸರ್ಕಾರವನ್ನು ಕೋರಿದ್ದಾರೆ. ಪಂಜಾಬ್ ಸರ್ಕಾರ ಸಹ ಈ ವಿಚಾರವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಗಮನಕ್ಕೆ ತಂದಿದೆ. ಏನು ಮಾಡಬಹುದು ಎಂಬುದನ್ನು ಪರಿಶೀಲಿಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಈ 700 ವಿದ್ಯಾರ್ಥಿಗಳ ಪ್ರಕರಣವು, ಒಂದು ವಂಚನೆ ಪ್ರಕರಣವಾಗಿದೆ. ಏಜೆಂಟ್ ಒಬ್ಬ ಅಂತಹ ವಂಚನೆ ಎಸಗಿದ್ದಾನೆ. ಆದರೆ, ವಿದ್ಯಾರ್ಥಿಗಳು ಮತ್ತು ಪೋಷಕರು ಕೆನಡಾದಲ್ಲಿ ಕೋರ್ಸ್‌ಗಳ ಆಯ್ಕೆಯ ವೇಳೆ ಎಚ್ಚರವಹಿಸಬೇಕು ಎಂದು ಪಂಜಾಬ್ ಸರ್ಕಾರ ಕರೆ ನೀಡಿದೆ.



ಭಾರತೀಯರದ್ದೇ ಸಿಂಹಪಾಲು

ಸದ್ಯ ಕೆನಡಾದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದೇಶಿ ವಿದ್ಯಾರ್ಥಿಗಳಲ್ಲಿ ಭಾರತೀಯ ವಿದ್ಯಾರ್ಥಿಗಳದ್ದೇ ಸಿಂಹಪಾಲು. ನಂತರದ ಸ್ಥಾನಗಳಲ್ಲಿ ಚೀನಾ ಮತ್ತು ಫಿಲಿಪ್ಪೀನ್ಸ್ ದೇಶಗಳಿವೆ. 2022ರಲ್ಲಿ 2,26,450 ಭಾರತೀಯ ವಿದ್ಯಾರ್ಥಿಗಳಿಗೆ ಕೆನಡ ವಿದ್ಯಾರ್ಥಿ ವೀಸಾ ನೀಡಿದೆ. ಈ ಮೂಲಕ ಕೆನಡಾದಲ್ಲಿ ವ್ಯಾಸಂಗ ಮಾಡಲು ಅನುಮತಿ ಪಡೆದ ವಿದೇಶಿ ವಿದ್ಯಾರ್ಥಿಗಳಲ್ಲಿ ಭಾರತೀಯ ವಿದ್ಯಾರ್ಥಿಗಳ ಪಾಲು ಶೇ 33.6.

2017ರ ವರೆಗೆ ಚೀನಾ ವಿದ್ಯಾರ್ಥಿಗಳೇ ಅತಿಹೆಚ್ಚು ಸಂಖ್ಯೆಯಲ್ಲಿ ಕೆನಡಾಕ್ಕೆ ತೆರಳುತ್ತಿದ್ದರು. 2018ರಿಂದ ಈಚೆಗೆ ಭಾರತೀಯ ವಿದ್ಯಾರ್ಥಿಗಳೇ ಮೊದಲ ಸ್ಥಾನದಲ್ಲಿದ್ದಾರೆ.

ಶಿಕ್ಷಣಕ್ಕಾಗಿ ಕೆನಡಾಕ್ಕೆ ತೆರಳಿದ ವಿದ್ಯಾರ್ಥಿಗಳ ಸಂಖ್ಯೆ



ಯಾವ ಕೋರ್ಸ್‌ಗಳಿಗೆ ಹೆಚ್ಚು ಬೇಡಿಕೆ

- ಬ್ಯುಸಿನೆಸ್ ಆ್ಯಂಡ್ ಫೈನಾನ್ಸ್
- ನರ್ಸಿಂಗ್
- ಡೆಂಟಿಸ್ಟ್ರಿ
- ಎಂಜಿನಿಯರಿಂಗ್
- ಫಾರ್ಮಸಿ

ಈ ಕೋರ್ಸ್‌ಗಳಲ್ಲದೇ ಮ್ಯಾನೇಜ್‌ಮೆಂಟ್, ವೈದ್ಯಕೀಯ ಪದವಿ, ವಿಜ್ಞಾನ, ಮಾಧ್ಯಮ ಕಲಿಕೆ, ಪತ್ರಿಕೋದ್ಯಮ ಕೋರ್ಸ್‌ಗಳೂ ವಿದೇಶಿ ವಿದ್ಯಾರ್ಥಿಗಳಲ್ಲಿ ಜನಪ್ರಿಯತೆ ಹೊಂದಿವೆ.

'ನಮ್ಮನ್ನು ಬಳಸಿ, ಬಿಸಾಡಲಾಗುತ್ತಿದೆ'

ಕೆನಡಾ ಸರ್ಕಾರವು ನಮ್ಮನ್ನು ಬಳಸಿಕೊಳ್ಳುತ್ತಿದೆ. ಆನಂತರ ನಮ್ಮನ್ನು ಬಿಸಾಡುತ್ತಿದೆ ಎಂದು 2022ರ ನವೆಂಬರ್‌ನಲ್ಲಿಯೇ ಭಾರತದ ಹಲವು ವಿದ್ಯಾರ್ಥಿಗಳು ಆರೋಪಿಸಿದ್ದರು.

'ಕೆನಡಾದಲ್ಲಿ ನೌಕರರ ಕೊರತೆ ಇದೆ. ಜತೆಗೆ ಕೆನಡಾದ ನೌಕರರಿಗೆ ಕೊಡಬೇಕಿರುವ ವೇತನಕ್ಕಿಂತ ಕಡಿಮೆ ವೇತನಕ್ಕೆ ಭಾರತೀಯರು ದುಡಿಯುತ್ತಾರೆ. ಕಡಿಮೆ ವೇತನಕ್ಕೆ ನಮ್ಮಿಂದ ದುಡಿಸಿಕೊಂಡು, ಈಗ ನಮ್ಮನ್ನು ಹೊರ ದಬ್ಬಲಾಗುತ್ತಿದೆ' ಎಂದು ಭಾರತೀಯರು ಆರೋಪಿಸಿದ್ದರು.

ಆ ಅವಧಿಯಲ್ಲಿ ಭಾರತದ ಸಾವಿರಾರು ವಿದ್ಯಾರ್ಥಿಗಳ 'ಪೋಸ್ಟ್ ಗ್ರಾಜುಯೇಷನ್ ವರ್ಕಿಂಗ್ ಪರ್ಮಿಟ್' ಮುಗಿದಿತ್ತು. ಹೆಚ್ಚುವರಿ ಅವಧಿಗೆ ಆ ವೀಸಾಗಳನ್ನು ನವೀಕರಿಸುವ ಪ್ರಕ್ರಿಯೆಯನ್ನು ಕೆನಡಾ ವಲಸೆ ಸಚಿವಾಲಯ ಸ್ಥಗಿತಗೊಳಿಸಿತ್ತು. 10 ತಿಂಗಳ ನಂತರ ನವೀಕರಣ ಪ್ರಕ್ರಿಯೆಗೆ ಚಾಲನೆ ದೊರೆಯುವಷ್ಟರಲ್ಲಿ ಆ ವಿದ್ಯಾರ್ಥಿಗಳ ವೀಸಾ ಅವಧಿ ಮುಗಿದಿತ್ತು. ಭಾರತ ಸರ್ಕಾರದ ಮಧ್ಯಪ್ರವೇಶದ ನಂತರ, ಕೆಲವರ ವೀಸಾ ಅವಧಿಯನ್ನು ವಿಸ್ತರಿಸಲಾಗಿತ್ತು.

ಆಧಾರ: ಕೆನಡಾದ ವಲಸೆ ಸಚಿವಾಲಯದ ಪ್ರಕಟಣೆಗಳು, ಕೆನಡಾದ ಪೋಸ್ಟ್ ಗ್ರಾಜುಯೇಷನ್ ವರ್ಕಿಂಗ್ ಪರ್ಮಿಟ್–ಪಿಜಿಡಬ್ಲ್ಯುಪಿ ಮಾರ್ಗಸೂಚಿ ಮತ್ತು ನಿಯಮಗಳು, ಪಿಟಿಐ

ದೇಶದಲ್ಲಿ ಏರುತ್ತಲೇ ಇದೆ ಪರಿಶಿಷ್ಟರ ಮೇಲಿನ ದೌರ್ಜನ್ಯ



ಪ್ರಜಾವಾಣಿ ವಾರ್ತೆ

ದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲೆ ದೌರ್ಜನ್ಯ ಎಸಗುವ ಪ್ರಕರಣಗಳು ವರದಿಯಾಗುತ್ತಲೇ ಇವೆ. ಈಚಿನ ವರ್ಷಗಳಲ್ಲಿ ಇಂತಹ ಪ್ರಕರಣಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ. ಕಠಿಣ ಕಾನೂನುಗಳು ಇದ್ದರೂ, ಇಂತಹ ಪ್ರಕರಣಗಳಲ್ಲಿ ಗರಿಷ್ಠ ಮಟ್ಟದಲ್ಲಿ ಶಿಕ್ಷೆಯಾಗುತ್ತಿಲ್ಲ. ಈ ಕಾರಣದಿಂದಲೇ ಇಂತಹ ದೌರ್ಜನ್ಯಗಳು ನಡೆಯುತ್ತಲೇ ಇವೆ ಎಂಬುದರತ್ತ ಸರ್ಕಾರದ ದಾಖಲೆಗಳು ಬೊಟ್ಟು ಮಾಡುತ್ತವೆ.

ಪರಿಶಿಷ್ಟ ಜಾತಿಯ ಜನರ ವಿರುದ್ಧ ಅಸ್ಪೃಶ್ಯತೆ ಆಚರಣೆಯ ಎರಡು ಘಟನೆಗಳು ಈ ವಾರದಲ್ಲಿ ವರದಿಯಾಗಿವೆ. ಒಂದು ಗುಜರಾತ್‌ನಲ್ಲಿ ನಡೆದಿದ್ದರೆ, ಮತ್ತೊಂದು ಪಕ್ಕದ ತಮಿಳುನಾಡಿನಿಂದ ವರದಿಯಾಗಿದೆ.

ಈ ವಾರವಷ್ಟೇ ಗುಜರಾತ್‌ನ ಪಾಟಣ್ ಜಿಲ್ಲೆಯೊಂದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯೊಬ್ಬರ ಕೈಬೆರಳನ್ನು ಕ್ಷತ್ರಿಯ ಸಮುದಾಯಕ್ಕೆ ಸೇರಿದ ಯುವಕರು ಕತ್ತರಿಸಿದ್ದರು. ನಡೆದಿದ್ದದ್ದು ಇಷ್ಟೇ. ಕ್ಷತ್ರಿಯ ಸಮುದಾಯದ ಯುವಕರು ಕ್ರಿಕೆಟ್ ಆಡುತ್ತಿದ್ದಾಗ, ಪರಿಶಿಷ್ಟ ಜಾತಿಗೆ ಸೇರಿದ ಬಾಲಕನೊಬ್ಬ ಚೆಂಡನ್ನು ಮುಟ್ಟಿದ್ದ. ಆಗ ಯುವಕರು ಬಾಲಕನನ್ನು ಆತನ ಜಾತಿ ಹೆಸರಿನಲ್ಲಿ ನಿಂದಿಸಿದರು ಮತ್ತು ಚೆಂಡು ಮುಟ್ಟಬಾರದು ಎಂದು ತಾಕೀತು ಮಾಡಿದರು. ಇದಕ್ಕೆ ಆ ಬಾಲಕನ ಮಾವ ಆಕ್ಷೇಪ ವ್ಯಕ್ತಪಡಿಸಿದ. ಅದು ಜಗಳಕ್ಕೆ ಹೋಗಿ, ಕ್ಷತ್ರಿಯ ಸಮುದಾಯದ ಯುವಕರು ಆ ಬಾಲಕನ ಮಾವನ ಬೆರಳನ್ನು ಕತ್ತಿಯಿಂದ ಕತ್ತರಿಸಿದ್ದಾರೆ.

ಇನ್ನು ತಮಿಳುನಾಡಿನ ವಿಲ್ಲುಪುರಂ ಜಿಲ್ಲೆಯ ಮೇಲ್ಪತಿ ಗ್ರಾಮದ ಶ್ರೀಧರ್ಮರಾಜ ದ್ರೌಪದಿ ಅಮ್ಮನ್ ದೇವಾಲಯಕ್ಕೆ ಪರಿಶಿಷ್ಟ ಜಾತಿಗೆ ಸೇರಿದವರು ಪ್ರವೇಶಿಸಬಾರದು ಎಂದು ಪ್ರಬಲ ಜಾತಿಯಾದ ವಣ್ಣಿಯಾರ್ ಸಮುದಾಯದವರು ತಾಕೀತು ಮಾಡಿದ್ದರು. ಇದು ಎರಡೂ ಸಮುದಾಯಗಳ ಮಧ್ಯೆ ವಾಗ್ವಾದ ಮತ್ತು ಸಂಘರ್ಷಕ್ಕೆ ಕಾರಣವಾಗಿತ್ತು. ಪರಿಶಿಷ್ಟ ಜಾತಿಯ ಜನರ ದೇವಾಲಯ ಪ್ರವೇಶಕ್ಕೆ ಅನುವು ಮಾಡಿಕೊಡಲು ಅಧಿಕಾರಿಗಳ ವತಿಯಿಂದ ನಡೆದ ಸಭೆಯೂ ವಿಫಲವಾಯಿತು. ಪರಿಶಿಷ್ಟ ಜಾತಿಯ ಜನರು ದೇವಾಲಯ ಪ್ರವೇಶಿಸಬಾರದು ಎಂದು ವಣ್ಣಿಯಾರ್‌ಗಳು ಪಟ್ಟು ಹಿಡಿದರು. ಕಡೆಗೆ ಧಾರ್ಮಿಕ ಮತ್ತು ದತ್ತಿ ಇಲಾಖೆಯು ದೇವಾಲಯಕ್ಕೆ ಬೀಗ ಮುದ್ರೆ ಹಾಕಿತು.

ಎರಡೂ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ. 2015ರಿಂದ 2021ರ ಮಧ್ಯೆ ದೇಶದಾದ್ಯಂತ ಈ ಕಾಯ್ದೆಯ ಅಡಿಯಲ್ಲಿ 3.64 ಲಕ್ಷ ಪ್ರಕರಣಗಳು ದಾಖಲಾಗಿದೆ. 2021ರ ಅಂತ್ಯದ ವೇಳೆಗೆ ವಿಚಾರಣೆಗೆ ನ್ಯಾಯಾಲಯದವರೆಗೆ ಬಂದ ಪ್ರಕರಣಗಳ ಸಂಖ್ಯೆ 3.07 ಲಕ್ಷ ಮಾತ್ರ. ಆದರೆ, ಇವುಗಳಲ್ಲಿ ವಿಲೇವಾರಿಯಾದ ಪ್ರಕರಣಗಳ ಸಂಖ್ಯೆ 12,000ದಷ್ಟು ಮಾತ್ರ. 2021ರ ಡಿಸೆಂಬರ್ ಅಂತ್ಯದ ವೇಳೆಗೆ ವಿಚಾರಣೆ ಹಂತದಲ್ಲೇ ಇದ್ದ ಪ್ರಕರಣಗಳ ಸಂಖ್ಯೆ 2.95 ಲಕ್ಷ. 2022ರಲ್ಲಿ ಇಂತಹ ಎಷ್ಟು ಪ್ರಕರಣಗಳು ನಡೆದಿವೆ ಎಂಬುದರ ಮಾಹಿತಿಯನ್ನು ಸರ್ಕಾರ ಇನ್ನೂ ಬಿಡುಗಡೆ ಮಾಡಿಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿರುದ್ಧದ ದೌರ್ಜನ್ಯ, ಜಾತಿ ನಿಂದನೆ, ಹಲ್ಲೆ, ತಾರತಮ್ಯ, ಅಸ್ಪೃಶ್ಯತೆ ಆಚರಣೆ ವಿರುದ್ಧ ದಾಖಲಾದ ಪ್ರಕರಣಗಳು ವಿಲೇವಾರಿ ಆಗುತ್ತಲೇ ಇಲ್ಲ. ಆದರೆ, ಈಚಿನ ವರ್ಷಗಳಲ್ಲಿ ಇಂತಹ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ ಎಂಬುದನ್ನು ಈಗ ಲಭ್ಯವಿರುವ ಸರ್ಕಾರಿ ವರದಿಗಳು ಹೇಳುತ್ತವೆ.

ಆಧಾರ: ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ವರದಿಗಳು, ಪಿಟಿಐ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಹಜ್ ಭವನ ನವೀಕರಣಕ್ಕೆ ಸಿಎಂ 5 ಸಾವಿರ ಕೋಟಿ ಅನುದಾನ ನೀಡಿದ್ದಾರೆ' ಎಂಬ ಹೇಳಿಕೆಯನ್ನು ಕನ್ನಡದ ಸುದ್ದಿ ವಾಹಿನಿಯೊಂದು ಪ್ರಸಾರ ಮಾಡಿದೆ. ಆ ಪ್ರಸಾರದ ಸ್ಕ್ರೀನ್‌ಶಾಟ್ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿವೆ. 'ನೂತನ ಸಂಸತ್ ಭವನಕ್ಕೆ ಮೋದಿ ಖರ್ಚು ಮಾಡಿದ್ದು ₹885 ಕೋಟಿ, ಅಯೋಧ್ಯೆ ರಾಮಮಂದಿರ ನಿರ್ಮಾಣದ ಅಂದಾಜು ವೆಚ್ಚ ₹3,000 ಕೋಟಿ. ಆದರೆ, ಹಜ್ ಭವನವನ್ನು ಕೇವಲ ನವೀಕರಿಸುವುದಕ್ಕೇ ಸಿ.ಎಂ ₹5,000 ಕೋಟಿ ನೀಡಿದ್ದಾರೆ' ಎಂಬ ವಿವರಣೆಯನ್ನು ಈ ಸ್ಕ್ರೀನ್‌ಶಾಟ್ ಜೊತೆ ಹಂಚಿಕೊಳ್ಳಲಾಗುತ್ತಿದೆ. ಆದರೆ ಇದು ಸುಳ್ಳುಸುದ್ದಿ.

ಈ ಪ್ರಸಾರ ಕುರಿತಾದ ಸತ್ಯಾಸತ್ಯತೆಯನ್ನು ಪರಿಶೀಲಿಸಲು 'ಪ್ರಜಾವಾಣಿ'ಯು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜಡ್. ಜಮೀರ್ ಅಹಮದ್ ಖಾನ್ ಅವರನ್ನು ಸಂಪರ್ಕಿಸಿತ್ತು. ಅವರು ಇದು ಸುಳ್ಳು ಎಂದು ಹೇಳಿದ್ದಾರೆ. ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ₹5,000 ಕೋಟಿ ನೀಡುವುದಾಗಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿತ್ತು. ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ನೀಡಲಾಗುವ ಅನುದಾನದಲ್ಲಿ ಕಡಿತವಾಗಬಹುದು ಎಂಬ ಆತಂಕ ನಮ್ಮ ಧಾರ್ಮಿಕ ಮುಖಂಡರಲ್ಲಿದೆ. ಇದನ್ನು ಮುಖ್ಯಮಂತ್ರಿಗಳ ಎದುರು ಪ್ರಸ್ತಾಪಿಸಿದ್ದೆ. ಹಜ್ ಭವನ ನವೀಕರಣಕ್ಕೆ ಸರ್ಕಾರವು ₹5 ಕೋಟಿ ನೀಡಿದೆ. ಈ ಬಗ್ಗೆ ನಾನು ನೀಡಿದ ಹೇಳಿಕೆಯನ್ನು ತಿರುಚಿ, ಹಜ್ ಭವನ ನವೀಕರಣಕ್ಕೆ ಸಿ.ಎಂ ₹5,000 ಕೋಟಿ ನೀಡಿದ್ದಾರೆ ಎಂದು ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ. ಇದರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಜೂನ್ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಷಷ್ಠಿ ಗಂ. 16-21 ನಕ್ಷತ್ರ: ಧನಿಷ್ಠ ಗಂ. 17-09 ಯೋಗ: ವೈಧೃತಿ. 15-46. ಕರಣ: ಗರ ಗಂ. 05-38, ವಣಿಜ, ವೃಷಭ ಮಾಸದ 25 ನೇ ದಿನ, ಮಳೆನಕ್ಷತ್ರ: ಮೃಗಶಿರ 1. ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-07 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 20 ಜುಲ್ಖಾಯದ್
ಅದೃಷ್ಟ ಸಂಖ್ಯೆ : 4, 5

ಮೇಷ: ಮನೆಯಲ್ಲಿ ಶಾಂತ ವಾತಾವರಣವಿದ್ದು ನಿಧಾನಗತಿ ಕೆಲಸ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ರಾಜಕೀಯ ಸೇರ್ಪಡೆಗೆ ಆಹ್ವಾನ ಬರಲಿದೆ. ದೂರ ಉಳಿಯುವುದು ಕ್ಷೇಮ ಉಂಟುಮಾಡುತ್ತದೆ.

ವೃಷಭ: ಭವಿಷ್ಯದ ದೃಷ್ಟಿಯಿಂದ ಯಾವುದೇ ವಿಷಯವನ್ನು ದೊಡ್ಡದು ಸಣ್ಣದು ಎಂಬ ಭೇದ ಮಾಡದೇ ತಕ್ಷಣ ಕಾರ್ಯೋನ್ಮುಖರಾಗುವುದು ಉತ್ತಮ. ಚಿಂತೆ ಮತ್ತು ಭಯ ಇವೆರಡನ್ನೂ ದೂರ ಮಾಡಿಕೊಳ್ಳುವ ಪ್ರಯತ್ನಿಸಿ.

ಮಿಥುನ: ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿದೆ. ದೈನಂದಿನ ಬದುಕಿನ ವಿಚಾರಗಳಲ್ಲಿ ನಡೆದಿರುವ ಸಣ್ಣಪುಟ್ಟ ಬದಲಾವಣೆಯಿಂದ ಮಾನಸಿಕ ನೆಮ್ಮದಿ ಕಳೆದುಕೊಳ್ಳುವಿರಿ.

ಕರ್ಕಾಟಕ: ದವಸ ಧಾನ್ಯ ಹಾಗೂ ಮಸಾಲಾ ಸಾಮಗ್ರಿಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಹೆಚ್ಚಿನ ಅನುಕೂಲವಾಗುವುದು. ಗೃಹದಲ್ಲಿ ಸಂಭ್ರಮಾಚರಣೆಯ ಸಲುವಾಗಿ ಖರ್ಚು ಸಂಭವಿಸಲಿದೆ.

ಸಿಂಹ: ಕೃಷಿ ಕ್ಷೇತ್ರದಲ್ಲಿ ಇರುವವರಿಗೆ ಅಧಿಕವಾದ ಲಾಭ ಅದರಲ್ಲೂ ತರಕಾರಿ ಮಾರಾಟಗಾರರಿಗೆ ಕುಬೇರನ ಅನುಗ್ರಹವು ಸಿಗಲಿದೆ. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳುವುದು. ಸಮ್ಮಿಶ್ರ ಫಲವನ್ನು ಕಾಣುವಿರಿ.

ಕನ್ಯಾ: ಸ್ವಯಂಕೃತ ಅಪರಾಧದಿಂದ ಜೀವನದಲ್ಲಿ ಉಲ್ಲಾಸ ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ. ಷೇರು ವ್ಯವಹಾರಗಳಲ್ಲಿ ಹೆಚ್ಚು ಹಣ ತೊಡಗಿಸಬಹುದು.

ತುಲಾ: ಅಧಿಕಾರಿ ವರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಜನಸಾಮಾನ್ಯರಿಂದ ಹೆಚ್ಚಿನ ಪ್ರೋತ್ಸಾಹ ಹಾಗೂ ಸಹಕಾರ ದೊರಕುತ್ತವೆ. ಸುಖ ಸಂಪತ್ತಿನ ಚಿತೆಯು ನಿದ್ದೆಗೆಡಿಸುತ್ತದೆ. ಶುಭಕಾರ್ಯಗಳಿಗೆ ಹಣ ವಿನಿಯೋಗಿಸುವಿರಿ.

ವೃಶ್ಚಿಕ: ಭೂಮಿಯ ಖರೀದಿಯ ವಿಚಾರದಲ್ಲಿ ಮೋಸವಾಗುವ ಸಾಧ್ಯತೆಗಳಿದೆ, ಎಚ್ಚರವಹಿಸಿ. ಹೊಸ ವ್ಯವಹಾರಗಳ ಚಾಲನೆಗೆಂದು ಉತ್ತಮ ಮಾರ್ಗದರ್ಶನ ಹೊಂದುವಿರಿ. ಉತ್ತಮವಾಗಿ ಬಳಸಿದ ಹಣದ ಬಗ್ಗೆ ಚಿಂತಿಸಿದಿರಿ.

ಧನು: ಗೃಹ ನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಆರ್ಥಿಕತೆ ಸ್ವಲ್ಪ ಮಟ್ಟಿನ ತೊಂದರೆಯನ್ನು ಸೃಷ್ಟಿ ಮಾಡುವುದು. ಮನೆಯ ದಾಖಲೆ ಪತ್ರಗಳನ್ನು, ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳಿ.

ಮಕರ: ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಮಾಡುವುದು ಸಮಂಜಸವಾಗಿ ಕಾಣುವುದಿಲ್ಲ. ನಿರೀಕ್ಷೆಗೂ ಮೀರಿದ ಆದಾಯ ಇರಲಿದೆ. ಮೇಲಧಿಕಾರಿಗಳ ದುರ್ನಡತೆಯಿಂದ ಬೇಸತ್ತುವಿರಿ.

ಕುಂಭ: ಈ ದಿನದಲ್ಲಿ ಗೃಹಿಣಿಯರು ಆಹಾರ ತಯಾರಿಕೆಯ ವಿಚಾರದಲ್ಲಿ ಉತ್ತಮ ಹೊಗಳಿಕೆಯ ಮಾತುಗಳನ್ನು ಎದುರು ನೋಡಬಹುದು. ಸತ್ಯ, ಧರ್ಮ, ನೀತಿ, ನಡವಳಿಕೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಿರಿ.

ಮೀನ: ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶ ಬರುವುದು. ನಿಮ್ಮ ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಿಸಿಕೊಳ್ಳುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾಗಿದ ಬಾಳು

ಮಲಗಿದೋದುಗನ ಕೈ ಹೊತ್ತಗೆಯು ನಿದ್ದೆಯಲಿ |
ಕಳಚಿ ಬೀಳ್ವುದು; ಪಕ್ವಫಲವಂತು ತರುವಿಂ ||
ಇಳೆಯ ಸಂಬಂಧಗಳು ಸಂಕಲ್ಪನಿಯಮಗಳು |
ಸಡಿಲುವುವು ಬಾಳ್ ಮಾಗೆ – ಮಂಕುತಿಮ್ಮ ||
902 ||

ಪದ-ಅರ್ಥ: ಮಲಗಿದೋದುಗನ = ಮಲಗಿದ + ಓದುಗನ, ಹೊತ್ತಗೆಯು = ಪುಸ್ತಕವು, ಪಕ್ವಫಲವಂತು = ಪಕ್ವ + ಫಲವು + ಅಂತು, ತರುವಿಂ = ಮರದಿಂದ, ಇಳೆಯ = ಭೂಮಿಯ, ಮಾಗೆ = ಪಕ್ವವಾದಾಗ, ಮಾಗಿದಾಗ.

ವಾಚ್ಯಾರ್ಥ: ನಿದ್ರೆ ಬಂದಾಗ, ಮಲಗಿ ಓದುತ್ತಿದ್ದ ಓದುಗನ ಕೈಯಿಂದ ಪುಸ್ತಕ ಜಾರಿ ಬೀಳುತ್ತದೆ. ಅದೇ ರೀತಿ ಮರದಿಂದ ಪಕ್ವವಾದ ಫಲಗಳು ಬೀಳುತ್ತವೆ. ಈ ಜಗತ್ತಿನ ಸಂಬಂಧಗಳು, ಸಂಕಲ್ಪಗಳು, ನಿಯಮಗಳು ಕೂಡ ಬಾಳು ಮಾಗಿದಂತೆ ಸಡಿಲವಾಗುವುವು.

ವಿವರಣೆ: ಪುಸ್ತಕವನ್ನು ಕೈಯಲ್ಲಿ ಹಿಡಿದು ಓದುತ್ತ ಕುಳಿತಾಗ ನಿದ್ರೆಗೆ ಜಾರಿದರೆ ನಮಗರಿಯದಂತೆ ಪುಸ್ತಕ ಜಾರಿ ಕೆಳಗೆ ಬೀಳುತ್ತದೆ. ಹಾಗೆಂದರೆ ಪುಸ್ತಕ ಬೇಡವೆಂದಲ್ಲ, ನಿದ್ರೆ ಬಂದಾಗ ಅದರ ಅವಶ್ಯಕತೆ ಇಲ್ಲ. ಮರದಲ್ಲಿ ಮಾವಿನ ಕಾಯಿಯಿದೆ. ಅದು ಬಿರುಸಾಗಿದೆ, ಮರಕ್ಕೆ ಗಟ್ಟಿಯಾಗಿ ಅಂಟಿಕೊಂಡಿದೆ. ಕಾಲ ಕಳೆದಂತೆ ಅದರ ಬಣ್ಣ ಬದಲಾಗುತ್ತದೆ, ಒಳಗಿನ ರಸ ಸಿಹಿಯಾಗುತ್ತದೆ. ಅದು ಪಕ್ವವಾದ ಮೇಲೆ ಒಂದು ಕ್ಷಣ ತಾನೇ ತೊಟ್ಟು ಕಳಚಿ ಕೆಳಗೆ ಬೀಳುತ್ತದೆ. ಹಣ್ಣಾಗಲು ತುಂಬ ಅವಶ್ಯವಾಗಿ ಬೇಕಾಗಿದ್ದ ಮರ, ಹಣ್ಣಾದ ಮೇಲೆ ಬೇಕಿಲ್ಲ. ಈ ಸುಂದರ ಉದಾಹರಣೆ ಬದುಕಿಗೆ ತುಂಬ ಸಮರ್ಪಕವಾದದ್ದು. ಪ್ರಪಂಚವೊಂದು ಸಮೃದ್ಧಿಯಾದ ಮರ. ಅದರ ಆಕರ್ಷಣೆ ಅಪಾರ. ಬಾಲ್ಯದಲ್ಲಿ, ತಾರುಣ್ಯದಲ್ಲಿ ಆ ಮರದೊಂದಿಗೆ ಹೆಣೆದುಕೊಂಡ ವ್ಯಕ್ತಿ ಕನಸುಗಳನ್ನು ಕಟ್ಟುತ್ತಾನೆ, ಅದಕ್ಕಾಗಿ ಹೋರಾಡಿ ಹಣ್ಣಾಗುತ್ತಾನೆ. ಈ ಹೋರಾಟದಲ್ಲಿ ಸಂಬಂಧಗಳು, ಸಂಕಲ್ಪಗಳು ಗಟ್ಟಿಯಾಗುತ್ತ ಹೋಗುತ್ತವೆ. ಅವು ಅವನನ್ನು ಮತ್ತಷ್ಟು ಬಂಧಿಸುತ್ತವೆ. ಬಂಧನದಲ್ಲಿ ಯಾರೂ ಸುಖಿಯಾಗಿರುವುದು ಸಾಧ್ಯವಿಲ್ಲ. ಆದರೆ ಕಾಲಕ್ರಮೇಣ ಮನಸ್ಸು ಪಕ್ವವಾಗುತ್ತದೆ. ಪ್ರಪಂಚದ ವಸ್ತುಗಳ ಮೇಲಿನ ಆಸೆ, ಅಪೇಕ್ಷೆಗಳು ಕಡಿಮೆಯಾಗುತ್ತ ಹೋಗುತ್ತವೆ. ಹೀಗೆ ಆದದ್ದನ್ನು ಇತಿಹಾಸ ನಮ್ಮ ಮುಂದೆ ತೋರಿಸುತ್ತದೆ. ರಾಜನಾಗಿದ್ದ ಸಿದ್ಧಾರ್ಥ, ರಾಜಕುಮಾರನಾಗಿದ್ದ ಮಹಾವೀರ, ರಾಜ್ಯದ ಭೋಗಗಳನ್ನು ಬಿಟ್ಟು ಸನ್ಯಾಸಿಗಳಾಗಿ ಏಕೆ ಹೋದರು? ಯಾವ ತತ್ವ ಅವರನ್ನು ಪ್ರಪಂಚದ ಆಕರ್ಷಣೆಗಳಿಗಿಂತ ಹೆಚ್ಚಾಗಿ ಸೆಳೆಯಿತು? ಭೋಗಕ್ಕಾಗಿ ತನ್ನ ಮಗನ ತಾರುಣ್ಯವನ್ನೇ ಬಯಸಿದ್ದ ಯಯಾತಿ ಕೂಡ ಕೊನೆಗೆ ಎಲ್ಲವನ್ನು ತೊರೆದು ತಪಸ್ಸಿಗೆ ಹೋದನಲ್ಲ! ಈ ಮಾತನ್ನು ಕಗ್ಗ ನಮ್ಮ ಗಮನಕ್ಕೆ ತರುತ್ತದೆ. ಬಾಳು ಮಾಗಬೇಕು. ಹಾಗೆ ಮಾಗಿದಂತೆ ಜಗತ್ತಿನ ಸೆಳೆತ ಕಡಿಮೆಯಾಗುತ್ತದೆ. ಯಾವುದೂ ತನ್ನದಲ್ಲ ಎನ್ನಿಸತೊಡಗುತ್ತದೆ. ಸಂಬಂಧಗಳು, ಸಂಕಲ್ಪಗಳು, ತಾನೇ ಹಾಕಿಕೊಂಡಿದ್ದ ನಿಯಮಗಳು ಸಡಿಲವಾಗುತ್ತವೆ. ಆಗ ನಿದ್ರೆಯಲ್ಲಿ ಕೈ ಜಾರಿದ ಪುಸ್ತಕದಂತೆ, ತೊಟ್ಟು ಕಳಚಿ ಬೀಳುವ ಪಕ್ವವಾದ ಹಣ್ಣಿನಂತೆ ಬಾಳೂ ಪ್ರಪಂಚದಿಂದ ಕಳಚಿಕೊಳ್ಳುತ್ತದೆ, ಅನಾಯಾಸವಾಗಿ. ಅದಕ್ಕೇ ಬಸವಣ್ಣ ಹೇಳಿದರು, "ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ". ಮಾಗಿದ ಜೀವಕ್ಕೆ ಭಗವಂತನೇ ಕೊನೆಯ ನೆಲೆ.

ಪದಬಂಧ 5344

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಚತುರತೆಯಿಂದಾಡಿದ ಚೆಸ್ ಆಟ (4)
3. ದುಮುಗುಟ್ಟುತ್ತಿರುವ ಮದುವೆಯ ಗಂಡು (4)
5. ಯಾಚನೆ ಮಾಡುತ್ತಿರುವವನು (3)
6. ದಿನ ಬೆಳಗಿದ ಸೂರ್ಯ (4)
8. ಯತಿಗೆ ಸಿಕ್ಕಿರುವ ರಿಬೇಟ್! (4)
10. ಹೀಗೆ ಆತುರಾತುರವಾಗಿ ನುಂಗು (4)
12. ಅವರು ತೋರುತ್ತಿರುವ ಆತುರ (4)
14. ದಡಿ ಹಿಡಿದಿರುವ ದಾಂಡಿಗ (3)
15. ಬಾಳೆಹಣ್ಣು ಬೆಲ್ಲದ ರಸವತ್ತಾದ ಮಿಶ್ರಣ (4)
16. ತರತರದ ಕಾಯಿಪಲ್ಯೆ (4)

ಮೇಲಿಂದ ಕೆಳಕ್ಕೆ
1. ನಾಲ್ಕು ಪಾದಗಳುಳ್ಳದ್ದು (4)
2. ಗಡಿ ಭಾಗದಲ್ಲಿರುವ ಕಾಲ ಸೂಚಕ ಯಂತ್ರ (4)
3. ಮರದ ಹತ್ತಿರವಿರುವ ಹೆಣ್ಣುತುಂಬಿ (4)
4. ಗಣದ ಮುಂದೆ ಪ್ರತ್ಯಕ್ಷನಾಗಿರುವ ವಿನಾಯಕ (4)
7. ಭವನದ ಹತ್ತಿರವಿರುವ ಮುಸಲ್ಮಾನ ದೊರೆ (3)
9. ಉಲ್ಟಾ ನಿಂತು ನೋಡಿರುವ ವೇಳೆ (3)
10. ಕಳೆಯಿದ್ದ ಜಾಗದಲ್ಲಿರುವ ಹೆಣ (4)
11. ವಿಷ್ಣುವಿನ ಕೈಯ್ಯಲ್ಲಿರುವ ಚಕ್ರಾಯುಧ (4)
12. ಆಯುತಾಕಾರದ ಸೂಜಿಗಲ್ಲು (4)
13. ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ (4)



5343ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಪಾದನೆ 3.ಪತ್ತೇದಾರ
5.ಸಿತಾರ 7.ಪರಧನ
9.ಡಪ್ಪು 10.ವರ್ಣ
11.ಜನಿವಾರ 14.ಸಂತತಿ
16.ತರಗತಿ 17.ಅತಿರೇಕ

ಮೇಲಿಂದ ಕೆಳಕ್ಕೆ:
1.ಆಲಿಸಿ 2.ದಸರ
3.ಪರಿಹಾರ 4.ರಜನಿ
6.ತಾರಾಪುಂಜ
7.ಪದರ 8.ನವನೀತ
12.ವಾಚಸ್ಪತಿ 13.ಪಂಡಿತ
14.ಸಂಗತಿ 15.ತಿರುಕ

ಸುಡೊಕು 5730

2		4	1	5			8	
				8		5		9
8		3			9		1	
3		9	5		1			
	6			9				
5		1	6		8			
	7			3	5	2		4
4		5						
	8			6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5729 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ಸುಧಾ, ಮಯೂರ ಓದಿರಿ

ಕೊಬ್ಬರಿ ಧಾರಣೆ
ತುರುವೇಕೆರೆ ₹8800-8800

ಷೇರುಪೇಟೆ ವಹಿವಾಟು 294



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ 18,726
ಇಂದಿನ ಅಂತ್ಯ 18,634
▼ 91
ದಿನದ ಕನಿಷ್ಠ 18,777

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ
ಬೆಂಗಳೂರು
100 ಮೊಟ್ಟೆಗೆ ₹565
12 ಮೊಟ್ಟೆಗೆ ₹73
ಮೈಸೂರು
100 ಮೊಟ್ಟೆಗೆ ₹572

ಖಾದ್ಯ ತೈಲ ಮುಂಬೈ (10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1590(1590)
ಸೋಯಾ (ರಿಫೈನ್ಡ್) ₹890(890)
ಸೂರ್ಯಕಾಂತಿ (ರಿಫೈನ್ಡ್) ₹880(890)
ಪಾಮೋಲಿನ್ ₹820(830)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)
ದಪ್ಪ ₹900-1,300
ಮಧ್ಯಮ ₹600-800
ಸಣ್ಣ ₹300-500

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚೆಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇಕಡ 4ಕ್ಕೆ ಇಳಿಸುವ ಗುರಿ: ದಾಸ್

ರೆಪೊ ದರ: ಯಥಾಸ್ಥಿತಿ ಮುಂದುವರಿಕೆ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರುವ ತೀರ್ಮಾನವನ್ನು ಗುರುವಾರ ನಡೆದ ಸಭೆಯಲ್ಲಿ ಕೈಗೊಂಡಿದೆ.

ಏಪ್ರಿಲ್‌ನಲ್ಲಿ ನಡೆದಿದ್ದ ಸಭೆಯಲ್ಲಿಯೂ ಎಂಪಿಸಿ, ರೆಪೊ ದರದಲ್ಲಿ ಬದಲಾವಣೆ ಮಾಡಿರಲಿಲ್ಲ. ರೆಪೊ ದರವನ್ನು ಶೇಕಡ 6.50ರಲ್ಲಿ ಕಾಯ್ದುಕೊಳ್ಳುವ ತೀರ್ಮಾನವನ್ನು ಎಂಪಿಸಿ ಸದಸ್ಯರು ಗುರುವಾರ ಸರ್ವಾನುಮತದಿಂದ ಕೈಗೊಂಡಿದ್ದಾರೆ.

'ಹೊಂದಾಣಿಕೆಯ ಹಣಕಾಸು ನೀತಿಯನ್ನು ಹಿಂಪಡೆಯುವ' ನಿಲುವು ತಾಳಲು ಕೂಡ ಎಂಪಿಸಿ ತೀರ್ಮಾನಿಸಿದೆ. ಈ ವರ್ಷದ ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 6ಕ್ಕಿಂತ ಕಡಿಮೆ ಆಗಿದೆ.

ಮುಖ್ಯಾಂಶಗಳು
- ಸತತ ಎರಡನೆಯ ಬಾರಿ ರೆಪೊ ದರದಲ್ಲಿ ಯಥಾಸ್ಥಿತಿ
- ಸ್ಥಿರತೆಯೊಂದಿಗೆ ಬೆಳವಣಿಗೆ ತನ್ನ ಆದ್ಯತೆ ಎಂದ ಆರ್‌ಬಿಐ
- ಜಿಡಿಪಿ ಬೆಳವಣಿಗೆ ಅಂದಾಜಿನಲ್ಲಿ ಪರಿಷ್ಕರಣೆ ಇಲ್ಲ

'ಮುಂಗಾರು ಮಳೆ ಹಾಗೂ ಎಲ್ ನಿನೊ ವಿಚಾರವಾಗಿ ಅನಿಶ್ಚಿತತೆಗಳು ಇರುವ ಕಾರಣದಿಂದಾಗಿ ಹಣದುಬ್ಬರ ಪ್ರಮಾಣವು ಎಷ್ಟಾಗಲಿದೆ ಎಂಬ ಬಗ್ಗೆ ಸೂಕ್ಷ್ಮವಾಗಿ ಗಮನಿಸುತ್ತ ಇರುವುದು ಅನಿವಾರ್ಯ. ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4ಕ್ಕೆ ಇಳಿಯುವಂತೆ ಮಾಡುವುದು ನಮ್ಮ ಗುರಿ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣವು ಶೇ 6.5ರಷ್ಟು ಇರಲಿದೆ ಎಂದು ಈ ಮೊದಲು ಮಾಡಿದ್ದ ಅಂದಾಜಿನಲ್ಲಿ ಆರ್‌ಬಿಐ ಯಾವುದೇ ಬದಲಾವಣೆ ಮಾಡಿಲ್ಲ.

ಈಗ ಸ್ಥಿರತೆಯನ್ನು ಕಾಯ್ದುಕೊಂಡು ಬೆಳವಣಿಗೆ ಸಾಧಿಸುವುದು ತನ್ನ ಆದ್ಯತೆ ಎಂದು ಆರ್‌ಬಿಐ ಹೇಳಿದೆ. ರೆಪೊ ದರದಲ್ಲಿ ಬದಲಾವಣೆ ಮಾಡದೆ ಇರುವ ತೀರ್ಮಾನವು 'ಒಂದು ವಿರಾಮವಿದ್ದಂತೆ, ಅಷ್ಟೆ' ಎಂದು ದಾಸ್ ಹೇಳಿದ್ದಾರೆ.

ಹಣದುಬ್ಬರ ಪ್ರಮಾಣದಲ್ಲಿ ಗಮನಾರ್ಹ ಬದಲಾವಣೆ ಆಗದಿದ್ದರೆ, ಜಾಗತಿಕವಾಗಿ ತೀರಾ ಅನಿಶ್ಚಿತ ಪರಿಸ್ಥಿತಿ ನಿರ್ಮಾಣವಾಗದೆ ಇದ್ದರೆ ರೆಪೊ ದರವು ಬಹುಕಾಲ ಯಥಾಸ್ಥಿತಿಯಲ್ಲಿ ಉಳಿಯುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದಾರೆ.

ಎಂಪಿಸಿ ಸಭೆ: ಪ್ರಮುಖ ತೀರ್ಮಾನಗಳು

- ರುಪೇ ಪ್ರಿಪೇಯ್ಡ್ ಫಾರೆಕ್ಸ್ ಕಾರ್ಡ್ ವಿತರಿಸಲು ಆರ್‌ಬಿಐ ಬ್ಯಾಂಕ್‌ಗಳಿಗೆ ಅವಕಾಶ ನೀಡಿದೆ. ಈ ಕಾರ್ಡ್ ಬಳಸಿ ಗ್ರಾಹಕರು ವಿದೇಶಗಳಲ್ಲಿ ಎಟಿಎಂನಿಂದ ಹಣ ಪಡೆಯಬಹುದು, ವಿವಿಧ ಪಾವತಿಗಳನ್ನು ಮಾಡಬಹುದು. ವಿದೇಶಗಳಲ್ಲಿ ಬಳಸಲು ಸಾಧ್ಯವಾಗುವ ರುಪೇ ಡೆಬಿಟ್, ಕ್ರೆಡಿಟ್ ಹಾಗೂ ಪ್ರಿಪೇಯ್ಡ್ ಕಾರ್ಡ್‌ಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುತ್ತದೆ. ಈ ಕ್ರಮಗಳು ಜಾಗತಿಕವಾಗಿ ರುಪೇ ಕಾರ್ಡ್‌ಗಳಿಗೆ ಹೆಚ್ಚಿನ ಸ್ವೀಕೃತಿ ತಂದುಕೊಡಲಿವೆ ಎಂಬುದು ಆರ್‌ಬಿಐ ನಿರೀಕ್ಷೆ.
- ಆನ್‌ಲೈನ್ ವಾಲೆಟ್, ಕಾರ್ಡ್ ರೂಪದ ವೋಚರ್‌ನಂತಹ (ಪ್ರಿಪೇಯ್ಡ್ ಪೇಮೆಂಟ್ ಇನ್ಸ್ಟ್ರುಮೆಂಟ್ಸ್) ಪಾವತಿ ಸಾಧನಗಳನ್ನು ನೀಡುವ ಬ್ಯಾಂಕೇತರ ಸಂಸ್ಥೆಗಳು ಕೂಡ ಇನ್ನು ಮುಂದೆ ಇ-ರುಪಿ ಡಿಜಿಟಲ್ ವೋಚರ್ ನೀಡಲು ಅವಕಾಶ ಕಲ್ಪಿಸಲಾಗಿದೆ. ಇ-ರುಪಿ ಪ್ರಿಪೇಯ್ಡ್ ವೋಚರ್‌ಗಳು ಡಿಜಿಟಲ್ ರೂಪದಲ್ಲಿರುತ್ತವೆ. ಇದನ್ನು ಸಂಬಂಧಪಟ್ಟವರಿಗೆ ಎಸ್‌ಎಂಎಸ್ ಅಥವಾ ಕ್ಯೂಆರ್ ಕೋಡ್ ರೂಪದಲ್ಲಿ ನೀಡಲಾಗುತ್ತದೆ. ಈ ವೋಚರ್ ಸ್ವೀಕರಿಸುವ ವರ್ತಕರಿಂದ ಅಗತ್ಯ ವಸ್ತುಗಳನ್ನು ಖರೀದಿಸಲು ಇದನ್ನು ಬಳಸಬಹುದು.
- ಪ್ರಸಕ್ತ ಹಣಕಾಸು ವರ್ಷದಲ್ಲಿನ ಚಿಲ್ಲರೆ ಹಣದುಬ್ಬರ ಮುನ್ನೋಟವನ್ನು ಆರ್‌ಬಿಐ ತುಸು ತಗ್ಗಿಸಿದೆ. ಚಿಲ್ಲರೆ ಹಣದುಬ್ಬರವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 5.2ರಷ್ಟು ಆಗಬಹುದು ಎಂದು ಆರ್‌ಬಿಐ ಏಪ್ರಿಲ್‌ನಲ್ಲಿ ಅಂದಾಜಿಸಿತ್ತು. ಅದನ್ನು ಈಗ ಶೇ 5.1ಕ್ಕೆ ತಗ್ಗಿಸಲಾಗಿದೆ.

ರೆಪೊ ಯಥಾಸ್ಥಿತಿ: ತಜ್ಞರು ಹೇಳುವುದು ಏನು?

ಷೇರು ಮಾರುಕಟ್ಟೆಗೆ ಒಳ್ಳೆಯದು

ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವುದು, ಹೊಂದಾಣಿಕೆಯ ನಿಲುವನ್ನು ಹಿಂಪಡೆಯಲು ಒಲವು ತೋರಿರುವುದು ನಿರೀಕ್ಷಿತ. ಹಣದುಬ್ಬರವು ತುಸು ಕಡಿಮೆಯಾಗುವ ನಿರೀಕ್ಷೆ ಆರ್‌ಬಿಐಗೆ ಇದೆ. ಅಂದರೆ, ರೆಪೊ ದರ ಹೆಚ್ಚಿಸುವ ಪ್ರಕ್ರಿಯೆಯನ್ನು ಕೊನೆಗೊಳಿಸುವ ಹಂತಕ್ಕೆ ಆರ್‌ಬಿಐ ಬಂದಿದೆ. ಮುಂಗಾರು ವಾಡಿಕೆಯಂತೆ ಆದರೆ, ಜಾಗತಿಕ ಪರಿಸ್ಥಿತಿ ಚೆನ್ನಾಗಿದ್ದರೆ ಈ ವರ್ಷದ ಕೊನೆಯೊಳಗೆ ಅಥವಾ 2024ರ ಆರಂಭದಲ್ಲಿ ರೆಪೊ ಇಳಿಕೆಗೆ ಆರ್‌ಬಿಐ ಮನಸ್ಸು ಮಾಡಬಹುದು. ಷೇರು ಮಾರುಕಟ್ಟೆ ದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆ.

ವಿ.ಕೆ. ವಿಜಯಕುಮಾರ್, ಜಿಯೋಜಿತ್ ಫೈನಾನ್ಷಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ

ಸ್ವಂತ ಮನೆ ಬಯಸುವವರಿಗೆ ಸಮಾಧಾನ

ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡಿರುವುದು ಸ್ವಂತ ಮನೆ ಹೊಂದಲು ಬಯಸುತ್ತಿರುವವರಿಗೆ ಸಮಾಧಾನ ತರುವಂಥದ್ದು. ರೆಪೊ ಬದಲಾವಣೆ ಆಗಿಲ್ಲದಿರುವುದು ಮನೆಗಳ ಮಾರಾಟದಲ್ಲಿ ಈಗಿರುವ ವೇಗವನ್ನು ಕಾಯ್ದುಕೊಳ್ಳಲು ನೆರವಾಗಬಹುದು. ಗೃಹಸಾಲ ಪಡೆದು ಮನೆ ಹೊಂದಲು ಬಯಸುವವರಿಗೆ ಪರಿಸ್ಥಿತಿ ಅನುಕೂಲಕರವಾಗಿ ಇರುವಂತೆ ಕಾಣುತ್ತಿದೆ. ಮುಂದೆ ರೆಪೊ ದರ ಹೆಚ್ಚಾದರೆ ಗೃಹಸಾಲದ ಮೇಲಿನ ಬಡ್ಡಿದರ ಎರಡು ಅಂಕಿಗಳಿಗೆ ತಲುಪಬಹುದು.

ಅನುಜ್ ಪುರಿ, ಆಸ್ತಿ ಸಲಹಾ ಸಂಸ್ಥೆ ಅನರಾಕ್‌ನ ಅಧ್ಯಕ್ಷ

ಮ್ಯೂಚುವಲ್ ಫಂಡ್: ದೀರ್ಘಾವಧಿ ಗಮನವಿರಲಿ

ಠೇವಣಿಗಳ ಮೇಲಿನ ಬಡ್ಡಿ ದರಗಳು ಕಡಿಮೆ ಆಗುತ್ತಿವೆ. ಈಗ ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್ ಹೂಡಿಕೆದಾರರು ಸಾಧ್ಯವಾದಷ್ಟು ದೀರ್ಘ ಅವಧಿಗೆ ಹೂಡಿಕೆ ಮಾಡಬೇಕು. ಬಾಂಡ್ ಹೂಡಿಕೆದಾರರಿಗೂ ಈ ಮಾತು ಅನ್ವಯ ಆಗುತ್ತದೆ. ಮಧ್ಯಮ, ದೀರ್ಘ ಅವಧಿಯ ಡೆಟ್ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರಿಗೆ ಒಳ್ಳೆಯ ಆಯ್ಕೆ ಆಗಬಹುದು.

ಮರ್ಜ್‌ಬನ್ ಇರಾನಿ, ಎಲ್‌ಐಸಿ ಮ್ಯೂಚುವಲ್ ಫಂಡ್‌ನ ಡೆಟ್ ಮ್ಯೂಚುವಲ್ ಫಂಡ್ ವಿಭಾಗದ ಮುಖ್ಯ ಹೂಡಿಕೆ ಅಧಿಕಾರಿ

ಎಂಎಸ್‌ಎಂಇ ವಲಯಕ್ಕೆ ನೆರವು

ಇಂದಿನ ಪರಿಸ್ಥಿತಿಯಲ್ಲಿ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದು ನ್ಯಾಯೋಚಿತ. ದರದಲ್ಲಿ ಬದಲಾವಣೆ ಮಾಡದೆ ಇರುವುದು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಕೈಗಾರಿಕೆಗಳಿಗೆ ಸಮಾಧಾನ ತರಲಿದೆ. ಉದ್ಯಮ ವಲಯವು ಕೋವಿಡ್ ಸೃಷ್ಟಿಸಿದ ಸಮಸ್ಯೆಗಳಿಂದ ಇನ್ನೂ ಹೊರಬರುತ್ತಿದೆ. ಈ ಹೊತ್ತಿನಲ್ಲಿ ಅವುಗಳ ಸಾಲದ ಮೇಲಿನ ಬಡ್ಡಿ ಹೆಚ್ಚು ಮಾಡಿದ್ದಿದ್ದರೆ ಚೇತರಿಕೆ ಕಷ್ಟವಾಗುತ್ತಿತ್ತು.

ರುಮ್ಕಿ ಮಜುಂದಾರ್, ಡೆಲಾಯ್ಟ್ ಇಂಡಿಯಾ ಕಂಪನಿಯ ಅರ್ಥಶಾಸ್ತ್ರಜ್ಞೆ

ಅಡುಗೆ ಎಣ್ಣೆಗಳ ಬೆಲೆ ತಗ್ಗಿಸಿದ 'ಧಾರಾ'

ನವದೆಹಲಿ (ಪಿಟಿಐ): 'ಧಾರಾ' ಹೆಸರಿನಲ್ಲಿ ಅಡುಗೆ ಎಣ್ಣೆಗಳನ್ನು ಮಾರಾಟ ಮಾಡುವ ಮದರ್ ಡೈರಿ, ಅಡುಗೆ ಎಣ್ಣೆಗಳ ಗರಿಷ್ಠ ಮಾರಾಟ ದರವನ್ನು (ಎಂಆರ್‌ಪಿ) ಪ್ರತಿ ಲೀಟರ್‌ಗೆ ₹10ರವರೆಗೆ ಕಡಿಮೆ ಮಾಡಿದೆ. ಹೊಸ ದರವನ್ನು ಹೊಂದಿರುವ ಅಡುಗೆ ಎಣ್ಣೆಗಳು ಮುಂದಿನ ವಾರದಿಂದ ಮಾರುಕಟ್ಟೆಯಲ್ಲಿ ಲಭ್ಯವಾಗಲಿವೆ.

ಅಡುಗೆ ಎಣ್ಣೆಗಳ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆ ಆಗುತ್ತಿದ್ದು, ಅದಕ್ಕೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿನ ಎಂಆರ್‌ಪಿಯನ್ನು ಕೂಡ ಕಡಿಮೆ ಮಾಡಲಾಗಿದೆ ಎಂದು ಮದರ್ ಡೈರಿ ಕಂಪನಿ ಹೇಳಿದೆ.

ಹೊಸ ದರದ ಪ್ರಕಾರ ಧಾರಾ ಬ್ರ್ಯಾಂಡ್‌ನ ರಿಫೈನ್ಡ್ ಸೋಯಾ ಎಣ್ಣೆಯ ಬೆಲೆ ಲೀಟರ್‌ಗೆ ₹140, ರಿಫೈನ್ಡ್ ರೈಸ್‌ಬ್ರಾನ್ ಎಣ್ಣೆಯ ಬೆಲೆ ₹160 ಆಗಲಿದೆ. ರಿಫೈನ್ಡ್ ಸೂರ್ಯಕಾಂತಿ ಎಣ್ಣೆಯ ಬೆಲೆ ₹150 ಹಾಗೂ ಶೇಂಗಾ ಎಣ್ಣೆ ಬೆಲೆ ₹230 ಆಗಲಿದೆ.

ಬ್ಯಾಂಕ್‌ಗೆ ಮರಳಿದ ಶೇ 50ರಷ್ಟು ನೋಟು

ಮುಂಬೈ (ಪಿಟಿಐ): ₹2,000 ಮುಖಬೆಲೆಯ ನೋಟುಗಳ ಪೈಕಿ ಶೇಕಡ 50ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಈ ನೋಟುಗಳನ್ನು ಆರ್‌ಬಿಐ ಚಲಾವಣೆಯಿಂದ ಹಿಂದಕ್ಕೆ ಪಡೆಯುತ್ತಿದೆ.

ಈ ವರ್ಷದ ಮಾರ್ಚ್ 31ರಂದು ₹2,000 ಮುಖಬೆಲೆಯ ₹3.62 ಲಕ್ಷ ಕೋಟಿ ಮೌಲ್ಯದ ನೋಟುಗಳು ಚಲಾವಣೆಯಲ್ಲಿ ಇದ್ದವು. 'ಇದುವರೆಗೆ ₹1.80 ಲಕ್ಷ ಕೋಟಿ ಮೌಲ್ಯದ ನೋಟುಗಳು ಹಿಂದಿರುಗಿವೆ' ಎಂದು ದಾಸ್ ಅವರು ಹೇಳಿದ್ದಾರೆ.

₹500 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ, ₹1,000 ಮುಖಬೆಲೆಯ ನೋಟುಗಳನ್ನು ಚಲಾವಣೆಗೆ ತರುವ ಯಾವುದೇ ಆಲೋಚನೆ ಆರ್‌ಬಿಐಗೆ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಯುನಿಸೆಫ್: ಸುಡಾನ್‌ನಿಂದ 300 ಅನಾಥ ಮಕ್ಕಳ ರಕ್ಷಣೆ

ಕೈರೊ (ಎಪಿ): ಸುಡಾನ್‌ನ ಸಂಘರ್ಷದ ವೇಳೆ ರಾಜಧಾನಿ ಖಾರ್ಟೋಮ್‌ನ ಅನಾಥಾಶ್ರಮವೊಂದರಲ್ಲಿ ಸಿಲುಕಿದ್ದ ಸುಮಾರು 300 ಮಕ್ಕಳನ್ನು ರಕ್ಷಿಸಲಾಗಿದೆ ಎಂದು ಯುನಿಸೆಫ್ ನೆರವು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

'ಈ 300 ಮಕ್ಕಳನ್ನು ಈಶಾನ್ಯ ಆಫ್ರಿಕಾದ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಏಪ್ರಿಲ್ ಮಧ್ಯಂತರದಿಂದ ಈವರೆಗೆ ಹಸಿವು, ಅನಾರೋಗ್ಯದಿಂದ 71 ಮಕ್ಕಳು ಅಲ್–ಮೆಕೋಮಾ ಅನಾಥಾಶ್ರಮದಲ್ಲಿ ಅಸುನೀಗಿದ್ದಾರೆ. ಮೃತರಲ್ಲಿ 3 ತಿಂಗಳ ಹಸುಳೆಗಳೇ ಹೆಚ್ಚು' ಎಂದು ಯುನಿಸೆಫ್‌ನ ಯುನೈಟೆಡ್ ನೇಷನ್ಸ್ ಮಕ್ಕಳ ಸಂಸ್ಥೆಯ ವಕ್ತಾರ ರಿಕಾರ್ಡೊ ಪೈರ್ಸ್ ತಿಳಿಸಿದ್ದಾರೆ.

ಈ ಮಕ್ಕಳ ಜವಾಬ್ದಾರಿಯನ್ನು ಸುಡಾನ್‌ನ ಸಾಮಾಜಿಕ ಅಭಿವೃದ್ಧಿ ಮತ್ತು ಆರೋಗ್ಯ ಸಚಿವಾಲಯ ವಹಿಸಿಕೊಂಡಿದ್ದು, ಮಕ್ಕಳಿಗೆ ಅಗತ್ಯವಿರುವ ಆರೋಗ್ಯ ತಪಾಸಣೆ, ವೈದ್ಯಕೀಯ ಆರೈಕೆ, ಆಹಾರ, ಶೈಕ್ಷಣಿಕ ಮತ್ತು ಆಟ ಸೇರಿದಂತೆ ಮಾನವೀಯ ಸಹಕಾರದ ಜವಾಬ್ದಾರಿಯನ್ನು ಯುನಿಸೆಫ್ ನೋಡಿಕೊಂಡಿದೆ.

ಒಂದು ತಿಂಗಳ ಹಸುಗಳೆಗಳಿಂದ ಹಿಡಿದು 15 ವರ್ಷದ ಮಕ್ಕಳನ್ನು ರಕ್ಷಿಸಿ, ಖಾರ್ಟೋಮ್‌ನಿಂದ ಆಗ್ನೇಯಕ್ಕೆ ಸುಮಾರು 135 ಕಿ.ಮೀ ದೂರದಲ್ಲಿರುವ ಜಜಿರಾ ಪ್ರಾಂತ್ಯದ ರಾಜಧಾನಿ ಮದನಿಗೆ ಸ್ಥಳಾಂತರಿಸಲಾಗಿದೆ. ಮಕ್ಕಳೊಂದಿಗೆ 70 ಕೇರ್‌ಟೇಕರ್‌ಗಳನ್ನು ವರ್ಗಾವಣೆ ಮಾಡಲಾಗಿದೆ ಎಂದು ರೆಡ್ ಕ್ರಾಸ್‌ನ ಅಂತರರಾಷ್ಟ್ರೀಯ ಸಮಿತಿ ತಿಳಿಸಿದೆ.

ಏತನ್ಮಧ್ಯೆ, ಸ್ಥಳೀಯ ಸ್ವಯಂಸೇವಕರು ಈ ವಾರದ ಆರಂಭದಲ್ಲಿ ಇತರ 77 ಮಕ್ಕಳನ್ನು ಕರಾವಳಿಯ ಪ್ರತ್ಯೇಕ ಮನೆಗಳಿಂದ ಸ್ಥಳಾಂತರಿಸಿ, ಜಜಿರಾ ಪ್ರಾಂತ್ಯದ ಹಸಹಿಸಾ ಪಟ್ಟಣದ ಶಾಲೆಯಲ್ಲಿ 11 ಜನ ವಯಸ್ಕರೊಂದಿಗೆ ಮಕ್ಕಳು ತಾತ್ಕಾಲಿಕವಾಗಿ ಆಶ್ರಯ ಪಡೆದಿದ್ದಾರೆ ಎಂದು ಹದ್ರೀನ್‌ನ ಸ್ವಯಂಸೇವಕ ನಜೀಮ್ ಸಿರಾಗ್ ಹೇಳಿದ್ದಾರೆ.

ಕೆನಡಾ: ವಿದ್ಯಾರ್ಥಿಗಳ ಗಡಿಪಾರಿಗೆ ತಡೆ

ಟೊರೊಂಟೊ (ಪಿಟಿಐ): ಸುಳ್ಳು ಪ್ರವೇಶಾತಿ ಪತ್ರ ಹೊಂದಿದ ಆರೋಪದ ಅನ್ವಯ ಕೆನಡಾದಲ್ಲಿ ಗಡಿಪಾರು ಶಿಕ್ಷೆ ಎದುರಿಸುತ್ತಿದ್ದ 700 ಭಾರತೀಯ ವಿದ್ಯಾರ್ಥಿಗಳ ರಕ್ಷಣೆಗೆ ಅಲ್ಲಿನ ಸಂಸದೀಯ ಸಮಿತಿ ಮುಂದಾಗಿದೆ.

ಉನ್ನತ ಶಿಕ್ಷಣದ ಕನಸು ಹೊತ್ತು ಕೆನಡಾಕ್ಕೆ ಹಾರಿದ್ದ ಪಂಜಾಬ್‌ನ ಈ ವಿದ್ಯಾರ್ಥಿಗಳು ನಕಲಿ ಪ್ರವೇಶಾತಿ ಪತ್ರಗಳನ್ನು ಹೊಂದಿರುವುದು ಬೆಳಕಿಗೆ ಬಂದಿತ್ತು. ಹಾಗಾಗಿ, ಅವರನ್ನು ಗಡಿಪಾರು ಮಾಡಲು ಅಲ್ಲಿನ ಸರ್ಕಾರ ಮುಂದಾಗಿತ್ತು.

'ಭಾರತದಲ್ಲಿನ ಶೈಕ್ಷಣಿಕ ಸಲಹೆಗಾರರ ಮೋಸಕ್ಕೆ ವಿದ್ಯಾರ್ಥಿಗಳು ಬಲಿಪಶುವಾಗಿದ್ದಾರೆ. ಅವರ ಶೈಕ್ಷಣಿಕ ಚಟುವಟಿಕೆಗೆ ಯಾವುದೇ ತೊಂದರೆಯಾಗಬಾರದು. ವಿದ್ಯಾರ್ಥಿಗಳನ್ನು ಯಾವುದೇ ಕಾರಣಕ್ಕೂ ಗಡಿಪಾರು ಮಾಡಬಾರದು ಎಂದು ಕೆನಡಾ ಗಡಿ ಸೇವಾ ಸಂಸ್ಥೆಗೆ ಸರ್ವಪಕ್ಷ ಒಳಗೊಂಡ ಸಂಸದೀಯ ವಲಸೆ ಸಮಿತಿ ಸೂಚಿಸಿದೆ' ಎಂದು ಟೊರೊಂಟೊ ಸ್ಟಾರ್ ಪತ್ರಿಕೆ ವರದಿ ಮಾಡಿದೆ.

ಮಾನವೀಯ ನೆಲೆಗಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಇಲ್ಲಿಯೇ ಐದು ವರ್ಷ ಶಾಶ್ವತವಾಗಿ ನೆಲೆಸಲು ಅವಕಾಶ ಕಲ್ಪಿಸಬೇಕು ಎಂದು ಸಮಿತಿ ಸಲಹೆ ನೀಡಿದೆ.

ಕೊಲೆ ಪ್ರಕರಣ; ಇಮ್ರಾನ್‌ಗೆ ಜಾಮೀನು


ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲರೊಬ್ಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ಹೈಕೋರ್ಟ್, ಮಾಜಿ ಪ್ರಧಾನಿ ಇಮ್ರಾನ್ ಖಾನ್‌ಗೆ ಗುರುವಾರ ಜಾಮೀನು ಮಂಜೂರು ಮಾಡಿದ್ದು, ಉಳಿದ ಎಂಟು ಪ್ರಕರಣಗಳಲ್ಲಿನ ಜಾಮೀನು ಕೋರಿಕೆಯನ್ನು ಕಾಯ್ದಿರಿಸಿದೆ.

ಕ್ವೆಟ್ಟಾದಲ್ಲಿ ನಡೆದಿದ್ದ ಗುಂಡಿನ ಚಕಮಕಿಯಲ್ಲಿ ಸುಪ್ರೀಂಕೋರ್ಟ್ ವಕೀಲ ಅಬ್ದುಲ್ ರಜಾಕ್ ಶಾರ್ ಹತ್ಯೆಯಾಗಿತ್ತು. ಈ ಪ್ರಕರಣದಲ್ಲಿ ಖಾನ್ ಸೇರಿದಂತೆ 70 ಜನರ ಹೆಸರು ಪ್ರಸ್ತಾಪವಾಗಿತ್ತು.

ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷ ಹಾಗೂ ಫೆಡರಲ್ ಸರ್ಕಾರ ಇದಕ್ಕೆ ಸಂಬಂಧಿಸಿದಂತೆ ಪರಸ್ಪರ ಆರೋಪ ಮಾಡಿದ್ದವು.

ವಾದ–ವಿವಾದ ಆಲಿಸಿದ ಹೈಕೋರ್ಟ್‌ನ ವಿಭಾಗೀಯ ಪೀಠ ಎರಡು ವಾರದ ಅವಧಿಗೆ ಜಾಮೀನು ಮಂಜೂರು ಮಾಡಿದೆ.

ಉಳಿದ ಎಂಟು ಪ್ರಕರಣಗಳಿಗೆ ಸಂಬಂಧಿಸಿದ ಜಾಮೀನು ಅರ್ಜಿಗಳ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಫಾರೂಕ್ ಖಾನ್ ಕಾದಿರಿಸಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ
ಕೂಳೆ 300-350
ನಡುಗೋಲು 450-500
ರಾಶಿ 500-550
ರಾಶಿ ಉತ್ತಮ 750-800
ಜರಡಿ 1,000 - 1,050
ಹೆರಕಿದ್ದು 1,200-1,300
ಹಸಿರು ಸಾಧಾರಣ 800-900
ಹಸಿರು ಉತ್ತಮ 1,000-1,100
ಹಸಿರು ಅತಿ ಉತ್ತಮ 1,600-1,650
ಕಾಳು ಮೆಣಸು - 475

ಅಡಿಕೆ

ಬಂಟ್ವಾಳ
ಕೋಕ 12,500-25,000
ಹೊಸತು 27,500-40,500
ಹಳತು 48,000-53,000

ಕುಮಟಾ
ಚಿಪ್ಪು 28,111-33,949
ಕೋಕ 16,599-33,099
ಹೊಸಚಾಲಿ 34,199-37,659

ಪುತ್ತೂರು
ಹೊಸತು 33,500-40,500

ಸಾಗರ
ಬಿಳಿಗೋಟು 29,099-34,699
ಚಾಲಿ 34,699-37,619
ಕೋಕ 26,899-35,300
ಕೆಂಪುಗೋಟು 29,399-38,929
ರಾಶಿ 34,699-49,999
ಸಿಪ್ಪೆಗೋಟು 4,651-21,300

ಶಿವಮೊಗ್ಗ
ಬೆಟ್ಟೆ 46,569-53,120
ಗೊರಬಲು 18,009-36,669
ರಾಶಿ 34,711-50,199
ಸರಕು 50,000-81,689

ಸಿದ್ದಾಪುರ
ಬಿಳಿಗೋಟು 29,812-33,399
ಚಾಲಿ 35,699-38,009
ಕೋಕ 28,909-32,799
ಹಳೆಚಾಲಿ 35,399-37,199
ಕೆಂಪುಗೋಟು 32,229-32,449
ರಾಶಿ 44,079-48,199
ತಟ್ಟಿಬೆಟ್ಟೆ 42,109-42,109

ಶಿರಸಿ
ಬೆಟ್ಟೆ 35,199-45,999
ಬಿಳಿಗೋಟು 24,069-33,099
ಚಾಲಿ 35,099-38,311
ಕೆಂಪುಗೋಟು 25,596-35,399
ರಾಶಿ 44,169-47,999

ಯಲ್ಲಾಪುರ
ಆಪಿ 52,599-57,009
ಬಿಳಿಗೋಟು 26,899-34,150
ಚಾಲಿ 34,299-38,389
ಕೋಕ 17,818-32,690
ಕೆಂಪುಗೋಟು 28,899-36,009
ರಾಶಿ 43,699-52,530
ತಟ್ಟಿಬೆಟ್ಟೆ 40,880-47,999

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,400	15,400	15,300	185.40 ಸೆಂಟ್ಸ್
ಎಸಿ	7,980	8,000	7,700	
ಆರ್‌ಪಿ	10,700	10,900	10,800	ಲಂಡನ್
ಆರ್‌ಸಿ	6,150	244	6,025	- ಡಾಲರ್ಸ್ 2674

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹335-462
ದ್ವಿತಳಿ (ಬಿ.ವಿ) ₹333-926

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹152
ಆರ್‌ಎಸ್‌ಎಸ್-5 ₹147
ಗುಡ್ ಲಾಟ್ ₹128
(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ
8–6–2023
ಜಾವಾ 70/80(ಹೊಸ) 11,300-11,350
ಜಾವಾ 80/90(ಹೊಸ) 10,900-10,950
ದಪ್ಪ ಮಧ್ಯಪ್ರದೇಶ(ಹೊಸ) 11,100-11,200
ದಪ್ಪ ಗುಜರಾತ್(ಹೊಸ) 12,200-12,300

ಶೇಂಗಾ ಎಣ್ಣೆ (10 ಕೆಜಿಗೆ)
ಕಚ್ಚಾ (ತೆರಿಗೆ ಬಿಟ್ಟು) 1600(1600)
ಒಂದು ವಾರದ ಡೆಲಿವರಿ 1595(1595)
ಸೋಯಾ ಕಚ್ಚಾ 845(850)
ಪಾಮ್ ವಾರದ ಡೆಲಿವರಿ 818(828)
ಸೂರ್ಯಕಾಂತಿ ಎಣ್ಣೆ ಕಚ್ಚಾ 780(790)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
59,350 (59,750)
ಬೆಳ್ಳಿ ಕೆ.ಜಿ 72,050 (71,850)
ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಸಿರಿಯಾ, ಇರಾಕ್‌ಗೆ 150 ಮಿಲಿಯನ್ ಡಾಲರ್ ನೆರವು'

ದುಬೈ (ಎಪಿ): ಇಸ್ಲಾಮಿಕ್ ಸ್ಟೇಟ್ ಉಗ್ರಗಾಮಿ ಹಿಡಿತದಿಂದ ವಿಮೋಚನೆಗೊಂಡ ಸಿರಿಯಾ ಮತ್ತು ಇರಾಕ್‌ಗೆ 150 ಮಿಲಿಯನ್ ಡಾಲರ್ (ಅಂದಾಜು ₹1,230 ಕೋಟಿ) ನೆರವನ್ನು ಅಮೆರಿಕ ನೀಡಲಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಗುರುವಾರ ತಿಳಿಸಿದ್ದಾರೆ.

ಸೌದಿ ಅರೇಬಿಯಾ ಆಯೋಜಿಸಿದ್ದ ಸಚಿವ ಸಮ್ಮೇಳನದಲ್ಲಿ ಮಾತನಾಡಿ, ಐಎಸ್‌ಐಎಸ್ ಅನ್ನು ಸೋಲಿಸಲು ಮತ್ತು ಉಗ್ರಗಾಮಿ ಗುಂಪಿನ ವಿರುದ್ಧ ಸಂಘಟಿತ ಹೋರಾಟ ನಡೆಸಲು 80ಕ್ಕೂ ಹೆಚ್ಚು ದೇಶಗಳು ಸಿದ್ಧವಿವೆ ಎಂದರು.

ಚಿರಸ್ಮರಣೆ

ದಿ|| ಕೆ. ಹಿರಣ್ಯಗೌಡರು
ಗಾಂಡ್ಲಹಳ್ಳಿ, ಶ್ರೀನಿವಾಸಪುರ ತಾ|| ಕೋಲಾರ ಜಿಲ್ಲೆ.
ಇಂದಿಗೆ ನೀವು ನಮ್ಮನ್ನಗಲಿ 16 ವರ್ಷಗಳಾದವು
ನಿಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ ಎಂದು ಆಶಿಸುವ,
ತಮ್ಮ ದುಃಖತಪ್ತ ಪತ್ನಿ ಚೌಡಮ್ಮ ಮತ್ತು ಮಕ್ಕಳು.
ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು

ಎರಡನೇ ವಾರ್ಷಿಕ ಪುಣ್ಯಸ್ಮರಣೆ

ಕೆ.ಎಸ್. ಜಗದೀಶ್ ರೆಡ್ಡಿ
ಕಸವನಹಳ್ಳಿ
"ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ, ತಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ ಹಾಗೂ ತಮ್ಮನ್ನು ಸದಾಸ್ಮರಿಸುತ್ತಿರುವ"
ಇಂತಿ ದುಃಖತಪ್ತರು:
ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗದವರು.

ಶ್ರದ್ಧಾಂಜಲಿ

ಶಾರದ ಶಾಮಣ್ಣ
ದಿವಂಗತ ಕಳಸ ಶಾಮಣ್ಣನವರ ಧರ್ಮಪತ್ನಿ
ಅವರು ಗುರುವಾರ ಜೂನ್ 8, 2023
ಬೆಳಿಗ್ಗೆ ದೈವಾಧೀನರಾದರೆಂದು
ತಿಳಿಸಲು ವಿಷಾದಿಸುತ್ತೇವೆ
Ph: 94492 13917
ದು:ಖತಪ್ತ ಮಕ್ಕಳು
ಮತ್ತು ಕಳಸ ಕುಟುಂಬ

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

13.06.2023 11.07.2023 ಮಂತ್ರಾಲಯ,ಶ್ರೀಶೈಲಂ ಆಹೋಬಿಲಂ 5 ದಿನಗಳು. 11.07.2023 ಅಖಂಡ ಆಂಧ್ರಪ್ರದೇಶ 10 ದಿನಗಳು. 10.07.2023 ಕೇರಳ ಪ್ರವಾಸ 7 ದಿನಗಳು. 19.06.2023 17.07.2023 ತಮಿಳುನಾಡು 7 ದಿನಗಳು. 26.06.2023, 24.07.2023 ಶಿರಡಿ ಮತ್ತು 3 ಜೋತಿರ್ಲಿಂಗ 7 ದಿನಗಳು. ಪ್ರತಿ ತಿಂಗಳು ವಿಮಾನ/ರೈಲಿನಲ್ಲಿ ಕಾಶಿ,ಗಯಾ ಅಲಹಾಬಾದ್,ಅಯೋಧ್ಯಾ 6 ದಿನಗಳು. 09.07.2023 ಪುರಿ,ಕೋಲ್ಕತಾ ದಾರ್ಜಿಲಿಂಗ್ 11 ದಿನಗಳು. 11.07.2023 ದೆಹಲಿ,ಆಗ್ರಾ,ಕಾಶಿ,ಅಯೋಧ್ಯಾ ವೈಷ್ಣೋದೇವಿ ಅಮೃತಸರ 11 ದಿನಗಳು. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9880847001 9342848791

ಜೂನ್ ಜುಲೈ ಅಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ 8/13/20 ದಿನಗಳ ಕಾಶಿ,ಗಯಾ,ಅಯೋಧ್ಯ ಭುವನೇಶ್ವರ್ 13 ದಿನಗಳ ಚಾರ್ ಧಾಮ್ 20 ದಿನಗಳ ಬದರಿನಾಥ್ ಕೇದಾರನಾಥ್, ವೈಷ್ಣೋದೇವಿ,ಅಮೃತ್‌ಸರ್ ವಾಘಾಬಾರ್ಡರ್,ದೆಹಲಿ. ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 9448119290 8088826815 9019301300

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 05.07.2023 03.09.2023 ರಿಂದ 12 ದಿನಗಳ ಕಾಶಿ,ಗಯಾ,ಹರಿದ್ವಾರ್. 20.09.2023 06.10.2023 16.10.2023 ರಿಂದ 15 ದಿನಗಳ ಚಾರ್‌ಧಾಮ್. 03.09.2023 ರಿಂದ 11 ದಿನಗಳ ಕಾಶಿ,ನೇಪಾಳ. 04.10.2023 17.11.2023 ರಿಂದ 8/11 ದಿನಗಳ ಗುಜರಾತ್,ರಾಜಸ್ಥಾನ್. 21.09.2023 ರಿಂದ 11 ದಿನಗಳ ಮಧ್ಯಪ್ರದೇಶ. 04.10.2023 16.10.2023 ರಿಂದ 12 ದಿನಗಳ ಶ್ರೀನಗರ ವೈಷ್ಣೋದೇವಿ 03.10.2023 12.10.2023 ರಿಂದ 8/12 ದಿನಗಳ ಶಿಮ್ಲಾ,ಮನಾಲಿ ವೈಷ್ಣೋದೇವಿ. 23.07.2023 ರಿಂದ 7/11 ದಿನಗಳ ಸಿಂಗಾಪುರ್, ಮಲೇಶಿಯಾ ಥೈಲ್ಯಾಂಡ್ ದುಬೈ,ಅಬುದಾಬಿ ಯುರೋಪ್ (ಆಗಸ್ಟ್ ಸೆಪ್ಟೆಂಬರ್) ಪ್ರವಾಸಗಳಿಗೆ ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

★13.07.2023 8/13ದಿನ★ ದೆಹಲಿ ಆಗ್ರಾ,ಪ್ರಯಾಗ ಗಯ,ಕಾಶಿ ಪ್ರವಾಸ. '15.08.2023 10ದಿನ' ಗುಜರಾತ್,ಉಜ್ಜಯಿನಿ ಓಂಕಾರೇಶ್ವರ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809/ 9902433500

9.6.2023ರಿಂದ 4ದಿನ ಧರ್ಮಸ್ಥಳ,ಕೊಲ್ಲೂರುಮೂಕಾಂಬಿಕೆ,ಮುರುಡೇಶ್ವರ,ಹೊರನಾಡು, ಸಿಂಗದೂರು. 20.06.2023ರಿಂದ 10 ದಿನ ಶಿರಡಿ,ಬಾಂಬೆ,ಗೋವಾ,ನಾಸಿಕ್, ಪಂಡರಾಪುರ, ಗೋಕರ್ಣ,ಮುರುಡೇಶ್ವರ29.06.2023 ರಿಂದ 4ದಿನ 9 ನವಗ್ರಹ ದೇವಾಲಯಗಳ ದರ್ಶನ ಮತ್ತು ಶ್ರೀರಂಗ,ತಂಜಾವೂರು,ಚಿದಂಬರಂ 6.7.2023ರಿಂದ 10 ದಿನ ವೈಷ್ಣೋದೇವಿ,ಕುಲುಮನಾಲಿ,ಶಿಮ್ಲಾ, ದೆಹಲಿ,ಅಮೃತಸರ,ವಾಘಾ ಬಾರ್ಡರ್ 11.07.2023 ರಿಂದ 6ದಿನ ರಾಮೇಶ್ವರ,ಕನ್ಯಾಕುಮಾರಿ, ತ್ರಿವೇಂಡ್ರಂ,ಗುರುವಾಯೂರು, ಅಲಪಿಬೋಟಿಗ್ ಕೋವಲಂಬೀಚ್ 17.07.2023ರಿಂದ 12 ದಿನ ಚಾರ್‌ದಾಮ್ ಪ್ರವಾಸ ಕೇದಾರನಾಥ,ಗಂಗೋತ್ರಿ, ಬದರಿನಾಥ್,ಯಮನೋತ್ರಿ 23.07.2023ರಿಂದ 7 ದಿನ ಭದ್ರಾಚಲಂ,ಹೈದ್ರಾಬಾದ್,ಶ್ರೀಶೈಲ ,ಮಂತ್ರಾಲಯ,ಅಮರಾವತಿ, ರಾಮೋಜಿಫಿಲಂ ಸಿಟಿ ಶ್ರೀಗುರುರಾಜ ಟ್ರಾವೆಲ್ಸ್, ಕೋಲಾರ 9449652555, 9611082432, 8123099913

07.07.2023 11.09.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 15.06.2023 19.07.2023 ಭೂತಾನ್ 8 ದಿನಗಳು. 18.07.2023 20.08.2023 ನೇಪಾಳ,ಮುಕ್ತಿನಾಥ್ 9 ದಿನಗಳು. 22.06.2023 27.07.2023 ರಾಮೇಶ್ವರ,ಮದುರೈ, ಕುಂಭಕೋಣಮ್ 6 ದಿನಗಳು. 25.06.2023 27.07.2023 ಗ್ಯಾಂಗ್‌ಟಾಕ್,ಡಾರ್ಜಲಿಂಗ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03 9448402248 7022547922

ಶ್ರೀರಾಜರಾಜೇಶ್ವರಿ ಟೂರ್ಸ್ 19.6.2023 8ದಿನ ಮಹಾರಾಷ್ಟ್ರದ 5ಜ್ಯೋತಿರ್ಲಿಂಗ ಶಿರಡಿ,ಪಂಡರಾಪುರ ಕೊಲ್ಲಾಪುರ. 20.7.2023 8ದಿನ ಕಾಶಿ,ಗಯ ಅಯೋಧ್ಯ ನೈಮಿಷರಣ್ಯ 9739618243, 9743895346.

17.07.2023, ರೈಲು ಮತ್ತು ವಿಮಾನದಲ್ಲಿ ಕಾಶಿ, ಪ್ರಯಾಗರಾಜ್, ಅಯೋಧ್ಯ 18,500/22,500. 6.7.2023, ಪುರಿ, ಭುವನೇಶ್ವರ, ಕೊರ್ನಾಕ್ 21500/-.ಅನುಗ್ರಹ ಯಾತ್ರ. 9880079351

DH Deccan Herald ಪ್ರಜಾವಾಣಿ
Classifieds
Education Special
For More Details Contact:
9731810277 | 9901641752
9845114560 | 9886213331
080- 45557163 | 45557164
Email : dhclassifieds@deccanherald.co.in
SPECIAL RATES FOR
Admission Notice
Education Success
Congratulation Ads
*conditions apply

ಉದ್ಯೋಗಾವಕಾಶ
General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.12,000 - 17,000. 8951315839, 9880120052

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ:- 8884777502, 8884777503.

Wanted

ಬೆಂಗಳೂರಿನ ನಾಗಸಂದ್ರ ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆ ಕೆಲಸ ಮಾಡಲು ಗಂಡ-ಹೆಂಡತಿ ಬೇಕಾಗಿದ್ದಾರೆ. ವಸತಿ ಉಚಿತ. ಸಂಪರ್ಕಿಸಿ : 9845026475, 9845510722

ಇತರೆ
Books & Periodicals

ಪರಸ್ಪರರನ್ನು ಅರಿಯಿರಿ, ಸೌಹಾರ್ದದಿಂದ ಬಾಳಿರಿ, ಪವಿತ್ರ ಕುರ್ ಆನ್ ಓದಲಿಚ್ಛಿಸುವಿರಾ? ಇಸ್ಲಾಮನ್ನು ಅರಿಯಲಿಚ್ಛಿಸುವಿರಾ? ಓದಲು ಪುಸ್ತಕಗಳನ್ನು ರವಾನಿಸಲಾಗುವುದು. ಪೂರ್ಣ ಹೆಸರು, ಸ್ಪಷ್ಟ ವಿಳಾಸ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಬರಿಯಿರಿ. ಇಸ್ಮಿಕಾ, ಪಿ.ಬಿ.ನಂ. 229, ಮಂಗಳೂರು–1, ಮೊಬೈಲ್: 9060341799. Email:info@ismika.com, Web:www.ismika.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಫ್ರೆಂಚ್ ಓಪನ್: ಜೊಕೊವಿಚ್– ಅಲ್ಕರಾಜ್ ಸೆಮಿ ಪೈಪೋಟಿ ಇಂದು

ಫೈನಲ್‌ಗೆ ಮುಕೋವಾ, ಇಗಾ

ಕರೊಲಿನಾ ಮುಕೋವಾ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

ಪ್ಯಾರಿಸ್ (ರಾಯಿಟರ್ಸ್/ ಎಎಫ್‌ಪಿ): ಮ್ಯಾರಥಾನ್ ಹೋರಾಟದಲ್ಲಿ ಅರಿನಾ ಸಬಲೆಂಕಾ ಅವರನ್ನು ಮಣಿಸಿದ ಜೆಕ್ ರಿಪಬ್ಲಿಕ್‌ನ ಕರೊಲಿನಾ ಮುಕೋವಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಮುಕೋವಾ 7–6, 6–7, 7–5 ರಲ್ಲಿ ವಿಶ್ವದ ಎರಡನೇ ರ‍್ಯಾಂಕ್‌ನ ಆಟಗಾರ್ತಿಯನ್ನು ಮಣಿಸಿದರು. ಈ ಹಣಾಹಣಿ 3 ಗಂಟೆ 13 ನಿಮಿಷ ನಡೆಯಿತು.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಮುಕೋವಾ ಅವರು ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ವಿರುದ್ಧ ಪೈಪೋಟಿ ನಡೆಸುವರು. ಮತ್ತೊಂದು ಸೆಮಿಫೈನಲ್‌ನಲ್ಲಿ ಇಗಾ 6–2, 7–6 ರಲ್ಲಿ ಬ್ರೆಜಿಲ್‌ನ ಬ್ಯಾಟ್ರಿಜ್ ಹದಾದ್ ಮಯಾ ಅವರನ್ನು ಮಣಿಸಿದರು.

ಜೊಕೊವಿಚ್– ಅಲ್ಕರಾಜ್ ಸೆಣಸು: ಶುಕ್ರವಾರ ನಡೆಯಲಿರುವ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಸರ್ಬಿಯದ ನೊವಾಕ್ ಜೊಕೊವಿಚ್ ಮತ್ತು ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಎದುರಾಗಲಿದ್ದು, ಪ್ರಬಲ ಪೈಪೋಟಿ ನಿರೀಕ್ಷಿಸಲಾಗಿದೆ.

36 ವರ್ಷದ ಜೊಕೊವಿಚ್ ಅವರು ದಾಖಲೆಯ 23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. ಮಾತ್ರವಲ್ಲ, ಫ್ರೆಂಚ್ ಓಪನ್ ಗೆದ್ದರೆ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಮತ್ತೆ ಅಗ್ರಸ್ಥಾನಕ್ಕೇರಲಿದ್ದಾರೆ.

20 ವರ್ಷದ ಅಲ್ಕರಾಜ್ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ತಮ್ಮಲ್ಲೇ ಉಳಿಸಿಕೊಳ್ಳಬೇಕಾದರೆ, ಸೆಮಿಫೈನಲ್‌ನಲ್ಲಿ ಗೆಲುವು ಪಡೆಯುವುದು ಅನಿವಾರ್ಯ.

‘ಜೊಕೊವಿಚ್ ಅವರಿಗೆ ಇದು ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ 45ನೇ ಸೆಮಿಫೈನಲ್. ನನಗೆ ಎರಡನೇ ಸೆಮಿ ಹೋರಾಟ’ ಎಂದು ಅಲ್ಕರಾಜ್ ಪ್ರತಿಕ್ರಿಯಿಸಿದ್ದಾರೆ. ‘ಅಲ್ಕರಾಜ್ ಅವರನ್ನು ಮಣಿಸಬೇಕಾದರೆ ಸೆಮಿಯಲ್ಲಿ ಉತ್ತಮ ಆರಂಭ ಪಡೆಯುವುದು ಅಗತ್ಯ’ ಎಂದು ಜೊಕೊವಿಚ್ ಹೇಳಿದ್ದಾರೆ.

ಅಲ್ಕರಾಜ್ ಅವರು ಇಟಲಿಯ ಲೊರೆನ್ಜೊ ಮುಸೆಟ್ಟಿ ಮತ್ತು ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ಅವರನ್ನು ಮಣಿಸಿ ನಾಲ್ಕರಘಟ್ಟದಲ್ಲಿ ಸ್ಥಾನ ಪಡೆದುಕೊಂಡಿದ್ದರು. ಜೊಕೊವಿಚ್ ಅವರು ಎಂಟರ ಘಟ್ಟದಲ್ಲಿ ಕರೆನ್ ಕಚನೊವ್ ವಿರುದ್ಧ ಗೆದ್ದಿದ್ದರು.

ಶುಕ್ರವಾರ ನಡೆಯಲಿರುವ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಕಳೆದ ಬಾರಿಯ ರನ್ನರ್ ಅಪ್ ನಾರ್ವೆಯ ಕ್ಯಾಸ್ಪರ್ ರೂಡ್ ಅವರು ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರ ಸವಾಲನ್ನು ಎದುರಿಸುವರು.

ಗುರುವಾರ ರಾತ್ರಿ ನಡೆದಿದ್ದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರೂಡ್ ಅವರು 6–1, 6–2, 3–6, 6–3 ರಲ್ಲಿ ಹೋಲ್ಗರ್ ರೂನ್ ಅವರನ್ನು ಮಣಿಸಿದ್ದರು. 22 ವರ್ಷದ ಜ್ವೆರೆವ್ ಅವರಿಗೆ ರೋಲಂಡ್ ಗ್ಯಾರೋಸ್‌ನಲ್ಲಿ ಸತತ ಮೂರನೇ ಸೆಮಿ ಫೈನಲ್ ಪಂದ್ಯ ಇದಾಗಿದೆ.

ಏಷ್ಯಾ ಮಹಿಳಾ ಹಾಕಿ: ಭಾರತಕ್ಕೆ 11–0 ಜಯ

ಭಾರತ ಮತ್ತು ಚೀನಾ ತೈಪೆ ಆಟಗಾರ್ತಿಯರ ಪೈಪೋಟಿ –ಎಚ್‌ಎಫ್ ಟ್ವಿಟರ್ ಚಿತ್ರ

ಕಾಕರಾಮಿಗಾರ (ಜಪಾನ್), (ಪಿಟಿಐ): ಭಾರತ ಜೂನಿಯರ್ ಮಹಿಳಾ ತಂಡ ಗುರುವಾರ ನಡೆದ ಏಷ್ಯಾ ಕಪ್ ಹಾಕಿ ಟೂರ್ನಿ ಪಂದ್ಯದಲ್ಲಿ 11–0 ಯಿಂದ ಚೀನಾ ತೈಪೆ ತಂಡವನ್ನು ಬಗ್ಗುಬಡಿದು ಸೆಮಿಫೈನಲ್ ಪ್ರವೇಶ ಖಚಿತಪಡಿಸಿಕೊಂಡಿತು.

ಭಾರತ ‘ಎ’ ಗುಂಪಿನಲ್ಲಿ ಅಜೇಯ ಸಾಧನೆಯೊಡನೆ ಅಗ್ರಸ್ಥಾನ ಪಡೆಯಿತು. ಮೂರು ಪಂದ್ಯಗಳನ್ನು ಗೆದ್ದು, ಒಂದನ್ನು ‘ಡ್ರಾ’ ಮಾಡಿಕೊಂಡಿತು.

ಆರಂಭದಿಂದಲೇ ಎದುರಾಳಿ ಗೋಲಿನತ್ತ ದಾಳಿ ನಡೆಸಿದ ಭಾರತ ಪಂದ್ಯದ ಬಹುಭಾಗ ನಿಯಂತ್ರಣ ಹೊಂದಿತ್ತು. ಮೊದಲ ಕ್ವಾರ್ಟರ್‌ನಲ್ಲೇ 4 ಗೋಲುಗಳ ಮುನ್ನಡೆ ಸಾಧಿಸಿತು.

ವೈಷ್ಣವಿ ವಿಠ್ಠಲ್ ಫಾಲ್ಕೆ (1ನೇ ನಿಮಿಷ), ದೀಪಿಕಾ (3ನೇ), ಅನ್ನು (10 ಮತ್ತು 52ನೇ), ರುತುಜಾ ದಾದಸೊ ಪಿಸಾಳ್ (12ನೇ), ನೀಲಮ್ (19ನೇ), ಮಂಜು ಚೋರ್ಸಿಯಾ (33ನೇ), ಸುನೆಲಿಟಾ ಟೊಪ್ಪೊ (43, 57ನೇ ನಿಮಿಷ), ದೀಪಿಕಾ ಸೋರೆಂಗ್ (46ನೇ) ಮತ್ತು ಮುಮ್ತಾಜ್ ಖಾನ್ (55ನೇ) ಭಾರತ ತಂಡದ ಗೋಲುಗಳನ್ನು ಗಳಿಸಿ ಭರ್ಜರಿ ಗೆಲುವಿಗೆ ಕಾರಣರಾದರು.

ಭಾರತ ಶನಿವಾರ ನಡೆಯುವ ಪಂದ್ಯದಲ್ಲಿ ಜಪಾನ್ ಅಥವಾ ಕಜಕಸ್ತಾನ ತಂಡವನ್ನು ಎದುರಿಸಲಿದೆ.

ಜೂನ್ ಕೊನೆಯ ವಾರ ಟ್ರಯಲ್ಸ್ ನಡೆಯುವ ಸಾಧ್ಯತೆ

ಕುಸ್ತಿಪಟುಗಳಿಗೆ ಭಾಗಿಯಾಗುವ ಬಯಕೆ

ವಿನೇಶಾ ಫೋಗಟ್ (ಎಡ) ಮತ್ತು ಸಾಕ್ಷಿ ಮಲಿಕ್

ನವದೆಹಲಿ (ಪಿಟಿಐ): ಸರ್ಕಾರದ ಆಶ್ವಾಸನೆ ಮೇರೆಗೆ ಬುಧವಾರ ಪ್ರತಿಭಟನೆ ಹಿಂಪಡೆದುಕೊಂಡ ಪ್ರಮುಖ ಕುಸ್ತಿ ಪಟುಗಳು, ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳುವ ಅಪೇಕ್ಷೆ ಹೊಂದಿದ್ದಾರೆ. ಈ ಟ್ರಯಲ್ಸ್ ಈ ತಿಂಗಳ ಕೊನೆಯಲ್ಲಿ ನಿಗದಿಯಾಗಿದೆ.

ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ (ಒಸಿಎ) ನೀಡಿರುವ ಜುಲೈ 15ರ ಗಡುವಿಗಿಂತ ಮೊದಲೇ ತಂಡಗಳನ್ನು ಅಂತಿಮಗೊಳಿಸುವ ಗುರಿಯನ್ನು ಬಹುತೇಕ ರಾಷ್ಟ್ರಗಳ ಕುಸ್ತಿ ಫೆಡರೇಷನ್‌ಗಳು ಹೊಂದಿವೆ ಎಂದು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಗುರುವಾರ ಇಲ್ಲಿ ತಿಳಿಸಿದ್ದಾರೆ.

ಏಷ್ಯನ್ ಕ್ರೀಡಾಕೂಟ ಚೀನಾದ ಹಾಂಗ್‌ಝೌನಲ್ಲಿ ಸೆಪ್ಟೆಂಬರ್ 23 ರಿಂದ ಅಕ್ಟೋಬರ್ 8ರವರೆಗೆ ನಡೆಯಲಿದೆ.

ಕುಸ್ತಿ ಸಂಸ್ಥೆಯ ವ್ಯವಹಾರಗಳನ್ನು ನೋಡಿಕೊಳ್ಳಲು ಭಾರತ ಒಲಿಂಪಿಕ್ ಸಂಸ್ಥೆ ಏಪ್ರಿಲ್ 27ರಂದು ಮೂವರು ಸದಸ್ಯರ ಅಡ್‌ಹಾಕ್ ಸಮಿತಿಯನ್ನು ನೇಮಕ ಮಾಡಿತ್ತು. ಮೇ 4ರಂದು ಇಬ್ಬರು ಅಧಿಕಾರ ವಹಿಸಿದ್ದರು. ಈಗ ಭೂಪೇಂದರ್ ಸಿಂಗ್ ಬಾಜ್ವಾ ಮತ್ತು ಸುಮಾ ಶಿರೂರ ಅವರಿರುವ ಸಮಿತಿಯು ಜೂನ್ ಕೊನೆಯ ವಾರದಲ್ಲಿ ಆಯ್ಕೆ ಟ್ರಯಲ್ಸ್ ನಡೆಸುವ ಸಾಧ್ಯತೆಯಿದೆ.

ಆದರೆ ಟ್ರಯಲ್ಸ್‌ಗೆ ಸಜ್ಜಾಗಲು ತಮಗೆ ಇನ್ನೂ ಸ್ವಲ್ಪ ಸಮಯ ನೀಡುವಂತೆ ಕುಸ್ತಿಪಟುಗಳು ಬಯಸಿದ್ದಾರೆ. ‘ನಮಗೆ ಟ್ರಯಲ್ಸ್‌ನಲ್ಲಿ ಭಾಗವಹಿಸುವ ಮನಸ್ಸಿದೆ. ಆದರೆ ಸಿದ್ಧರಾಗಲು ನಮಗೆ ಕಡೇಪಕ್ಷ ಒಂದೂವರೆ ತಿಂಗಳ ತರಬೇತಿ ಅಗತ್ಯವಿದೆ’ ಎಂದು ಅಂತರರಾಷ್ಟ್ರೀಯ ಕುಸ್ತಿಪಟು ಸತ್ಯವ್ರತ ಕಾದಿಯಾನ್ (ಸಾಕ್ಷಿ ಮಲಿಕ್ ಅವರ ಪತಿ) ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನ ನಂತರ ಕುಸ್ತಿಪಟುಗಳು ಟೂರ್ನಿಗಳಲ್ಲಿ ಭಾಗವಹಿಸಿಲ್ಲ. ಕೆಲವರು 2022ರ ಆಗಸ್ಟ್‌ನ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕೊನೆಯ ಬಾರಿ ಪಾಲ್ಗೊಂಡಿದ್ದರು.

ಏಳು ಮಂದಿ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊಂದಿರುವ ಬ್ರಿಜ್‌ಭೂಷಣ್ ಸಿಂಗ್ ಬಂಧನಕ್ಕೆ ಒತ್ತಾಯಿಸಿ ವಿನೇಶಾ ಫೋಗಟ್, ಬಜರಂಗ್ ಪುನಿಯಾ ಮತ್ತಿತರರು ನವದೆಹಲಿಯ ಜಂತರ್ ಮಂಥರ್‌ನಲ್ಲಿ ಹೋರಾಟದಲ್ಲಿ ಭಾಗಿಯಾದ್ದರು. ಹೀಗಾಗಿ ಏಪ್ರಿಲ್‌ನಲ್ಲಿ ನಡೆದ ಅಂತರರಾಷ್ಟ್ರೀಯ ತರಬೇತಿ ಶಿಬಿರಗಳಲ್ಲಿ ಭಾಗವಹಿಸಿರಲಿಲ್ಲ. ಬಜರಂಗ್ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರೆ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ವಿನೇಶಾ ಪದಕ ಜಯಿಸಿದ್ದರು.

ಸಚಿವ ಅನುರಾಗ್ ಠಾಕೂರ್ ಜೊತೆ ಬುಧವಾರ ಕುಸ್ತಿಪಟುಗಳ ಮಾತುಕತೆ ನಡೆದಿತ್ತು. ಈ ವೇಳೆ, ಸಿಂಗ್ ವಿರುದ್ಧ 15 ದಿನಗಳಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ಸಚಿವರ ಭರವಸೆಯ ಮೇರೆಗೆ ಕುಸ್ತಿಪಟುಗಳು ಜೂನ್ 15ರವರೆಗೆ ತಮ್ಮ ಹೋರಾಟಕ್ಕೆ ವಿರಾಮ ನೀಡಲು ನಿರ್ಧರಿಸಿದ್ದಾರೆ.

ಕೇಜ್ರಿವಾಲ್ ಭಾಷಣಕ್ಕೆ ಬಿಜೆಪಿ ಅಡ್ಡಿ

ನವದೆಹಲಿ (ಪಿಟಿಐ): ಇಲ್ಲಿನ ಪೂರ್ವ ದೆಹಲಿಯಲ್ಲಿ ಗುರುವಾರ ನಡೆದ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್‌ನ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಮುಖಾಮುಖಿಯಾದರು.

ಆದರೆ, ಈ ಇಬ್ಬರೂ ಭಾಷಣಕ್ಕೆ ಮುಂದಾದ ವೇಳೆ ಎಎಪಿ ಮತ್ತು ಬಿಜೆಪಿ ಕಾರ್ಯಕರ್ತರು ಪರ, ವಿರೋಧದ ಘೋಷಣೆ ಕೂಗಲು ಜಿದ್ದಾಜಿದ್ದಿಗೆ ಬಿದ್ದ ಪ್ರಸಂಗವೂ ನಡೆಯಿತು.

ಉದ್ಘಾಟನಾ ಭಾಷಣದಲ್ಲಿ ಕೇಜ್ರಿವಾಲ್ ಅವರು ದೆಹಲಿ ಸರ್ಕಾರದ ಶೈಕ್ಷಣಿಕ ವ್ಯವಸ್ಥೆ ಬಗ್ಗೆ ಪ್ರಸ್ತಾಪಿಸಿದಾಗ ಕೆಲವು ಸಭಿಕರು ‘ಮೋದಿ ಮೋದಿ...’ ಎಂದು ಜೋರಾಗಿ ಕೂಗಿ ಅಡ್ಡಿಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕ್ರೇಜಿವಾಲ್, ‘ನನಗೆ ಐದು ನಿಮಿಷ ಮಾತನಾಡಲು ಅವಕಾಶ ನೀಡಿ. ಬೇರೆ ಪಕ್ಷದವರು ಮಾತನಾಡುವಾಗ ಉಳಿದ ಪಕ್ಷದವರು ಅವಕಾಶ ನೀಡಬೇಕು’ ಎಂದರು.

ವಿದ್ಯಾರ್ಥಿ ಉದ್ಯಮಶೀಲತಾ ಕಾರ್ಯಕ್ರಮದ ಬಗ್ಗೆ ಅವರು ಮಾತನಾಡುವಾಗ ಕೇಸರಿ ಪಡೆಯ ಕಾರ್ಯಕರ್ತರು, ‘ಇದು ಸುಳ್ಳು ಸುಳ್ಳು...’ ಎಂದು ಗಟ್ಟಿಯಾಗಿ ಕೂಗಿದರು. ಇದಕ್ಕೆ ಪ್ರತಿಯಾಗಿ ಎಎಪಿ ಕಾರ್ಯಕರ್ತರು, ‘ಇದು ಸತ್ಯ’ ಎಂದು ಕೂಗಿದರು.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ನೀವು ಅದನ್ನು ಅಭಿವ್ಯಕ್ತಿಪಡಿಸಬಹುದು. ಆದರೆ, ಇದು ಸರಿಯಾದ ಸಂದರ್ಭವಲ್ಲ’ ಎಂದು ಕೇಜ್ರಿವಾಲ್ ಹೇಳಿದರು. ಆದರೆ, ಇದಕ್ಕೆ ಬಿಜೆಪಿ ಕಾರ್ಯಕರ್ತರು ಕಿವಿಗೊಡಲಿಲ್ಲ. ಭಾಷಣ ಮುಗಿಯುವವರೆಗೂ ಘೋಷಣೆ ಕೂಗುವುದನ್ನು ಮುಂದುವರಿಸಿದರು.

ಸಕ್ಸೇನಾ ಭಾಷಣಕ್ಕೆ ಮುಂದಾದ ವೇಳೆ ಎಎಪಿ ಕಾರ್ಯಕರ್ತರು, ‘ಕೇಜ್ರಿವಾಲ್ ಜಿಂದಾಬಾದ್’ ಎಂದು ಕೂಗಿದರು. ಇದಕ್ಕೆ ಪ್ರತಿಯಾಗಿ ‘ಮೋದಿಗೆ ಧನ್ಯವಾದಗಳು’ ಎಂದು ಬಿಜೆಪಿ ಬೆಂಬಲಿಗರು ಘೋಷಣೆ ಮೊಳಗಿಸಿದರು.

ಸಂಕ್ಷಿಪ್ತ ಸುದ್ದಿ

ಭಾರತದಲ್ಲಿ ವಿಶ್ವಸುಂದರಿ ಸ್ಪರ್ಧೆ

ನವದೆಹಲಿ (ಪಿಟಿಐ): ಬರೋಬ್ಬರಿ 27 ವರ್ಷದ ನಂತರ ವಿಶ್ವ ಸುಂದರಿ ಸ್ಪರ್ಧೆಯು ಭಾರತದಲ್ಲಿ ನಡೆಯಲಿದೆ. ಬಹುನಿರೀಕ್ಷಿತ ಸ್ಪರ್ಧೆಯ 71ನೇ ಆವೃತ್ತಿಯು ಇದೇ ನವೆಂಬರ್‌ನಲ್ಲಿ ನಡೆಯಲಿದ್ದು, ಅಂತಿಮ ದಿನಾಂಕ ಇನ್ನಷ್ಟೇ ನಿರ್ಧಾರವಾಗಬೇಕಿದೆ.

‘ವಿಶ್ವಸುಂದರಿ ಸ್ಪರ್ಧೆ–2023 ಭಾರತದಲ್ಲಿ ನಡೆಯಲಿದೆ ಎಂದು ಘೋಷಿಸಲು ಸಂತಸವಾಗುತ್ತಿದೆ. ವಿಭಿನ್ನ ಮತ್ತು ವೈವಿಧ್ಯಮಯ ಸಂಸ್ಕೃತಿ, ವಿಶ್ವದರ್ಜೆಯ ಆಕರ್ಷಣೆಗಳು, ಅಭೂತಪೂರ್ವ ಸ್ಥಳಗಳನ್ನು ಕಣ್ತುಂಬಿಕೊಳ್ಳಲು ಕಾತರರಾಗಿದ್ದೇವೆ’ ಎಂದು ಸಂಸ್ಥೆಯ ಮುಖ್ಯಸ್ಥೆ ಮತ್ತು ಸಿಇಒ ಜುಲಿಯಾ ಮೋರ್ಲೆ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಕಾರ್ಯಕ್ರಮದಲ್ಲಿ 130 ರಾಷ್ಟ್ರೀಯ ಚಾಂಪಿಯನ್‌ಗಳ ಸಾಧನೆ ಅನಾವರಣಗೊಳ್ಳಲಿದೆ. ಒಂದು ತಿಂಗಳು ನಡೆಯುವ ಕಾರ್ಯಕ್ರಮದಲ್ಲಿ 130 ದೇಶಗಳಿಂದ ಸ್ಪರ್ಧಿಗಳು ಭಾಗವಹಿಸಲಿದ್ದಾರೆ’ ಎಂದು ಹೇಳಿದರು.

ಭಾರತ, 1996ರಲ್ಲಿ ಕೊನೆಯದಾಗಿ ಅಂತರರಾಷ್ಟ್ರೀಯ ಸೌಂದರ್ಯ ಸ್ಪರ್ಧೆ ಆಯೋಜಿಸಿತ್ತು.

11, 12ರಂದು ಬಿಜೆಪಿ ಸಿ.ಎಂ ಗಳ ಸಭೆ

ನವದೆಹಲಿ: ಬಿಜೆಪಿ ಕೇಂದ್ರ ನಾಯಕತ್ವವು ಜೂನ್ 11, 12ರಂದು, ಪಕ್ಷದ ಆಡಳಿತವಿರುವ ಸರ್ಕಾರಗಳ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಸಭೆ ಕರೆದಿದೆ. 12ರಂದು ಪ್ರಧಾನಿ ನರೇಂದ್ರ ಮೋದಿ ಸಭೆ ಉದ್ದೇಶಿಸಿ ಮಾತನಾಡುವರು.

ಸಭೆ ಕುರಿತು ಮಾಹಿತಿಯುಳ್ಳ ಮುಖಂಡರೊಬ್ಬರ ಪ್ರಕಾರ, ಲೋಕಸಭೆಗೆ 2024ರಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಗೆ ಸಿದ್ಧತೆ ಹಾಗೂ ಪಕ್ಷದ ಸಾಂಸ್ಥಿಕ ಸಂಘಟನೆಗಳ ಬದಲಾವಣೆ ಕುರಿತಂತೆ ಚರ್ಚೆ ನಡೆಯಲಿದೆ.

ಶ್ರೀನಗರದ ಶಾಲೆಯಲ್ಲಿ ಹಿಜಾಬ್ ವಿವಾದ

ಪ್ರಜಾವಾಣಿ ವಾರ್ತೆ



ಶ್ರೀನಗರ : ಅಬಯ (ಸಡಿಲವಾದ ನಿಲುವಂಗಿ) ಧರಿಸಿದ್ದಕ್ಕೆ ಇಲ್ಲಿನ ವಿಶ್ವ ಭಾರತಿ ಹೈಯರ್ ಸೆಕೆಂಡರಿ ಶಾಲೆಗೆ ಪ್ರವೇಶ ನಿರಾಕರಿಸ ಲಾಗಿದೆ ಎಂದು ಕೆಲವು ವಿದ್ಯಾರ್ಥಿನಿಯರು ಆರೋಪಿಸಿದ ಕಾರಣ ಕಾಶ್ಮೀರದಲ್ಲಿ ಗುರುವಾರ ವಿವಾದ ಭುಗಿಲೆದ್ದಿದೆ.

‘ಅಬಯ ಧರಿಸಲು ಬಯಸುವುದಾದರೆ ಮದರಸಾಕ್ಕೆ ಹೋಗಿ. ಶಾಲೆಯೊಳಗೆ ಧರಿಸಲು ಅನುಮತಿ ನೀಡುವುದಿಲ್ಲ’ ಎಂದು ಶಾಲೆಯ ಆಡಳಿತ ಮಂಡಳಿ ತಿಳಿಸಿದೆ ಎಂದು ವಿದ್ಯಾರ್ಥಿನಿಯರು ದೂರಿದ್ದಾರೆ.

‘ಅಬಯ ಧರಿಸಿ ಬರುವ ಮೂಲಕ ಶಾಲೆಯ ವಾತಾವರಣವನ್ನು ಕದಡಬೇಡಿ’ ಎಂದೂ ಹೇಳಿರುವುದಾಗಿ ವಿದ್ಯಾರ್ಥಿನಿಯರು ತಿಳಿಸಿದ್ದಾರೆ.

‘ಇದು ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ದಾಳಿ. ಮಹಾತ್ಮ ಗಾಂಧಿ ಅವರ ಭಾರತವನ್ನು ಗೋಡ್ಸೆ ಭಾರತವನ್ನಾಗಿಸುವ ನಿಟ್ಟಿನಲ್ಲಿ ಬಿಜೆಪಿಯು ಜಮ್ಮು ಮತ್ತು ಕಾಶ್ಮೀರವನ್ನು ಪ್ರಯೋಗಶಾಲೆಯಾಗಿಸುತ್ತಿದೆ’ ಎಂದು ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಹೇಳಿದ್ದಾರೆ.

ಕರ್ನಾಟಕದಲ್ಲಿ ನಡೆದಿದ್ದ ಹಿಜಾಬ್ ವಿವಾದವನ್ನು ಉಲ್ಲೇಖಿಸಿದ ಅವರು, ‘ನಾವು ಇದನ್ನು ಪ್ರತಿಭಟಿಸುತ್ತೇವೆ’ ಎಂದಿದ್ದಾರೆ.

‘ಹಿಜಾಬ್ ಧರಿಸುವುದು ವೈಯಕ್ತಿಕ ಆಯ್ಕೆ. ಧಾರ್ಮಿಕತೆಯ ಹೆಸರಿನಲ್ಲಿ ಇದಕ್ಕೆ ಯಾರೂ ಮಧ್ಯಪ್ರವೇಶಿಸಬಾರದು’ ಎಂದು ನ್ಯಾಷನಲ್ ಕಾನ್ಫರೆನ್ಸ್ ವಕ್ತಾರ ತನ್ವೀರ್ ಸಾದಿಕ್’ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಲೆಫ್ಟಿನೆಂಟ್ ಗವರ್ನರ್ ಸಿನ್ಹಾರಿಂದ ಉದ್ಘಾಟನೆ

ಜಮ್ಮುವಿನಲ್ಲಿ ತಿಮ್ಮಪ್ಪನ ದೇಗುಲ

ನೂತನ ದೇಗುಲ ಉದ್ಘಾಟನೆ ವೇಳೆ ನಡೆದ ಧಾರ್ಮಿಕ ಆಚರಣೆ

ಮಜೀನ್ (ಜಮ್ಮು, ಪಿಟಿಐ): ಇಲ್ಲಿ ನಿರ್ಮಿಸಲಾಗಿರುವ ತಿರುಪತಿಯ ಬಾಲಾಜಿ ದೇಗುಲವನ್ನು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಗುರುವಾರ ಉದ್ಘಾಟಿಸಿದರು.

62 ಎಕರೆಯ ವಿಸ್ತಾರದ ಪ್ರದೇಶದಲ್ಲಿ ₹ 30 ಕೋಟಿ ವೆಚ್ಚದಲ್ಲಿ ನೂತನ ದೇಗುಲ ನಿರ್ಮಿಸಲಾಗಿದ್ದು, ತಿರುಪತಿ ತಿರುಮಲ ದೇವಸ್ಥಾನದ ಆಡಳಿತ ಮಂಡಳಿ, ಹೊರಭಾಗದಲ್ಲಿ ನಿರ್ಮಿಸಿರುವ ಆರನೇ ದೇಗುಲ ಇದಾಗಿದೆ. ಹೈದರಾಬಾದ್, ಚೆನ್ನೈ, ಕನ್ಯಾಕುಮಾರಿ, ದೆಹಲಿ ಹಾಗೂ ಭುವನೇಶ್ವರದಲ್ಲಿ ವೆಂಕಟೇಶ್ವರನ ದೇಗುಲಗಳಿವೆ.

ನೂತನ ದೇಗುಲದಲ್ಲಿ ನಡೆದ ‘ಮಹಾ ಸಂಪ್ರೋಕ್ಷಣಾ’ ಪೂಜೆಯಲ್ಲಿ ತಿರುಪತಿ ತಿರುಮಲ ದೇವಸ್ಥಾನ ಮಂಡಳಿ ಅಧ್ಯಕ್ಷ ವೈ.ವಿ.ಸುಬ್ಬಾರೆಡ್ಡಿ, ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಜೊತೆ ಸಿನ್ಹಾ ಭಾಗಿಯಾದರು.

‘ಇದೊಂದು ಐತಿಹಾಸಿಕ ಕ್ಷಣ. ಭಕ್ತರ ಆಶಯದಂತೆ ವೆಂಕಟೇಶ್ವರನ ದೇಗುಲ ಇಲ್ಲಿ ನಿರ್ಮಾಣ ಗೊಂಡಿದ್ದು, ಜಮ್ಮುವಿನ ಶ್ರದ್ಧಾ ಕೇಂದ್ರಗಳಲ್ಲೊಂದಾಗಲಿದೆ. ಉದ್ಯೋಗ ಸೃಷ್ಟಿಯ ಜೊತೆಗೆ ಆರ್ಥಿಕಾಭಿವೃದ್ಧಿಗೂ ಸಹಕಾರಿಯಾಗಲಿದೆ’ ಎಂದು ಸಿನ್ಹಾ ದೇಗುಲ ಉದ್ಘಾಟನೆ ಬಳಿಕ ತಿಳಿಸಿದರು.

ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್ ಹಾಗೂ ಆಂಧ್ರಪ್ರದೇಶದ ಭಕ್ತರು ಉದ್ಘಾಟನಾ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಡಬ್ಲ್ಯುಟಿಸಿ ಫೈನಲ್: ಸ್ಟೀವನ್ ಸ್ಮಿತ್ ಶತಕ, ಸಿರಾಜ್‌ಗೆ ನಾಲ್ಕು ವಿಕೆಟ್

ಭಾರತ ತಂಡದ ಹಾದಿ ಕಠಿಣ

ಲಂಡನ್ (ಪಿಟಿಐ): ಪ್ಯಾಟ್ ಕಮಿನ್ಸ್ ನಾಯಕತ್ವದ ಆಸ್ಟ್ರೇಲಿಯಾ ತಂಡದ ವೇಗದ ದಾಳಿಯ ಮುಂದೆ ಭಾರತ ತಂಡದ ಅಗ್ರ ಬ್ಯಾಟರ್‌ಗಳು ಮುಗ್ಗರಿಸಿದರು.

ಇದರಿಂದಾಗಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ರೋಹಿತ್ ಶರ್ಮಾ ಬಳಗಕ್ಕೆ ಹಿನ್ನಡೆಯ ಭೀತಿ ಕಾಡಿತು. ದ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟದಲ್ಲಿ ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 469 ರನ್ ಗಳಿಸಿತು. ಅದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಭಾರತ ತಂಡವು 38ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 151ರನ್ ಗಳಿಸಿತು.

ರವೀಂದ್ರ ಜಡೇಜ (48) ಆಸರೆಯಾದರೆ, ಅಜಿಂಕ್ಯ ರಹಾನೆ (ಬ್ಯಾಟಿಂಗ್ 29) ಅವರು ಇನಿಂಗ್ಸ್‌ಗೆ ಬಲ ತುಂಬುವ ಹೋರಾಟ ಮಾಡುತ್ತಿದ್ದಾರೆ. ಭಾರತವು ಇದೀಗ 318 ರನ್‌ಗಳ ಹಿನ್ನಡೆಯಲ್ಲಿದೆ.

ಗುರುವಾರ ಊಟದ ವಿರಾಮದ ನಂತರದ ಅವಧಿಯಲ್ಲಿ ಬ್ಯಾಟಿಂಗ್ ಆರಂಭಿಸಿದ ಭಾರತ ತಂಡಕ್ಕೆ ಉತ್ತಮ ಆರಂಭ ನೀಡಲು ಪ್ರಯತ್ನಿಸಿದ ರೋಹಿತ್ ಶರ್ಮಾ ಅವರನ್ನು ಆರನೇ ಓವರ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಪ್ಯಾಟ್ ಕಮಿನ್ಸ್ ಸಂಭ್ರಮಿಸಿದರು. 26 ಎಸೆತಗಳಲ್ಲಿ 15 ರನ್ ಗಳಿಸಿದ ರೋಹಿತ್ ಪೆವಿಲಿಯನ್‌ಗೆ ಮರಳಿದರು.

ಇದರ ನಂತರದ ಓವರ್‌ನಲ್ಲಿ ಸ್ಕಾಟ್ ಬೊಲಾಂಡ್ ಹಾಕಿದ ಇನ್‌ಸ್ವಿಂಗ್ ಗುರುತಿಸುವಲ್ಲಿ ವಿಫಲರಾದ ಶುಭಮನ್ ಗಿಲ್ ಕ್ಲೀನ್‌ಬೌಲ್ಡ್ ಆದರು.

ಆಸ್ಟ್ರೇಲಿಯಾದ ಸ್ಟೀವನ್ ಸ್ಮಿತ್ ಶತಕ ಸಂಭ್ರಮ –ಎಪಿ/ಪಿಟಿಐ

ಕಳೆದ ಹಲವು ದಿನಗಳಿಂದ ಇಂಗ್ಲೆಂಡ್‌ನಲ್ಲಿ ಕೌಂಟಿ ಕ್ರಿಕೆಟ್ ಆಡಿದ್ದ ಅನುಭವಿ ಚೇತೇಶ್ವರ್ ಪೂಜಾರ ಕೂಡ ತಮ್ಮ ಮೇಲಿನ ನಿರೀಕ್ಷೆಯನ್ನು ಹುಸಿಗೊಳಿಸಿದರು. 14 ರನ್ ಗಳಿಸಿದ ಅವರು ಕ್ಯಾಮರಾನ್ ಗ್ರೀನ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಅವರು ಕೂಡ ಗಿಲ್ ಮಾದರಿಯಲ್ಲಿಯೇ ಔಟಾದರು.

31 ಎಸೆತಗಳಲ್ಲಿ 14 ರನ್ ಗಳಿಸಿದ್ದ ವಿರಾಟ್ ಕೊಹ್ಲಿ ಲಯಕ್ಕೆ ಮರಳುವ ವಿಶ್ವಾಸ ಮೂಡಿಸಿದ್ದರು. ಇದೇ ಹೊತ್ತಿನಲ್ಲಿ ಮಿಚೆಲ್ ಸ್ಟಾರ್ಕ್ ಹಾಕಿದ ಎಸೆತವನ್ನು ಹೊಡೆಯುವ ಪ್ರಯತ್ನದಲ್ಲಿ ಸ್ಲಿಪ್‌ನಲ್ಲಿದ್ದ ಸ್ಮಿತ್‌ಗೆ ಕ್ಯಾಚಿತ್ತರು.

ಜಡೇಜ ಮತ್ತು ರಹಾನೆ 5ನೇ ವಿಕೆಟ್‌ಗೆ 71 ರನ್ ಸೇರಿಸಿದರು. ಆದರೆ ಉತ್ತಮವಾಗಿ ಆಡುತ್ತಿದ್ದ ಜಡೇಜ ಅವರ ವಿಕೆಟ್ ಪಡೆದ ನೇಥನ್ ಲಯನ್, ಭಾರತ ತಂಡವನ್ನು ಒತ್ತಡಕ್ಕೆ ಸಿಲುಕಿಸಿದರು.

ಸ್ಮಿತ್ ಶತಕ, ಸಿರಾಜ್ ಆಟ: ಬುಧವಾರ ಟಾಸ್ ಗೆದ್ದಿದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಟ್ರಾವಿಸ್ ಹೆಡ್ ಶತಕ ಹಾಗೂ ಸ್ಮಿತ್ ಅಮೋಘ ಬ್ಯಾಟಿಂಗ್ ಬಲದಿಂದ ದಿನದಾಟದ ಕೊನೆಗೆ ಆಸ್ಟ್ರೇಲಿಯಾವು 3 ವಿಕೆಟ್‌ಗಳಿಗೆ 350 ರನ್ ಗಳಿಸಿತ್ತು. 91 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಸ್ಮಿತ್ ಶತಕ (121, 268ಎ, 4X19) ಎರಡನೇ ದಿನದಾಟದಲ್ಲಿ ಪೂರೈಸಿದರು. ಅವರು ಹೆಡ್ ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 285 ರನ್‌ಗಳನ್ನು ಸೇರಿಸಿದರು. ಬೆಳಗಿನ ಅವಧಿಯಲ್ಲಿಯೇ ಸಿರಾಜ್ ಈ ಜೊತೆಯಾಟ ಮುರಿದರು. ಅವರು ಹೆಡ್ ವಿಕೆಟ್ ಉರುಳಿಸಿದರು. ಇದಾಗಿ ಏಳು ಓವರ್‌ಗಳ ನಂತರ ಶಾರ್ದೂಲ್ ಬೌಲಿಂಗ್‌ನಲ್ಲಿ ಸ್ಮಿತ್ ಕ್ಲೀನ್‌ಬೌಲ್ಡ್ ಆದರು.

ಕೆಳಕ್ರಮಾಂಕದಲ್ಲಿ ಅಲೆಕ್ಸ್ ಕ್ಯಾರಿ (48; 69ಎ) ಅವರೊಬ್ಬರೇ ರನ್ ಗಳಿಸುವಲ್ಲಿ ಯಶಸ್ವಿಯಾದರು. ನಂತರದ ಆಟದಲ್ಲಿ ಉಳಿದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸಲಿಲ್ಲ.

ಸಿರಾಜ್ ಒಟ್ಟು ನಾಲ್ಕು ವಿಕೆಟ್ ಗಳಿಸಿದರು. ಶಮಿ ಹಾಗೂ ಠಾಕೂರ್ ತಲಾ ಎರಡು ವಿಕೆಟ್ ಗಳಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 469 (121.3 ಓವರ್‌ಗಳಲ್ಲಿ)
ಸ್ಮಿತ್ ಬಿ ಠಾಕೂರ್ 121 (268ಎ, 4X19)
ಹೆಡ್ ಸಿ ಭರತ್ ಬಿ ಸಿರಾಜ್ 163 (174ಎ, 4X25, 6X1)
ಗ್ರೀನ್ ಸಿ ಗಿಲ್ ಬಿ ಶಮಿ 6 (7ಎ, 4X1)
ಕ್ಯಾರಿ ಎಲ್‌ಬಿಡಬ್ಲ್ಯು ಜಡೇಜ 48 (69ಎ, 4X7, 6X1)
ಸ್ಟಾರ್ಕ್ ರನ್‌ಔಟ್ (ಬದಲೀ ಫೀಲ್ಡರ್ ಅಕ್ಷರ್) 5 (20ಎ)
ಕಮಿನ್ಸ್ ಸಿ ಅಜಿಂಕ್ಯ ಬಿ ಸಿರಾಜ್ 9 (34ಎ)
ಲಯನ್ ಬಿ ಸಿರಾಜ್ 9 (25ಎ, 4X1)
ಸ್ಕಾಟ್ ಔಟಾಗದೆ 1 (7ಎ)
ಇತರೆ: 38 (ಬೈ 13, ಲೆಗ್‌ಬೈ 10, ವೈಡ್ 8, ನೋಬಾಲ್ 7)
ವಿಕೆಟ್ ಪತನ: 4–361 (ಟ್ರಾವಿಸ್ ಹೆಡ್; 91.1), 5–376 (ಕ್ಯಾಮರಾನ್ ಗ್ರೀನ್; 94.2), 6–387 (ಸ್ಟೀವನ್ ಸ್ಮಿತ್; 98.1), 7–402 (ಮಿಚೆಲ್ ಸ್ಟಾರ್ಕ್; 103.5), 8–453 (ಅಲೆಕ್ಸ್ ಕ್ಯಾರಿ; 114.4), 9–468 (ನೇಥನ್ ಲಯನ್; 119.5), 10–469 (ಪ್ಯಾಟ್ ಕಮಿನ್ಸ್; 121.3)
ಬೌಲಿಂಗ್: ಮೊಹಮ್ಮದ್ ಶಮಿ 29–4–122–2, ಮೊಹಮ್ಮದ್ ಸಿರಾಜ್ 28.3–4–108–4, ಉಮೇಶ್ ಯಾದವ್ 23–5–77–0, ಶಾರ್ದೂಲ್ ಠಾಕೂರ್ 23–5–83–2, ರವೀಂದ್ರ ಜಡೇಜ 18–2–56–1

ಭಾರತ: 5ಕ್ಕೆ 151 (38 ಓವರ್‌ಗಳಲ್ಲಿ)
ರೋಹಿತ್ ಎಲ್‌ಬಿಡಬ್ಲ್ಯು ಬಿ ಕಮಿನ್ಸ್ 15 (26ಎ, 4X2)
ಶುಭಮನ್ ಬಿ ಬೊಲಾಂಡ್ 13 (15ಎ, 4X2)
ಪೂಜಾರ ಬಿ ಗ್ರೀನ್ 14 (25ಎ, 4X2)
ವಿರಾಟ್ ಸಿ ಸ್ಮಿತ್ ಬಿ ಸ್ಟಾರ್ಕ್ 14 (31ಎ, 4X2)
ಅಜಿಂಕ್ಯ ಬ್ಯಾಟಿಂಗ್ 29 (71ಎ, 4X3)
ಜಡೇಜ ಸಿ ಸ್ಮಿತ್ ಬಿ ಲಯನ್ 48 (51ಎ, 4X7, 6X1)
ಶ್ರೀಕರ್ ಬ್ಯಾಟಿಂಗ್ 5 (14 ಎ)
ಇತರೆ: 13 (ಬೈ 4, ಲೆಗ್‌ಬೈ 4, ನೋಬಾಲ್ 5)
ವಿಕೆಟ್ ಪತನ: 1–30 (ರೋಹಿತ್ ಶರ್ಮಾ; 5.6), 2–30 (ಶುಭಮನ್ ಗಿಲ್; 6.4), 3–50 (ಚೇತೇಶ್ವರ್ ಪೂಜಾರ; 13.5), 4–71 (ವಿರಾಟ್ ಕೊಹ್ಲಿ; 18.2), 5–142 (ರವೀಂದ್ರ ಜಡೇಜ; 34.3)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 9–0–52–1, ಪ್ಯಾಟ್ ಕಮಿನ್ಸ್ 9–2–36–1, ಸ್ಕಾಟ್ ಬೊಲಾಂಡ್ 11–4–29–1, ಕ್ಯಾಮರಾನ್ ಗ್ರೀನ್ 7–1–22–1, ನೇಥನ್ ಲಯನ್ 2–0–4–1

ಅಶ್ವಿನ್ ಕೈಬಿಟ್ಟದ್ದಕ್ಕೆ ಟೀಕೆ

ಲಂಡನ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರಿಗೆ ಅವಕಾಶ ನೀಡಬೇಕಿತ್ತು ಎಂದು ಆಸ್ಟ್ರೇಲಿಯಾ ಮಾಜಿ ಕ್ರಿಕೆಟಿಗರಾದ ಮ್ಯಾಥ್ಯೂ ಹೇಡನ್ ಹಾಗೂ ರಿಕಿ ಪಾಂಟಿಂಗ್ ಹೇಳಿದ್ದಾರೆ.

ಅಶ್ವಿನ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಅಗ್ರಸ್ಥಾನದಲ್ಲಿರುವ ಬೌಲರ್. 2021–23ನೇ ಸಾಲಿನ ಡಬ್ಲ್ಯುಟಿಸಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ್ದಾರೆ. ಆದರೂ ಅವರನ್ನು ಭಾರತ ತಂಡವು ಫೈನಲ್‌ನಲ್ಲಿ ಕಣಕ್ಕಿಳಿಸದಿರುವುದು ಈಗ ಬಹಳಷ್ಟು ಕ್ರಿಕೆಟಿಗರಿಂದ ಟೀಕೆಗೊಳಗಾಗಿದೆ.

'ಅಶ್ವಿನ್ ಪ್ರಮುಖ ಆಟಗಾರ. ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಕೆ ಮಾಡಿರುವ ಸಾಧಕ. ಅವರು ತಂಡದಲ್ಲಿದ್ದಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು' ಎಂದು ಹೇಡನ್ ಐಸಿಸಿ ವೆಬ್‌ಸೈಟ್ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಮ್ಯಾಥ್ಯೂ ಹೇಡನ್

'ಆಸ್ಟ್ರೇಲಿಯಾ ತಂಡದಲ್ಲಿ ಎಡಗೈ ಬ್ಯಾಟರ್‌ಗಳು ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆಫ್‌ಸ್ಪಿನ್ನರ್ ಅಶ್ವಿನ್ ಅವರಿದ್ದರೆ ತಂಡಕ್ಕೆ ಹೆಚ್ಚು ಅನುಕೂಲವಾಗುತ್ತಿತ್ತು. ಅವರನ್ನು ಕೈಬಿಟ್ಟಿರುವುದು ದೊಡ್ಡ ತಪ್ಪು' ಎಂದು ಆಸ್ಟ್ರೇಲಿಯಾ ತಂಡದ ಮಾಜಿನಾಯಕ ಪಾಂಟಿಂಗ್ ಹೇಳಿದ್ದಾರೆ.

'ಟಾಸ್ ಗೆದ್ದರೂ ಭಾರತವು ನಿರ್ಧಾರ ಕೈಗೊಳ್ಳುವಲ್ಲಿ ಸ್ವಲ್ಪ ಎಡವಿತು. ಆಸ್ಟ್ರೇಲಿಯಾ ತಂಡವು ಟೆಸ್ಟ್‌ಗಳಲ್ಲಿ ಯಾವಾಗಲೂ ಮೊದಲಿಗೆ ಬ್ಯಾಟಿಂಗ್ ಮಾಡುವುದನ್ನೇ ಇಷ್ಟಪಡುತ್ತದೆ. ಅದೇ ಅವರಿಗೆ ಸಿಕ್ಕಿತು. ಅದನ್ನು ಸದುಪಯೋಗಪಡಿಸಿಕೊಂಡರು' ಎಂದರು.

ಮೈಸೂರು ರೇಸ್

ಸ್ಟಾರ್ ಗ್ಲೋರಿ ಗೆಲ್ಲುವ ನಿರೀಕ್ಷೆ

ರೇಸಿಂಗ್ ಜರ್ನಲಿಸ್ಟ್ಸ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಟಾರ್ ಗ್ಲೋರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರೂಮರ್ ಲೇಡಿ 11, ವಾಲ್ಕೈರಿ 1, ಸೂಪರ್ ಸೆಕ್ಸಿ 4
2ನೇ ರೇಸ್: ಆಂಟಿನೊರಿ 8, ಎನ್.ಆರ್.ಐ ಟಚ್ 1, ಸ್ಮೈಲ್ ಅರೌಂಡ್ 3
3ನೇ ರೇಸ್: ರಾಝ್ 10, ಮೇಬರಿ 3, ಇನ್‌ಫಿನೈಟ್ ಪಾಸಿಬಲಿಟಿ 6
4ನೇ ರೇಸ್: ಡಿ ರೋಮನ್ ರೀನ್ಸ್ 9, ಫ್ಯೂರಿಯಸ್ ಫನ್ 3, ಕಂಟ್ರೇಸ್ ಲೈಟ್ 11
5ನೇ ರೇಸ್: ಸ್ಟಾರ್ ಗ್ಲೋರಿ 3, ಫನ್ ಅಂಡ್ ಲಾಫರ್ 6, ಹ್ಯಾವಲಾಕ್ ಕ್ರೂಝ್ 2
6ನೇ ರೇಸ್: ಗ್ಯಾಮಾ 3, ಹೀರೊಯಿಸ್ಮ್ 4, ವಿವಾ ಲ ಡಿವ 10
7ನೇ ರೇಸ್: ಐ ದಿ ಮೈಂಡ್ 1, ಪವರ್ ಆಫ್ ಥಿಯಾ 3, ವಿಜಯ ಸ್ಪಾರ್ಕಲ್ 11

ಉತ್ತಮ ಬೆಟ್: ಗ್ಯಾಮಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಹಾಕಿ: ಅರ್ಜೆಂಟೀನಾ ಮಣಿಸಿದ ಭಾರತ

ಎಫ್‌ಐಎಚ್ ಪ್ರೊ ಲೀಗ್: ಅಗ್ರಸ್ಥಾನಕ್ಕೇರಿದ ಹರ್ಮನ್‌ಪ್ರೀತ್ ಸಿಂಗ್ ಬಳಗ

ಈಂಡ್‌ಹೊವೆನ್ (ಪಿಟಿಐ):ಹೊಂದಾಣಿಕೆಯ ಆಟವಾಡಿದ ಭಾರತ ತಂಡ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಗುರುವಾರ 3–0 ಗೋಲುಗಳಿಂದ ಅರ್ಜೆಂಟೀನಾ ತಂಡವನ್ನು ಮಣಿಸಿತು.

ಬುಧವಾರ ನಡೆದಿದ್ದ ಪಂದ್ಯದಲ್ಲಿ 1–4 ರಿಂದ ನೆದರ್ಲೆಂಡ್ಸ್ ಎದುರು ಮುಗ್ಗರಿಸಿದ್ದ ಹರ್ಮನ್‌ಪ್ರೀತ್ ಬಳಗ, ಆ ನಿರಾಸೆ ಮರೆತು ಪುಟಿದೆದ್ದು ನಿಲ್ಲುವಲ್ಲಿ ಯಶ ಕಂಡಿತು.

ನಾಯಕ ಹರ್ಮನ್‌ಪ್ರೀತ್ (33ನೇ ನಿ.), ಅಮಿತ್ ರೋಹಿದಾಸ್ (39) ಮತ್ತು ಅಭಿಷೇಕ್ (59) ಅವರು ಭಾರತದ ಪರ ಗೋಲು ಗಳಿಸಿದರು.

ಈ ಗೆಲುವಿನ ಮೂಲಕ ಭಾರತ 14 ಪಂದ್ಯಗಳಿಂದ 27 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನಕ್ಕೇರಿದೆ. 12 ಪಂದ್ಯಗಳಿಂದ 26 ಪಾಯಿಂಟ್ಸ್ ಸಂಗ್ರಹಿಸಿರುವ ಬ್ರಿಟನ್ ಎರಡನೇ ಸ್ಥಾನದಲ್ಲಿದೆ.

ನೆದರ್ಲೆಂಡ್ಸ್ ಎದುರು ಸೋಲು: ಆರಂಭದ ಮುನ್ನಡೆಯ ಹೊರತಾಗಿಯೂ ಭಾರತ ತಂಡ ಬುಧವಾರ ರಾತ್ರಿ ನಡೆದಿದ್ದ ಪಂದ್ಯದಲ್ಲಿ ನೆದರ್ಲೆಂಡ್ಸ್ ಎದುರು ಸೋತಿತ್ತು.

ಭಾರತ ಮತ್ತು ಅರ್ಜೆಂಟೀನಾ ತಂಡದ ಆಟಗಾರರ ನಡುವಣ ಪೈಪೋಟಿ –ಟ್ವಿಟರ್ ಚಿತ್ರ

ಹರ್ಮನ್‌ಪ್ರೀತ್ ಸಿಂಗ್ (11ನೇ ನಿಮಿಷ) ಭಾರತದ ಏಕೈಕ ಗೋಲನ್ನು ಗಳಿಸಿದ್ದರು. ಪ್ರವಾಸಿ ತಂಡಕ್ಕೆ ಇದರ ಜೊತೆ ಐದು ಪೆನಾಲ್ಟಿ ಕಾರ್ನರ್ ಮತ್ತು ಕೊನೆಗಳಿಗೆಯಲ್ಲಿ ಒಂದು ಪೆನಾಲಿ ಸ್ಟ್ರೋಕ್ ಅವಕಾಶ ದೊರಕಿತ್ತು. ಆದರೆ ಈ ಅವಕಾಶಗಳಲ್ಲಿ ಗೋಲು ಗಳಿಸಲು ವಿಫಲವಾಯಿತು.

ಪೆಪಿನ್ ರೆವೆಂಗ (17ನೇ ನಿಮಿಷ), ಬೋರಿಸ್ ಬುರ್ಕಾರ್ಟ್ (40ನೇ ನಿಮಿಷ) ಮತ್ತು ಡ್ಯುಕೊ ಟೆಲ್ಜೆನ್‌ಕೆಂಪ್ (41 ಮತ್ತು 58ನೇ ನಿಮಿಷ) ಅವರು ಆತಿಥೇಯ ತಂಡದ ಪರ ಗೋಲುಗಳನ್ನು ದಾಖಲಿಸಿದರು.

ಲಂಡನ್‌ನಲ್ಲಿ ಕಳೆದ ವಾರ ಬೆನ್ನುಬೆನ್ನಿಗೆ ಎರಡು ಗೆಲುವುಗಳನ್ನು ದಾಖಲಿಸಿದ್ದ ಭಾರತ ತಂಡ ಉತ್ತಮ ಆರಂಭ ಪಡೆದು ಮೊದಲ ಕ್ವಾರ್ಟರ್‌ನಲ್ಲಿ ಮುನ್ನಡೆ ಪಡೆದಿತ್ತು. 11ನೇ ನಿಮಿಷ ನೆದರ್ಲೆಂಡ್ಸ್ ಆಟಗಾರನ 'ಫೂಟ್ ಫೌಲ್'ನಿಂದಾಗಿ ಭಾರತಕ್ಕೆ 'ಪೆನಾಲ್ಟಿ ಸ್ಟ್ರೋಕ್' ಅವಕಾಶ ದೊರೆಯಿತು. ಉತ್ತಮ ಲಯದಲ್ಲಿರುವ ಹರ್ಮನ್ ಪ್ರೀತ್ ಈ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು. ಇದು ಈ ಋತುವಿನಲ್ಲಿ ಭಾರತ ತಂಡದ ನಾಯಕ ಗಳಿಸಿದ 17ನೇ ಗೋಲು.

ಆದರೆ ತವರಿನ ಪ್ರೇಕ್ಷಕರ ಬೆಂಬಲ ಪಡೆದ ನೆದರ್ಲೆಂಡ್ಸ್ ತಂಡ ಆ ಬಳಿಕ ಮೇಲುಗೈ ಸಾಧಿಸಿತು.

ಸಿಂಗಪುರ ಓಪನ್ ಬ್ಯಾಡ್ಮಿಂಟನ್: ಶ್ರೀಕಾಂತ್, ಪ್ರಿಯಾಂಶು ಪರಾಭವ

ಸಿಂಗಪುರ (ಪಿಟಿಐ): ಕಿದಂಬಿ ಶ್ರೀಕಾಂತ್ ಮತ್ತು ಪ್ರಿಯಾಂಶು ರಾಜಾವತ್ ಅವರು ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೋಲು ಅನುಭವಿಸಿದ್ದು, ಭಾರತದ ಸವಾಲಿಗೆ ತೆರೆಬಿದ್ದಿದೆ.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಶ್ರೀಕಾಂತ್ 15–21, 19–21 ರಲ್ಲಿ ಚೀನಾ ತೈಪೆಯ ಚಿಯಾ ಹಾವೊ ಲೀ ಎದುರು ಪರಾಭವಗೊಂಡರು. ಇವರಿಬ್ಬರು ಇದೇ ಮೊದಲ ಬಾರಿ ಎದುರಾಗಿದ್ದರು. ಭಾರತದ ಆಟಗಾರ 37 ನಿಮಿಷಗಳಲ್ಲಿ ಸೋಲೊಪ್ಪಿದರು.

ಪ್ರಿಯಾಂಶು 17–21, 16–21 ರಲ್ಲಿ ಮೂರನೇ ಶ್ರೇಯಾಂಕದ ಆಟಗಾರ ಜಪಾನ್‌ನ ಕೊಡೈ ನರವೋಕಾ ಎದುರು ಮಣಿದರು. ಅವರು ಮೊದಲ ಸುತ್ತಿನಲ್ಲಿ ವಿಶ್ವದ 15ನೇ ರ‍್ಯಾಂಕ್‌ನ ಆಟಗಾರ ಕಾಂತ ಸುನೆಯಮ ಅವರಿಗೆ ಆಘಾತ ನೀಡಿದ್ದರು. ಪುರುಷರ ಡಬಲ್ಸ್ ವಿಭಾಗದಲ್ಲಿ ಎಂ.ಆರ್.ಅರ್ಜುನ್ ಮತ್ತು ಧ್ರುವ್ ಕಪಿಲಾ ಅವರು 15–21, 19–21 ರಲ್ಲಿ ಇಂಗ್ಲೆಂಡ್‌ನ ಬೆನ್ ಲೇನ್– ಸೀನ್ ವೆಂಡಿ ಎದುರು ಸೋತರು.

ಸ್ಯಾಫ್ ಫುಟ್‌ಬಾಲ್: ಪಾಕ್ ಪಾಲ್ಗೊಳ್ಳುವಿಕೆಗೆ ಕೇಂದ್ರದ ಸಮ್ಮತಿ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ಇದೇ ತಿಂಗಳ 21 ರಿಂದ ಜುಲೈ 4ರವರೆಗೆ ನಡೆಯುವ ಸ್ಯಾಫ್ (ದಕ್ಷಿಣ ಏಷ್ಯಾ ಫುಟ್‌ಬಾಲ್ ಫೆಡರೇಷನ್) ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಆಡಲು ಪಾಕಿಸ್ತಾನ ತಂಡಕ್ಕೆ ಭಾರತ ಸರ್ಕಾರ ಅನುಮತಿ ನೀಡಿದೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಗುರುವಾರ ತಿಳಿಸಿದೆ.

'ಎಂಟು ರಾಷ್ಟ್ರಗಳ ಟೂರ್ನಿಯಲ್ಲಿ ಪಾಕ್ ತಂಡದ ಭಾಗವಹಿಸುವಿಕೆಯನ್ನು ಸಮ್ಮತಿಸುವ ಮೂಲಕ ಸರ್ಕಾರ ತನ್ನ ಕೆಲಸ ಮಾಡಿದೆ. ಈಗ ಉಳಿದ ಪ್ರಕ್ರಿಯೆಗಳನ್ನು ನಡೆಸುವುದು ಆ ದೇಶದ ಜವಾಬ್ದಾರಿ' ಎಂದು ಎಐಎಫ್‌ಎಫ್ ಮಹಾ ಪ್ರಧಾನ ಕಾರ್ಯದರ್ಶಿ ಶಾಜಿ ಪ್ರಭಾಕರನ್ ತಿಳಿಸಿದ್ದಾರೆ.

'ಗೃಹ ಸಚಿವಾಲಯ, ವಿದೇಶಾಂಗ ವ್ಯವಹಾರ ಸಚಿವಾಲಯ ಮತ್ತು ಕ್ರೀಡಾ ಸಚಿವಾಲಯಗಳು ಪಾಕ್ ಪಾಲ್ಗೊಳ್ಳುವಿಕೆಗೆ ಸಮ್ಮತಿ ನೀಡಿವೆ' ಎಂದು ಪ್ರಭಾಕರನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಭಾರತ ಮತ್ತು ಪಾಕಿಸ್ತಾನ ತಂಡಗಳು ಒಂದೇ ಗುಂಪಿನಲ್ಲಿವೆ. ಎರಡೂ ತಂಡಗಳು ಮೊದಲ ದಿನ ಮುಖಾಮುಖಿಯಾಗಲಿವೆ.

ಈ ಎರಡು ತಂಡಗಳು ಎದುರುಬದುರಾಗಿರುವುದು ಐದು ವರ್ಷಗಳಲ್ಲಿ ಇದೇ ಮೊದಲ ಬಾರಿ. ಈ ಹಿಂದೆ 2018ರ ಸ್ಯಾಫ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ ಕೊನೆಯ ಬಾರಿ ಎದುರಾಳಿಗಳಾದಾಗ ಭಾರತ 3–1 ರಿಂದ ಜಯಗಳಿಸಿತ್ತು. ಬಾಂಗ್ಲಾದೇಶ ಆತಿಥ್ಯ ವಹಿಸಿತ್ತು.

ಶೂಟಿಂಗ್: ಭಾರತಕ್ಕೆ ಅಗ್ರಸ್ಥಾನ

ಸೂಲ್ (ಜರ್ಮನಿ), (ಪಿಟಿಐ): ಭಾರತದ ಟ್ರ್ಯಾಪ್ ಶೂಟರ್‌ಗಳು, ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನ ಕೊನೆಯ ದಿನವಾದ ಗುರುವಾರ ಪದಕದ ಸುತ್ತಿನಿಂದ ಹೊರಬಿದ್ದರು. ಆದರೆ ಭಾರತ 15 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಿತು.

ಟ್ರ್ಯಾಪ್ ವಿಭಾಗದ ಸ್ಪರ್ಧಿಗಳು ಕ್ವಾಲಿಫಿಕೇಷನ್ ಹಂತದಲ್ಲಿ ಮೊದಲ ಆರರಲ್ಲಿ ಸ್ಥಾನ ಪಡೆಯಲು ವಿಫಲರಾದರು. ಈ ವಿಶ್ವಕಪ್‌ನಲ್ಲಿ ಭಾರತ ಒಟ್ಟಾರೆ ಆರು ಚಿನ್ನ, ಆರು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಗೆದ್ದು ಮೊದಲ ಸ್ಥಾನ ಪಡೆಯಿತು.

ಚಿನ್ನ ಗೆದ್ದವರು: ಸೈನ್ಯಂ (ಮಹಿಳಾ 10 ಮೀ. ಏರ್ ಪಿಸ್ತೂಲ್), ಧನುಷ್ ಶ್ರೀಕಾಂತ್ (ಪುರುಷರ 10 ಮೀ. ಏರ್ ರೈಫಲ್ ವಿಭಾಗ), ಅಮನ್‌ಪ್ರೀತ್ ಸಿಂಗ್ (25 ಮೀ. ಪಿಸ್ತೂಲ್), ಅಭಿನವ್ ಶಾ ಮತ್ತು ಗೌತಮಿ ಭಾನೋಟ್ (10 ಮೀ. ಏರ್ ರೈಫಲ್ ಮಿಕ್ಸೆಡ್ ತಂಡ), ಗೌತಮಿ, ಸ್ವಾತಿ ಚೌಧುರಿ ಮತ್ತು ಸೋನಮ್ ಮಲಿಕ್ (ಮಹಿಳೆಯರ 10 ಮೀ. ಏರ್ ರೈಫಲ್ ತಂಡ), ಮೇಘನಾ ಸದುಲಾ, ಪಾಯಲ್ ಖತ್ರಿ ಮತ್ತು ಸಿಮ್ರನ್‌ಪ್ರೀತ್ ಕೌರ್ ಬ್ರಾರ್ (ಮಹಿಳೆಯರ 25 ಮೀ. ಪಿಸ್ತೂಲ್ ತಂಡ ವಿಭಾಗ)